ಪರಿವಿಡಿ

(i) ಮಗನ ಮಾತುಗಳು ……………… ಎಚ್. ಜಿ. ಜೋಶಿ.
(ii) ಮುನ್ನುಡಿ ……………………… ಶ್ರೀ. ಬಿ. ವ್ಹಿ. ರಾಮನ್.
(iii) ಜ್ಯೋತಿಷಿಯ ದೃಷ್ಟಿಯಲ್ಲಿ ಲೇಖಕರು …….. ಶ್ರೀ ಕುರಡೂರ ರಾಮರಾಯರು

ನವಗ್ರಹಗಳು	ಪುಟ
೧) ರವಿ	೧
೨) ರವಿಯ ಭಾವಗತ ಫಲ	೯
೩) ಸೌರಯೋಗಗಳು	೧೩
೪) ಚಂದ್ರನು	೨೧
೫) ಬುಧ	೩೩
೬) ಶುಕ್ರನು	೪೯
೭) ಮಂಗಳ	೫೮
೮) ಮಂಗಳನ ಭಾವಗತ ಫಲ	೬೩
೯) ಗುರು	೭೩
೧೦) ಶನಿ	೮೬
೧೧) ಹರ್ಶಲ (ಪ್ರಜಾಪತಿ)	೯೭
೧೨) ವರುಣ (ನೇಪಚ್ಯೂನ)	೧೨೧
೧೩) ಮಾನವನ ಶ್ರೇಣಿ	೧೩೩
೧೪) ಧನಯೋಗ	೧೩೮
೧೫) ಮಿತ್ರರು	೧೪೫
೧೬) ಉದ್ಯೋಗ (ನೌಕರಿ)	೧೪೯
೧೭) ಗೃಹಸುಖ	೧೫೫
೧೮) ಮೃತ್ಯುಯೋಗ	೧೫೯
೧೯) ಮೃತ್ಯುಸೂತ್ರಗಳು	೧೬೮
೨೦) ಬಾಲಾರಿಷ್ಟಯೋಗ	೧೬೯

೨೧)	ಲಗ್ನಶುದ್ಧಿಯ ಕ್ರಮಗಳು	೧೭೩
೨೨)	ಮಾನವನ ಆರೋಗ್ಯ	೧೭೮
೨೩)	ಸ್ವಭಾವ ಗುಣಧರ್ಮಗಳು	೧೮೭
೨೪)	ಮಾನವನ ಶೀಲ	೧೮೯
೨೫)	ಮಾನವನ ಬೌದ್ಧಿಕಶಕ್ತಿ	೧೯೨
೨೬)	ದಾಂಪತ್ಯಯೋಗ	೨೦೪
೨೭)	ಪ್ರವಾಸ	೨೦೮
೨೮)	ಕೆಲವು ವಿಶಿಷ್ಟಯೋಗಗಳು	೨೧೪
೨೯)	ದಿನವರ್ಷ ಪದ್ಧತಿ	೨೩೧
೩೦)	ಪ್ರಾಥಮಿಕಯೋಗ ಪದ್ಧತಿ	೨೩೫
	ಶುದ್ಧಿ ಪತ್ರ	೨೫೫

ಮಗನ ಮಾತುಗಳು

ನನ್ನ ತಂದೆಯವರಾದ ದಿ. ಪಂಡಿತ ಕೇಶವಶರ್ಮಾ ಗಲಗಲಿಯವರು ಸುಪ್ರಸಿದ್ಧ ಜ್ಯೋತಿರ್ವಿದರಾಗಿದ್ದರು. ಅವರ ಅಭ್ಯಾಸದ ಆಳವನ್ನು ಕುರಿತು ಬರೆಯುವ ಸಾಮರ್ಥ್ಯವು ನನ್ನಲ್ಲಿ ಇರುವದಿಲ್ಲವೆಂಬ ಮಾತನ್ನು ಇಲ್ಲಿ ಹೇಳದಿರಲಾರೆ. ಪ್ರಸಿದ್ಧ ಜ್ಯೋತಿರ್ವಿದರಾದ ಶ್ರೀಮಾನ್ ಬಿ. ವ್ಹಿ. ರಾಮನ್ನರಂಥ ವಿದ್ವಾಂಸರಿಗೆ ಮಾತ್ರ ವಿದಿತವಾಗಿದ್ದಿತು.

ಶ್ರೀಯುತರು ಪಾಶ್ಚಾತ್ಯ, ಪೌರ್ವಾತ್ಯ ಎರಡೂ ಪದ್ಧತಿಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಭಾರತೀಯ ಜ್ಯೋತಿಶ್ಶಾಸ್ತ್ರದ ಸಂಸ್ಕೃತ ಗ್ರಂಥಗಳನ್ನೆಲ್ಲ ಆಮೂಲಾಗ್ರವಾಗಿ ಅಭ್ಯಾಸ ಮಾಡಿದ್ದರು. ನಮ್ಮ ಶಾಸ್ತ್ರದ ಕಡು ಅಭಿಮಾನಿಗಳೂ ಆಗಿದ್ದರು. ಆದರೆ ಪಾಶ್ಚಾತ್ಯರ ಸಾಯನ ವಿಚಾರವನ್ನು ಅಭ್ಯಸಿಸಿ ಅದರಲ್ಲಿಯ ಸತ್ಯಾಂಶಗಳನ್ನು ಮೆಚ್ಚಿಕೊಂಡವರೂ ಅಹುದು. ಸತ್ಯವು ಎಲ್ಲೇ ಇರಲಿ, ಅದನ್ನು ಮುಕ್ತ ಮನಸ್ಸಿನಿಂದ ಒಪ್ಪಿಕೊಂಡು ಆದರಿಸುವ ಸ್ವಭಾವವುಳ್ಳವರಾಗಿದ್ದರು. ನಿರೀಕ್ಷಿಸಿ, ಪರೀಕ್ಷಿಸಿ, ಪರಿಶೋಧಿಸಿ ಅಂಗೀಕರಿಸುವ ವಿಜ್ಞಾನಿಯ ದೃಷ್ಟಿಯು ಅವರಲ್ಲಿದ್ದಿತು. ಶ್ರೀ ರಾಮನ್ ಅವರು ಅವರ ವಿಷಯದಲ್ಲಿ ಬರೆದ ಮಾತುಗಳನ್ನಿಲ್ಲಿ ನೆನೆಯ ಬಹುದಾಗಿದೆ. "What I admired in him was that though belonging to a generation much older than mine, he had a scientific outlook and was not a dogmatic pandit."

ಸಾಯನ ಪದ್ಧತಿಯನ್ನು ಅವರು ತುಂಬಾ ಮೆಚ್ಚಿಕೊಂಡಿದ್ದರು. ಅದರ ವ್ಯಾಸಂಗದಲ್ಲಿ ನಿರತರಾಗಿ ನಿಂತು ಅನುಭವದ ಒರೆಗಲ್ಲಿಗೆ ತಿಕ್ಕಿ ನೋಡಿದಾಗ ಹೊಳೆದ ಕೆಲ ವಿಷಯಗಳನ್ನು ಗ್ರಂಥರೂಪದಲ್ಲಿ ಬರೆದಿಟ್ಟಿದ್ದರು. ಈ ಗ್ರಂಥವನ್ನವರು ೧೯೬೦ ರ ಸುಮಾರಿಗೆ ಮುಂಬೈಯಲ್ಲಿ ಬರೆದಿದ್ದರು. ಅವರ ಜೀವಮಾನದಲ್ಲಿಯೇ ಮುದ್ರಿಸಬೇಕೆಂಬ ಇಚ್ಛೆಯಿದ್ದರೂ ಸಾಧ್ಯವಾಗದೆ ಹೋಯಿತು. ಉಪಯುಕ್ತವಾದ ಗ್ರಂಥವು ಹಾಗೆ ವ್ಯರ್ಥವಾಗಿ ಹೋಗಬಾರದೆಂಬ ಉದ್ದೇಶದಿಂದ ಅಚ್ಚುಹಾಕಿಸುವ

ಸಾಹಸವನ್ನು ಮಾಡಿದ್ದೇವೆ. ಕನ್ನಡದಲ್ಲಿ ಸಾಯನ ವಿಚಾರವನ್ನು ಕುರಿತು ಪ್ರಕಟವಾದ ಜ್ಯೋತಿಶ್ಯಾಸ್ತ್ರದ ಗ್ರಂಥಗಳು ತೀರ ವಿರಳ. ಜ್ಯೋತಿಶ್ಯಾಸ್ತ್ರಾಭ್ಯಾಸಿಗಳಿಗೆ ಇದು ಉಪಯುಕ್ತವಾದರೆ ನಮ್ಮ ಪ್ರಯತ್ನಕ್ಕೆ ಸಫಲತೆಯು ಸಿಕ್ಕಂತೆಯೇ!

ಅವರ ವರ್ಷಶ್ರಾದ್ಧದ ದಿನವೇ ಈ ಹೊತ್ತಿಗೆಯು ಹೊರಬರುತ್ತಿರುವುದು ನಮಗೆ ಸಮಾಧಾನವನ್ನುಂಟು ಮಾಡಿದೆ. ಅವರ ಮರಣದ ನಂತರ ಅನುತಾಪ ಸೂಚಿಸಿ ಶ್ರೀ ಬಿ. ವ್ಹಿ. ರಾಮನ್ನರು ಬರೆದ ಕಾಗದದಲ್ಲಿ ಪಂಡಿತರ ಕೃತಿಗಳು ಬೆಳಕು ಕಾಣುವಂತಾಗಲಿ ಎಂದು ಹಾರೈಸಿದ್ದರು. ಅವರ ಹಾರೈಕೆ ಇಂದು ಫಲಿಸುತ್ತಿದೆ ಎಂಬ ಸಮಾಧಾನವೂ ನಮಗಿದೆ. ಇಲ್ಲಿಯ ವಿವೇಚನೆಯು ಸಾಯನ ಪದ್ಧತಿಯನ್ನವಲಂಬಿಸಿದೆಯೆಂಬುದನ್ನು ವಾಚಕರು ಮರೆಯಬಾರದು. ನಿರಯನ ಪದ್ಧತಿಯಿಂದ ಕುಂಡಲಿಯನ್ನು ಸಿದ್ಧಗೊಳಿಸಿ ಈ ಗ್ರಂಥದಲ್ಲಿಯ ನಿಯಮಗಳನ್ನು ಅನ್ವಯಿಸಲು ಹೊರಟರೆ ಅಷ್ಟೊಂದು ಸಮಾಧಾನದ ಉತ್ತರಗಳು ವಾಚಕರಿಗೆ, ಅಭ್ಯಾಸಿಗಳಿಗೆ ದೊರಕಲಿಕ್ಕಿಲ್ಲ. ಸಾಯನ ಪದ್ಧತಿಯಿಂದಲೇ ಕುಂಡಲಿಯನ್ನು ಸಿದ್ಧಗೊಳಿಸಿ ಅನ್ವಯಿಸಿಕೊಂಡರೆ ಬಹುಮಟ್ಟಿಗೆ ಸತ್ಯಾಂಶಗಳು ಕಂಡು ಬರುವವು.

ಈ ಹೊತ್ತಿಗೆಯು ಬೆಳಕು ಕಾಣಲಿಕ್ಕೆ ಮುಖ್ಯವಾಗಿ ಕಾರಣರಾದವರು ನನ್ನ ತಂಗಿಯ ಪತಿಯಾದ ಶ್ರೀ ಆರ್. ಎ. ಕುರಡೂರ ಹಾಗೂ ತಂಗಿ ಸೌ. ಆಶಾ ಕುರಡೂರ ಅವರು. ತಂದೆಯವರ ಇಚ್ಛೆಯಂತೆ ಶಾಸ್ತ್ರವನ್ನು ಜೀವಂತವಾಗಿಡಲು ಸತಿ-ಪತಿಯರಿಬ್ಬರೂ ಹೆಣಗುತ್ತಲಿದ್ದಾರೆ. ಅವರ ಜ್ಞಾನಜ್ಯೋತಿಯು ಆರದೆ ನಂದಾದೀಪವಾಗಿ ಉಳಿಯುವಂತೆ ತಮ್ಮ ಅಭ್ಯಾಸಬಲವನ್ನು ಬೆಳೆಸಿಕೊಳ್ಳುತ್ತಲಿದ್ದಾರೆ. ಇಂಗ್ಲಿಷಿನಲ್ಲಿ ಅಳಿಯಂದಿರನ್ನು Son-in-law ಎಂದು ಕರೆಯುವದರಲ್ಲಿ ಒಂದು ಔಚಿತ್ಯವಿದೆ. ಅಳಿಯಂದಿರು ಒಂದು ದೃಷ್ಟಿಯಿಂದ ಮಕ್ಕಳೇ! ತಂದೆಯ ಋಣವನ್ನು ತೀರಿಸುವ ಹೊಣೆ ಮಕ್ಕಳಿಗೆ ಹೇಗೆ ಇದೆಯೋ, ಹಾಗೆಯೇ ಅಳಿಯಂದಿರಿಗೂ ಇರುವದು. ಆ ಹೊಣೆಯ ಅರಿವಿನಿಂದ ಅವರ ಇಚ್ಛೆಯನ್ನು ಪೂರೈಸಲು ಜ್ಯೋತಿಃಶಾಸ್ತ್ರವನ್ನು ಅಭ್ಯಸಿಸುತ್ತಿರುವ ಶ್ರೀ ರಾಮರಾಯರು ನಿಜವಾಗಿಯೂ ಅಭಿನಂದನಾರ್ಹರು. ಈ ಸತಿ-ಪತಿಯರ ಅಭ್ಯಾಸದ ಒಲವು, ತಂದೆಯವರಲ್ಲಿರತಕ್ಕ ಗೌರವ ಭಾವನೆಗಳೇ ಈ ಹೊತ್ತಿಗೆಯನ್ನು ಹೊರತಂದಿವೆ. ಈ ಸಂದರ್ಭದಲ್ಲಿ ಹಿರಿಯನಾದ ನಾನು ತಂಗಿ ಸೌ. ಆಶಾಳನ್ನೂ, ಅವಳ ಪತಿ ಶ್ರೀರಾಮರಾಯರನ್ನೂ ಹೃದಯ ತುಂಬಿ ಆಶೀರ್ವದಿಸುತ್ತೇನೆ; ಶುಭಕೋರುತ್ತೇನೆ; ನೆನಹಿಕೆಗಳನ್ನು ಸಲ್ಲಿಸುತ್ತೇನೆ.

ಇದೇ ಸಂದರ್ಭದಲ್ಲಿ ತಂಗಿಯಾದ ಸೌ. ಆಶಾ ಕುರಡೂರ ಇವಳೂ ಒಂದು ಜ್ಯೋತಿಶಾಸ್ತ್ರವನ್ನು ಕುರಿತು ಚಿಕ್ಕ ಹೊತ್ತಿಗೆಯೊಂದನ್ನು ಬರೆದು ತಂದೆಯವರಿಗೆ ಅರ್ಪಿಸಿ ತನ್ನ ಶ್ರದ್ಧಾಂಜಲಿಯನ್ನರ್ಪಿಸುತ್ತಿದ್ದಾಳೆ.

'O, my child I live for thee' ಎಂದು ಇಂಗ್ಲಿಷ ಕವಿಯ ಕವನವೊಂದಿದೆ. ತಾಯಿ ಪದ್ಮಾವತಿಬಾಯಿಯು ತನ್ನ ನೋವುಗಳನ್ನೆಲ್ಲ ನುಂಗಿ, ನನ್ನ ಯೋಗಕ್ಷೇಮಗಳನ್ನು ನೋಡಿಕೊಳ್ಳುತ್ತಿರುವಳಲ್ಲದೆ, ಇಂಥ ಸಾಹಸದ ಕಾರ್ಯಗಳಿಗೆ ಎಂದಿನಂತೆ ಪ್ರೋತ್ಸಾಹನೆಯನ್ನೀಯುತ್ತಿದ್ದಾಳೆ. ಅವಳ ಋಣ ತೀರದಂತಹದು. ಅವಳಿಗೆ ಈ ಸಂದರ್ಭದಲ್ಲಿ ನನ್ನ ನಮಸ್ಕಾರಗಳನ್ನು ಸಲ್ಲಿಸದಿರಲಾರೆ.

ಸುಪ್ರಸಿದ್ಧ ಜ್ಯೋತಿರ್ವಿದರಾದ ಶ್ರೀಮಾನ್ ಬಿ. ವ್ಹಿ. ರಾಮನ್ನರು (Editor, Astrological Magazine Bangalore) ನಾನು ಬಿನ್ನವಿಸಿಕೊಂಡೊಡನೆಯೇ ಅಲ್ಪಾವಧಿಯಲ್ಲಿ ಸುಂದರವಾದ ಮುನ್ನುಡಿಯನ್ನು ಬರೆದು ಕೊಟ್ಟದ್ದಕ್ಕಾಗಿ, ಅವರಿಗೆ ಚಿರಋಣಿಯಾಗಿದ್ದೇನೆ. ತಂದೆಯವರಲ್ಲಿ ಅವರ ಆದರವು ಅಪಾರವಾಗಿದ್ದಿತು. ವಿದ್ವಾಂಸರನ್ನು ಮೆಚ್ಚುವ, ಆದರಿಸುವ ಗುಣವು ಶ್ರೀ ರಾಮನ್ನರಲ್ಲಿ ಅನುಪಮವಾಗಿದೆ. ಅಂತೆಯೇ ಅವರನ್ನು ೧೯೭೪ನೆಯ ಜೂನ ತಿಂಗಳಲ್ಲಿ ಬೆಂಗಳೂರಿನಲ್ಲಿ ನೆರವೇರಿದ ಅಖಿಲ ಕರ್ನಾಟಕ ಜ್ಯೋತಿಶ್ಯಾಸ್ತ್ರಸಮ್ಮೇಲನದಲ್ಲಿ ಫಲಿತಶಾಸ್ತ್ರವಿಭಾಗಕ್ಕೆ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲು ಕಾರಣರಾಗಿದ್ದರು. ಅವರ ಈ ಗುಣವೇ ತಂದೆಯವರ ಗ್ರಂಥಕ್ಕೆ ಮುನ್ನುಡಿಯ ಕಲಶವಿಡಲು ಕಾರಣೀಭೂತವಾಗಿದೆ. ಮತ್ತೊಮ್ಮೆ ಶ್ರೀಯುತರಿಗೆ ನಮ್ಮ ಕೃತಜ್ಞತೆಗಳನ್ನು ಸಲ್ಲಿಸುವೆ.

ಶಾಸ್ತ್ರದಲ್ಲಿ ವಿಶ್ವಾಸ, ತಂದೆಯವರಲ್ಲಿ ಆದರ ಬುದ್ಧಿಯನ್ನು ತಳೆದಿದ್ದ ಶ್ರೀಮಾನ್ ದೊಡ್ಡಮೇಟಿ ಅಂದಾನೆಪ್ಪನವರನ್ನು ಈ ಸಂದರ್ಭದಲ್ಲಿ ನೆನೆಯ

ದಿರಲಾರೆ. ತಂದೆಯವರಲ್ಲಿ ಆದರ ಭಾವನೆಯನ್ನು ತಳೆದಿದ್ದ ನನ್ನ ಸ್ನೇಹಿತರಾದ ಶ್ರೀ ಎನ್. ಕೆ. ಜೋಗಳೇಕರರಿಗೆ ನನ್ನ ನೆನಹಿಕೆಗಳು ಮೀಸಲಿವೆ.

ಶಾಸ್ತ್ರದಲ್ಲಿಯ ಮನೆತನದ ಅವಿಚ್ಛಿನ್ನತೆಯನ್ನು ಮುಂದುವರಿಸಿಕೊಂಡು ನಡೆದ ಕಕ್ಕ ಬಿ. ಆರ್. ಜೋಶಿ,ತಮ್ಮಂದಿರಾದ ಎನ್. ಕೆ. ಜೋಶಿ, ಎಸ್. ಕೆ. ಜೋಶಿಯವರನ್ನು ನೆನೆಯದಿರಲಾರೆ. ಅವರ ನೆರವು ಸದಾ ನನ್ನ ಬೆನ್ನಿಗೆ ಇದ್ದೇ ಇದೆ. ಸಹೃದಯರಾದ ಶ್ರೀ ಗೋವರ್ಧನಾಚಾರ್ಯ ಗಲಗಲಿಯವರು ವಂದನಾರ್ಹರು.

ಅಲ್ಪಾವಕಾಶದಲ್ಲಿ ಸಾವಧಾನ ಚಿತ್ತದಿಂದ ಮುದ್ರಣ ಕಾರ್ಯವನ್ನು ಪೂರೈಸಿಕೊಟ್ಟ ಪ್ರತಿಭಾ ಮುದ್ರಣಾಲಯದ ಒಡೆಯರಾದ ಶ್ರೀಮಾನ್ ಭಾಲಚಂದ್ರ ಫಾಣೇಕರ ಹಾಗೂ ಅವರ ಈರ್ವರು ಪುತ್ರರಾದ ಶ್ರೀ ಮನೋಹರ ಫಾಣೇಕರ, ಶ್ರೀ ರವೀಂದ್ರ ಫಾಣೇಕರ ಅವರು ಕೃತಜ್ಞತೆಗೆ ಪಾತ್ರರಾಗಿದ್ದಾರೆ. ನಾನು ಕೊಡುತ್ತಿರುವ ತೊಂದರೆಗಳನ್ನೆಲ್ಲ ಸುಹೃತ್ ಭಾವನೆಯಿಂದ ಸಹಿಸಿ, ಆತ್ಮೀಯತೆಯಿಂದ ಹೊತ್ತಿಗೆಯನ್ನು ಸಕಾಲಕ್ಕೆ ಹೊರತರಲು ಕಾರಣೀಭೂತರಾದ ಆ ಮೂವರನ್ನೂ ಕೃತಜ್ಞತಾ ಭಾವನೆಯಿಂದ ನೆನೆಯುತ್ತೇನೆ.

ಕುಲಪುರೋಹಿತರ ಕುಟೀರ — ಎಚ್. ಜಿ. ಜೋಶಿ.

ಧಾರವಾಡ

೧೪-೬-೧೯೬೭

ಮುನ್ನುಡಿ

ಪಂಡಿತ ಕೇಶವಶರ್ಮಾ ಗಲಗಲಿಯವರು ಜೀವಿಸಿರುವಾಗಲೇ ಅವರ **'ಅಷ್ಟಕವರ್ಗ'**ಕ್ಕೆ ಪ್ರಸ್ತಾವನೆಯನ್ನು ಬರೆಯುವ ಗೌರವ ನನ್ನದಾಗಿತ್ತು. ಪುನಃ ಈ ಗ್ರಂಥಕ್ಕೆ ಮುನ್ನುಡಿ ಬರೆಯುವ ಸಂದರ್ಭದಲ್ಲಿ ಶೋಕ-ಸಮ್ಮೋದಗಳ ಮಿಶ್ರಭಾವ ನನ್ನಲ್ಲಿ ಉತ್ಪನ್ನವಾಗಿದೆ. ಆ ಘನ ಪಂಡಿತರು ನಮ್ಮನ್ನಗಲಿ ಹೋದುದಕ್ಕಾಗಿ ಶೋಕ, ಮತ್ತೊಂದು ಅವರ ಅಮೌಲ್ಯ ಕೃತಿ ಪ್ರಕಾಶ ಕಾಣುತ್ತಿದೆ ಎಂಬುದಕ್ಕೆ ಆನಂದ.

ಪ್ರಸ್ತುತ ಗ್ರಂಥಕರ್ತರು, ಸಂಸ್ಕೃತ ಸಾಹಿತ್ಯದಲ್ಲಷ್ಟೇ ಅಲ್ಲ, ಜ್ಯೋತಿಃ ಶಾಸ್ತ್ರದಲ್ಲಿಯೂ ದೊಡ್ಡ ವಿದ್ವಾಂಸರಾಗಿದ್ದರು. ಕೇವಲ ಪ್ರಾಚೀನ ಶಾಸ್ತ್ರ, ಪೌರ್ವಾತ್ಯ ವಾಙ್ಮಯದಲ್ಲಿ ಪ್ರಭುತ್ವವನ್ನು ಪಡೆದ ಪಂಡಿತರ ಸಂಕುಚಿತ ಮನೋಭಾವ ಅವರದಲ್ಲ. ತಮ್ಮ ಆಳವಾದ ಅಭ್ಯಾಸ ಮತ್ತು ಸಂಶೋಧನೆಯಲ್ಲಿ ಆಧುನಿಕ ಶಾಸ್ತ್ರೀಯ ದೃಷ್ಟಿಕೋನವನ್ನೂ ತಾವು ಹೊಂದಬಲ್ಲರು ಎಂಬುದನ್ನು ಈ ಪುಸ್ತಕದಲ್ಲಿ ತೋರಿಸಿ ಕೊಟ್ಟಿದ್ದಾರೆ.

ಪಾಶ್ಚಾತ್ಯ ಜ್ಯೋತಿಃಶಾಸ್ತ್ರ ಪರಂಪರೆಯನ್ನೂ ಅವರು ಅರಗಿಸಿಕೊಂಡಿದ್ದರಲ್ಲದೆ, ಭಾರತ, ಯುರೋಪ, ಅಮೇರಿಕೆಗಳಲ್ಲಿ ಇತ್ತೀಚೆಗೆ ನಡೆಯುತ್ತಿರುವ ನವೀನ ಸಂಶೋಧನೆಗಳನ್ನೂ ಸಂಪೂರ್ಣ ಅರಿತುಕೊಂಡಿದ್ದರು. ವರಾಹಮಿಹಿರ, ಅಥವಾ ಸತ್ಯಾಚಾರ್ಯರ ಸಿದ್ಧಾಂತಗಳಷ್ಟೇ, ಝಾಡಕೀಲ ಅಥವಾ ಸೆಫಾರಿಯಲ್ಲರ ಪ್ರಮೇಯಗಳು ಅವರಿಗೆ ಕರತಲಾಮಲಕವಾಗಿದ್ದವು.

'ದೈವದರ್ಶನವು' ಮುಖ್ಯವಾಗಿ ಪಾಶ್ಚಾತ್ಯ ಜ್ಯೋತಿಃಶಾಸ್ತ್ರ ನಿರೂಪಣೆಯಾಗಿದೆ. ಆ ಪದ್ಧತಿಯ ಪ್ರಕಾರ ಘಟನೆಗಳ ಅರ್ಥವನ್ನೂ, ಕಾಲವನ್ನು ಹೇಗೆ ನಿರ್ಣಯಿಸಬೇಕು ಎಂಬುದನ್ನು ಇದರಲ್ಲಿ ವಿವರಿಸಲಾಗಿದೆ. ಭಾರತೀಯ ಜ್ಯೋತಿಃಶಾಸ್ತ್ರದೊಂದಿಗೆ ತುಲನಾತ್ಮಕವಾದ ನಿರೂಪಣೆಯಿಂದ ಈ ಗ್ರಂಥದ ಉಪಯುಕ್ತತೆ ಮತ್ತಷ್ಟೂ ಹೆಚ್ಚಾಗಿದೆ. ವಸ್ತು

ಸ್ಥಿತಿಯೆಂದರೆ, ಪಾಶ್ಚಾತ್ಯ ಜ್ಯೋತಿಃಶಾಸ್ತ್ರದ ಬಗೆಗೆ ಕನ್ನಡದಲ್ಲಿ ರಚಿತವಾದ ಮೊಟ್ಟಮೊದಲಿನ ಗ್ರಂಥವಿದು. ಆದ್ದರಿಂದ ಈ ಶಾಸ್ತ್ರದ ಬಗೆಗೆ ಆಸ್ಥೆಯಿದ್ದವರೆಲ್ಲರಿಂದ ಸಂಗ್ರಹಣೀಯವಾದ ಪುಸ್ತಕಗಳಲ್ಲಿ ಇದಕ್ಕೆ ಸನ್ಮಾನ್ಯಸ್ಥಾನ ಉಚಿತ ಮತ್ತು ಅವಶ್ಯ.

ತಂದೆಯ ಸ್ಮರಣಾರ್ಥ ಈ ಗ್ರಂಥವನ್ನು ಪ್ರಕಟಿಸಲು ನಿರ್ಣಯ ಕೈಕೊಂಡ ತರುಣ ಶ್ರೀ ಎಚ್. ಜಿ. ಜೋಶಿಯವರು ಕರ್ತವ್ಯನಿಷ್ಠತೆಗಾಗಿ ಅಭಿನಂದನೀಯರು. ಶ್ರೀಮಾನ್ ಗಲಗಲಿಯವರಂಥ ಉದ್ದಾಮ ಪಂಡಿತರ ಆಳವಾದ ಅಭ್ಯಾಸ ಮತ್ತು ತೀಕ್ಷ್ಣವಾದ ಸಂಶೋಧನೆಯ ಫಲವಾದ ಈ ಹೊತ್ತಿಗೆಯು ಕನ್ನಡ ಸುಶಿಕ್ಷಿತರಿಂದ ಯೋಗ್ಯ ಮನ್ನಣೆ ಪಡೆಯುವದೆಂದು ಆಶಿಸಿದ್ದೇನೆ.

ಈ ವರೆಗೂ ಕನ್ನಡದಲ್ಲಿ ಪ್ರಕಟಿತವಾದ ಗ್ರಂಥಗಳಲ್ಲಿ ಪಾಶ್ಚಾತ್ಯ ಜ್ಯೋತಿಃಶಾಸ್ತ್ರವನ್ನು ಅತ್ಯಂತ ತಿಳಿಯಾಗಿ ಸುಲಲಿತವಾಗಿ ತಿಳಿಸಿಕೊಡುವ ಗ್ರಂಥವೆಂದರೆ '**ದೈವದರ್ಶನ**' ಎಂಬುದು ನನ್ನ ಅಭಿಮತವಾಗಿದೆ. ಇಂಗ್ಲೀಷ ಭಾಷೆಯನ್ನರಿಯದ ಕರ್ನಾಟಕದಲ್ಲಿಯ ಜ್ಯೋತಿಷಿಗಳು ಈ ಗ್ರಂಥದ ದಕ್ಷ ಅಭ್ಯಾಸದಿಂದ ಪಾಶ್ಚಾತ್ಯ ಪದ್ಧತಿಯ ಮೂಲತತ್ತ್ವಗಳನ್ನು ಅರಿತುಕೊಳ್ಳಲು ಸಮರ್ಥರಾಗುವರೆಂದು ನನ್ನ ಭರವಸೆ.

ಈ ಶಾಸ್ತ್ರದಲ್ಲಿ ಆಸ್ಥೆಯುಳ್ಳ ಪ್ರತಿಯೊಬ್ಬ ಕನ್ನಡಿಗನಿಗೂ ಈ ಗ್ರಂಥವನ್ನು ಓದಲು ನಾನು ಪ್ರಶಂಸಿಸುತ್ತೇನೆ. (ಶಿಫಾರಸು ಮಾಡುತ್ತೇನೆ.)

ಬಿ. ವ್ಹಿ. ರಾಮನ್
Ph. D. F. R. A. S.
Editor, the Astrological
Magazine, Bangalore

ಬೆಂಗಳೂರ
೯-೩-೧೯೬೭

ಜ್ಯೋತಿಷಿಯ ದೃಷ್ಟಿಯಲ್ಲಿ ಲೇಖಕರು.

ಕಂಡವರು : ಶ್ರೀ ಕುರಡೂರ ರಾಮರಾಯರು

ಜನನ ತಾರೀಖು : ೧೩-೩-೧೮೯೩. ಸೋಮವಾರ
ಜನನ ವೇಳೆ : ೪.೪೫ P. M. (ಸಾಯಂಕಾಲ).
ಜನ್ಮ ಸ್ಥಾನ : ನಾಗನೂರ (ಜಿಲ್ಹಾ. ವಿಜಾಪೂರ)
ಅಕ್ಷಾಂಶ. ೧೬° - ೪೯′ ರೇಖಾಂಶ. ೭೫° - ೪೬′



ಹ.	∠	ಶುಕ್ರ.
ರವಿ	★	ಮಂ.
ಚಂದ್ರ	△	ಮಂ
ಚಂದ್ರ	★	ರವಿ
ನೇಪ	★	ಬುಧ
ನೇ	△	ಶನಿ

ಶನಿ ಬುಧ ಪ್ರತಿಯೋಗ
ಶುಕ್ರ □ ನೇಪ.
ಚಂದ್ರ □ ಗುರು

ಜಾತರ ಲಗ್ನವು ರಾಶಿಚಕ್ರದಲ್ಲಿ ಬಾದಶಾಹಿರಾಶಿಯೆನಿಸಿದ ಸಿಂಹ ರಾಶಿಯಲ್ಲಿ ಉದಿತವದೆ. ಈ ಲಗ್ನದ ಮುಖ್ಯ ಗುಣಗಳಾದ ಚಿಕಿತ್ಸಕ ಬುದ್ಧಿ

ಔದಾರ್ಯಗಳು ಜಾತರಲ್ಲಿ ಮನೆಮಾಡಿದ್ದವು. ಈ ಲಗ್ನವು ಗೌರವ, ಮಾನ ಸನ್ಮಾನಗಳನ್ನು ಕೊಡುವದು. ಕೀರ್ತಿಯು ಹಬ್ಬುವದು. ಈ ಲಗ್ನದ ದೋಷವೆಂದರೆ ಸ್ವಭಾವವು ಭೋಳೆ (Docile) ಇರುವದು. ಇದರ ಲಾಭವನ್ನು ಇತರರು ದುರುಪಯೋಗ ಮಾಡಿ ಕೊಳ್ಳುವರು. ಜಾತರ ಜ್ಞಾನದ ಲಾಭವನ್ನು ಅನೇಕರು ಮಾಡಿಕೊಂಡಿದ್ದಾರೆ.

ಸಿಂಹಲಗ್ನವು ೨೭°. ೨೩′ ಕ್ಕೆ ಉದಿತವದೆ. ಜಾತರಲ್ಲಿ ಕನ್ಯಾಲಗ್ನದ (ಸಿಂಹವು ಕೊನೆಯ ಅಂಶಗಳಲ್ಲಿ ಉದಿತವಿದ್ದುದರಿಂದ) ಕೆಲವೊಂದು ಗುಣಗಳೂ ಇದ್ದವು. ನಮ್ಮವರು ಲಗ್ನವು ಆರಂಭದ ೨° - ೩° ಅಥವಾ ಕೊನೆಯ ೨° - ೩° ಇದ್ದಲ್ಲಿ ಪರಭಾವ ಫಲ ಕೊಡುವದೆಂದು ಹೇಳುವರು. ಅದರಂತೆ ಕನ್ಯಾಲಗ್ನದ ಮುಖ್ಯ ಗುಣವಾದ ಗ್ರಹಣಶಕ್ತಿಯು ಜಾತರಲ್ಲಿ ವಿಶೇಷವಾಗಿತ್ತು. ಶುದ್ಧ ವಿಚಾರ, **ಅಖಂಡ ಪರಿಶ್ರಮ, ಸಮಯೋಚಿತ** ಉತ್ತರ ಕೊಡುವದು, ನಿರ್ವಿಕಾರ, ಮಾರ್ಮಿಕ ವಿಚಾರ ಸರಣೆ ಮುಂತಾದ ಕನ್ಯಾಲಗ್ನದ ಗುಣಗಳೂ ಜಾತರಲ್ಲಿ ಇದ್ದವು.

'ಪಿತೃ ಪ್ರತಾಪಾರೋಗ್ಯ ಮನಃ ಶುಚಿಃ ರುಚಿ, ಜ್ಞಾನೋದಯ ಕಾರಕಃ ಸೂರ್ಯಃ" ಲಗ್ನಾಧಿಪತಿ ರವಿಯು ಕೇಂದ್ರದಲ್ಲಿದ್ದು. ಚಂದ್ರ ಮಂಗಳರ, ಶುಭಯೋಗದಲ್ಲಿರುವನು. ರವಿ ಗುರು ಏಕರಾಶ್ಯಾಂತರ ಯೋಗವೂ ಇರುವದು. ಲಗ್ನ ಗುರು ತ್ರಿಕೋಣ, ಚಂದ್ರ ಮಂಗಳ ತ್ರಿಕೋಣ, ಇವು ಆಯುರ್ದಾಯಕ ಯೋಗಗಳು. ಇವರು ತಮ್ಮ ಆಯುಷ್ಯದ ಕೊನೆಯ ಭಾಗದ ವರೆಗೂ ದೀರ್ಘಕಾಲದ ಯಾವ ರೋಗಾದಿಗಳಿಂದಲೂ ಬಳಲದೆ ಆರೋಗ್ಯವನ್ನು ಚೆನ್ನಾಗಿ ಕಾಪಾಡಿಕೊಂಡು ಬಂದಿದ್ದರು. ಆದರೆ ಮಕರದ ಚಂದ್ರನು ಬೇಕಾದ ಶರೀರ ದಾರ್ಢ್ಯವನ್ನು ಕೊಟ್ಟಿರಲಿಲ್ಲ. ರವಿಚಂದ್ರರ ಬಲವು ಮಾತಾ ಪಿತೃ ಸೌಖ್ಯವನ್ನು ಕೊಟ್ಟಿತ್ತು. ದೊಡ್ಡ ಜನರ, ಮಂತ್ರಿಗಳ ಜ್ಯೋತಿರ್ವಿದರ ಗೆಳೆತನಕ್ಕೆ ಕಾರಣವಾಗಿತ್ತು. ಆಯುಷ್ಯದಲ್ಲಿ ಅನೇಕ ಮಾನಸನ್ಮಾನದ ಪ್ರಸಂಗಗಳು ಬಂದವು.

ಪಂಚಮದ ಚಂದ್ರನು ಬಹಳ ಸಂತಾನಕಾರಕನು. ಒಟ್ಟು ಹತ್ತು ಮಂದಿ ಮಕ್ಕಳಾದರು. ಪಂಚಮಾಧಿಪತಿ ಗುರು ಭಾಗ್ಯದಲ್ಲಿ ಒಳಿಷ್ಠ.

ನಿರುವನು. "ಸುತೇಶೋ ನವಮೆ ದಶಮೆ ಪುತ್ರೋ ಭೂಪಸಮೋಭವೇ
ಅಥವಾ ಗ್ರಂಥಕರ್ತಾಚ ವಿಖ್ಯಾತಃ ಕುಲದೀಪಕಃ; ಪುತ್ರರು ಗ್ರ
ಕರ್ತರೂ, ವಿಖ್ಯಾತರೂ ಇರುವರು. ಚಂದ್ರಮಂಗಳರ ತ್ರಿಕೋ
ಯೋಗವು ಇವರನ್ನು ಆಳವಾಗಿ ಅಭ್ಯಾಸಮಾಡುವ ಪ್ರವೃತ್ತಿಯುಳ್ಳವರನ್ನಾ
ಮಾಡಿತು.

ದ್ವಿತೀಯ ಭಾವದ ಶನಿ ಧನಾಧಿಪತಿ ಬುಧನ ಪ್ರತಿಯೋಗದಲ್ಲಿ
ವನು. ಗುರುಚಂದ್ರರ ಕೇಂದ್ರವು ಸಾಂಪತ್ತಿಕ ಅಡಚಣಿಯನ್ನು ತೋ
ವದು. ವಿದ್ಯಾವಿಶಾರದರಿದ್ದರೂ, ಲಕ್ಷ್ಮಿಯ ಅನುಗ್ರಹವಿರಲಿಲ್ಲ. ಬು
ನೇಪಚ್ಯೂನ ತ್ರಿರೇಕಾದಶಯೋಗವು ಉತ್ತಮ ಬುದ್ಧಿ ಮತ್ತಾಯೋಗ
ಶನಿ ನೇಪಚ್ಯೂನ ತ್ರಿಕೋಣಯೋಗವು ಗೂಢಶಾಸ್ತ್ರವನ್ನು (ಜ್ಯೋತಿಃಶಾ
ವನ್ನು) ಆಳವಾಗಿ ಅಭ್ಯಾಸ ಮಾಡಿಸಿತು. ತೃತೀಯದಲ್ಲಿಯ ಹರ್ಶಲನ
ಜ್ಯೋತಿರ್ವಿದರನ್ನು ಮಾಡಿದನು. ತೃತೀಯದ ಹರ್ಶಲವಿದ್ದವರ ಅಕ್ಷರಗ
ಮಾತ್ರ ಸುಮಾರು ಇರುವವು. ಜಾತರ ಅಕ್ಷರಗಳು ದುಂಡಾಗಿ ಇರಲಿ
ಶನಿ ನೇಪಚ್ಯೂನರ ತ್ರಿಕೋಣಯೋಗವು ದೈವೀಶಕ್ತಿಯನ್ನು ಕೊಡುವದ
ಇವರು ಹೇಳಿದ ಮಾತುಗಳು ಸತ್ಯವಾಗಿ ಪರಿಣಮಿಸುತ್ತಿದ್ದವು. ಈ ಶಕ್ತಿಯ
ಇವರ ಮನೆತನದಲ್ಲಿ ಆನುವಂಶಿಕವಾಗಿ ಬಂದಿದೆ. ಇವರ ತಂದೆ ರಂಗಭಟ್ಟರ
ಸಮಾಧಿಸ್ಥಿತಿಯಲ್ಲಿ ವಿಚಿತ್ರ ಸಂಗತಿಗಳನ್ನು ಹೇಳುತ್ತಿದ್ದರಂತೆ; ಕಕ್ಕಂ
ರಾದ ಗುಂಡಭಟ್ಟರು ಆವೇಶತುಂಬಿ ಒಡನಾಡಿದ ಮಾತುಗಳು ಸತ್ಯವಾ
ಪರಿಣಮಿಸುತ್ತಿದ್ದವಂತೆ.

ಒಮ್ಮೆ ರಂಗಭಟ್ಟರು ಸಂಚಾರಕ್ಕೆ ಹೋದಾಗ ಯಾವುದೋ ಒಂದ
ಹಳ್ಳಿಯಲ್ಲಿ ಒಬ್ಬ ದೇಸಾಯರ ಮನೆಗೆ ಅವರ ಪರಿಚಿತರೊಬ್ಬರು ಕರೆದ
ಕೊಂಡು ಹೋದರಂತೆ. ಹೊಸ್ತಿಲಲ್ಲಿ ಕಾಲಿಡುವದರೊಳಗಾಗಿಯೇ 'ಎಲಾ
ಈ ನಿಪುತ್ರಕನ ಮನೆಗೆ ನನ್ನನ್ನೇಕೆ ಕರೆ ತಂದೆ?" ಎಂದು ಕೇಳಿದರಂತೆ
ಆ ಊರ ದೇಸಾಯರ ಪರಿಚಯವು ರಂಗಭಟ್ಟರಿಗೆ ಎಳ್ಳನಿತೂ ಇರಲಿಲ್ಲ
ಇಂಥ ಅದ್ಭುತ ಮಾತುಗಳು ದೈವೀ ಶಕ್ತಿಯಿಂದಲ್ಲದೆ ಮತ್ತೆ ಹೇಗ
ಬಂದಾವು?

ಶುಕ್ರಹರ್ಶಲ ತ್ರಿಕೋಣಯೋಗವು ಸಂಸಾರ ಸೌಖ್ಯವನ್ನು ಚೆನ್ನಾಗಿ ಕೊಟ್ಟಿತು. ಸಪ್ತಮದಲ್ಲಿ ಉಚ್ಚ ಶುಕ್ರನು ಹೆಂಡತಿಯ ಒಳ್ಳೆಯ ಪರಿಸ್ಥಿತಿಯನ್ನು ತೋರುವುದು. ಶುಕ್ರ ಹರ್ಶಲ ಶುಭಯೋಗವು ಜಾತರಿಗೆ ಉತ್ತಮ ವಕ್ತೃತ್ವ ಶಕ್ತಿಯನ್ನು ಕೊಟ್ಟಿದ್ದಿತು. ಭಾಷಣವು ಮೋಹಕವಾಗಿತ್ತು. ಕವಿತೆಗಳನ್ನು ರಸವತ್ತಾಗಿ ಹೇಳುತ್ತಿದ್ದರಲ್ಲದೆ ಸ್ಫೂರ್ತಿಯುತವಾಗಿ ಕಲಿಸುತ್ತಿದ್ದರು. ಸ್ವಪ್ರಯತ್ನದಿಂದ ಅನೇಕ ಭಾಷೆಗಳ ಪರಿಚಯ ಮಾಡಿಕೊಂಡರು. ನವಮದಲ್ಲಿಯ ರಾಹು ಸಭೆಯಲ್ಲಿ ದಿಟ್ಟತನವನ್ನು ಕೊಟ್ಟಿತಲ್ಲದೆ ಯಾರ ಸಹಾಯವಿಲ್ಲದಲೆ ಇಂಗ್ಲೀಷ ಭಾಷೆಯ ಅಭ್ಯಾಸಮಾಡುವಲ್ಲಿ ಯಶಸ್ಸು ಕೊಟ್ಟಿತು. ರಾಫೇಲ, ಅಲೆನ್‌ಲಿಯೋ, ಝಾಡಕೀಲ, ರಾಬ್‌ಸನ್ ರಂತಹ ಆಂಗ್ಲ ಜ್ಯೋತಿರ್ವಿದರ ಪುಸ್ತಕಗಳನ್ನು ಚೆನ್ನಾಗಿ ಮನನ ಮಾಡಿಕೊಂಡರು. ಬಂಗಾಲಿ, ಮರಾಠಿ ಭಾಷೆಗಳ ಅಭ್ಯಾಸಮಾಡಿದ್ದರು.

ನವಮದಲ್ಲಿಯ ಗುರು "ಜ್ಞಾನೀ ಧರ್ಮಪರೋ ನೃಪಾಲ ಸಚಿವೋ ಜೀವೇತಪಃ ಸ್ಥಾನಗೇ" ಗುರು ರಾಹು ಯುತಿಯು ಆಧ್ಯಾತ್ಮಿಕ ಜ್ಞಾನ ತೃಷೆಯನ್ನು ತೋರುವದು. ಇವರು ದ್ವೈತಾದ್ವೈತ ಮತಗಳ ಅಭ್ಯಾಸವನ್ನು ಚೆನ್ನಾಗಿ ಮಾಡಿದ್ದರು. ಶಂಕರ ಭಗವತ್ಪಾದರನ್ನು ಕುರಿತು ಲೇಖನಗಳನ್ನು ಬರೆದಿರುವರು. ಒಬ್ಬ ಗುರು ನವಮದಲ್ಲಿದ್ದರೆ ಸಾಕು, ಅವನು ಸುಖ ಶಾಂತಿಗಳನ್ನು ಕೊಡುವನೆಂದು ಗ್ರಂಥಕರ್ತರು ಹೇಳುವರು. ಸಾಂಪತ್ತಿಕ ಅಡಚಣಿಯು ವಿಪುಲವಾಗಿದ್ದರೂ ಮನೆಯಲ್ಲಿ ಯಾವಾಗಲೂ ಶಾಂತಿ ನೆಲಸಿದ್ದಿತು. ಮನೆಗೆ ಬಂದವರು ಆತಿಥ್ಯ ಸ್ವೀಕರಿಸದೆ ಎಂದೂ ತಿರುಗಿ ಹೋಗುತ್ತಿರಲಿಲ್ಲ. ಭಾಗ್ಯದ ಗುರು ಲೇಖನ ಸ್ವಾಮರ್ಥ್ಯವನ್ನು ಕೊಡುವನು. ಗ್ರಂಥ ನಿರ್ಮಾಣ ಶಕ್ತಿಯನ್ನು ಕೊಡುವನು. ಮಾನ ಗೌರವಗಳನ್ನು ಕೊಡಲು ಈಯೊಬ್ಬ ಗುರು ಸಾಕು. ಈ ಕೀರ್ತಿಯು ಮರಣಾನಂತರವೂ ಉಳಿಯುವದೆಂದು ಎಲೆನ್‌ಲಿಯೋ ಹೇಳುವರು. ಅದರಲ್ಲಿ ಸತ್ಯವಿದೆ. ಈ ಗ್ರಹವೇ ಇವರನ್ನು ಶಿಕ್ಷಕ ವೃತ್ತಿಗೆ ಎಳೆಯಿತು. ಕಲಿಸುವದರಲ್ಲಿ ಇವರದು ಎತ್ತಿದ ಕೈ. ಹರಟೆಯ ರೂಪದಲ್ಲಿ ಶಾಸ್ತ್ರದ ಮನನ ಮಾಡಿಸುತ್ತಿದ್ದರು(ಈ ಮಾತಿಗೆ ಈ ಲೇಖಕನೇ ಸಾಕ್ಷಿಯಾಗಿದ್ದಾನೆ.) ಎಷ್ಟೇ

ಕಠಿಣವಿಷಯವಿದ್ದರು ಸುಲಭರೀತಿಯಲ್ಲಿ ಮನದಟ್ಟಾಗುವಂತೆ ಹೇಳಿ ಕೊಡುತ್ತಿದ್ದರು. ನವಮದ ಗುರು ವಯಸ್ಸಿನ ೨೧, ೩೬, ೪೮ಕ್ಕೆ ಭಾಗ್ಯೋದಯ ಕಾರಕನಾಗುವನು. ಜಾತರು ೨೧ನೆಯ ವಯಸ್ಸಿನಲ್ಲಿ ಶ್ರೀ ಕೂರ್ಮಾಚಾರ್ಯರಲ್ಲಿ ಸಂಸ್ಕೃತ ಅಧ್ಯಯನ ಮಾಡಿದರು. ೩೬ನೆಯ ವರುಷ ರವಿ ಗುರು ಯುತಿಯಾಗಿದೆ. ೪೮ನೆಯ ವರುಷ ರವಿ ಶುಕ್ರ ತ್ರಿರೇಕಾದಶಯೋಗವಾಗಿದೆ. ರವಿ ಗುರು ಯುತಿಯು ದೊಡ್ಡ ಜನರ ವಿದ್ವಾಂಸರ ಸಂಪರ್ಕ ಸ್ನೇಹಗಳನ್ನು ಕೊಟ್ಟಿತು. ವಿಜಾಪೂರ ಜಿಲ್ಹೆಯಲ್ಲಿ ಕಲೆಕ್ಟರರಾಗಿದ್ದ ಶ್ರೀ ನಾಯಿಕರ ಸ್ನೇಹವನ್ನು ಸಂಪಾದಿಸಿಕೊಟ್ಟಿತಲ್ಲದೆ ಘಾದರ ಹೀರಾಸರಂಥ ವಿದ್ವಜ್ಜನರ ಸಂಪರ್ಕಕ್ಕೆ ಕಾರಣವಾಯಿತು. ೪೮ನೆಯ ವರುಷ ಕವನಕಥೆ ಕಾದಂಬರಿಗಳನ್ನು ಬರೆದು ಸಾಹಿತ್ಯ ಸೇವೆ ಮಾಡಿದರು.

೬೬ನೆಯ ವರುಷ ರವಿಯು ದಶಮ ಬಿಂದುವಿನ ಮೇಲೆ ಹಾಯುವಾಗ ಮುಂಬೈ ಮಹಾನಗರದಲ್ಲಿ ಮಾನ ಸನ್ಮಾನಗಳು ದೊರೆತವಲ್ಲದೆ 'ಅಷ್ಟಕ ವರ್ಗ'ದಂಥ ಶಾಸ್ತ್ರೀಯ ಗ್ರಂಥವನ್ನು ಬರೆದರು. ೭೧-೭೨ನೆಯ ವರುಷ ದಶಮ ಬುಧ ತ್ರಿಕೋಣಯೋಗವಾಗಿದೆ. ದಶಮ ಶನಿ ತ್ರಿಕೋಣವೂ ಆಗಿರುವದು. ಅದೇ ಸಮಯಕ್ಕೆ ಅಖಿಲ ಕರ್ನಾಟಕ ಜ್ಯೋತಿಶಾಸ್ತ್ರ ಸಮ್ಮೇಲನದಲ್ಲಿ ಫಲಿತ ಶಾಸ್ತ್ರ ವಿಭಾಗದ ಅಧ್ಯಕ್ಷರಾಗಿದ್ದರು. ವಿದ್ವಜ್ಜನರ ಸಹವಾಸವು ಲಭಿಸಿತು.

೭೪ನೆಯ ವರುಷ ಲಗ್ನಾಂಶ ಹರ್ಶಲರ ಯುತಿಯಾಯಿತು. ಅದೇ ಸಮಯಕ್ಕೆ ರವಿ ನೇಪಚ್ಯೂನಯುತಿ, ಶನಿ ಮಂಗಳ ಕೇಂದ್ರ, ಚಂದ್ರಶನಿ ಕೇಂದ್ರಗಳಾದುವಲ್ಲದೆ ಅಷ್ಟಮದಲ್ಲಿ ಶನಿಯ ಭ್ರಮಣವಿದ್ದಿತು. ಈ ಅನಿಷ್ಟ ಯೋಗಗಳು ಬಲವತ್ತರವಾಗಿದ್ದುದರಿಂದ ೭೪ನೆಯ ವರುಷವೇ ಜಾತರ ಮರಣವು ಸಂಭವಿಸಿತು.

—೦೦—

ಲೇಖಕರು :



ದಿ. ಪಂಡಿತ ಕೇಶವಶರ್ಮಾ ಗಲಗಲಿ

ಜನನ :	ಮರಣ :
೧೩-೩-೧೮೮೩	೧೪-೬-೧೯೬೬
ಸೋಮವಾರ	ಮಂಗಳವಾರ
4-45 P. M.	6-45 P. M.
ನಾಗನೂರ (ಜಿ. ವಿಜಾಪೂರ)	ಧಾರವಾಡ

ನವಗ್ರಹಗಳು

ಅಂತರಾಯ ತಿಮಿರೋಪ ಶಾಂತಯೆ । ಶಾಂತಪಾವನಮಚಿಂತ್ಯವೈಭವಂ
ತನ್ನರಂ ವಪುಷಿ ಕುಂಜರಂ ಮುಖೇ । ಮನ್ಮಹೇಕಿಮಪಿತುಂದಿಲಂ ಮಹಃ

ಸೂರ್ಯ:— ನವಗ್ರಹಗಳಲ್ಲಿ ಸೂರ್ಯನಿಗೆ ಇರುವ ಸ್ಥಾನವು ಇನ್ನಾರಿಗೂ ಇಲ್ಲ. ಅವನು ಸೌರಮಾಲೆಯ ಮುಖ್ಯಸ್ಥನು. ಕವಿ ಸೂರ್ಯನ ಮಹತ್ವವನ್ನು ಬಣ್ಣಿಸುತ್ತಾನೆ. 'ಸಂತೋಽಪ್ಯಸಂತ ಇವಚೇತ್ ಪ್ರತಿಭಾಂತಿ ಭಾನೋರ್ಭಾಸಾವೃತೇ ನಭಸಿ ಶೀತ ಮಯೂಖ ಮುಖ್ಯಾಃ' ಸೂರ್ಯನ ಪ್ರಕಾಶದಲ್ಲಿ ಚಂದ್ರಾದಿಗ್ರಹಗಳೂ ಇದ್ದೂ ಕಾಣುವದಿಲ್ಲ. ಇದು ಕವಿಯ ವರ್ಣನೆ. ಆದರೆ ಫಲಿತ ಶಾಸ್ತ್ರದಲ್ಲಿ ಹಗಲು ಅವು ಕಾಣದಿದ್ದರೂ ಇವುಗಳ ಪರಿಣಾಮ ಭೂಮಿಯ ಮೇಲೆ ಮಾನವರ ಮೇಲೆ ಆಗುವದೆಂದು ಜ್ಯೋತಿರ್ವಿದರು ಕಂಡು ಹಿಡಿದಿರುವರು. '**ಜ್ಯೋತಿಷಾಂರವಿರಂಶುಮಾನ್**' ಎಂದು ಭಗವದ್ಗೀತೆ ಹೇಳುವದು. ಸ್ಥಾವರ ಜಂಗಮ ಜಗತ್ತಿಗೆ ಅವನು ಆತ್ಮಸ್ವರೂಪನೆಂದು ತೈತ್ತಿರೀಯ ಸಂಹಿತೆ ಹೇಳುವದು. ಪರಾಶರ ಋಷಿಯ ಮತದಲ್ಲಿ ಅವನೇ ಆತ್ಮಕಾರಕನು. ಗ್ರಹಮಂಡಲದಲ್ಲಿ ಅವನು ರಾಜ. ಅವನ ಸುತ್ತು ಬುಧನಿಂದ ಪ್ಲ್ಯೂಟೋನ ವರೆಗೆ ಎಲ್ಲ ಗ್ರಹಗಳು ಭ್ರಮಿಸುವವು. ಪೃಥ್ವಿಯು ಅವನ ಸುತ್ತು ೩೬೫ ದಿ. ೫ ತಾಸು. ೪೯ ಮಿನಿಟು ಕಾಲದಲ್ಲಿ ಒಮ್ಮೆ ತಿರುಗುವದು. ಸೂರ್ಯನಿಗೆ ಒಂದು ರಾಶಿ ಕ್ರಮಿಸಲಿಕ್ಕೆ ಸುಮಾರು ೧ ತಿಂಗಳ ಬೇಕಾಗುವದು. ಅವನ ಮಧ್ಯಮಗತಿ ೫೯ ಕಲೆ ೮ ವಿಕಲೆ. (ದೈನಿಕ) ಅವನು ಮಂದಗತಿಯಲ್ಲಿರುವಾಗ ೫೭ ಕಲೆ ೧೦ ವಿಕಲೆ. ತೀವ್ರಗತಿಯು ೬೦ ಕಲೆ ೧೧ ವಿಕಲೆ. ಸೂರ್ಯನು ಯಾವಾಗಲೂ ಕ್ರಾಂತಿ ವೃತ್ತದಲ್ಲಿ ಸಂಚರಿಸುವದರಿಂದ ಅವನಿಗೆ ಶರವಿರುವದಿಲ್ಲ.

ವರಾಹಮಿಹಿರಾಚಾರ್ಯರು ಸೂರ್ಯನ ಸ್ವರೂಪವನ್ನು ಹೀಗೆ ಬಣ್ಣಿಸಿರುವರು. ' ಮಧುಪಿಂಗಲ ದೃಕ್ ಚತುರಸ್ರ ತನುಃ ಸವಿತಾಲ್ಪ-ಕಚಃ ' ಲಗ್ನದಲ್ಲಿ ರವಿ ಇದ್ದಾಗ ಹುಟ್ಟಿದವರು ಹೀಗಿರುತ್ತಾರೆ. ಅವನ ಪ್ರಕೃತಿ ಉಷ್ಣ ಶುಷ್ಕವೆಂದು ಫಲಿತಜ್ಞರು ತಿಳಿಯುವರು.

ಸಿಂಹರಾಶಿ ಅವನ ಸ್ವಗೃಹ. ಮೇಷ ರಾಶಿಯಲ್ಲಿ ಅವನು ಉಚ್ಚ-ನಿರುವನು. ಮೇಷ, ಸಿಂಹ, ಧನು ರಾಶಿಗಳಲ್ಲಿ ಅವನಿಗೆ ಬಲವಿರುವದು. ಈ ರಾಶಿಯಲ್ಲಿ ರವಿ ಇದ್ದಾಗ ಹುಟ್ಟಿದವರ ಪ್ರಕೃತಿ ಸುದೃಢವಾಗಿರುವದು. ತುಲಾ ಅವನಿಗೆ ನೀಚ ರಾಶಿಯು. ಚಂದ್ರನ ರಾಶಿಯು ಫಲಿತ ಕಥನದಲ್ಲಿ ಮಹತ್ವವಿರುವಂತೆ ಸೂರ್ಯನ ರಾಶಿಗೂ ಮಹತ್ವವಿರುವದು. ರವಿ ಚಂದ್ರರು ಜನ್ಮಕುಂಡಲಿಯಲ್ಲಿ ಪೀಡಿತರಲ್ಲದಿರುವಾಗ ಹುಟ್ಟಿದವರು ಜಗದಲ್ಲಿ ಮಾನ-ಗೌರವಗಳನ್ನು ಪಡೆಯುತ್ತಾರೆ. ರವಿ ಚಂದ್ರರು ಪಾಪ ಗ್ರಹಗಳ ಪೀಡೆಯಲ್ಲಿದ್ದಾಗ ಹುಟ್ಟಿದವರು ತಮ್ಮ ಪ್ರತಿಕೂಲ ದೈವದೊಡನೆ ಜೀವಮಾನ-ಮುದ್ದಕ್ಕೂ ಹೋರಾಡಬೇಕಾಗುವದು. ರವಿ ಚಂದ್ರರು ಜನನ ಕಾಲದಲ್ಲಿ ಶನಿಯ ಅಶುಭಯೋಗದಲ್ಲಿದ್ದರೂ ಅಡ್ಡಿಯಿಲ್ಲ. ಆದರೆ ಇತರ ಗ್ರಹಗಳೊ-ಡನೆ ಶುಭಯೋಗವಿರಬೇಕು. ಅಂದರೆ ಯಶಸ್ಸಿನ ಮುಖವನ್ನು ಕಾಣು ವರು. ರವಿಯು ಗುರುವಿನ ಶುಭಯೋಗದಲ್ಲಿರುವುದಂತೂ ಬಹಳ ಒಳ್ಳೆಯದು. ಚಂದ್ರ, ಲಗ್ನಾಂಶಗಳೂ ಪಾಪ ಗ್ರಹಗಳಿಂದ ಪೀಡಿತರಾಗಿರದಿದ್ದರೆ ಅವನು ಭಾಗ್ಯವಂತನಾಗುವನು. ರವಿ ಮಂಗಳನ ಶುಭಯೋಗದಲ್ಲಿದ್ದರೆ ಯುದ್ಧ, ವೈದ್ಯ-ವಿದ್ಯೆಗಳಿಂದ ಭಾಗ್ಯ. ಮಂಗಳನ ಬಲ ಹೆಚ್ಚಿದ್ದಂತೆ ಅವನ ಕೀರ್ತಿ ಹೆಚ್ಚು. ಜಗದಲ್ಲಿ ಅವನ ಪೌರುಷ ಬೆಳಗುವದು. ಸೂರ್ಯನು ದಶಮದಲ್ಲಿದ್ದರೆ ಸಾರ್ವಜನಿಕ ಕಾರ್ಯಗಳಲ್ಲಿ ಕೀರ್ತಿ ಕೊಡುವನು. ರವಿ ದಶಮದಲ್ಲಿ ಗುರುವಿನ ಶುಭ ಸಂಬಂಧದಲ್ಲಿ— ತ್ರಿಕೋಣ, ತ್ರಿರೇಕಾದಶ ಯೋಗದಲ್ಲಿ, ಸಮಕ್ರಾಂತಿಯಲ್ಲಿದ್ದರೆ (Parellel) ಧಾರ್ಮಿಕ ಸಂಸ್ಥೆಯಲ್ಲಿ ಗೌರವ ಪಡೆಯಬಹುದು. ಡಾಕ್ಟರನಾಗಬಹುದು, ಕಾಯ್ದೆಯ ಪಂಡಿತನಾಗಬಹುದು, ರವಿ ಗುರುಗಳ ರಾಶಿ ಬಲ, ಯೋಗ ಬಲಗಳು, ಅವರೀರ್ವರಲ್ಲಿ ಹೆಚ್ಚಿನ ಬಲವನ್ನೂ ವಿಚಾರಿಸಿದರೆ ವೈವಿಧ್ಯ ತೋರುವದು. ರವಿಗುರುಗಳ ಕಾರಕತ್ವವನ್ನು ತಿಳಿದುಕೊಂಡು ಅರ್ಥಮಾಡಬೇಕು.

ಕರ್ಮ ಜೀವಾಧ್ಯಾಯದಲ್ಲಿ ರವಿಯು ಉದ್ಯಮಗಳನ್ನು ಸೂಚಿಸುವಾಗ ವರಾಹಮಿಹಿರಾಚಾರ್ಯರು ' ಅರ್ಕಾಂಶೇ ತೃಣಕಾನಕೋರ್ಣ ಭೇಷಜಾದ್ಯೈಃ ' ರವಿಗೆ ಡಾಕ್ಟರನಾಗುವ ಕಾರಕತ್ವವನ್ನು ಹೇಳಿರುವರು. ಸೂರ್ಯನು ಲಗ್ನದಲ್ಲಿರುವಾಗ ಹುಟ್ಟಿದವರಲ್ಲಿ ಧೈರ್ಯ, ಮಹತ್ವಾಕಾಂಕ್ಷೆಗಳಿರುವವು. ಆತನು ಸಂಪತ್ತನ್ನು ಕೊಡುವನು. ಆತನ ಕೂಡ ಮಂಗಳನ ಶುಭ ಯೋಗವು ಧೈರ್ಯ ಮಹತ್ವಾಕಾಂಕ್ಷೆಗಳನ್ನು ಹೆಚ್ಚಿಸುವದು. ಶುಕ್ರ-ಗುರುಗಳ ಸಂಬಂಧವು ಸಂಪತ್ತನ್ನು ಕೊಡುವದು. ಆದರೆ ಅವರೊಡನೆ (ರವಿ) ಶನಿಯ ಯುತಿ, ಕೇಂದ್ರ ಪ್ರತಿಯೋಗ, ಸಮಕ್ರಾಂತಿ ಯೋಗಗಳಿದ್ದರೆ ಕ್ಷಯ ಸಂಧಿವಾತ ವಿಧಿಯ ಪ್ರತಿಕೂಲತೆಗಳ ಭಯವಿರುವದು. ರವಿ ಮಂಗಳನಿಂದ ಪೀಡಿತನಿದ್ದರೆ ಉತಾವಳಿತನ, ಒರಟುತನಗಳು ಕಂಡು ಬರುವವು. (ಗುರುವಿನ ಸಂಬಂಧವಿಲ್ಲದಿರುವಾಗ) ರವಿಗೆ ಹೃದಯ ಬೆನ್ನುಹುರಿ, ಪುರುಷರ ಬಲಗಣ್ಣು, ಸ್ತ್ರೀಯರ ಎಡಗಣ್ಣಿನ ಮೇಲೆ ಅಧಿಕಾರವಿರುವದು. ಅವನು ಪೀಡಿತನಿದ್ದರೆ ಹೃದಯ ಕಣ್ಣು, ತೀವ್ರಜ್ವರ, ಮಿದುಳಿನ ವಿಕಾರ ಬೆನ್ನುಹುರಿಯ ಅಕ್ರಮ ವೇದನೆಗಳು ಕಂಡು ಬರುವವು.

ಸೂರ್ಯನಿಗೆ ರಾಶಿಬಲ, ಭಾವಬಲ, ದೃಷ್ಟಿಬಲ ಹೆಚ್ಚು ಹೆಚ್ಚು ಇದ್ದಂತೆ ಉದಾತ್ತತೆ, ಔದಾರ್ಯ, ಅಭಿಮಾನ, ಮಾನವತೆ ಸ್ನೇಹಭಾವಗಳು ಕಂಡು ಬರುವವು. ಶತ್ರುಗಳೊಡನೆ ಕೂಡ ಅವನು ಉತಾತ್ತ ಭಾವನೆಯಿಂದ ನಡೆಯುವನು. ಮಿತಭಾಷಿ, ಗೌರವದ ಅಭಿಲಾಷೆಗಳಿರುವವು. ರವಿಯು ಪೀಡಿತನಾದಾಗ ಅಹಂಕಾರಿ, ಉನ್ಮಾದಿ. ಸಹಾನುಭೂತಿ ಶೂನ್ಯನಾಗುವನು. ರವಿಯು ಯಾವ ರಾಶಿಯಲ್ಲಿರುವನೋ ಆ ರಾಶಿಯಂತೆ ಮಾನವನ ಗುಣಧರ್ಮಗಳು ಕಂಡು ಬರುವವು. ರವಿಯು ವಿದ್ಯುತ್ ಧರ್ಮೀಯನು. ನಿರ್ಭಯ ಖಬರು ಇಲ್ಲದವನು. ಬಲಿಷ್ಠ, ಉಗ್ರನು; ಜೀವನಶಕ್ತಿದಾಯಕನು, ಜಾಜ್ವಲ್ಯಮಾನ, ಕಾವು ಪ್ರಕೃತಿಯವನು. ದಾಹಕಾರಕ; ಆರಕ್ತ ವರ್ಣದವನು. ಉಷ್ಣರೂಕ್ಷ. ಸಾಧಾರಣ ಆವಂಧ್ಯನಿರುವನು. ಅವನು ನಾನಂಗೀ ಬಣ್ಣದವನು. ' ಕುಸುಂಭಾರುಣಂ ಚಾರು ಚೇಲಂ ವಸಾನಾ ' ಇಂತಹ ಬಣ್ಣ. ರಾಶಿಯೋಗಗಳ ಭೇದದಂತೆ ತಾರತಮ್ಯವಾಗುವದು.

ಹಳದಿ, ನಾಶಿಪುಡಿ ಬಣ್ಣ, ಬಂಗಾರ ವರ್ಣ, ತಾಮ್ರ ಬಣ್ಣ ಅವನ ಕಕ್ಷೆಯಲ್ಲಿ ಬರುವವು. ರವಿಯ ಪ್ರಮಾಣ ವರ್ಷವು ಹೆಚ್ಚೆಂದರೆ ೧೪೬೦. ಕಡಿಮೆ ಪ್ರಮಾಣ ೧೨೦. ಅವನ ಅಂಕ ೧-೧೦-೧೯-೨೮-೩೭ ಇತ್ಯಾದಿ.

ದಶಮದಲ್ಲಿಯ ರವಿಯು ೧೯; ೨೮ ನೆಯ ವಯಸ್ಸಿಗೆ ನವಕರ ಕೊಡಿಸುವನು.

ಮೇಷ ರವಿ:— ಉತ್ತಮ ಆಕಾರಮಾನವನ್ನು ಕೊಡುವನು. (ಚತುರಸ್ರತನುಃ ಕವಿತಾಲ್ಪಕಚಃ) ಬಲಶಾಲಿ, ಉತ್ತಮ ಚರ್ಯೆ. ಮೇಷ ರವಿಯಿರುವವರು ವೀರ ಶೂರ, ಸೈನಿಕನಾಗಲಿಕ್ಕೆ, ಡಾಕ್ಟರನಾಗಲಿಕ್ಕೆ ಯೋಗ್ಯತೆ ಇರುವದು. ಭಾಗ್ಯಶಾಲಿ, ಶತ್ರು ಜಯ, ವರಾಹಮಿಹಿರಾ- ಚಾರ್ಯರ ಅಭಿಪ್ರಾಯದಂತೆ ಉಚ್ಚರವಿ 'ಪ್ರಥಿತಶ್ಚತುರೋಟನೋಽಲ್ಪ ಪಿತ್ತಃ ಶ್ರಿಯಾಗೇತ್ಸ್ವಾಯುಧ ಭೃದ್ವಿತುಂಗ ಭಾಗೇ.'

(ಪರಮೋಚ್ಚ ರವಿ ಸಂಪತ್ತನ್ನೇ ಕೊಡುವನು. ರವಿಮೇಷದಲ್ಲಿ ೧೦ ನೇ ಅಂಶದಲ್ಲಿ ಪರಮೋಚ್ಚನು.)

ವೃಷಭ ರವಿ:— ಮಾನಾರ್ಹ. ಎತ್ತರ ಕಡಿಮೆ. ಗಟ್ಟಿಮುಟ್ಟ ಶರೀರ ಕಟ್ಟು. ಅಷ್ಟು ಆಕರ್ಷಕ ಚರ್ಯೆ ಅಲ್ಲ. ವಿಶಾಲ ಮುಖ. ದೀರ್ಘ ನಾಸಿಕೆ. ದಿಟ್ಟ, ಅಭಿಮಾನಿ, ಎದುರಿಗಾಳಿಗಳನ್ನು ಎದುರಿಸುವ ಪ್ರೇಮ. ಅನೇಕ ಸಾರೆ ವಿಜಯಿ. 'ಗವಿ ವಸ್ತ್ರ ಸುಗಂಧ ಪಣ್ಯಜೀವೀ ವನಿತಾದ್ವಿಟ್ ಕುಲಶ್ಚಗೇಯ ವಾದ್ಯೇ.'

ಮಿಥುನ ರವಿ:— ಪ್ರಮಾಣಬದ್ಧ ಶರೀರ. ಕಿತ್ತಳೆ ಬಣ್ಣದವನು. ನಿಶ್ಚಿತ ಮತವಿಲ್ಲದವನು. ಸಾಮಾನ್ಯ ಭಾಗ್ಯ.

'ವಿದ್ಯಾ ಜ್ಯೋತಿಷ ವಿತ್ತವಾನ್ ಮಿಥುನಗೇ.'

ಕರ್ಕ ರವಿ:— ಮಧ್ಯಮ ಆಕೃತಿ. ನಿರುಪದ್ರವಿ; ಆನಂದಿ. ಲೋಕ ಪ್ರಿಯ. ಆಲಸ್ಯ, ವಿಲಾಸಪ್ರೀತಿ. ವರಾಹಮತ ಕೊಂಚ ಭಿನ್ನ.

'ತೀಕ್ಷ್ಣೋಽಸ್ವಃ ಪರಕಾರ್ಯಕೃತ್ ಶ್ರಮಪಥಕ್ಲೇಶೈಶ್ಚ
ಸಂಯುಜ್ಯತೇ'.

ಸಿಂಹ ರವಿ: — ಗಟ್ಟಿಮುಟ್ಟ ಮಾನವ, ಸುವರ್ಣ ವರ್ಣ. ತುಂಬಿದ ದುಂಡು ಮುಖ, ವಿಶಾಲ ನೇತ್ರ, ಪ್ರಾಮಾಣಿಕ ಸರಲ ಆಚಾರ, ಮಹತ್ವಾಕಾಂಕ್ಷಿ, ವಿಲಾಸಪ್ರೀತಿ.

'ಸಿಂಹಸ್ಥೇ ವನಶೈಲ ಗೋಕುಲ ರತಿಃ ವೀರ್ಯಾನ್ವಿತೋಜ್ಞಃ
ಪುಮಾನ್.'

ಕನ್ಯಾ ರವಿ: — ದೀರ್ಘದೇಹ, ಮೃದುದೇಹ, ಸುಂದರ ಸಮೃದ್ಧ- ಕೇಶ ಕಲಾಪ. ಬುದ್ಧಿಶಾಲಿ, ಕಲಾಶಾಸ್ತ್ರ ಬಲ್ಲವ, ಆನಂದಿ, ಸೊಗಸುಗಾರ.

'ಕನ್ಯಾಸ್ಥೇ ಲಿಪಿಲೇಖ್ಯ ಕಾವ್ಯಗಣಿತ ಜ್ಞಾನಾನ್ವಿತಃ ಸ್ತ್ರೀವಪುಃ'

ತುಲಾ ರವಿ:— ಸರಲ ದೀರ್ಘದೇಹ, ಸಂತೈಸುವ ಮಾನವ, ಹೊಳೆವ ಕಣ್ಣುಳ್, ವಿಲಾಸಿ, ನ್ಯಾಯಿ, ಲಹರೀ.

'ಜಾತಃ ತೌಲಿನಿ ಶೌಂಡಿಕೋ ಧ್ವನಿರತೋ ಹೈರಣ್ಯಕೋ (ಪತ್ತಾರ)
ನೀಚಕೃತ್.'

ಇತರ ಗ್ರಹಗಳಿಂದ ಪೀಡಿತನಾಗಿದ್ದಾಗ ದುರ್ಗುಣಗಳು ತೋರ ಬಹುದು.

ವೃಶ್ಚಿಕ ರವಿ:— ಚೌರಸ ಮಾಂಸಲ ದೇಹ, ವಿಶಾಲ ಮುಖ, ಸೂರ್ಯನ ಬಿಸಿಲು ತಾಕಿದಂತಿರುವ ಬಣ್ಣ, ಗುಂಗುರಗೂದಲು, ಬುದ್ಧಿಶಾಲಿ. ಭಾರವಾಹಿ, ಭಾಗ್ಯಶಾಲಿ, ಡಾಕ್ಟರ, ರಾಸಾಯನಿಕ, ಇಂಜನಿಯರ ನಾಗಲಿಕ್ಕೆ ಯೋಗ್ಯನು, ಸಾಮುದ್ರಿಕ. ವ್ಯವಹಾರಿ.

'ಕ್ರೂರಃ ಸಾಹಸಿಕೋ ವಿಷಾರ್ಜಿತ ಧನಃ ಶಸ್ತ್ರಾಂತ
ಗೋಲಿಸ್ಥಿತೋ.'

ಧನೂ ರವಿ:— ಎತ್ತರ, ಚೆನ್ನಾದ ಪ್ರಮಾಣಬದ್ಧ ಮೈಕಟ್ಟು, ಸುಂದರ ಪುರುಷ, ದುಂಡು ಮುಖ, ಕುಟಿಲ ಕುಂತಲ, ಅಭಿಮಾನಿ, ಉದಾತ್ತ ಉದ್ದೇಶ ಉಳ್ಳವನು, ದಿಟ್ಟ, ಮಹಾಕಾರ್ಯಗಳನ್ನು ನಿರ್ವಹಿಸಲು ಸಮರ್ಥನು, ಧರ್ಮಗಳಲ್ಲಿ ಶ್ರದ್ಧೆ, ಕ್ರೀಡಾಪಟು.

‘ ಸತ್ ಪೂಜ್ಯೋ ಧನವಾನ್ ಧನುರ್ಧರಗತೇ ತೀಕ್ಷ್ಣೋ
ಭಿಷಕ್ಕಾರುಕೋ. ’ (ವೈದ್ಯ, ಶಿಲ್ಪಿ)

ಮಕರ ರವಿ:— ಹೃಸ್ವದೇಹ, ಸಾಮಾನ್ಯ ಮೈಕಟ್ಟು, ದುಂಡುಗಿನ ತುಂಬು ಮುಖ, ನ್ಯಾಯಿ, ಸರಲತೆ, ಆತುರತೆ, ಬಲಾತ್ಕಾರಗಳು ಕಂಡು ಬರುವವು.

‘ ನೀಚೋಽಜ್ಞಃ ಕಾವಣಿಕ್ ಮೃಗೇಲ್ಪಧನವಾನ್
ಲುಬ್ಧೋನ್ಯ ಭಾಗ್ಯೈರತಃ. ’

ಕುಂಭ ರವಿ:— ಮಧ್ಯಮ ಆಕಾರ. ಸಾಮಾನ್ಯ ಮೈಕಟ್ಟು ದುಂಡು ತುಂಬ ಮುಖ, ನಿರ್ಮಲ ಚರ್ಯೆ, ಅಭಿಮಾನಿ, ಮಹತ್ವಾಕಾಂಕ್ಷಿ, ಕಲಾಶಾಸ್ತ್ರ ಬಲ್ಲವನು.

‘ ನೀಚೋ ಘಟೇ ತನಯ ಭಾಗ್ಯ ಪರಿಚ್ಯುತೋಽಸ್ವಃ’.

ಮೀನ ರವಿ:— ಹೃಸ್ವ ಮಾಂಸಲ ದೇಹ, ದುಂಡು ಮುಖ, ಉತ್ತಮ ಚಹರೆ, ನಿರುಪದ್ರವಿ, ಅತಿವ್ಯಯದಿಂದ ತನ್ನ ಶತ್ರು ತಾನೇ ಆಗ ಬಹುದು, ಪ್ರತಿಭಾ ಶಾಲಿ, ಮೋಜವಾನಿ ಪ್ರಿಯ.

‘ ತೋಯೋತ್ಥ ಪಣ್ಯವಿಭವೋ ವನಿತಾದೃತೋಂತ್ಯೇ ’.

ರವಿ, ಚಂದ್ರ, ಲಗ್ನ ರಾಶಿಗಳನ್ನು ಕಂಡು ಮಾನವನ ಗುಣಧರ್ಮ ಗಳನ್ನು ನಿರ್ಣಯಿಸಬೇಕು. ರವಿಗೆ ಲಗ್ನ ದಶಮ ಭಾವಗಳು ಮಹತ್ವ ವಾದವು. ತದನಂತರ ನವಮ ಪಂಚಮ. ೨–೪–೧೨ ೬–೮ ರಲ್ಲಿ ರವಿಯು ರಾಶಿ ಬಲವಿಲ್ಲದೆ ಪೀಡಿತನಿದ್ದರೆ ಅನಿಷ್ಟ ಫಲ ನೀಡುವನು. ಹರ್ಶಲ್ ಶನಿಗಳಿಂದ ಪೀಡಿತನಿರಬಾರದು. ನೇಪಚ್ಯೂನನ ಪ್ರತಿಯೋಗ ಕೇಂದ್ರ ದಲ್ಲಿಯೂ ಇರಕೂಡದು. ಪಾಪ ಗ್ರಹಗಳ ಸಮುಕ್ರಾಂತಿಯೂ ಶುಭವಲ್ಲ. ರವಿಯು ಶನಿ, ಮಂಗಳ, ಹರ್ಶಲ, ನೇಪಚ್ಯೂನರಿಂದ ಪೀಡಿತನಿದ್ದಷ್ಟು ಉದ್ಯೋಗದಲ್ಲಿ ಅಡಚಣಿಗಳು ಬರುವವು. ರಾಜಕೀಯ ಭಯ. ಫೌಜ ದಾರಿ ಖಟ್ಲೆಗಳು, ವ್ಯವಹಾರದಲ್ಲಿ ಅನೇಕ ಭಾಗಾದಿಗಳು ಉತ್ಪನ್ನವಾಗು ವವು. ಆಶೆ–ಆಕಾಂಕ್ಷೆಗಳು ಅತೃಪ್ತವಾಗಿ ಉಳಿಯುವವು. ಪಿತೃಸೌಖ್ಯವು

ಕಡಿಮೆ ಸಿಗುವದು. ಮಾನವನು ರೋಗಗ್ರಸ್ತನಾಗುವನು. ರವಿಯ
ಶನಿಯಿಂದ ಪೀಡಿತನಾದಷ್ಟು ಉಳಿದ ಯಾವ ಗ್ರಹಗಳಿಂದಲೂ ಪೀಡಿತ
ನಾಗುವದಿಲ್ಲ. ರವಿಯಿಂದ ಶನಿ ಚತುರ್ಥದಲ್ಲಿದ್ದರೆ ಅನೇಕ ಆಪತ್ತುಗಳ
ಬರುವವು. ಆಯುರ್ದಾಯಕ್ಕೂ ಇದು ಒಳ್ಳೆಯದಲ್ಲ. ರವಿಯಿಂದ ದಶಮ
ದಲ್ಲಿ ಶನಿ ಹರ್ಶಲರಿರುವದೂ ಒಳ್ಳೆಯದಲ್ಲ. ಇದರಿಂದ ಧಂದೆಯಲ್ಲಿ ನೌಕ
ಯಲ್ಲಿ ಅನೇಕ ಅಡಚಣಿಗಳೂ ಸಂಕಟಗಳೂ ಬರುವವು. ರಾಜಭಯ
ಪ್ರಾಪ್ತವಾಗುವದು. ಶನಿಯಿಂದ ೨–೧೨ ರಲ್ಲಿ ರವಿಯು ಒಳ್ಳೆಯ ಫ
ವನ್ನು ತೋರಿಸಲಾರನು. ರವಿ ಶನಿಗಳಲ್ಲಿ ಅರ್ಧ ಕೇಂದ್ರ (೪೫ ∠.
ಯೋಗವೂ ಅಶುಭ ಫಲವನ್ನು ಕೊಡುವದು. ದ್ರವ್ಯ ಸಂಪಾದನೆಯ
ವಿಘ್ನಗಳು ಬರುವವು. ತಂದೆಯ ಋಣವನ್ನು ತೀರಿಸಬೇಕಾಗುವದ
ಪಿತ್ರಾರ್ಜಿತ ಸಂಪತ್ತು ಸಿಗಲಾರದು. ರವಿ ಚಂದ್ರರಲ್ಲಿಯೂ ಅಶುಭಯೋ
ವಿರಬಾರದು. ಇದು ಉದ್ಯೋಗಕ್ಕೆ ತ್ರಾಸದಾಯಕ. ರವಿ ಚಂದ್ರರ ದ್ವಿದ್ವಾ
ದಶ ಷಡಾಷ್ಟಕ ಯೋಗಗಳೂ ಅಪಯಶಸ್ಸನ್ನು ಕೊಡುವವು. ಆದ
ಇವರಲ್ಲಿ ತೃತೀಯ; ಏಕಾದಶ (೬೦ ∠) △ (೧೨೦ ಅಂಶ ಅಂತರ
ಯೋಗಗಳಿದ್ದರೆ ಕೀರ್ತಿಯು ಲಭಿಸುವದು. ಯಶಸ್ಸು ಪ್ರಾಪ್ತಿಯಾಗುವದ
ಸಾಂಪತ್ತಿಕ ಲಾಭಗಳಾಗುವವು.

ರವಿ ಬುಧ ಯೋಗವು ವಿದ್ಯೆಯನ್ನೂ ಬುದ್ಧಿಯನ್ನೂ ಕೊಡುವದ
ಮಿಥುನ, ಕುಂಭ, ತುಲಾ ಶಾಸ್ತ್ರೀಯ ರಾಶಿಯಲ್ಲಿ ಉಂಟಾದರೆ ಅತ್ಯುತ್ತಮ
ರವಿ ಗುರುಗಳ ಯೋಗವು ಐಶ್ವರ್ಯವನ್ನು ಕೊಡುವುದು. ರವಿ ಮಂಗ
ಯೋಗದಿಂದ ಪ್ರಕೃತಿಯಲ್ಲಿ ಉಷ್ಣತೆಯುಂಟಾಗುವದು. ಉತ್ತಮ ಜೀವ
ಶಕ್ತಿಯನ್ನು ಕೊಡುವವು. ಧೈರ್ಯ–ಸಾಹಸಗಳಿರುವವು. ಅಂಥವ
ರಸಾಯನ ಶಾಸ್ತ್ರಾಜ್ಞರೂ ಅಗ್ನಿಜೀವಿಗಳೂ ಆಗುವರು. ಅಶುಭಯೋ
ದಲ್ಲಿ ಅಗ್ನಿಭಯ, ಅಪಘಾತಗಳ ಭಯವಿರುವದು. ರವಿಯು ದಶಮದ
ಗುರು ರಾಜಕಾರ್ಯ ಧುರಂಧರರನ್ನು ಹುಟ್ಟಿಸುವನು. ಅಧಿಕಾರಿಗಳಾ
ವರು. ಮಂಗಳನಿದ್ದರೆ ದೀರ್ಘೋದ್ಯೋಗಿ. ಪೋಲೀಸಖಾತೆಯ ಅ
ಕಾರಿ, ಮಿಲಿಟರಿ ಅಧಿಕಾರಿ ಆಗುವನು. ರವಿಯಿಂದ ೧೧ ರಲ್ಲಿ ಎಲ್ಲ ಗ್ರ
ಗಳೂ ಶುಭ ಫಲವನ್ನು ಕೊಡುವವು.

ರವಿಯ ಭಾವಗತ ಫಲ

ರವಿ ಲಗ್ನದಲ್ಲಿದ್ದರೆ ಆತ್ಮವಿಶ್ವಾಸಿ, ದೃಢ ನಿಶ್ಚಯನು ಆಗುವನು. ಉದಾತ್ತ ವಿಚಾರಗಳಿರುವವು. ಅಭಿಮಾನಿ, ದೊಡ್ಡ ಮನಸ್ಸುಳ್ಳವನು. ನ್ಯಾಯಿ, ಸ್ಪಷ್ಟವಕ್ತಾ ಇರುವನು. ನೀಚ ಕೃತ್ಯಗಳನ್ನು ತಿರಸ್ಕರಿಸುವನು. ಸತ್ಯಪ್ರತಿಜ್ಞ, ಕುಲಶೀಲವಂತ, ನಿಷ್ಕಲಂಕ, ಅಧಿಕಾರ ಪ್ರೇಮಿಯಾಗುವನು. ಅಗ್ನಿರಾಶಿಯ ರವಿ ಲಗ್ನದಲ್ಲಿದ್ದರೆ ಸ್ವಭಾವವು ಮಹತ್ವಾಕಾಂಕ್ಷಿಯಾಗಿರುವದು. ಸಿಟ್ಟುಬೇಗ ಬರುವದು. ಜನರ ಮೇಲೆ ತನ್ನ ವರ್ಚಸ್ಸು ಇರಬೇಕು; ಪ್ರತಿಯೊಬ್ಬರೂ ತನಗೆ ಮಾನ ಕೊಡಬೇಕು. ಎಂದು ಇಚ್ಛಿಸುವನು. ಮಿತಭಾಷಿ, ಗಂಭೀರನಾಗಿರುವನು.

ವೃಷಭ, ಕನ್ಯಾ, ಮಕರ ಅಂದರೆ ಪೃಥ್ವಿ ರಾಶಿಯ ರವಿ ಲಗ್ನದಲ್ಲಿದ್ದರೆ ಹಟ, ದುರಾಗ್ರಹಗಳು ಕಂಡು ಬರುವವು. ತಮ್ಮ ಮತವೇ ನಿಜವೆಂದು ನಂಬುವರು. ಅಭಿಮಾನಿ ಇರುವರು. ಮಿಥುನ, ತುಲಾ, ಕುಂಭ ಅಂದರೆ ವಾಯು ರಾಶಿಯ ರವಿ ಲಗ್ನದಲ್ಲಿದ್ದರೆ ನ್ಯಾಯಿ, ಉದಾರ. ಶಾಸ್ತ್ರೀಯ ವಿಷಯ ಕಲಾ ಕೌಶಲ್ಯಗಳಲ್ಲಿ ಅಭಿರುಚಿ ಇರುವದು. ಕರ್ಕ, ವೃಶ್ಚಿಕ, ಮೀನ ಅಂದರೆ ಜಲರಾಶಿಯ ರವಿ ಲಗ್ನದಲ್ಲಿದ್ದು ಶುಕ್ರ, ಚಂದ್ರ, ನೇಷಚ್ಯೂನರೊಡನೆ ಅಶುಭಯೋಗ ಮಾಡುತ್ತಿದ್ದರೆ ಸ್ತ್ರೈಣನಿರುವನು. ಸಾಧಾರಣವಾಗಿ ಜಲರಾಶಿಯಲ್ಲಿ ರವಿಯು ದುರ್ಬಲನಿರುವನು. ಕರ್ಕ ರಾಶಿಯ ರವಿಯು ಲಗ್ನದಲ್ಲಿದ್ದವರು ಕುಟುಂಬ, ಮನೆಮಾರು, ಹೆಂಡತಿ–ಮಕ್ಕಳ ಮೇಲೆ ಲುಬ್ಧರಿರುವರು. ಕರುಣಾಳು ದಯಾರ್ದ್ರರೂ ಆಗಿರುವರು. ವೃಶ್ಚಿಕ ರಾಶಿಯ ರವಿ ರಸಾಯನ ಶಾಸ್ತ್ರ, ವೈದ್ಯ ಶಾಸ್ತ್ರಗಳಲ್ಲಿ ಅಭಿರುಚಿಯನ್ನು ಹುಟ್ಟಿಸುವನು. ಒಟ್ಟಿನಲ್ಲಿ ರವಿಯು ಲಗ್ನದಲ್ಲಿರುವಾಗ ಹುಟ್ಟಿದವರು ಸಾಧಾರಣ ಭಾಗ್ಯಶಾಲಿಗಳಿರುವರು. ಸೂರ್ಯೋದಯಕ್ಕೆ ಹುಟ್ಟಿದವರ ರವಿಯು ಲಗ್ನದಲ್ಲಿರುವನು.

ವರಾಹಮಿಹಿರರು ಹೇಳುವದೇನಂದರೆ—

"ಶೂರಸ್ತಬ್ಧೋ ವಿಕಲ ನಯನೋ ನಿರ್ಘೃಣೋರ್ಕೇ ತನುಸ್ಥೇ ।
ಮೇಷೇ ಸಸ್ವಃ ತಿಮಿರ ನಯನಃ ಸಿಂಹಸಂಸ್ಥೇ ನಿಶಾಂಧಃ
ನೀಚೇಂಧೋಽಸ್ವಃ ಶಶಿಗೃಹಗತೇ ಬುದ್ಬುದಾಕ್ಷಃ ಪತಂಗೇ."

ಅವನು ಪೀಡಿತನಿದ್ದಾಗ ದುರ್ಗುಣಗಳು ತೋರುಬಹುದು. ಶನಿಮಂಗಳರಿಂದ ಪೀಡಿತನಿದ್ದಾಗ ನಿಶಾಂಧನೂ ತಿಮಿರನಯನನೂ ಆಗಬಹುದು. ಆದರೆ ಒಂದೇ ಯೋಗದಿಂದ ಯಾವ ಫಲವನ್ನೂ ಹೇಳಬಾರದು. ಯೋಗ ಸಮುಚ್ಚಯವು ಒಂದು ವಿಶಿಷ್ಟ ಫಲವನ್ನು ಹುಟ್ಟಿಸುವದೆಂದು ವಾಚಕರು ಅರಿಯಬೇಕು.

ದ್ವಿತೀಯದಲ್ಲಿ ರವಿ–: ೨ ರಲ್ಲಿದ್ದರೆ ದುಡ್ಡು ವೆಚ್ಚಮಾಡುವನು. ಪೀಡಿತನಿದ್ದರೆ ಅಪವ್ಯಯ ಮಾಡುವನು. ಆದರೆ ಗುರುವಿನೊಡನೆ ನವಪಂಚಮ ದ್ವಿರಾಶ್ಯಾಂತರ, ದೃಷ್ಟಿಯೋಗವಿದ್ದರೆ ಮನುಷ್ಯನ ಪ್ರಾಪ್ತಿಯ ಮಾನವು ಚೆನ್ನಾಗಿರುವದು. ಗುರುವಿಗೆ ರಾಶಿಬಲವಿದ್ದಷ್ಟು ಪ್ರಾಪ್ತಿ ಹೆಚ್ಚು. ರಾಜಾಶ್ರಯದಿಂದಲೂ ರವಿ ಧನವನ್ನು ಕೊಡುವನು. ಸರಕಾರಿ ನೌಕರೀ (ನೃಪಹೃತ ಧನಃ) ರಾಜಕೀಯ ಕಾರ್ಯಗಳಿಂದಲೂ ದುಡ್ಡು ಸಿಗುವುದು. ಯಾವ ಭಾವ ಫಲವನ್ನು ವಿಚಾರಿಸುವಾಗಲೂ ಭಾವವನ್ನು ಭಾವಾಧಿಪತಿಯನ್ನು ಕಾರಕಗ್ರಹವನ್ನೂ ದೃಷ್ಟಿ ವಿಚಾರವನ್ನು ತಕ್ಕೊಂಡು ಫಲವನ್ನು ಹೇಳಬೇಕು. "**ಭಾವಂ ಭಾವಪತಿಂ ಕಾರಕಖಗಂ ಆಲೋಚ್ಯ ಸರ್ವಂ ವದೇತ್.**" ಎಂದು ಕಾಲಿದಾಸನು ತನ್ನ ಕಾಲಾಮೃತದಲ್ಲಿ ಹೇಳಿರುವನು.

ತೃತೀಯ ಭಾವದಲ್ಲಿ ರವಿ: — ತೃತೀಯ ಭಾವದಲ್ಲಿ ರವಿ ಇದ್ದರೆ ಶಾಸ್ತ್ರೀಯ ವಿಷಯದ ಅಭಿರುಚಿ ಇರುವದು. ಚಿಕಿತ್ಸಕ ಬುದ್ಧಿ ಇರುವದು. ದೃಢನಿಶ್ಚಯ, ಪ್ರವಾಸದ ಅಭಿರುಚಿಗಳು ತೋರಿಬರುವವು. ಉದ್ಯೋಗಕ್ಕಾಗಿ, ನೌಕರಿಗಾಗಿ ಪ್ರವಾಸ ಮಾಡಬೇಕಾಗುವದು. ಚರರಾಶಿಯಲ್ಲಿ ರವಿ ಇದ್ದರೆ ಮೇಲಿಂದ ಮೇಲೆ ರೇಲ್ವೆ ಪ್ರವಾಸಗಳು ಘಟಿಸುವವು. ಇಲ್ಲಿಯ ಬಲಿಷ್ಠ ರವಿ ಲೇಖನದಿಂದ ಕೀರ್ತಿಯನ್ನು ಕೊಡುವನು. ಆಪ್ತೇಷ್ಟರಿಗೆ ಮಾನ ಸನ್ಮಾನ ಸಿಗುವದು. ದೀರ್ಘೋದ್ಯೋಗ, ಕಾರ್ಯಬಾಹುಲ್ಯದಿಂದ ಸಹೋದರರಲ್ಲಿ ಶ್ರೇಷ್ಠತೆಯನ್ನು ಪಡೆಯುವನು. ವರಾಹಮಿಹಿರಾ-

ಚಾರ್ಯರು "**ಮತಿ ವಿಕ್ರಮಾಸ್ ತೃತೀಯೇಗೇರ್ಕೇ.**" ಬಲಿಷ್ಠರವಿ ಬುದ್ಧಿ ಶೌರ್ಯಗಳನ್ನು ಕೊಡುವನು, ಎಂದು ಹೇಳಿರುವುದು ಯಥಾರ್ಥ ವಿರುವದು.

ಚತುರ್ಥದಲ್ಲಿ ರವಿ:— ಈ ಭಾವದಲ್ಲಿ ರವಿ ಬಲಿಷ್ಠನಿದ್ದರೆ ಉತ್ತರ ವಯಸ್ಸಿನಲ್ಲಿ ಸುಖಾಭಿವೃದ್ಧಿಗೆ ಕಾರಣವಾಗುವದು. ಜಮೀನ ಜುಮಲಾ ಸ್ಥಾವರ ಆಸ್ತಿಗಳಲ್ಲಿ ಅಭಿರುಚಿಯಿರುವದು. ಸ್ವಭಾವವು ಮೌನವೃತ್ತಿಯದು. ಗೂಢವಿದ್ಯೆಯ ರುಚಿಯಿರುವದು. ಬಲಿಷ್ಠ ರವಿ ಶುಭ ಫಲ ವನ್ನೇ ಕೊಡುವನು. ದುರ್ಬಲನಿದ್ದರೆ ಗೃಹ ಸುಖದಲ್ಲಿ ನ್ಯೂನತೆ, "**ವಿಸುಖಃ ಪೀಡಿತ ಮಾನಸಶ್ಚತುರ್ಥೆ.**"

ಪಂಚಮ ರವಿ:— ಪಂಚಮ ರವಿ ಸಂತತಿಗೆ ಅನುಕೂಲನಲ್ಲ. ಜಲ ರಾಶಿಯ ರವಿ ಅಷ್ಟು ಪ್ರತಿಕೂಲನಲ್ಲದಿದ್ದರೂ ಅಶಕ್ತ ದುರ್ಬಲ ಅಲ್ಪಾಯು ಸಂತತಿಯನ್ನು ಕೊಡುವನು. ಪಂಚಮ ರವಿ ಚಂದ್ರ, ಗುರು, ಶುಕ್ರರೊಡನೆ ಶುಭಯೋಗ ಮಾಡುತ್ತಿದ್ದರೆ ಮೇಲಿನ ಅನಿಷ್ಟ ಫಲವು ದೊರೆಯಲಾರದು. ಇಲ್ಲಿಯ ಶುಭ ದೃಷ್ಟರವಿ ಶಾಲಾ, ನಾಟಕ ಶಾಲೆ, ಮನೋರಂಜನೆಯ ಸಾಧನಗಳು ರೇಸ, ಶರ್ಯತ್, ಲಾಟರಿ, ಸರಕಾರಿ ಇನಾಮ ಲ್ಯಾಂಡ ಇವು ಗಳಿಂದ ಲಾಭ ದರ್ಶಕನಾಗುವನು. ಪಂಚಮದಲ್ಲಿ ಎಲ್ಲ ದೃಷ್ಟಿಯಿಂದ ಬಲಿಷ್ಠನಿದ್ದ ರವಿ ರಾಜನಂತೆ ಐಶ್ವರ್ಯವನ್ನು ಕೊಡುವನು. ದುಡ್ಡು ವೆಚ್ಚ ಮಾಡುವವರು; ಡೌಲಿನಿಂದ ಇರುವವರು ಆಗುವರು. ಪಂಚಮದಲ್ಲಿ ಇಂತಹ ರವಿ ಪುತ್ರ, ಸಂತತಿ ಕೊಡುವನು. ಅವರೂ (ಪುತ್ರರು) ಗೌರವ ವನ್ನು ಪಡೆಯುವರು. ವರಾಹಮಿಹಿರಾಚಾರ್ಯರು ಹೇಳಿದ್ದು "**ಅಸುತೋ ಧನವರ್ಜಿತಸ್ತ್ರಿ ಕೋಣೇ.**" ಎಂಬುದು ರವಿ ಪೀಡಿತನಿದ್ದರೆ ಮಾತ್ರ.

ಷಷ್ಟದಲ್ಲಿ ರವಿ:— ಆರರಲ್ಲಿ ರವಿಯು ಪ್ರಕೃತಿಯ ದೃಷ್ಟಿಯಿಂದ ಒಳ್ಳೆ ಯವನಲ್ಲ. ಇಲ್ಲಿ ರವಿಯು ಪೀಡಿತನಿದ್ದರೆ ದೀರ್ಘಕಾಲ ಕಾಡುವ ರೋಗ ಗಳಾಗುವವು. ಇಲ್ಲಿ ಸ್ಥಿರರಾಶಿಯ ರವಿಯು ಪೀಡಿತನಿದ್ದರೆ ಗಂಟಲಿನ ಗಂಟಿನ ತೀವ್ರದಾಹ, ಘಟಸರ್ಪ, ಲಘು ಶ್ವಾಸನಲಿಕಾದಾಹ, ದಮ್ಮು, ಮೂತ್ರ ವಿಕಾರ ಹೃದಯರೋಗ, ಬೆನ್ನಿನಲ್ಲಿ. ಕಟಿಯಲ್ಲಿ ದೌರ್ಬಲ್ಯಗಳು

ತೋರುವವು. ದ್ವಿಸ್ವಭಾವಿ ರಾಶಿಯ ರವಿ ಪೀಡಿತನಿದ್ದಾಗ ಶ್ವಾಸ ನಲಿಕೆಯ ಅವರೋಧದಿಂದುಂಟಾಗುವ ವಿಕಾರ, ಆಮವಿಕಾರ, ಆಮಪಾತ ವಿಕಾರದ ಭೀತಿ ಇರುವದು. ಕಫಕ್ಷಯ ಪುಪ್ಪುಸ ವಿಕಾರಗಳು ತೋರುವವು. ಚರ ರಾಶಿಯಲ್ಲಿ ಪೀಡಿತನಿದ್ದರೆ ಯಕೃತ್ ವಿಕಾರ (ಲಿವ್ಹರ ಕಂಪ್ಲೇಂಟ), ಪಿತ್ತಾ-ಶಯದ ವಿಕಾರ, ಮಜ್ಜಾತಂತು ವಿಕಾರ, ಹೃದಯ ವಿಕಾರ, ಜಠರ ವಿಕಾರ, ಸಂಧಿವಾತಗಳು ತಲೆದೋರಬಹುದು. ೬ರಲ್ಲಿ ಬಲಿಷ್ಠ ರವಿ ಇದ್ದರೆ ವೈದ್ಯ ಶಾಸ್ತ್ರ, ಆರೋಗ್ಯ ಶಾಸ್ತ್ರದ ಅಭಿರುಚಿ ಇರುವದು. ಅಂಥವರು ನಾಮಾಂಕಿತ ಡಾಕ್ಟರರು, ವೈದ್ಯರು ಆಗಬಹುದು. ವೈದ್ಯ ಕೌಶಲದಿಂದ ಜಗದಲ್ಲಿ ಕೀರ್ತಿ ಸಂಪಾದಿಸುವರು.

ಸಪ್ತಮದಲ್ಲಿ ರವಿ:— ೭ರಲ್ಲಿ ರವಿ ಇದ್ದರೆ ಸ್ತ್ರೀ ಅಥವಾ ಪತಿಮಾನೀ, ಅಹಂಕಾರೀ, ಸ್ವಾಭಿಮಾನಿ ಸ್ವಭಾವವಿರುವದು. ಪ್ರಾಮಾಣಿಕ, ನಿಷ್ಕಪಟಿ, ಉದಾತ್ತ ವಿಚಾರದ ವ್ಯಕ್ತಿ ಇರುವನು. ಈ ಸ್ಥಾನದಿಂದ ಸೂಚಿತವಾಗುವ ಪಾಲುಗಾರನಲ್ಲಿ ಕೂಡ ಈ ಗುಣಧರ್ಮಗಳು ತೋರಬರುವವು. ಔದಾರ್ಯ, ಸುಸ್ವಭಾವಗಳು ಕಂಡುಬರುವವು. ಸಪ್ತಮದಲ್ಲಿ ಬಲಿಷ್ಠ ರವಿಯು ಉದ್ಯೋಗಕ್ಕೂ ಪಾಲುಗಾರಿಕೆಯ ವ್ಯವಹಾರಕ್ಕೂ ಅನುಕೂಲನಿರುವನು. ರಾಶಿ ಬಲವನ್ನು, ದೃಷ್ಟಿ ಬಲವನ್ನು ನೋಡಿ ಫಲಾದೇಶ ಮಾಡಬೇಕು. ಬಲಿಷ್ಠ ರವಿ ಲಗ್ನದಿಂದ ಭಾಗ್ಯೋದಯ ಸೂಚಕನು. ಕೋರ್ಟಿನ ವ್ಯವ-ಹಾರದಲ್ಲಿ ಯಶಸ್ಸು ಕೊಡುವನು. ಶತ್ರುತ್ವವೂ ಕೂಡ ನ್ಯಾಯಿ ವ್ಯಕ್ತಿ ಯೊಡನೆ ಉಂಟಾಗುವದು.

ಅಷ್ಟಮದಲ್ಲಿ ರವಿ:— ೮ರಲ್ಲಿ ರವಿ ಬಲಿಷ್ಠನಿದ್ದರೆ ಲಗ್ನದ ನಂತರ ಲಾಭವಾಗುವದು. ಮರಣ ಸಮಯದಲ್ಲಿ ಮಾನ ಸನ್ಮಾನವನ್ನು ಕೊಡು ವನು. ಇವರ ಬುದ್ಧಿ ಚಾತುರಿಯಿಂದ ಪಾಲುಗಾರರಿಗೂ ಲಾಭ, ಪಾಲು ಗಾರರ ದುಡ್ಡಿನಿಂದ ಇವನಿಗೂ ಹಿತ. ಇಲ್ಲಿ ಪೀಡಿತ ರವಿ ಇದ್ದರೆ ೩೦-೩೩ ವರುಷದ ಸುಮಾರಿಗೆ ಮೃತ್ಯು ಭಯವಿರುವದು. ೮ರಲ್ಲಿ ರವಿ ಮಂಗಳ ನಿಂದ ಪೀಡಿತನಿದ್ದರೆ ಅಪಘಾತದ ಭಯವಿರುವದು.

ನವಮದಲ್ಲಿ ರವಿ:— ನವಮದಲ್ಲಿ ರವಿ ಇರುವವರು ಪ್ರಾಮಾಣಿಕ,

ನ್ಯಾಯಿ, ಸದ್ವರ್ತಿನೀ ದೃಢನಿಶ್ಚಯಿ, ಸತ್ಯಪ್ರತಿಜ್ಞರು ಇರುವರು. ಅಂಥವರು ಜಗತ್ತಿನಲ್ಲಿ ಗೌರವವನ್ನು ಪಡೆಯುವರು. ಭವಿಷ್ಯ ಜ್ಞಾನವಿರುವದು. ಧಾರ್ಮಿಕನು ಆಚಾರ–ವಿಚಾರ ಉಳ್ಳವನು, ಮಹತ್ವಕಾಂಕ್ಷಿಯಾಗಿರುವರು. ಹೆಡ್‌ಕ್ಲಾರ್ಕರಾಗಬಹುದು; ಇಲ್ಲವೆ ನ್ಯಾಯ ಖಾತೆಯಲ್ಲಿ ಮುಂದೆ ಬರಬಹುದು. ಪರದೇಶದಲ್ಲಿ ಅವರ ದೈವ ತೆರೆಯುವದು. ಜಲರಾಶಿಯಲ್ಲಿ ಶುಭಸಂಬಂಧಿತ ರವಿ ಇದ್ದರೆ ಪರದೇಶ ಗಮನ ದೂರ ಪ್ರವಾಸಗಳು ಘಟಿಸುವವು. ಇವರ ಉದಯವು ಪರದೇಶದಲ್ಲಿ.

ದಶಮದಲ್ಲಿ ರವಿ:— ಮಾನ ಸನ್ಮಾನ, ಕೀರ್ತಿ ಗೌರವ. ಅಧಿಕಾರಗಳನ್ನು ಕೊಡುವನು. ಸರಕಾರಿ ನೌಕರಿಯಲ್ಲಿ ಉದಯ. ಅಧಿಕಾರಿ ಜನರ ಸಹವಾಸ. ಪ್ರಮೋಶನ್ ಭಾಗ್ಯತೋರುವನು. ೩೦ ರ ನಂತರ ಭಾಗ್ಯೋದಯವಾಗುವದು. ದಶಮ ರವಿ ರಾಜಯೋಗಕಾರಕನಿರುವನು. ಭಾಗ್ಯ ಲಕ್ಷ್ಮಿ ವೃದ್ಧಿಕಾರಕನು. ದಶಮ ರವಿ ಕೆಳಗಿನ ದರ್ಜೆಯವರಿಗೂ ದೊಡ್ಡವರ ಆಶ್ರಯವನ್ನು ಕೊಡುವನು. ಅಂತೂ ಅವನ ಬಲ ತಾರತಮ್ಯದಿಂದ ವಿಚಾರಿಸಿ ಹೇಳಬೇಕು.

ಏಕಾದಶದಲ್ಲಿ ರವಿ:— ೧೨ ರಲ್ಲಿ ಪೀಡಿತ ರವಿಯಿದ್ದರೆ ವರಿಷ್ಠರೊಡನೆ ಶತ್ರುತ್ವವನ್ನು ಹುಟ್ಟಿಸುವನು. ಆಪತ್ತು, ಸಂಕಟಗಳನ್ನು ತರುವನು. ಅಧಿಕಾರಿಗಳೊಡನೆ ಕೂಡಿ ನಡೆಯುವದಿಲ್ಲ. ಪೀಡಿತನಾದ ರವಿ ಸ್ವದೇಶ ತ್ಯಾಗ ಮಾಡಿಸುವನು. ತಮ್ಮ ಕೈಯಿಂದಲೇ ತಮ್ಮ ಮರ್ಯಾದೆಯನ್ನು ಕಳೆದುಕೊಳ್ಳುವರು. ಅತ್ಯಂತ ಪೀಡಿತ ರವಿ ರಾಜದಂಡ ಕಾರಾವಾಸಭಯ ಸೂಚಕನು. ಇಲ್ಲಿ ಬಲಿಷ್ಠನಾದ ಶುಭ ಸಂಬಂಧಿತ ರವಿ ಇದ್ದರೆ ಶಾಸನ ಸಂಸ್ಥೆ, ತುರಂಗ, ಹಾಸ್ಪಿಟಲ್, ಅಧ್ಯಾತ್ಮ ವಿಷಯಗಳಿಂದ ಲಾಭದರ್ಶಕನಾಗಿರುವನು. ಜಗತ್ತಿನಲ್ಲಿ ಮುಂದೆ ಬರುವರು. ಗುಪ್ತ ವಿಷಯಗಳಲ್ಲಿ ಪ್ರಾವೀಣ್ಯ ತೋರುವನು.

೭ ನೆಯ ಭಾವದಿಂದ ೧೨ ನೆಯ ಭಾವದ ವರೆಗೆ ವಿಚಾರ ಮಾಡುವಾಗ ವಾಚಕರು ವರಾಹಮಿಹಿರರ ಈ ಪದ್ಯವನ್ನು ನೆನಪಿನಲ್ಲಿಡಬಹುದು.

"ಸ್ತ್ರೀಭಿರ್ಗತಃ ಪರಿಭವಂ ಮದನೇ ಪತಂಗೇ।
ಸ್ವಲ್ಪಾತ್ಮಜೋ ನಿಧನಗೇ ವಿಕಲೇಕ್ಷಣಶ್ಚ
ಧರ್ಮೇ ಸುತಾರ್ಥ ಸುಖಭಾಕ್ ಸುಖಶೌರ್ಯಭಾಕ್ ಖೇ
ಲಾಭೇ ಪ್ರಭೂತ ಧನವಾನ್ ಪತಿತಸ್ತು ರಿಃಫೇ॥

(ಮದನ; ೭. ಪತಂಗ; ಸೂರ್ಯ. ಖ. ೧೦. ರಿಃ ಫ. ೧೨.)

ಸೌರಯೋಗಗಳು.

ಲಗ್ನಾಂಶದೊಡನೆ ರವಿ ಶುಭಯೋಗ ಮಾಡುತ್ತಿದ್ದರೆ ಆರೋಗ್ಯ ಗೌರವ, ಮಾನಗಳು ಸಿಗುವವು. ರವಿ ಅಗ್ನಿರಾಶಿಯಲ್ಲಿದ್ದರೆ ಅಧಿಕಾರವನ್ನು ಕೊಡುವನು. ರವಿ ದಶಮಾಧಿಪನಿದ್ದರೆ ರಾಜರೂ ರಾಜಕುಮಾರರೂ ಮಂತ್ರಿಗಳೂ ಸಹಕರಿಸುವರು. ಲಗ್ನಾಂಶದೊಡನೆ ಅಶುಭಯೋಗಿ ಆಗಿದ್ದರೆ ಆತುರತೆ, ಅಶಕ್ತತೆ, ತಲೆನೋವು ತೋರುವವು. ಬಲಗಣ್ಣು ಮಂದವಾಗಿರುವದು, ವಿಶೇಷವಾಗಿ ಅವನು ವಾಯು ರಾಶಿಯಲ್ಲಿದ್ದರೆ ಸಾರ್ವಜನಿಕ ಪ್ರಸಿದ್ಧಿಗಾಗಿ ಹಣದ ವೆಚ್ಚವಾಗುವದು. ಸಹೋದರ–ಸಹೋದರಿಯರೊಡನೆ ಕಲಹವಾಗುವದು. ದಿನವರ್ಷ ಪದ್ಧತಿಯಿಂದ ಅಥವಾ ಪ್ರಾಥಮಿಕ ಯೋಗ ಪದ್ಧತಿಯಿಂದ ಈ ಯೋಗವುಂಟಾದಾಗಲೂ ಈ ಫಲಗಳು ಸಂಭವಿಸುವವು. ರವಿಯ ಅಶುಭ ಯೋಗವು ಅಧಿಕಾರಿಗಳ ಉಪಟಳವನ್ನು ಸೂಚಿಸುವದು. ಶತ್ರುಬಾಧೆ, ತಂದೆಗೆ ಪೀಡೆಗಳೂ ಸಂಭವಿಸುವವು. ಅಷ್ಟಮಾಧಿಪನಾಗಿದ್ದರೆ ಜಾತಸಿಗೆ ಮೃತ್ಯುಭಯ.

ರವಿ ದಶಮ ಬಿಂದುವಿನೊಡನೆ ಶುಭಯೋಗ ಮಾಡುತ್ತಿದ್ದರೆ ಧನಪ್ರಾಪ್ತಿ, ಕಾಣಿಕೆ, ಕೀರ್ತಿ, ಮೈತ್ರಿಗಳು ದೊರಕುವವು. ಉತ್ತಮ ಶ್ರೇಣಿಯಲ್ಲಿದ್ದ ಅಧಿಕಾರಿಗಳೂ, ಗೌರವಯುತರೂ ಅನುಗ್ರಹವನ್ನ ಮಾಡುವರು. ಜಾತನು ದೊಡ್ಡ ಜನರ ಗಣನೆಯಲ್ಲಿ ಬರುವನು. ಜೀವನದಲ್ಲಿ ಮುಂದಡಿಯಿಡುವನು. ಸ್ತ್ರೀಯರ ಕುಂಡಲಿಯಲ್ಲಿ ಆಗುತ್ತಿದ್ದರೆ ಮದುವೆಯಾಗುವದು. ಮದುವೆಯಾಗಿದ್ದರೆ ಮಗನು ಹುಟ್ಟುವನು. ಅರಸನಿಗೆ ಇದು

ವಿಜಯವನ್ನೂ ಶಾಂತಿಯನ್ನೂ ಕೊಡುವದು. ಸಾಮಂತರಿಂದ ಸಮ್ರಾಟನು ಸತ್ಕರಿಸಲ್ಪಡುವನು. ಅಶುಭಯೋಗವಾದರೆ ಅಪಮಾನ, ತೊಂದರೆಗಳು ಹುಟ್ಟುವವು. ಹಿಂಬಡತಿಯಾಗುವದು. ನ್ಯಾಯಾಧೀಶರು ವಿರುದ್ಧ ನಿರ್ಣಯ ಕೊಡುವರು. ದಿವಾಳಿ ತೆಗೆಯುವ ಸಂದರ್ಭಗಳು ಬರುವವು. ಸಾರ್ವಜನಿಕ ಜೀವನದಲ್ಲಿ ತೊಂದರೆಗಳುಂಟಾಗುವವು. ಅರಸನು ಲೋಕ ಪ್ರೀತಿಯನ್ನು ಕಳೆದುಕೊಳ್ಳುವನು. ರಾಷ್ಟ್ರೀಯ ಸಂಕಟಗಳು ತಲೆದೋರುವವು. ರವಿಯು ೧, ೮, ೧೨ ರ ಅಧಿಪತಿಯಾಗಿದ್ದರೆ ಅಜಾರಿ ಅಸ್ವಾಸ್ಥ್ಯಗಳು.

ರವಿ ಚಂದ್ರರ ಶುಭಯೋಗ:— ರವಿ ಚಂದ್ರರ ಶುಭಯೋಗವಿದ್ದರೆ ಜಾತನು ಸುಸ್ವಭಾವಿಯಾಗಿರುವನು. ಬೇಗನೆ ಉದಯ ಹೊಂದುವನು. ಉದ್ಯೋಗದಲ್ಲಿ ಬೇಗನೆ ಪ್ರಗತಿ. ದೊಡ್ಡ ಜನರಿಂದ ಆಶ್ರಯ ಅಥವಾ ಸಹಾಯ ಸಿಗುವದು. ಮಾನಸನ್ಮಾನ ದೊರಕುವವು. ನವಕರಿ ಅಥವಾ ಉದ್ಯೋಗ ಸಿಗುವದಕ್ಕೆ ವಿಶೇಷ ಪರಿಶ್ರಮ ಪಡಬೇಕಾಗಿಲ್ಲ. ಪುರುಷರ ಕುಂಡಲಿಯಲ್ಲಿ ಈ ಯೋಗವು ಮದುವೆಯಿಂದ ಲಾಭ ಸೂಚಕವಾಗಿರುವದು. ಸ್ತ್ರೀ ಕುಲೀನಳು ಒಳ್ಳೇ ಸುಸ್ವಭಾವದವಳು ಇರುವಳು. ಈ ಯೋಗವು ಪುರುಷರಿಗಾಗಲಿ, ಸ್ತ್ರೀಯರಿಗಾಗಲಿ ಉತ್ತಮ ಜೀವನ ಶಕ್ತಿಯನ್ನು ಕೊಡುವದು. ಪ್ರಕೃತಿ ನಿರೋಗಿಯಾಗಿರುವದು.

ರವಿ ಚಂದ್ರರಲ್ಲಿ ಅಶುಭಯೋಗವಿದ್ದರೆ ಶರೀರ ಪ್ರಕೃತಿ ಅಶಕ್ತವಾಗಿರುವದು. ರೋಗಿಯಾಗಿರುವ ಸಂಭವ. ಶೀತಬಾಧೆ. ಸಾಂಪತ್ತಿಕ ಎಡರುಗಳಿಗೆ ಎಡೆಗೊಡಬೇಕಾಗುವದು. ಉದ್ಯಮದಲ್ಲಿ ತೊಂದರೆಗಳು. ನೌಕರಿಗಾಗಿ ತ್ರಾಸವಾಗುವದು. ಸಟ್ಟಾ ವ್ಯಾಪಾರದಲ್ಲಿ, ಸ್ತ್ರೀಯರ ಕೂಡ ವ್ಯವಹಾರದಲ್ಲಿ ತೊಂದರೆಗಳು ಉದ್ಭವಿಸುವವು.

ರವಿ ಮಂಗಳ ಶುಭಯೋಗವುಂಟಾದರೆ ಹುಟ್ಟಿದ ಪ್ರಾಣಿ ಉದಾರನಿರುವನು. ಸಡಿಲು ಹಸ್ತವಿರುವದು. ಶೂರ, ಸಾಹಸಿ, ಗಟ್ಟಿಗರಿರುವರು. ಶರೀರ ಪ್ರಕೃತಿ ಚೆನ್ನಾಗಿರುವದು. ಆಯುಷ್ಯದೀರ್ಘವು. ಇವರ ವರ್ಚಸ್ಸು ಜನರ ಮೇಲೆ ಬೇಗ ಬೀಳುವದು. ಉದ್ಯೋಗದಲ್ಲಿ ಬೇಗ ಯಶಸ್ಸು ಸಿಗುವದು. ಪರಿಷ್ಠ ಅಧಿಕಾರಿಗಳ ಕೂಡ ಸುಸಂಬಂಧವಿರುವದು. ಪೋಲೀಸ,

ಸೈನ್ಯ, ರೆವ್ಹಿನ್ಯೂ ಖಾತೆಯಲ್ಲಿರುವ ಸರಕಾರಿ ಅಧಿಕಾರಿಗಳ ಕುಂಡಲಿಯಲ್ಲಿ ಈ ಯೋಗವು ರಾಶಿ ಭಾವಗಳ ದೃಷ್ಟಿಯಿಂದಲೂ ಬಲವತ್ತರವಿರುವದು. ಸ್ತ್ರೀಯರ ಕುಂಡಲಿಯಲ್ಲಿ ಈ ಯೋಗವಿದ್ದರೆ ಬೇಗ ಮದುವೆಯಾಗುವದು. ಪತಿ ಯೋಗ್ಯನಿರುವನು. ಸರಕಾರಿ ಅಧಿಕಾರಿ ಇರುವನು.

ರವಿ ಮಂಗಳ ಯುತಿ— ಅಶುಭಯೋಗ ಉಂಟಾಗುತ್ತಿದ್ದರೆ ಶೂರ ಸಾಹಸೀ ಅವಿಚಾರಿ, ನಿಶ್ಚಯಿ ಇರುವನು. ಸಿಟ್ಟಿನವನು. ಯಾವದೊಂದು ಕಾರ್ಯವನ್ನು ಅವಸರದಿಂದ ಮಾಡುವನು. ಸಾರಾಸಾರ ವಿಚಾರವಿಲ್ಲದವನು. ನಿರ್ಭಯನು. ಉದಾರ; ಸಡಿಲು ಕೈಯವನು. ದಾಹಜನ್ಯ ವಿಕಾರ, ತಾಪ, ಭಯ, ಅಪಘಾತಗಳ ಭಯವಿರುವದು. ರವಿಮಂಗಳ ಸಮುಕ್ರಾಂತಿ ಯುತಿಗಳ ಭಯವು ಇತರ ಅಶುಭಯೋಗಗಳಷ್ಟು ಇರುವದಿಲ್ಲ. ಸ್ತ್ರೀಯರ ಕುಂಡಲಿಯಲ್ಲಿ ರವಿಮಂಗಳ ಅಶುಭಯೋಗವು ಹೆಚ್ಚಿನ ಅನಿಷ್ಟವನ್ನು ಸೂಚಿಸುವದು. ವಿವಾಹ ಸುಖದಲ್ಲಿ ವ್ಯತ್ಯಯ. ಪತಿಯು ಸ್ವಭಾವದಲ್ಲಿ ಕೋಪ ತೋರುವದು. ಕೆಲವರಿಗೆ ಸೆರೆಯ ವ್ಯಸನವು ಇರುವದು, ಕಂಡು ಬರುವದು. ಕೆಲವರು ಭಯಪ್ರದ ಅಧಿಕಾರ ತೋರುವರು. ಯಾವ ರೀತಿಯಿಂದಲೂ ಸಂತುಷ್ಟರಾಗದ ಜಮದಗ್ನಿಗಳು. ಈ ಸಂದರ್ಭದಲ್ಲಿ ರವಿಯೊಡನೆ ಶನಿ ಹರ್ಶಲ್ ನೇಪಚ್ಯೂನರ ಅಶುಭಯೋಗದ ಸಂಬಂಧ ಬಂದರೆ ಕೇಳುವದೇ ಬೇಡ. ಇಂತಹ ಯೋಗಗಳಿಂದ ಬೇಗ ವೈಧವ್ಯವು ಬರುವದು. ಅಪಘಾತದಿಂದ ಪತಿಯ ಮರಣವುಂಟಾಗುವ ಸಂಭವವಿರುವದು.

ರವಿ ಬುಧಯುತಿ-ಸಮುಕ್ರಾಂತಿ ಯೋಗಫಲ:— ಈ ಯೋಗದಲ್ಲಿ ಹುಟ್ಟಿದ ಪ್ರಾಣಿಯು ವಿದ್ಯಾವ್ಯಾಸಂಗೀ ಮಹತ್ವಾಕಾಂಕ್ಷಿ, ದಕ್ಷ ಜಾಣನಿರುವನು, ಲಗ್ನ, ತೃತೀಯ, ನವಮ, ದಶಮಸ್ಥಾನದಲ್ಲಿ ಈ ಯೋಗವಾದರಂತೂ ಅತ್ಯುತ್ತಮ. ರವಿ ಬುಧ ಯುತಿ ಮೀನ ರಾಶಿಯಲ್ಲಾದರೆ ಜಾಣನು ವಾಚಾಳನಿರುವನು. 'ವಾಚಾಳೋ ಬಹು ಗರ್ಹ್ಯವಾಕ್." ಮಾತಾಳಿ. ಬುಧನು ದ್ವಿತೀಯದಲ್ಲಿ ದುರ್ಬಲನಾಗಿದ್ದರೆ ಗೊಳ್ಳುಮಾತು. ಮೀನದಲ್ಲಿ ರವಿ ಬುಧ ಯುತಿ ಬುದ್ಧಿ ಮಂದರನ್ನೂ ಡಾಂಭಿಕರನ್ನೂ ಹುಟ್ಟಿಸುವದು.

ಎಲ್ಲ ವಿಷಯಗಳನ್ನು ಕಲಿಯಬೇಕೆಂದೆನಿಸುವದು. ಅವರ ವಿಷಯ ಚೆಂದಿಯಂತೆ, ಕೌದಿಯಂತೆ. ಆದರೆ ಈ ಯುತಿಯೊಡನೆ ಉಳಿದ ಗ್ರಹಗಳ ಶುಭ ಯೋಗವುಂಟಾದರೆ ಉತ್ತಮ ಕಾದಂಬರೀಕಾರರಾಗುವರು. ವೃಶ್ಚಿಕ ರಾಶಿಯಲ್ಲಿಯ ರವಿ ಬುಧಯುತಿ ರಸಾಯನ ಶಾಸ್ತ್ರ, ಡಾಕ್ಟರೀ ವಿದ್ಯೆಯಲ್ಲಿ ನಿಪುಣತೆಯನ್ನು ಕೊಡುವದು. ಅಂಥವರು ಔಷಧ, ರಸಾಯನ ಪದಾರ್ಥಗಳ ಕ್ರಯ-ವಿಕ್ರಯ ಮಾಡುವರು. ಗಟಾರ (ಡ್ರೇನೇಜ) ಗಳ ಸಂಬಂಧವಾಗಿ ಉತ್ತಮ ಜ್ಞಾನವಿರುವದು. ಮಲವನ್ನು ಶುದ್ಧೀಕರಿಸಿ ಗೊಬ್ಬರವನ್ನು ತಯಾರಿಸಬಹುದು. ಇದರಲ್ಲಿ ಹೆಸರು ಸಂಪಾದಿಸುವರು. ರವಿ ಬುಧಯುತಿ ಒಳ್ಳೆಯ ರಾಶಿಯಲ್ಲಾದರೆ ವ್ಯಾಪಾರ ಗ್ರಂಥ ಲೇಖನ, ಗ್ರಂಥ ಪ್ರಕಾಶನಕ್ಕೆ ಒಳ್ಳೆಯದು. ರವಿಯ ಹಿಂದೆ ಬುಧನಿರುವದಕ್ಕಿಂತ ಮುಂದೆ ಇರುವದು ಒಳ್ಳೆಯದು. ರವಿಗಿಂತ ಬುಧನು ೨೮ ಅಂಶಕ್ಕಿಂತ ಹೆಚ್ಚು ಅಂತರ ಹೋಗುವದಿಲ್ಲ. ಅದ್ದರಿಂದ ಯುತಿ ಸಮಕ್ರಾಂತಿಗಳ ಸಂಭವವಿರುವದು. ಇತರ ಯೋಗಗಳು ಇದರಲ್ಲಿ ಉಂಟಾಗುವದಿಲ್ಲ.

ರವಿ ಗುರು ಸಮಕ್ರಾಂತಿ, ಶುಭಯೋಗವಾಗುತ್ತಿದ್ದರೆ ಆಯುಷ್ಯ ಮರ್ಯಾದೆ ಚೆನ್ನಾಗಿರುವದು. ಯಶಸ್ವಿ, ಭಾಗ್ಯವಾನ್, ನೀತಿವಂತನಾಗುವನು. ದೊಡ್ಡ ಜನರ ಮೈತ್ರಿಯುಂಟಾಗುವದು. ಉಂಡುಟ್ಟು ಸುಖದಿಂತಿರುವನು. ಶರೀರ ಪ್ರಕೃತಿ ಚೆನ್ನಾಗಿರುವದು. ರವಿ ಗುರು, ಯುತಿ ಪಾಪ ಗ್ರಹದಿಂದ ಪೀಡಿತವಾಗಿದ್ದರೆ ಅಪೋಪ್ಲೆಕ್ಸಿಯಿಂದ ಮೃತ್ಯು ಸಂಭವವಿರುವದು. ಸ್ತ್ರೀಯರ ಕುಂಡಲಿಯಲ್ಲಿ ರವಿ ಗುರು ಯುತಿ ಯೋಗವು ಉತ್ತಮ ಭರ್ತೃಸುಖವನ್ನು ಕೊಡುವದು. ಪತಿ ಒಳ್ಳೆಯವನು ಸಿಗುವನು. ಲಗ್ನವು ಬೇಗನೆ ಆಗುವದು. ಗುರು ನಿರ್ಬಲನಿದ್ದು, ರವಿ ಇತರ ಗ್ರಹಗಳೊಡನೆ ಅಶುಭಯೋಗಿ ಆಗಿದ್ದರೆ ಮೇಲಿನ ಫಲವು ದೊರಕಲಾರದು.

ರವಿ ಗುರು ಅಶುಭಯೋಗವು ಸಾಂಪತ್ತಿಕ ಹಾನಿ ಸೂಚಕವು. ಅಪಯಶಸ್ಸು, ಅತಿವ್ಯಯಗಳ ಸೂಚಕವು. ಅಂಥವರು ಎರಡನೆಯವರಿಗೆ ಸಾಲ ಕೈಗಡ ಕೊಡಬಾರದು. ಜಾಮೀನ ಆಗಬಾರದು. ಕಾಯದೆಯ

ಭಯದಿಂದ ಹಾನಿಯಾಗುವ ಸಂಭವವಿರುವದು. ಸ್ತ್ರೀಯರ ಕುಂಡಲಿಯಲ್ಲಿ ಈ ಅಶುಭಯೋಗವಿದ್ದರೆ ಸಾಂಪತ್ತಿಕ ಅಡಚಣಿಯಿದ್ದ ವರನು ಸಿಗುವನು. ರವಿ ಗುರು ಕೇಂದ್ರ ಯೋಗದವರು ವಿಚಾರವನ್ನು ಸಾವಧಾನದಿಂದ ಮಾಡಬೇಕು. ಇವರಲ್ಲಿ ರವಿಯಾಗಲಿ, ಗುರುವಾಗಲಿ, ಶನಿಯ ಮಂಗಳನ ಅಶುಭಯೋಗದಲ್ಲಿದ್ದರೆ ತೀವ್ರ ಪರಿಣಾಮ ಉಂಟಾಗುವದು.

ರವಿ ಶುಕ್ರಯುತಿ, ಶುಭಯೋಗವಾಗುತ್ತಿದ್ದರೆ ಸ್ವಭಾವವು ವಿಲಾಸಪ್ರಿಯವಿರುವದು. ಸಹವಾಸಪ್ರಿಯನು, ಗಾಯನ ವಾದನ ಪ್ರಿಯನಿರುವನು. ವಸ್ತ್ರ, ರತ್ನ, ಸ್ತ್ರೀಯರ ವಸ್ತ್ರಗಳು, ಚೈನಿಯ ಪದಾರ್ಥಗಳು ಸುಗಂಧ ದ್ರವ್ಯಗಳು, ನಾಟಕ-ಸಿನೇಮಾ ವ್ಯವಹಾರಗಳಲ್ಲಿ ವ್ಯವಹರಿಸುವನು. ಶ್ರೀಮಂತ, ಸುಸ್ವಭಾವಿ, ಮಧುರ ಭಾಷಿಯಾಗಿರುವನು. ಕರ್ಕ ವೃಶ್ಚಿಕ ರಾಶಿಯಲ್ಲಿ ರವಿ ಶುಕ್ರಯುತಿ ಒಳ್ಳೆ ಫಲವನ್ನು ತೋರಿಸಲಾರದು. ಸೆರೆಯ ವ್ಯಸನವಿರುವದು. ವ್ಯಭಿಚಾರ ಪ್ರಿಯ, ಸಟ್ಟೇಬಾಜ, ಹಲಕಟ್ ಜನರ ಸಹವಾಸ, ಸ್ತ್ರೀಯರ ಸಂಗವುಂಟಾಗುವವು. ರವಿ ಶುಕ್ರಯುತಿಯು ಶನಿ ಮಂಗಳ ಹರ್ಶಲರಿಂದ ಪೀಡಿತವಿದ್ದರೆ ಅಶುಭ ಫಲದ ಪರಿಣಾಮವನ್ನು ವರ್ಣಿಸುವದೇ ಬೇಡ. ಸಾಂಪತ್ತಿಕ ಹಾನಿ, ದ್ರವ್ಯನಾಶ ಸೂಚಕವಾಗಿರುವದು. ರವಿ ಶುಕ್ರಯುತಿ, ಸಮಕ್ರಾಂತಿಗಳು ಧನ, ಪಂಚಮ, ಸಪ್ತಮ ಸ್ಥಾನದಲ್ಲಿ ಉಂಟಾದರೆ ಇವರು ಚೈನಿ ವಿಲಾಸಿ ಇರುವರು. ವಿಷಯ ಸುಖಕ್ಕಾಗಿ ಸಡಿಲು ಹಸ್ತದಿಂದ ಖರ್ಚು ಮಾಡುವರು. ದಶಮದಲ್ಲಿ ರವಿ ಶುಕ್ರ ಯುತಿಯು ಉದ್ಯೋಗದಲ್ಲಿ ಉತ್ಕರ್ಷ ಸೂಚಕವು. ಚತುರ್ಥದಲ್ಲಿ ರವಿ ಶುಕ್ರ ಯುತಿಯು ಐಶ್ವರ್ಯ ಸುಖವನ್ನು ಕೊಡುವದು. ಮುಪ್ಪಿನ ಕಾಲವು ಚೆನ್ನಾಗಿರುವದು.

ಭಾವಾರಂಭದಲ್ಲಿದ್ದ ಗ್ರಹದ ಫಲದ ಪರಿಣಾಮವು ಪೂರ್ಣವಿರುವದು. ಹಿಂದೆ-ಮುಂದೆ ಸರಿದಂತೆ ಫಲ ಪ್ರಮಾಣದಲ್ಲಿ ನ್ಯೂನಾಧಿಕ್ಯವುಂಟಾಗುವದು. ಸಾಯನ ವಾದಿಗಳ ಭಾವಾರಂಭವೆಂದರೆ, ನಿರಯನ ವಾದಿಗಳ ಭಾವಮಧ್ಯ. ಎರಡೂ ಅರ್ಥ ಒಂದೇ. ಭಾವಫಲ ನಿರ್ಣಯದಲ್ಲಿ ಶ್ರೀಪತಿಯ ಪದ್ಯಗಳನ್ನು ನೆನಪಿನಲ್ಲಿಡಿರಿ.

" ಭಾವಾಂಶತುಲ್ಯಃ ಖಲು ವರ್ತಮಾನ ಭಾವೋದ್ಭವಂ ಪೂರ್ಣ....
ಫಲಂ ವಿಧತ್ತೇ ।
ಭಾವೋಗಕೇ ಚಾಪ್ಯಧಿಕೇಚ ಹೇಟೇ ತ್ರೈರಾಶಿಕೇನಾತ್ರ ಫಲಂ
ಪ್ರಕಲ್ಪ್ಯಂ ॥
ಭಾವಪ್ರವೃತ್ತೇ ಹಿ ಫಲಪ್ರವೃತ್ತಿಃ ಪೂರ್ಣಂ ಫಲಂ ಭಾವ
ಸಮಾಂಶಕೇಷು ।
ಹ್ರಾಸಕ್ರಮಾದ್ಭಾವ ವಿರಾಮ ಕಾಲೇ ಫಲಸ್ಯ ನಾಶಃ
ಕಥಿತೋ ಮುನೀಂದ್ರೈಃ ॥
ಭಾವೇಷು ಭಾವ ಸ್ಫುಟತುಲ್ಯ ಭಾಗಃ ತದ್ಭಾವಜಂ ಪೂರ್ಣಫಲಂ
ವಿಧತ್ತೇ ।
ಸಂಧೇ ಫಲಂನಾಸ್ತಿ ತದಂತರಾಲೇ ಚಿಂತೇನುಪಾತಃ
ಖಲು ಖೇಚರಾಣಾಂ ॥ "

ರವಿ ಶನಿಯುತಿ, ಸಮಕ್ರಾಂತಿ ಯೋಗ ಇತರ ಅಶುಭಯೋಗಗಳು ಉಂಟಾಗುತ್ತಿರಲು ಹುಟ್ಟಿದ ಪ್ರಾಣಿಯು ಅಭಾಗ್ಯವಂತನಾಗುವನು. ಅನೇಕ ಕಷ್ಟಗಳನ್ನು ಎದುರಿಸಬೇಕಾಗುವದು. ಸಂಕಟ ಪರಂಪರೆಯಿಂದ ವಾರಂವಾರ ತ್ರಸ್ತನಾಗುವನು. ಶರೀರ ಪ್ರಕೃತಿಯ ದೃಷ್ಟಿಯಿಂದಲೂ ಇದು ಒಳ್ಳೆಯದಲ್ಲ.

ರವಿಯು ಪಶ್ಚಿಮ ಷಟ್ಕದಲ್ಲಿದ್ದರೆ (೫, ೬, ೭, ೮, ೯) ಹೆಚ್ಚಿಗೆ ಪರಿಣಾಮವಾಗುವದು. ಪೂರ್ವ ಷಟ್ಕದಲ್ಲಿ ಮಾನ ಹಾನಿ, ಧನ ಹಾನಿ, ರಾಜದಂಡ ಭಯವಿರುವದು. ದ್ವಿಸ್ವಭಾವ ರಾಶಿಯಲ್ಲಿ ರವಿ ಶನಿಯುತಿ ಇದ್ದರೆ ಕಫಕ್ಷಯ. ಪುಪ್ಪುಸ ವಿಕಾರ, ಹೃದಯ ರೋಗ ಶೀತ-ಬಾಧೆಗಳಿಂದ ಬಳಲುವ ರೋಗಗಳಿಂದ ಪ್ರಕೃತಿಗೆ ತೊಂದರೆಯಾಗುವದು. ಕರ್ಕ ಮಕರ ರಾಶಿಗಳಲ್ಲಿ ಈ ಯುತಿಯು ದಮ್ಮು ಸಂಧಿವಾತ ವಿಕಾರಗಳ ದರ್ಶಕವಾಗಿದೆ. ಸ್ಥಿರ ರಾಶಿಯಲ್ಲಿಯ ಯುತಿಯು ಅಪಘಾತ, ಪತನ, ಶ್ವಾಸಬಂಧದಿಂದ ಮರಣ, ಹೃದಯ ರೋಗ, ಮೂತ್ರಾಶಯದ ವಿಕಾರಗಳನ್ನು ಹುಟ್ಟಿಸುವದು. ಕಂಠ ವಿಕಾರ ದ್ಯೋತಕವು.

ಚರರಾಶಿಯಲ್ಲಿಯ ಯುತಿಯು (ರವಿ–ಶನಿ) ಉದ್ಯೋಗದಲ್ಲಿ ಹಾನಿ ಶರೀರ ಪ್ರಕೃತಿಗೂ ತ್ರಾಸವನ್ನುಂಟುಮಾಡುವದು ಸ್ತ್ರೀಯರ ಕುಂಡಲಿಯಲ್ಲಿ ಈ ಯುತಿ ಇದ್ದರೆ ಲಗ್ನ ಘಟಿಸುವಲ್ಲಿ ವಿಲಂಬ ತ್ರಾಸಗಳುಂಟಾಗುವವು. ಕರ್ಕ ವೃಶ್ಚಿಕ ಮೀನ ರಾಶಿಯಲ್ಲಿ ಈ ಯುತಿ ಇದ್ದರೆ ಪತಿಯು ಆಲಸಿ, ನಿರುದ್ಯೋಗಿ ಇರುವನು. ಇದು ಪತಿ ಸುಖಕ್ಕೆ ಹಾನಿಕರ. ಬಡತನ ನಾನಾವಿಧ ಆಪತ್ತುಗಳನ್ನು ತರುವದು. ಕೆಲವು ಸಾರೆ ಮುದಿಯರಾಮುಗೌಡನಂತಹ ಪತಿ ಸಿಗುವನು. ಅಶಕ್ತ ರೋಗಿ ವೃದ್ಧನಿರುವನು. ಸ್ವಭಾವದಿಂದ ತ್ರಾಸದಾಯಕ ನಿಷ್ಠುರ ದಯೆ ಇಲ್ಲದವನಿರುವನು. ವಿವಾಹದಿಂದ ಕ್ವಚಿತ್ ಸುಖ ಪ್ರಾಪ್ತಿ.

ರವಿ ಶನಿ ಶುಭಯೋಗ:— ರವಿ ಶನಿ ಶುಭಯೋಗವಿದ್ದರೆ ಸ್ಥಿರ ಬುದ್ಧಿಯವನು, ಶಾಂತನು, ಗಂಭೀರನು ಯಶಸ್ವಿಯಾದವನಾಗುವನು. ಅಧಿಕಾರ, ಒಳ್ಳೆಯ ಹುದ್ದೆಯ ನೌಕರಿ ದೊರಕುವದು. ನ್ಯಾಯಿ ಸಾಂಪತ್ತಿಕ ಸುಖಭೋಗಿ ಇರುವನು. ಸ್ತ್ರೀಯರ ಕುಂಡಲಿಯಲ್ಲಿ ಈ ಯೋಗವಿದ್ದರೆ ಲಗ್ನಕ್ಕೆ ವಿಲಂಬವಾಗಬಹುದು. ಆದರೆ ಪತಿ ಮಿತವ್ಯಯಿ, ಅರ್ಥ ಉಳ್ಳವನು ದೊರಕುವನು. ಆದರಲ್ಲಿ ಶನಿ, ಮಿಥುನ, ತುಲಾ. ಮಕರ, ಕುಂಬ ರಾಶಿಯಲ್ಲಿದ್ದರೆ ವಿಶೇಷ ಉತ್ತಮ ಫಲ ಸಿಗುವದು. ಕೆಲವು ಸಲ ಪತಿ ಇಮನೇವರಸಿರಬಹುದು. ವಯಸ್ಸಿನಿಂದ ಹಿರಿಯವನು.

ರವಿ ಹರ್ಶಲಯುತಿ ಸಮಕ್ರಾಂತಿ:— ಕಲ್ಪನು ಜಾಣ, ನ್ಯಾಯಿ ಸಾಹಸಿ ಆಗುವನು. ಲಗ್ನದಲ್ಲಿ ಈ ಯೋಗವುಂಟಾದರೆ ಸ್ವಭಾವವು ಲಹರೀ ಇರುವದು. ತಿರುಗುವ ಶೀಲ, ಅಶುಭಗ್ರಹದ ಸಂಬಂಧ ಬಂದರೆ ಅಸ್ಥಿರತೆ. ಅಸ್ವಾಸ್ಥ್ಯಗಳು ಕಾಣುವವು. ಧನಸ್ಥಾನದಲ್ಲಿ ಶುಭ ಸಂಬಂಧ ಬಂದರೆ ಮಹದ್ಭಾಗ್ಯವು. ಪದವಿಗಳು ದೊರಕುವವು. ಸಾಂಪತ್ತಿಕ ಲಾಭವಾಗುವದು. ಇವನ ಆಯುಷ್ಯದಲ್ಲಿ ಅನೇಕ ಕ್ರಾಂತಿಗಳುಂಟಾಗುವವು.

ರವಿ ಹರ್ಶಲ್ ಶುಭಯೋಗವಿದ್ದರೆ ಭಾಗ್ಯಶಾಲಿಯಾಗುವನು. ಉದ್ಯೋಗದಲ್ಲಿ ನೌಕರಿಯಲ್ಲಿ ಮುಂದೆ ಬರುವನು. ಮಾನಸನ್ಮಾನಗಳು ಸಿಗುವವು. ಪದವಿಗಳನ್ನು ದೊರಕಿಸುವನು. ಉಚ್ಚಪದವು ಸಿಗುವದು.

ದೊಡ್ಡ ಮನುಷ್ಯರು ಪ್ರಗತಿಗೆ ಸಹಾಯರಾಗುವರು. ಅಧಿಕಾರಿಗಳ ಕೂಡ ಶ್ರೀಮಂತರ ಕೂಡ ಸಂಬಂಧ ಬರುವದು. ಅವರಿಂದ ಲಾಭವಾಗುವದು.

ರವಿ ಹರ್ಶಲ್ ಅಶುಭಯೋಗದಿದ್ದರೆ ಅನೇಕ ಅಡಚಣಿಗಳು ಬರುವವು. ರಾಜ ಭಯವಿರುವದು. ಶತ್ರುತ್ವವುಂಟಾಗುವದು. ಸಾರ್ವಜನಿಕ ಸಂಸ್ಥೆ, ಕಂಪನಿ ರೇಲ್ವೆಗಳಿಂದ ಹಾನಿ ಸಂಭವ. ಅಕಸ್ಮಾತ್ ತೊಂದರೆಗಳುಂಟಾಗುವವು. ಕ್ಷಣದಲ್ಲಿ ದರಿದ್ರ, ಕ್ಷಣದಲ್ಲಿ ಲಕ್ಷಾಧೀಶ ಇವು ರವಿ ಹರ್ಶಲರ ಅಶುಭಯೋಗದ ಫಲಗಳು. ಲಗ್ನ ದಶಮ, ಧನಭಾವದಲ್ಲಿ ಈ ಯೋಗವುಂಟಾಗಬಾರದು.

ಸ್ತ್ರೀಯರ ಕುಂಡಲಿಯಲ್ಲಿ ರವಿ ಹರ್ಶಲರ ಯಾವ ಯೋಗವೂ ಆಗಬಾರದೆಂದು ಹೇಳುವರು. ರವಿ ಹರ್ಶಲ್‌ಯುತಿ ಮತ್ತು ಅಶುಭಯೋಗವು ವಿವಾಹ ಸುಖವನ್ನು ಕೊಡಲಾರದು. ಈ ಅಶುಭಯೋಗವು ಬಲವತ್ತರವಾಗಿದ್ದರೆ ಪತಿಯನ್ನು ಬಿಟ್ಟು ಓಡಿಹೋಗಬಹುದು. ಅಂಥ ಉದಾಹರಣೆಗಳು ಅನೇಕವಿವೆ.

ರವಿ ಹರ್ಶಲರ ಶುಭಯೋಗವು ಶುಭಸಂಬಂಧಿತವಾಗಿದ್ದರೆ ಮದುವೆ ಬೇಗ ಆಗುವದು. ಸುಖವು ಚೆನ್ನಾಗಿ ಸಿಗುವದು. ಆದರೆ ರವಿ ಹರ್ಶಲರ ಅಶುಭ ಸಂಬಂಧವಿದ್ದು ಜನ್ಮಕಾಲದಲ್ಲಿ ಚಂದ್ರನು ಮಂಗಳನಿಂದ, ಶನಿಯಿಂದ ಪೀಡಿತನಿದ್ದರೆ ಮೇಲೆ ಹೇಳಿದ ಅಶುಭ ಫಲಗಳು ಕಂಡು ಬರುವವು. ನಾಟಕ ಕಂಪನಿಯಲ್ಲಿರುವ ನಟಿಯರ ಕುಂಡಲಿಯಲ್ಲಿ ನೂರಕ್ಕೆ ೬೫ ರಷ್ಟು ಹರ್ಶಲನ ಅಶುಭಯೋಗವಿದ್ದದ್ದು ಕಂಡು ಬರುವವು.

ರವಿ ವರುಣರ ಶುಭಯೋಗ: — ಈ ಶುಭಯೋಗವು ಅಧ್ಯಾತ್ಮಿಕ ಉನ್ನತಿಗೆ ಸಾಧಕವಾಗಿದೆ. ಸಾರ್ವಜನಿಕ ಪ್ರೀತಿಯನ್ನು ಹುಟ್ಟಿಸುವದು. ಈ ಯೋಗದಲ್ಲಿ ಜನಿಸಿದವರ ಆತ್ಮಿಕ ಸಂವೇದನಾ ಶಕ್ತಿಯ ವಿಕಾಸವಾಗುವದು ಕಂಡು ಬರುವದು. ವರುಣನ ಅಶುಭಯೋಗವಿದ್ದರೆ (ರವಿಯ ಕೂಡ) ಗುರುತಿನ ಜನರ ಕಡೆಯಿಂದ ತ್ರಾಸವಾಗುವದು. ಪರರಿಂದ ವಿಶ್ವಾಸಘಾತ, ತ್ರಾಸ, ಸಂಕಟಗಳು ಅಪಯಶ, ದುಃಖಗಳು ಪಾಲಿಗೆ ಬರುವವು.

ರವಿ ವರುಣರ ಅಶುಭಯೋಗವು ಸಾಂಪತ್ತಿಕ ಸ್ಥಿತಿಯಲ್ಲಿ ಗೊಂದಲವನ್ನೂ ನಾಶವನ್ನೂ ಮಾಡುವದು. ಉದ್ಯೋಗದಲ್ಲಿ ಧಂದೆಯಲ್ಲಿ ಬಿರುಗಾಳಿಯನ್ನು ಬೀಸುವದು.

ರವಿ ನೇಪಚ್ಯೂನಯುತಿ ಸಮಕ್ರಾಂತಿ ಯೋಗವು ಶರೀರದಲ್ಲಿ ಮೋಹಕತೆಯನ್ನು ಹುಟ್ಟಿಸುವದು. ಶುಭ ಸಂಬಂಧಿತವಿದ್ದರಂತೂ ಭಾವ ಫಲವನ್ನು ಚೆನ್ನಾಗಿ ಎತ್ತರಿಸುವದು. ರವಿ ನೇಪಚ್ಯೂನ ಯುತಿ ಇದ್ದವರು ಮಾದಕ ಪದಾರ್ಥಗಳಿಂದ ದೂರ ಇರಬೇಕು. ಮತ್ತು ವಿಷಯ ಲಂಪಟರಾಗಬಾರದು; ಕಾಲಿದಾಸನ ರಘುವಂಶದ ಅಗ್ನಿವರ್ಣ ರಾಜನಂತೆ.

ಚಂದ್ರನು

ಆಕಾಶಸ್ಥ ಜ್ಯೋತಿಗಳಲ್ಲಿ ಚಂದ್ರನ ತೇಜಸ್ಸು ಆಕರ್ಷಣೀಯವಾದದ್ದು. ಅನೇಕ ಕವಿಗಳು ಇವನ ತೇಜಸ್ಸಿನಿಂದ ಮುಗ್ಧರಾಗಿ ಔಪಮ್ಯ ಮೂಲಕ ಅಲಂಕಾರಗಳಲ್ಲಿ ಅವನನ್ನು ಸೇರಿಸಿಕೊಂಡಿರುವರು. ಸಂಸಾರ ತಾಪತಪ್ತರು ಅವನ ಪ್ರಕಾಶದಲ್ಲಿ ಶಾಂತಿಯನ್ನು ಪಡೆಯುವರು. ಜ್ಯೋತಿಷಿಗಳಿಗೆ ಮನಃಕಾರಕ; ಆತ್ಮಕಾರಕನು. ಕಾಲಿದಾಸನ ಉತ್ತರ ಕಾಲಾಮೃತದಲ್ಲಿ ಅವನ ಕಾರಕತ್ವವು ವಿಸ್ತ್ರತವಾಗಿ ಬಣ್ಣಿಸಲ್ಪಟ್ಟಿರುವದು. **"ಧವಲ ಚಾಮರ ಯಶೋದಯಾ ಮೋದಕಾಂತಿ ಮುಖಲಾವಣ್ಯ ಮಾತೃ ಮನಃ ಪ್ರಸಾದ ಕಾರಕಶ್ಚಂದ್ರಃ"** ಎಂದು ಸರ್ವಾರ್ಥ ಚಿಂತಾಮಣಿ ಕಾರನು ನುಡಿದಿರುವನು. ರೋಗದಲ್ಲಿ ಆತನು ಶೈತ್ಯ, ಕಫಕಾರಕನು. ಜಲಪ್ರವಾಸ, ಸ್ಥಲಾಂತರ, ಸ್ತ್ರೀಯರು, ಲಗ್ನ ಸಮಾರಂಭಗಳು ಶರೀರ ಪ್ರಕೃತಿ, ಸಂಸಾರ ಸ್ಥಿತಿ, ಜನ್ಮಭೂಮಿ, ಸಮುದ್ರ, ಸರ್ವಸಾಧಾರಣ ಜನಸಮಾಜಗಳ ದ್ಯೋತಕನು ಅವನಾಗಿರುವನು.

ದ್ರವ ಪದಾರ್ಥಗಳ ಕ್ರಯ-ವಿಕ್ರಯ, ಮಾರಾಟಗಾರ, ಪಲ್ಯಾ ಮಾರುವ ಸ್ತ್ರೀಯರು, ರಾಜ್ಞಿಯರ ಕಾರ್ಯದರ್ಶಿಗಳು ಇವರೆಲ್ಲರ ಮೇಲೆ ಚಂದ್ರನ ಅಧಿಕಾರವಿರುವದು. ಸ್ತ್ರೀಯರಲ್ಲಿ ಗರ್ಭಧಾರಣ ಶಕ್ತಿ ಇರುವದೋ

ಇಲ್ಲವೋ ಎಂಬುದನ್ನು ಚಂದ್ರನ ಬಲವು ತೋರಿಸುವದು. ಪುರುಷನ ವೀರ್ಯದಲ್ಲಿ ಗರ್ಭೋತ್ಪಾದನ ಬೀಜವಿರುವದನ್ನೂ, ಇಲ್ಲದಿರುವದನ್ನೂ ಚಂದ್ರನು ತೋರಿಸುವನು. ಚಂದ್ರನ ಭಾಗ್ಯೋದಯ ವರ್ಷಗಳು ೨೫, ೬೬, ೧೦೮, ೩೨೦ ಎಂದು ಬಲ್ಲವರು ಹೇಳುವರು.

ಚಂದ್ರನು ಬಲಿಷ್ಠನಿದ್ದರೆ ೪ ವರ್ಷಕ್ಕೊಮ್ಮೆ ಭಾಗ್ಯೋದಯದ ಮಿಂಚು ತೋರುವದೆಂದು ಪರಿಭ್ರಮಣ ಪದ್ಧತಿಯ ಪುರಸ್ಕರ್ತರು ಹೇಳುವರು. ಉದಾ:— ಚಂದ್ರನು ಭಾಗ್ಯದಲ್ಲಿ ವೃಷಭ ರಾಶಿಯಲ್ಲಿದ್ದರೆ ೨೪ ವರ್ಷಕ್ಕೆ ನೀನು ಗತಿಗೆ ಹತ್ತುವಿ ಎಂದು ತರುಣರಿಗೆ ಹೇಳಬಹುದು. ಚಂದ್ರನು ದಿನವರ್ಷ ಪದ್ಧತಿಯಂತೆ ೨೮ ವರ್ಷಕ್ಕೊಮ್ಮೆ ತನ್ನ ಮೂಲ ಸ್ಥಾನಕ್ಕೆ ಬರುವನು. ಅವನ ಬಲಾಬಲದಂತೆ ಭಾವಾಧಿಷ್ಠಾನದಂತೆ ಕ್ರಾಂತಿ ಸಂಭವಿಸುವದು. ಚಂದ್ರನು ರವಿಯೊಡನೆ, ಗುರುವಿನೊಡನೆ ಜನ್ಮಕುಂಡಲಿಯಲ್ಲಿ ಶುಭಸಂಬಂಧಿತನಾಗಿ ಬಲಿಷ್ಠನಿದ್ದರೆ ೯, ೯ರ ಪಟ್ಟಿನ ವರ್ಷಗಳು ಲಾಭದಾಯಕ ಉನ್ನತಿಯ ವರ್ಷಗಳಿರುತ್ತವೆ. ಆದರೆ ಅಶುಭ ಬಲಹೀನನಿದ್ದರೆ, ೭ರ ಮಗ್ಗಿಯ ವರ್ಷಗಳು ತ್ರಾಸದಾಯಕವಾಗಿರುವವು. ಚಂದ್ರನ ವರ್ಣ ಸಮುದ್ರ ನೀಲಿ; ಅವನ ರತ್ನ ಮುತ್ತು. ಚಂದ್ರನಿಗೂ ಆಧಾನ ಕಾಲಕ್ಕೂ ಸಂಬಂಧವಿರುವದು. ಪರಾಶರ ಹೋರಾದಲ್ಲಿ 'ಆಧಾನೇಂದು ಸಮುಂಲಗ್ನಂ' ಎಂದು ಹೇಳಲ್ಪಟ್ಟಿರುವದು. ಸಂಶೋಧಕರು ಈ ಬಗೆಗೆ ಅನೇಕ ಸಂಶೋಧನೆಗಳನ್ನು ಮಾಡಿರುವರು.

ಚಂದ್ರನ ಭಾವಗತ ಫಲ:— ಲಗ್ನದಲ್ಲಿ ಚಂದ್ರನಿದ್ದರೆ (ವಿಶೇಷವಾಗಿ ಚರರಾಶಿಯಲ್ಲಿ) ಸಂಚರಿಸುವ— ಪರಿಭ್ರಮಣ ಶೀಲನಿರುವನು. ದ್ವಿಸ್ವಭಾವ ರಾಶಿಯವರಿಗೂ ಈ ಶೀಲವಿರುವದು. ಪ್ರವಾಸ ಪ್ರಿಯರು, ವಿಲಾಸಿ, ಶಾಂತ, ಮಿತ್ರವತ್ಸಲರು, ದಯಾಳು, ಸಮಾಜದಲ್ಲಿ ಕೂಡಿ ನಡೆಯುವವರು, ಸ್ತ್ರೀ ಪ್ರಿಯರು, ಉದಾರರು ಸಜ್ಜನರು ಇರುವರು. ಸಾರ್ವಜನಿಕ ಕಾರ್ಯಗಳಲ್ಲಿ ಪ್ರೇಮವಿರುವದು. ಕೆಳತರಗತಿಯ ಜನರಲ್ಲಿ ಅವನ ಬಲದಂತೆ ಮಾನಗೌರವಗಳು ದೊರಕುವವು. ಚಂದ್ರನು ಅಗ್ನಿರಾಶಿಯಲ್ಲಿದ್ದರೆ ಸಾಹಸಿಗಳೂ ಮಹತ್ವಾಕಾಂಕ್ಷಿಗಳೂ ಇರುವರು. ಲಗ್ನದಲ್ಲಿ ಮೇಷ

ರಾಶಿಯ ಚಂದ್ರನಿದ್ದರೆ ಚಾಂಚಲ್ಯವನ್ನು ಹುಟ್ಟಿಸುವನು. ಅಂಥವರು **"ಸಹಸಾ ವಿದಧೀತ ನಕ್ರಿಯಾಂ ಅವಿವೇಕಃ ಪರಮಾಪದಾಂ ಪದಂ"** ಎಂಬ ಪದ್ಯವನ್ನು ನೆನಪಿನಲ್ಲಿಡಬೇಕು. ಚಂದ್ರನೊಡನೆ ಹರ್ಶಲನ ಸಂಬಂಧ ಬಂದರೆ ಕೇಳುವದೇನು? 'ಅಧಿಕಸ್ಯಾಧಿಕಂ ಫಲಂ' ಯಾವದೊಂದು ಕ್ರಾಂತಿಯಲ್ಲಿ ಮನಸ್ಸು ಮಗ್ನವಾಗಿ ಅಸ್ಥೈರ್ಯವನ್ನು ಹುಟ್ಟಿಸುವದು. ಚಂದ್ರ ಹರ್ಶಲರ ಅಶುಭ ಸಂಬಂಧವಂತೂ ಅನೀತಿ ಮೂಲಕ ಸ್ತ್ರೀ ಸಹವಾಸಕ್ಕೆ ಪ್ರೇರಣೆಯನ್ನುಂಟುಮಾಡುವದು. ಮಕರ ವೃಶ್ಚಿಕ ರಾಶಿಯಲ್ಲಿ ಚಂದ್ರನು ಪಾಪಗ್ರಹದಿಂದ ಪೀಡಿತನಿದ್ದರೆ ವ್ಯಸನಾಧೀನನಾಗುವ ಸಂಭವವಿರುವದು. ಚಂದ್ರನು ಲಗ್ನದಲ್ಲಿ ಮಾನುಷ ರಾಶಿಯಲ್ಲಿ (ಮಿಥುನ ಕನ್ಯಾ, ತುಲಾ ಕುಂಭ) ಶುಭ ಸಂಬಂಧಿತನಿದ್ದರೆ ಶಾಸ್ತ್ರೀಯ ವಿಷಯಗಳಲ್ಲಿ ಅಭಿರುಚಿ ಇರುವದು. ಸ್ಕಾಲರರಾಗಬಹುದು. ಚಂದ್ರನ ಬಲವಿದ್ದಂತೆ ಭಾಷಾಜ್ಞಾನಿಗಳೂ, ಜ್ಯೋತಿಷಿಗಳೂ ಸಂಶೋಧಕರೂ ಆಗಬಹುದು. ವೃಷಭದ ಚಂದ್ರನು ಲಗ್ನದಲ್ಲಿ ಉದಿತನಿದ್ದರೆ ಗಂಭೀರರಿರುವರು. ಯಾವುದಾದರೊಂದು ಕಾರ್ಯವನ್ನು ಆಸಕ್ತಿಯಿಂದ ಮಾಡುವರು. ಉದ್ಯೋಗಿ ಧೀರೋದಾತ್ತರಾಗಿರುವರು. ಭಾಗ್ಯಶಾಲಿಗಳನ್ನಾಗಿ ಮಾಡುವನು. ಕರ್ಕ, ಮೀನ ರಾಶಿಗಳ ಚಂದ್ರನು ಲಗ್ನದಲ್ಲಿ ಉದಿತವಿದ್ದರೆ ಮಾಯಾಳು, ಸ್ವಾತ್ವಿಕ, ಧಾರ್ಮಿಕ, ಸರ್ವಲೋಕ ಪ್ರಿಯ, ಸರ್ವಲೋಕ ಪೂಜಿತನಾಗುವನು. ಅಂಥವರು ಹೊಲಮನೆ ಕುಟುಂಬಗಳ ಪ್ರೇಮಿಗಳಿರುವರು. ನಿದ್ದೆಯಲ್ಲಿ ಬಡಬಡಿಸುವವರು, ಎದ್ದು ನಡೆಯುವರು. ಇಂಥ ವ್ಯವಹಾರ ಮಾಡುವವರ ಕುಂಡಲಿಯಲ್ಲಿ ಲಗ್ನದಲ್ಲಿ ಚಂದ್ರನಿರುವದು ಬಹುಶಃ ಕಂಡು ಬರುವದು. ಸಾಧಾರಣವಾಗಿ ಚಂದ್ರ ಪ್ರಕೃತಿಯ ಮನುಷ್ಯನು ಸ್ವಭಾವದಿಂದ ಮಮತಾಳು, ಶಾಂತರು, ಸತ್ಯ ಮಾರ್ಗದಿಂದ ನಡೆಯುವರು, ಸುಸ್ವಭಾವಿ, ಸತ್ವಶೀಲ, ತಂಟೆ ಖೋರರಲ್ಲದವರು ಇರುವರು.

ಧನಭಾವದಲ್ಲಿ:— ಬಲಿಷ್ಠ ಚಂದ್ರನಿದ್ದರೆ ಸಾಂಪತ್ತಿಕ ಸ್ಥಿತಿ ಚೆನ್ನಾಗಿರುವದು. ಪರದೇಶದಲ್ಲಿ ಸಂಚರಿಸುವದರಿಂದ, ಪ್ರವಾಸದಿಂದ ಇವರ ಭಾಗ್ಯೋದಯವಾಗುವದು. ಸಾರ್ವಜನಿಕ ಸಂಸ್ಥೆಗಳ ಕಾರಭಾರದಿಂದ

ಇವರ ಉದಯವಾಗುವದು. ಚಂದ್ರನ ಸ್ವಭಾವದಂತೆ ಸಾಂಪತ್ತಿಕ ಸ್ಥಿತಿಯಲ್ಲಿ ಭರತಿ ಓಹಟಗಳೂ ಆಗುವವು. ಜನಸಮಾಜಕ್ಕೆ ಅವಶ್ಯವಿರುವ ವಸ್ತುಗಳ ವ್ಯವಹಾರದಲ್ಲಿ ಇವರಿಗೆ ಲಾಭವಾಗುವದು. ಈ ಭಾವದಲ್ಲಿ ವೃಶ್ಚಿಕ ಮಕರ ರಾಶಿಯ ಪೀಡಿತ ಚಂದ್ರನಿರಬಾರದು. ಇಲ್ಲಿಯ ಚಂದ್ರನು ಪ್ರಬಲ ಅಥವಾ ನಿರ್ಬಲನಿರುವಂತೆ ವಿವಾಹಿತ ಸ್ತ್ರೀಯರಿಂದ ಲಾಭ–ಹಾನಿಗಳನ್ನು ತೋರುವನು. ಇಲ್ಲಿ ಒಂದು ಉಚ್ಚಗ್ರಹವಿದ್ದು ಮತ್ತೊಂದು ಉಚ್ಚಗ್ರಹದ ದೃಷ್ಟಿ ಇದ್ದರೆ ಕೋಟ್ಯಧೀಶ, ಲಕ್ಷಾಧೀಶರಾಗುವರೆಂದು ಕಾಲಿದಾಸನು ತನ್ನ ಕಾಲಾಮೃತದಲ್ಲಿ ಹೇಳಿರುವನು. ಇಲ್ಲಿ ಉಚ್ಚಚಂದ್ರನು, ಇಲ್ಲವೆ ಸ್ವಕ್ಷೇತ್ರದ ಚಂದ್ರನಿದ್ದು ಗುರು ಶುಕ್ರರ ತ್ರಿಕೋಣ ತ್ರಿಲೇಕಾದಶದಲ್ಲಿದ್ದರೆ ಉತ್ತಮ ಧನಿಕರಾಗುವರೆಂದು ಭಾವಿಸಲು ಅಡ್ಡಿಯಿಲ್ಲ. ಚಂದ್ರನಿಂದ ೬, ೭, ೮ ರಲ್ಲಿ ಶುಭಗ್ರಹಗಳಿದ್ದರೆ ಅಧಿಯೋಗವು. ಚಂದ್ರನಿಂದಾಗಲಿ, ಲಗ್ನದಿಂದಾಗಲಿ, ಉಪಚಯ ೩, ೬, ೧೦, ೧೧ ರಲ್ಲಿ ಶುಭಗ್ರಹಗಳಿದ್ದರೆ ವಸುಮತಿಯೋಗವು. ಇವೆಲ್ಲವುಗಳೂ ನಮ್ಮ ಆಚಾರ್ಯರು ಹೇಳಿದ ಧನಯೋಗಗಳು.

ತೃತೀಯದಲ್ಲಿ:— ಈ ಸ್ಥಾನದಲ್ಲಿ ಚಂದ್ರನಿದ್ದರೆ ಪ್ರವಾಸ ಪ್ರಿಯರಿರುವರು. ಅನೇಕ ಸಣ್ಣ ಪ್ರವಾಸಗಳಾಗುವವು. ಗೂಢ ವಿದ್ಯಾಪ್ರಿಯರು. ಉದ್ಯೋಗದಲ್ಲಿ ಸ್ಥಿತ್ಯಂತರಗಳು. ಚಮತ್ಕಾರ ಪ್ರಿಯರು. ಲಹರೀ ಅನಿಶ್ಚಿತ (ಚರರಾಶಿ ಇದ್ದರೆ) ಇಲ್ಲಿ ಚಂದ್ರನು ಬಲಿಷ್ಠನಿದ್ದರೆ ಮಾತೃ ಸುಖವನ್ನೂ ಭಗಿನೀ ಸುಖವನ್ನೂ ಕೊಡುವನು. ನೆರೆಯವರಲ್ಲಿ ವರ್ಚಸ್ಸು ಇರುವದು. ಅವರಿಂದ ಹಿತ. ೨೪ನೆಯ ವರ್ಷದ ಸುಮಾರಿಗೆ ಪ್ರವಾಸಗಳು ಘಟಿಸುವವು. ಪ್ರಗತಿಯ ಕಾರ್ಯಗಳು ಅವನಿಂದ ಉಂಟಾಗುವವು. ಖ್ಯಾತಿಯ ಪ್ರಾರಂಭವಾಗುವದು. ಚಂದ್ರನಿಗೆ ಶುಭ ಸಂಬಂಧಿತವಿದ್ದಂತೆ ಭಾವಿಸಬೇಕು.

ಚತುರ್ಥದಲ್ಲಿ:— ಚತುರ್ಥದಲ್ಲಿ ಬಲವಾನ್ ಚಂದ್ರನು ಸ್ಥಾವರ ಆಸ್ತಿಯನ್ನು ಕೊಡುವನು. ಗೃಹಸೌಖ್ಯವು ಸಿಗುವದು. '**ಗೃಹಂಭೂಮಿಂಶ್ಚತುರ್ಥತಃ**' ಚರರಾಶಿಯ ಚಂದ್ರನು ಮೇಲಿಂದ ಮೇಲೆ ವಸತಿಯನ್ನು ಬದಲಿಸ ಹಚ್ಚುವನು. ಆಯುಷ್ಯದ ಉತ್ತರ ಭಾಗದಲ್ಲಿ ಕೀರ್ತಿವಂತನಾಗುವನು. ಚತುರ್ಥದಲ್ಲಿ ಪೀಡಿತ ಚಂದ್ರನು ಉದ್ಯೋಗದ ಬಗೆಗೆ ಚಿಂತೆಯನ್ನು ಹುಟ್ಟಿಸುವನು. ಚತುರ್ಥದಲ್ಲಿ ರಾಶಿಬಲ, ಯೋಗಬಲವಿದ್ದ ಚಂದ್ರನು ವಿವಾಹದ ನಂತರ ಭಾಗ್ಯೋದಯವನ್ನು ಮಾಡುವನು. ವಿವಾಹದಿಂದ ಇಸ್ಟೇಟ ಪ್ರಾಪ್ತಿ; ಸ್ತ್ರೀಧನ ಪ್ರಾಪ್ತಿಯಿಂದ ಉತ್ಕರ್ಷವಾಗುವದು.

ಪಂಚಮದಲ್ಲಿ:— ಪಂಚಮದಲ್ಲಿ ಚಂದ್ರನಿದ್ದರೆ ಚೈನಿ ವಿಲಾಸ ಪ್ರಿಯರಾಗುವರು. ಮನೋರಂಜಕ, ಸಿನೇಮಾ, ನಾಟಕಗಳಿಂದ ಧನ ಪ್ರಾಪ್ತಿಯಾಗುವದು. ವಿಪುಲ ಸಂತತಿ. ಕರ್ಕ, ಮೀನ ರಾಶಿಯ ಚಂದ್ರನು ೧೦–೧೨ ಮಕ್ಕಳನ್ನು ಕೊಡಬಹುದು. ಜಾತನು ಸಂತಾನ ಪ್ರಿಯನಿರುವನು. ಅವರ ಅನಿಮಿತ್ತಹಾಸಗಳಿಂದ ಹಿಗ್ಗುವನು. ಮೀನ ರಾಶಿಯ ಚಂದ್ರನು ಅವಳಿ ಮಕ್ಕಳನ್ನು ಕೊಡಬಹುದು. ಪಂಚಮದಲ್ಲಿ ಶುಭ ಸಂಬಂಧಿತ ಚಂದ್ರನು ಸಟ್ಟಾಲಾಟರಿಗಳಿಂದ ಲಾಭ ಸೂಚಕನಾಗಿರುವನು. ವಿದ್ಯಾರ್ಥಿಗಳು ಸ್ಕಾಲರಶಿಪ್ ಪಡೆಯುವರು. ವೈದಿಕರಿಗೆ ಭೂರಿದಕ್ಷಿಣೆ ಸಿಗುವದು. ಗ್ರಂಥಕಾರರಿಗೆ ಗೌರವ ಧನ ಸಿಗುವದು. ಪರಾಶರ ಋಷಿ ಹೇಳಿದಂತೆ ದೇಶ ಕಾಲಮಾನಗಳನ್ನು ನೋಡಿ ಅರ್ಥ ಮಾಡಬೇಕು.

ಷಷ್ಠದಲ್ಲಿ ಚಂದ್ರನು:— ೬ ರಲ್ಲಿ ಚಂದ್ರನು ದುರ್ಬಲನಿದ್ದರೆ ಶರೀರ ಸುಖಕ್ಕೆ ಒಳ್ಳೆಯವನಲ್ಲ. ದ್ವಿಸ್ವಭಾವರಾಶಿಯಲ್ಲಿ ಪೀಡಿತ ಚಂದ್ರನು ಪುಪ್ಪುಸ ವಿಕಾರವನ್ನುಂಟುಮಾಡುವನು. ಅತ್ಯಂತ ಪಾಪಗ್ರಹಗಳಿಂದ ಪೀಡಿತನಿದ್ದರೆ ಕಫಕ್ಷಯ ಉಂಟಾಗುವದು. ವೃಶ್ಚಿಕದ ಚಂದ್ರನು ಮೂತ್ರಖಡಾ ಉಂಟುಮಾಡುವನು. ಸ್ಥಿರರಾಶಿಯಲ್ಲಿ ಪೀಡಿತ ಚಂದ್ರನಿರಬಾರದು. ವೃಷಭದಲ್ಲಿ ಚಂದ್ರ ಪೀಡಿತನಿದ್ದರೆ ಕಂಠ ವಿಕಾರ, (ಬ್ರಾಂಕಾಯಿಟಿಸ್) ಶ್ವಾಸನಲಿಕಾದಾಹ ಇತ್ಯಾದಿ ವಿಕಾರಗಳು ತಲೆದೋರುವವು. ಕರ್ಕರಾಶಿಯ ಚಂದ್ರನು ಜಠರ ವಿಕಾರ ಹೊಟ್ಟೆ ಕಡಿತ ದುರ್ಬಲ ಪಚನ ಕ್ರಿಯೆಗಳನ್ನು ತೋರುವನು. ಚಂದ್ರನು ಪೀಡಿತನಿದ್ದರೆ ಮಾತ್ರ ಈ ವಿಕಾರಗಳು ತೋರುವವು. ಪೀಡಿತ ಚಂದ್ರನು ಈ ಭಾವದಲ್ಲಿ ಬಾಲಾರಿಷ್ಟವನ್ನುಂಟುಮಾಡುವನು. ದುರ್ಬಲ ಚಂದ್ರನು ಕೈಕೆಳಗಿನ ನೌಕರರಿಂದಲೂ ತ್ರಾಸ ದರ್ಶಕನು.

ಬಲಿಷ್ಠ ಚಂದ್ರನು ನೌಕರಿಯಲ್ಲಿ ಹಿತಕಾರಕ. ಅವರಿಗೆ " **ಸೇವಾಧರ್ಮಃ ಪರಮಗಹನೋ ಯೋಗಿನಾಮಪ್ಯಗಮ್ಯಃ** " ಎಂದೆನಿಸುವದಿಲ್ಲ.

ಸಪ್ತಮದಲ್ಲಿ:— ಬಲಿಷ್ಠ ಚಂದ್ರನು ವಿವಾಹ ಸೌಖ್ಯ ದರ್ಶಕನು. ಇಲ್ಲಿ ಕರ್ಕ, ಮೀನ, ವೃಷಭ ರಾಶಿಯ ಚಂದ್ರನು ಗುರು ಶುಕ್ರರ ಶುಭ ದೃಷ್ಟಿಯಲ್ಲಿದ್ದರೆ " **ಮನಾಗಾನಾಕಾಕೇಕೋಯಂ ಗಲಿತ ಹರಿಣಃ ರೇತ-ಕಿರಣಃ** " ಎಂದು ತಮ್ಮ ಹೆಂಡತಿಯ ಮುಖವನ್ನು ತಾವೇ ಕವಿಗಳಾಗಿ ಬಣ್ಣಿಸಬಹುದು. ಚಂದ್ರ ಶುಕ್ರರು ಸೌಂದರ್ಯಕಾರಕ ಗ್ರಹಗಳು. ಗುರು ಸದ್ಗುಣಗಳನ್ನು ಕೊಡುವನು. ಪಾಲುಗಾರಿಕೆಯ ವ್ಯವಹಾರದಲ್ಲಿ, ಕಾಯ್ದೆಯ ವ್ಯವಹಾರದಲ್ಲಿ ಸಪ್ತಮ ಚಂದ್ರನು ಯಶಸ್ಸನ್ನು ಕೊಡುವನು. ಚರರಾಶಿಯ ಚಂದ್ರನು ಪ್ರವಾಸ ಪ್ರಿಯರನ್ನು ಮಾಡುವನು. ವರಾಹಮಿಹಿರಾಚಾರ್ಯರ ಮಗನೂ " **ಮಧ್ಯಾತ್ ಪ್ರವಾಸಃ** " ಎಂದು ಹೇಳಿರುವನು. ನಿತ್ಯ ಪ್ರವಾಸಿಗಳ ಕುಂಡಲಿಗಳಲ್ಲಿ ಚರರಾಶಿಯ ಚಂದ್ರನು ಸಪ್ತಮದಲ್ಲಿರುವನು. ಇಲ್ಲಿ (ಸಪ್ತಮದಲ್ಲಿ) ವೃಷಭ, ಕರ್ಕ, ತುಲಾ, ಧನು, ಕುಂಭ ಮೀನ ರಾಶಿಯ ಚಂದ್ರನು ಶನಿಯ ಶುಭಯೋಗದಲ್ಲಿದ್ದರೆ ಪತಿ ಅಥವಾ ಪತ್ನಿ ದೀರ್ಘೋದ್ಯೋಗಿಯಾಗಿರುವರು. ಕಾರ್ಯದಕ್ಷರಾಗಿರುವರು. ಪೀಡಿತ ಚಂದ್ರನು ಪ್ರಕಟ ಶತ್ರುತ್ವವನ್ನು ಹುಟ್ಟಿಸುವನು. ಸ್ತ್ರೀಯರ ಶತ್ರುತ್ವ, ಕೋರ್ಟಿನಲ್ಲಿ ತಂಟೆಗಳು ಉಂಟಾಗುವವು. ಪ್ರೇಮ ವ್ಯವಹಾರದಲ್ಲಿ ಅಸ್ಥೈರ್ಯವುಂಟಾಗುವದು.

ಅಷ್ಟಮದಲ್ಲಿ ಚಂದ್ರನು:— ೮ ರಲ್ಲಿ ಚಂದ್ರನು ಶನಿ ಮಂಗಳರಿಂದ ಪೀಡಿತನಿದ್ದರೆ ಅಪಘಾತದಿಂದ ನೀರಿನಲ್ಲಿ ಮುಳುಗಿ ಸಾಯಬಹುದು. ಶ್ವಾಸದ ಅವರೋಧದಿಂದ, ಹರ್ಷಲನ ಕೈವಾಡವಿದ್ದರೆ ಆಕಸ್ಮಿಕ ಮರಣ-ವುಂಟಾಗಬಹುದು. ಸಾಮಾನ್ಯ ಅಪಘಾತದಿಂದ, ಸಾರ್ವಜನಿಕ ರಸ್ತೆಯಲ್ಲಿ ಮೃತ್ಯು ಸಂಭವ ಅಥವಾ ಜಲಪ್ರವಾಹದಿಂದ ಮೃತ್ಯು ಭೀತಿ ಇರುವದು. ಇಂಥವರು ನದೀ, ಸಮುದ್ರಗಳಲ್ಲಿ ಈಸುವ ಸಾಹಸವನ್ನು ಮಾಡಕೂಡದು. ಶುಭದೃಷ್ಟಿ ಚಂದ್ರನು ಲಗ್ನದ ನಂತರ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವನು. ಭಾಗೀದಾರರಿಂದ ಲಾಭವಾಗುವದು.

ನವಮದಲ್ಲಿ ಚಂದ್ರನು:— ನವಮದಲ್ಲಿ ಚಂದ್ರನಿದ್ದರೆ ಲಹರೀ, ನಾವೀನ್ಯ ಪ್ರಿಯನು ಪ್ರವಾಸದ ರುಚಿಯುಳ್ಳವನಿರುವನು. ಶಾಸ್ತ್ರೀಯ ವಿಷಯದ ನಾದ, ಗ್ರಂಥ ಶಾಸ್ತ್ರವನ್ನು ಅಭ್ಯಾಸ ಮಾಡುವವನು ಇರುವನು. ಧಾರ್ಮಿಕ ಆಧ್ಯಾತ್ಮಿಕ ವಿಷಯಗಳ ಅಭಿರುಚಿಯಿರುವದು. ಶುಭ ದೃಷ್ಟ ಚರರಾಶಿಯ ಚಂದ್ರನು ದೂರ ಪ್ರವಾಸಗಳನ್ನು ಮಾಡಿಸುವನು. ಪರಪ್ರದೇಶದಲ್ಲಿ ದೈವ ತೆರೆಯುವದು. ಕಾರಕಕೂನಿಕಿಯಲ್ಲಿ ಕಾಯ್ದೆಯ ವ್ಯವಹಾರದಲ್ಲಿ ಯಶಸ್ಸು ಸಿಗುವದು.

ದಶಮದಲ್ಲಿ ಚಂದ್ರನು:— ೧೦ ರಲ್ಲಿ ಚಂದ್ರನಿದ್ದರೆ ಸಾರ್ವಜನಿಕ ಕಾರ್ಯಗಳಲ್ಲಿ ಬೀಳಬೇಕೆಂದು ಇಚ್ಛೆ ಇರುವದು. ಆಯುಷ್ಯದಲ್ಲಿ ಅನೇಕ ಸ್ಥಿತ್ಯಂತರಗಳಾಗುವವು. ಒಂದೇ ಉದ್ಯೋಗದಲ್ಲಿ ಚಿತ್ತವು ಸ್ಥಿರವಾಗಿರುವದಿಲ್ಲ. ಸ್ತ್ರೀಯರಿಂದ ಉದಯವೂ ಆಗಬಹುದು; ಅಪಕೀರ್ತಿಯೂ ಬರ-ಬಹುದು. ಬಲಿಷ್ಠ ಚಂದ್ರನಿದ್ದರೆ ಲೋಕಮಾನ್ಯನೂ ಸರ್ವಪ್ರಿಯನೂ ಸಹಜ ಉದಯಕ್ಕೆ ಬರುವವನೂ ಆಗುವನು. ಸ್ತ್ರೀಯರಿಂದ ಭಾಗ್ಯೋ-ದಯವಾಗುವದು. ದಶಮದಲ್ಲಿಯ ಚಂದ್ರನು ೨೪ ನೆಯ ವಯಸ್ಸಿಗೆ ನೌಕರಿಯನ್ನು ಕೊಡುವನು.

ಏಕಾದಶದಲ್ಲಿ:— ೧೧ ರಲ್ಲಿ ಚಂದ್ರನು ಬಹುಪ್ರಸವರಾಶಿಯಲ್ಲಿದ್ದರೆ ವಿಪುಲ ಸಂತಾನವನ್ನು ಕೊಡುವನು. ವಿಪುಲ ಜನರ ಪರಿಚಯವಾಗುವದು. ಪೀಡಿತ ಚಂದ್ರನಿದ್ದರೆ ಕಪಟಿ, ಟೊಪ್ಪಿಗೆ ಹಾಕುವ ಮಿತ್ರರು ಗಂಟು ಬೀಳುವರು. ' **ಬರುವದೇನೋ ನೆಪ್ಪಿಗೇ ನಾವು ಬಿದ್ದ ಟೊಪ್ಪಿಗೆ** ' ಎಂದು ಬೇಂದ್ರೆಯವರ ಕವಿತೆಯನ್ನು ಹಾಡಬೇಕಾಗುವದು. ಬಲಿಷ್ಠ ಚಂದ್ರನು ಸ್ತ್ರೀಯರ ಆಶ್ರಯವನ್ನು ಒದಗಿಸಿಕೊಡುವನು.

ದ್ವಾದಶದಲ್ಲಿ:— ೧೨ ರಲ್ಲಿ ಮಕರ, ವೃಶ್ಚಿಕ ರಾಶಿಯ ಪೀಡಿತ ಚಂದ್ರನಿದ್ದರೆ ಕ್ಷುದ್ರ ಸ್ತ್ರೀಯರ ಸಂಪರ್ಕವುಂಟಾಗಿ ಶತ್ರುತ್ವವೂ ಕಲಹಗಳೂ ಉಂಟಾಗುವವು. ಮಾನ ಹಾನಿಯ ಪ್ರಸಂಗಗಳು ಬರುವವು. ಗೂಢ ವಿಷಯದ ಅಭಿರುಚಿಯಿಂದ ಅಡ್ಡಹಾದಿ ಹಿಡಿಯುವ ಸಂಭವವಿರುವದು.

ಪೀಡಿತ ಚಂದ್ರನಿಂದ ದೇಶತ್ಯಾಗ, ಗಡಿತ್ಯಾಗಗಳ ಸಂಭವವುಂಟು. ಬಲವಾನ್ ಶುಭ ದೃಷ್ಟ ಚಂದ್ರನು ದೇಶಪರ್ಯಾಟನ ಏಕಾಂತ ವಾಸ, ದಾನ ಸಂಸ್ಥೆ, ದವಾಖಾನೆಗಳ ಸಂಬಂಧಗಳನ್ನುಂಟುಮಾಡುವನು.

ಚಂದ್ರಬುಧ ಶುಭಯೋಗಗಳು:— ಈ ಯೋಗವು ಬುದ್ಧಿ ಚಾಪಲ್ಯವನ್ನು ಕೊಡುವದು. ವಕ್ತೃತ್ವವನ್ನು ಕೊಡುವದು. ಸಮಯ ಸೂಚಕತೆಯಿರುವದು. ಈ ಯೋಗವು ವಾಯು ರಾಶಿಯಲ್ಲಿ ಉಂಟಾದರೆ ಅತ್ಯುತ್ತಮ ಫಲ. ವಿದ್ಯಾವ್ಯಾಸಂಗಿಗಳಿರುವರು. ಲಗ್ನ ತೃತೀಯ, ನವಮ, ಪಂಚಮ ದಶಮಸ್ಥಾನದಲ್ಲಿ ಈ ಯೋಗವುಂಟಾದರೆ ಮತ್ತಷ್ಟೂ ಓಜಸ್ವಿಯಾಗುವದು. ಪರಕೀಯ ಭಾಷೆಯನ್ನು ಕಲಿಯುವ ಅಭಿರುಚಿ ಇರುವದು. ಭಾಷೆಯಲ್ಲಿ ಪ್ರಭುತ್ವವನ್ನು ಪಡೆಯುವರು. ಲಗ್ನವು ಮಿಥುನ, ಕನ್ಯಾ, ತುಲಾ ಧನು, ಕುಂಭ ಈ ರಾಶಿಯಲ್ಲಿದ್ದರೆ ಅಂಥವರ ವಕ್ತೃತ್ವ ಶಕ್ತಿ ಚೆನ್ನಾಗಿರುವದು. ಬುಧ, ಚಂದ್ರ, ಸಮಕ್ರಾಂತಿಯೋಗ ಚಂದ್ರ, ಬುಧಯೋಗದಂತೆ ಫಲಕಾರಿಯಾಗುವದು. ಯಾವ ರಾಶಿಯಲ್ಲಿ ಯಾರ ಶುಭಾಶುಭ ದೃಷ್ಟಿಯಲ್ಲಿ ಆಗುವದೆಂಬುದನ್ನು ಲಕ್ಷಿಸಬೇಕು.

ಚಂದ್ರ ಬುಧ ಅಶುಭಯೋಗವಿದ್ದರೆ ಬುದ್ಧಿ ತೀವ್ರವಿರುವದು. ಸ್ವಭಾವವು ನಿಂದಕವಿರುವದು. ಚಾಡೀ ಹೇಳುವ ಸ್ವಭಾವವಿರುವದು. ಭಾಷಣವು ಅಪ್ರಾಸಂಗಿಕವಾಗಿರುವದು. ವಾಚಾಳತೆ ಹೆಚ್ಚಾಗಿರುವದು. ಚಂದ್ರನ ಪರಪ್ರಕಾಶತ್ವದ ಗುಣಧರ್ಮವು ಬುಧನಲ್ಲಿ ಬಂದು ಭಾಷಣದಲ್ಲಿ ಲೇಖನದಲ್ಲಿ ಪರಮತವನ್ನು ತಮ್ಮದೆಂದು ತೋರಿಸಿ ಅನೇಕ ಅವತರಣಿಕೆಗಳನ್ನು ಕೊಟ್ಟು ವಿದ್ವತ್ತೆಯ ಡೌಲು ತೋರುವರು. ಸಭಾ ಪಾಂಡಿತ್ಯದ ಸಮಯ ಸೂಚಕತೆಯ ಕೊರತೆಯಿರುವದು. ಅಶುಭಯೋಗದಿಂದ ಸ್ಮರಣಶಕ್ತಿಯ ಮೇಲೂ ಅನಿಷ್ಟ ಪರಿಣಾಮವಾಗುವದು. ಚಂದ್ರನಾಗಲಿ, ಬುಧನಾಗಲಿ ಇದೇ ವೇಳೆಯಲ್ಲಿ ಶನಿಯಿಂದ ಮಂಗಳನಿಂದ ಪೀಡಿತನಿದ್ದರೆ ಅಪ್ರಾಮಾಣಿಕತೆ ತೋರುವದು. ಬುದ್ಧಿಯ ಉಪಯೋಗವನ್ನು ಸತ್ಕಾರ್ಯದ ಕಡೆಗೆ ಮಾಡಿಕೊಳ್ಳದೆ ಅಸತ್ಕಾರ್ಯಗಳ ಕಡೆಗೆ ಮಾಡಿಕೊಳ್ಳುವ ಪ್ರವೃತ್ತಿ ತೋರುವದು. ಸುಳ್ಳು ಮಾತು, ಸುಳ್ಳು ಕಾಗದ-ಪತ್ರಗಳನ್ನು ತಯಾರು

ಮಾಡುವವರ ಕಡೆಗೆ ಪ್ರವೃತ್ತಿ ಇರುವದು. ಮನಸ್ಸನ್ನು ಆಧೀನದಲ್ಲಿಟ್ಟುಕೊಂಡು ಸಾಧು-ಸಂತರ ವಾಙ್ಮಯ ಪಾರಾಯಣ ಮಾಡಬೇಕು.

ವಾರ್ಷಿಕ ಕುಂಡಲಿಯಲ್ಲಿ ಚಂದ್ರ ಬುಧರ ಶುಭಯೋಗವಾದಾಗ ಪರೀಕ್ಷೆಯಲ್ಲಿ ಉತ್ತೀರ್ಣರಾಗುವರು. ಪ್ರವಾಸ ಲೇಖನಾದಿ ಕಾರ್ಯಗಳು ಕೈಗೂಡುವವು. ಅಶುಭಯೋಗವಾದಾಗ ಬಂಧುಗಳೊಡನೆ ಕಲಹ, ಮಾನಸಿಕ ಚಿಂತೆ, ನಿಂದೆ, ಟೀಕೆಗಳಾಗುವವು.

ಚಂದ್ರ ಮಂಗಳಯುತಿ ಸಮಕ್ರಾಂತಿ ಯೋಗ:—

“ಚಂದ್ರ ಮಂಗಳ ಸಂಯೋಗೇ ನಮುಂಚತಿ ನತಂ ಲಕ್ಷ್ಮೀ ಲಜ್ಜಾ-ಕುಲವಧೂ ಮಿವ” ಎಂದು ನಮ್ಮವರು ಹೇಳುವರು. ಇದಕ್ಕೆ ಅನೇಕ ನಿರ್ಬಂಧಗಳನ್ನು ಹಾಕಿದರೆ ಈ ಯೋಗವು ಸತ್‌ಫಲಗಳನ್ನು ಕೊಡಬಹುದು. ಮುಖ್ಯವಾಗಿ ಶುಕ್ರ ಗುರುಗಳ ಶುಭದೃಷ್ಟಿಯಲ್ಲಿರಬೇಕು. ನಿರಯನ ಪದ್ಧತಿಯಲ್ಲಿ ಕೇಂದ್ರ ತ್ರಿಕೋಣಾಧಿಪತ್ಯವಿರಬೇಕು. ಇತರ ಗ್ರಹಗಳ ಶುಭ ದೃಷ್ಟಿಯಲ್ಲಿರದೆ ೬, ೮, ೧೨ ಭಾವದಲ್ಲಿ ದುರ್ಬಲ ರಾಶಿಯಲ್ಲಿ ಚಂದ್ರಮಂಗಳ ಯೋಗವುಂಟಾದರೆ ಮಾನಸಿಕ ದೌರ್ಬಲ್ಯ ಕಾಣಬಹುದು. ಚಿತ್ತ ಚಾಂಚಲ್ಯವನ್ನೂ ಹುಟ್ಟಿಸಬಹುದು. ಚಂದ್ರ ಮಂಗಳ ಸಮಕ್ರಾಂತಿ ಯೋಗ ವಿಚಾರವನ್ನು ಬಹಳ ವಿಚಾರ ಪೂರ್ವಕವಾಗಿ ಮಾಡಬೇಕು. ಪಾಪಗ್ರಹಗಳ ಅಶುಭ ಸಂಬಂಧ ಬಂದರೆ ಅನಿಷ್ಟ ಫಲ.

ಚಂದ್ರ ಮಂಗಳ ಅಶುಭಯೋಗವು:— ಈ ಅಶುಭಯೋಗವು ಕುಂಡಲಿಯಲ್ಲಿದ್ದರೆ ಸ್ವಭಾವವು ಲಹರೀ ಹಟೀ ಇರುವದು. ಸಾರಾಸಾರ ವಿಚಾರ ಮಾಡದೆ ಒಮ್ಮೆಲೇ ಕಾರ್ಯ ಪ್ರವೃತ್ತರಾಗುವ ಗುಣವಿರುವದು. ವಿಷಯಾಸಕ್ತಿ, ಅಸತ್ಯಮಾತುಗಳು ತೋರಿಬರುವವು. ಸ್ತ್ರೀಯರ ಸಹವಾಸದಲ್ಲಿ ದುಡ್ಡು, ಮರ್ಯಾದೆಗಳನ್ನು ಕಳೆದುಕೊಳ್ಳುವರು. ಹಟೀ ತಾಮಸೀ ಸ್ವಭಾವದ ಸ್ತ್ರೀಯರೊಡನೆ ವಿವಾಹವುಂಟಾಗುವದು. ವಿವಾಹ ಸೌಖ್ಯದಲ್ಲಿ ನ್ಯೂನತೆಯು ತೋರಿಬರುವದು. ಸ್ತ್ರೀಯರಲ್ಲಿ ಈ ಯೋಗವು ಆರ್ತವ (ಮುಟ್ಟು) ದೋಷ ಸೂಚಕವಾಗಿರುವದು. ಚಂದ್ರ ಮಂಗಳ ಯೋಗವು

ಇತರ ಪಾಪಗ್ರಹಗಳ ಅಶುಭಯೋಗದಲ್ಲಿದ್ದರೆ ಗೊಬ್ಬರ, ಹುರುಕು, ಗಜಕರ್ಣ, ರಕ್ತಸ್ರಾವ, ಜ್ವರಬಾಧೆಗಳುಂಟಾಗುವ ಸಂಭವವಿರುವದು. ಸಪ್ತಮ ಸ್ಥಾನದಲ್ಲಿ ಚಂದ್ರ ಮಂಗಳ ಅಶುಭಯೋಗವುಂಟಾದರೆ ವಯುಸ್ಸಿನ ೨೮–೩೦ ಕ್ಕೆ ಕಲತ್ರ ವಿಯೋಗವಾಗಬಹುದು.

ಚಂದ್ರ ಮಂಗಳರ ಶುಭಯೋಗದಲ್ಲಿ ಧೈರ್ಯಶಾಲಿಗಳೂ ಶೂರರೂ ಸಾಹಸಿಗಳೂ ಹುಟ್ಟುವರು. ಖಂಬೀರರೂ ಕುಶಲರೂ ಸಾಂಪತ್ತಿಕ ವ್ಯವಹಾರದಲ್ಲಿ ಕುಶಲತೆಯಿಂದ ನಡೆದು ಧನವನ್ನು ಸಂಪಾದಿಸುವವರೂ ಆಗುವರು. ಯಂತ್ರಜ್ಞರು, ಕಾರಾಗೀರರು, ಡಾಕ್ಟರರೂ ಸರ್ಜನರೂ ಈ ಯೋಗದಲ್ಲಿ ಹುಟ್ಟುವರು. ಈ ಯೋಗದಲ್ಲಿ ಹುಟ್ಟಿದ ಸ್ತ್ರೀಯರ ಪ್ರಕೃತಿಯೂ ಚೆನ್ನಾಗಿರುವದು ದೀರ್ಘೋದ್ಯೋಗಿಗಳು, ಪ್ರಯತ್ನ ಶೀಲರೂ ಇರುವರು.

ಚಂದ್ರ ಗುರುಯುತಿ; ಸಮುಕ್ರಾಂತಿ ಯೋಗ:—

ಇದು ಅತಿ ಮಹತ್ವದ ಯೋಗವು. ಈ ಯೋಗವಿರುವವರು ಸಂಸ್ಥೆಯನ್ನು ಸ್ಥಾಪಿಸುವರು. ಗುರುತ್ವವನ್ನು ಪಡೆಯುವರು. ಶಿಕ್ಷಣ ಕೊಡುವರು. ಅಧ್ಯಾತ್ಮ ವಿದ್ಯೆಯಲ್ಲಿ ಪ್ರಗತಿಯನ್ನು ಈ ಯೋಗವು ಸೂಚಿಸುವದು. ದಿಗಂತ ಕೀರ್ತಿಯನ್ನು ಪಡೆಯುವರು. ಅಂಥವರ ಹೆಸರು ಮರಣದ ನಂತರ ಕೂಡ ಚಿರಕಾಲ ಉಳಿಯುವದು. ಪೂರ್ಣ ಯಶಸ್ಸು, ವಿಪುಲ, ಸಂಪತ್ತಿ ಈ ಯೋಗದ ಮುಖ್ಯ ಫಲಗಳು. ನವಮ, ಪಂಚಮ, ದಶಮ ಲಾಭದಲ್ಲಿ ಈ ಯೋಗವಾದರೆ ಮಹದ್ಭಾಗ್ಯವೆಂದು ತಿಳಿಯಬೇಕು.

ಚಂದ್ರ ಗುರು ಶುಭಯೋಗ:— ಈ ಯೋಗವಿದ್ದರೆ ಮೇಲಿನಂತೆ ಶುಭಫಲ ಪ್ರಾಪ್ತವಾಗುವವು. ಇದರಿಂದ ಭಾಗ್ಯವಂತರೂ ಧನವಂತರೂ ಆಗುವರು. ಈ ಯೋಗವು ಸಾಂಸಾರಿಕ ಪ್ರಗತಿ ಸೂಚಕವಾಗಿರುವದು. ಯಶಸ್ಸು, ಭಾಗ್ಯ, ಸಂತತಿ ಇವುಗಳಿಗೆ ಇದು ಅನುಕೂಲ ಯೋಗವು. ಈ ಯೋಗವಿರುವವರು ಧನಸಂಚಯ ಮಾಡುವರು. ವಿವಾಹ ಸುಖವನ್ನು ಕೊಡುವದು. ಉತ್ತಮ ಸ್ತ್ರೀ ಸಿಗುವಳು. ವಿವಾಹದಿಂದ ಲಾಭವಾಗು

ವದು. ಸಾಂಪತ್ತಿಕ ಲಾಭವೂ ಆಗುವದು. ವಿವಾಹದ ನಂತರ ಏಳಿ[illegible] ಯಾಗುವದು. ಇದು ಭಾಗ್ಯವೃದ್ಧಿ ದರ್ಶಕಯೋಗವು. ಈ ಯೋಗವಿ[illegible] ವವರು ಸಮಾಧಾನಿಗಳೂ ಆಶಾವಾದಿಗಳೂ ಇರುವರು. ಆನಂದಿ, ಸರಲ[illegible] ಮನಸ್ಸು ಇರುವದಲ್ಲದೆ ಶರೀರ ಪ್ರಕೃತಿಯೂ ಚೆನ್ನಾಗಿರುವದು.

ಚಂದ್ರಗುರು ಅಶುಭಯೋಗ:— ಸ್ವಭಾವವು ಖರ್ಚಿಕವಿರುವದು[illegible] ಮಿತವ್ಯಯವಿಲ್ಲದವರಾಗುವರು. ದುಡ್ಡಿನ ಬಗೆಗೆ ನಿಷ್ಕಾಳಜಿ ಇರುವದು[illegible] ಸಾಂಪತ್ತಿಕ ತೊಂದರೆಯಲ್ಲಿ ಬೀಳುವರು. ಇವರು ಸಟ್ಟಾ ಜಿದ್ದು ಮೊ[illegible] ಲಾದ ವ್ಯವಹಾರಗಳನ್ನು ಕೈಕೊಳ್ಳಬಾರದು. ಆದಾಯಕ್ಕಿಂತ ಹೆಚ್ಚ[illegible] ಖರ್ಚು ಮಾಡುವ ಪ್ರವೃತ್ತಿ ಇರುವದು. ಗುರು ಚಂದ್ರರ ಅಶುಭಯೋಗವ[illegible] ಮತ್ತಷ್ಟು ಪೀಡಿತವಾಗಿದ್ದರೆ ಪಚನ ವಿಕಾರ, ಯಕೃತ್ ವಿಕಾರಗಳ ಸಂ[illegible] ವವೂ ಇರುವದು.

ಈ ಯೋಗವನ್ನು ನಮ್ಮವರು ಗಜಕೇಸರೀ ಯೋಗವೆಂದು ಕರೆಯು[illegible] ವರು **"ಗಜಕೇಸರೀ ಯೋಗ ಸಂಜಾತೋ ಧನವಾನ್, ಗುಣವಾನ[illegible] ಭವೇತ್ ।"** ಎಂದು ಹೇಳುವರು. ಶುಭ ಭಾವಾಧಿಪತ್ಯ ಸಂಬಂಧವು[illegible] ಬಂದರೆ ಈ ಫಲವನ್ನು ಹೇಳಬಹುದು.

ಅಂತೂ ಈ ಯೋಗದ ಫಲವು ಮತಭೇದದಿಂದ ಕೂಡಿದೆ. ಅನು[illegible] ಭವದ ಬಲದಿಂದ ನಿರ್ಣಯಿಸಬಹುದು. ಗುರು ಚಂದ್ರರು ರವಿ, ದಶವ[illegible] ಬಿಂದುವಿನ ಶುಭಯೋಗದಲ್ಲಿದ್ದರೆ ನೌಕರಿಯಲ್ಲಿ ಉತ್ತಮ ದರ್ಜೆ ಪ್ರಾಪ್ತ[illegible] ವಾಗುವದು. ಚುನಾವಣೆಯಲ್ಲಿ ಆರಿಸಿ ಬರುವರು. ವಾರ್ಷಿಕ ಕುಂಡ[illegible] ಯಲ್ಲಿ ಅಶುಭಯೋಗವಾದಾಗ ದುಡ್ಡು ಹಾಳಾಗುವದು. ರಕ್ತದ ಒತ್ತ[illegible] ವಾಗುವದು.

ಚಂದ್ರ ಶುಕ್ರಯುತಿ ಶುಭಯೋಗ:— ಸಮುಕ್ರಾಂತಿ ಯೋ[illegible] ಗಳಾಗುತ್ತಿದ್ದರೆ ಸ್ವಭಾವವು ಟಾಪಟೀಪ ಇರುವದು. ಜಾತರಲ್ಲಿ ಒಂದ[illegible] ವಿಧದ ಸೌಂದರ್ಯವಿರುವದು. ಉಡುಪು-ತೊಡಪುಗಳ ಬಗೆಗೆ ಶಿಸ್ತುಪ್ರಿಯ[illegible] ರಿರುವರು. ಸುಸ್ವಭಾವಿ, ಮಾಯಾಳು ಇರುವರು. ವಿವಾಹ ಸುಖ[illegible]

ಸಿಗುವದಲ್ಲದೆ ವಿವಾಹದಿಂದ ಭಾಗ್ಯೋದಯವಾಗುವದು. ಸ್ತ್ರೀಯರಿಂದ ಲಾಭವಾಗುವದು ಲಲಿತ ಕಲೆ, ಚಿತ್ರ ಕಲೆಗಳಲ್ಲಿ ಅಭಿರುಚಿಯಿರುವದು. ಖರ್ಚಿನ ಬಗೆಗೆ ಅಚ್ಚುಕಟ್ಟುತನವಿರುವದು. ಕಸೂತಿ, ಹೊಲಿಗೆ ಚಿತ್ರಕಲೆಗಳಲ್ಲಿ ಪ್ರಗತಿಯಾಗುವದು. ವಾರ್ಷಿಕ ಕುಂಡಲಿಯಲ್ಲಿ ಚಂದ್ರ ಶುಕ್ರ ಶುಭಯೋಗವಾದಾಗ ವಿಲಾಸ ಪ್ರವೃತ್ತಿ ತೋರುವದು. ಗೃಹಸೌಖ್ಯ, ಸಾಂಪತ್ತಿಕ ಸುಖ ದೊರಕುವವು.

ಚಂದ್ರ ಶುಕ್ರ ಅಶುಭಯೋಗ:— ಈ ಅಶುಭಯೋಗವಿರುವವರು ಅತ್ಯಂತ ಖರ್ಚಿಕರಿರುವರು. ಉಡುಪು-ತೊಡವುಗಳಲ್ಲಿ ಅಚ್ಚುಕಟ್ಟುತನವಿರುವದಿಲ್ಲ. ನಿರ್ಮಲತೆಯ ಕಡೆಗೆ ಗಮನವಿರುವದಿಲ್ಲ. ವ್ಯಸನ ಪ್ರವೃತ್ತಿಯಿರುವದು. ಸ್ತ್ರೀಯರ ಕುಂಡಲಿಯಲ್ಲಿ ಈ ಯೋಗವಿದ್ದರೆ ಮಾಸಿಕ ಸ್ರಾವದಲ್ಲಿ ತೊಂದರೆಗಳನ್ನು ಸೂಚಿಸುವದು. ಸಂತತಿ ಸುಖಕ್ಕೆ ಬಾಧಕವು ವಂಧ್ಯತ್ವಕ್ಕೆ ಸಹಾಯಕವಾಗಿದೆ.

ಚಂದ್ರ ಶನಿಯುುತಿ, ಸಮಕ್ರಾಂತಿ:— ಈ ಯೋಗವು ದುಃಖ, ದಾರಿದ್ರ್ಯ ಧನನಾಶಗಳನ್ನು ಉದ್ಯೋಗ ಹಾನಿಗಳನ್ನು ಸೂಚಿಸುವದು.

ಕರ್ಕ, ವೃಶ್ಚಿಕ ರಾಶಿಯಲ್ಲಿ ೧, ೨, ೪, ೬, ೭, ೮, ೧೦, ೧೨ ಭಾವಗಳಲ್ಲಿ ಈ ಯೋಗವುಂಟಾದರೆ ವಿಶೇಷ ಅನಿಷ್ಟ ಫಲವನ್ನು ಸೂಚಿಸುವದು. ದುಃಖ-ಕಷ್ಟಗಳಿಗೆ ಎಡೆಗೊಡಬೇಕಾಗುವದು. ಸ್ವಭಾವವು ಸಂಶಯಗ್ರಸ್ತವಿರುವದು. ಚಿರಡಿಗೇಳುವರು. ದುಷ್ಟ ಮಿತ್ರರು ಗಂಟು ಬೀಳುವರು. ಅವರಿಂದ ಧನಹಾನಿಯಾಗುವದು. ಚಂದ್ರ ಶನಿಯುತಿಯಲ್ಲಿ ಹುಟ್ಟಿದವರು ಹೆಂಡತಿಯ ತಂತ್ರದಂತೆ ನಡೆಯುವರು. ಸ್ತ್ರೀಯರಲ್ಲಿ ಅಶಕ್ತತೆ ತೋರುವದು. ದ್ವಿಸ್ವಭಾವ ರಾಶಿಯಲ್ಲಿ ಚಂದ್ರನು ಶನಿಯಿಂದ ಪೀಡಿತನಿದ್ದರೆ ದ್ವಿಕಲತ್ರ-ತ್ರಿಕಲತ್ರ ಯೋಗ ಸಂಭವವೂ ಉಂಟಾಗುವದು. ಸ್ತ್ರೀಯರ ಕುಂಡಲಿಯಲ್ಲಿಯೂ ಈ ಯೋಗವು ಅವರ ಪ್ರಕೃತಿ ದೌರ್ಬಲ್ಯ ಸೂಚಕವಾಗಿದೆ. ಶುಕ್ರನ ಅಶುಭ ಸಂಬಂಧವೂ ಕೂಡಿದರೆ ಕುಮಾರ್ಗ ಪ್ರವೃತ್ತಿ ಕಂಡುಬರುವದು.

ಚಂದ್ರ ಶನಿ ಶುಭಯೋಗ:— ಶುಭಯೋಗವಿದ್ದರೆ ಸ್ವಭಾವವು ದೀರ್ಘೋದ್ಯೋಗಿ, ಸ್ಥಿರ ವಿಚಾರಿ, ನಿಶ್ಚಯಿ, ಶಾಂತವಾಗಿರುವದು. ಧನಸಂಚಯಕ್ಕೆ ಅನುಕೂಲ ಯೋಗವು. ಸ್ತ್ರೀಯರ ಕುಂಡಲಿಯಲ್ಲಿಯೂ ಈ ಯೋಗವು ಉತ್ತಮ ಶರೀರ ಪ್ರಕೃತಿ ಸೂಚಕವಾಗಿರುವದು. ಸ್ವಭಾವವು ಉದ್ಯೋಗಿ. ಶಾಂತ, ವಿಚಾರಿ ಇರುವದು. ಈ ಯೋಗವು ಲಗ್ನ, ಪಂಚಮ, ಅಷ್ಟಮದಲ್ಲಿ, ಆದರೆ ವೃದ್ಧ ಆಪ್ತರಿಂದ ಧನ. ಇಸ್ಟೇಟ ಸಿಗುವದು. ವಾರ್ಷಿಕ ಕುಂಡಲಿಯಲ್ಲಿ ಈ ಶುಭಯೋಗವಾದಾಗ ನೌಕರಿ ಕಾಯಿಮ ಆಗುವದು. ಪರಿಷ್ಕೃತ ಮರ್ಜಿ ಸಂಪಾದಿಸುವರು.

ಚಂದ್ರ ಹರ್ಶಲ ಯುುತಿ-ಸಮಕ್ರಾಂತಿ:— ಈ ಅಶುಭಯೋಗಗಳು ಇರುವಲ್ಲಿ ಸ್ವಭಾವವು ಅತಿ ಚಂಚಲವಾಗಿರುವದು, ಅನಿಯಮಿತ ಹಾಗು ವಿಕ್ಷಿಪ್ತವಿರುವದು. ಸ್ಥಲಾಂತರ ಪ್ರವಾಸಗಳುಂಟಾಗುವವು. ಒಂದೇ ಸ್ಥಲದಲ್ಲಿ ಇರಲಾರರು. ಕಲ್ಪಕರಿರುವರು. ಇವರ ಬಗೆಗೆ ನಿಶ್ಚಿತ ಹೇಳುವದು ಕಠಿಣವಾಗಿರುವದು. ಇದು ಸ್ತ್ರೀಯರ ಕುಂಡಲಿಯಲ್ಲಿರುವುದು ಕೆಡುಕಿಗೆ ಸೂಚಕವು. ಮನಸ್ಸು ಸ್ವಾಧೀನದಲ್ಲಿ ಉಳಿಯಲಾರದು. ವೈವಾಹಿಕ ಜೀವನವೂ ಸುಖಕರವಾಗುವದಿಲ್ಲ.

ಚಂದ್ರ ಹರ್ಶಲ್ ಶುಭಯೋಗ:— ಈ ಶುಭಯೋಗವಿದ್ದರೆ ಜಾಣನು, ಚತುರನು ಇರುವನು. ಕಲ್ಪಕರು ಬುದ್ಧಿವಂತರು ಆಗುವರು. ಫಲಿತ ಶಾಸ್ತ್ರ, ಗೂಢ ವಿದ್ಯೆಗಳು ರುಚಿಸುವವು. ಚಂದ್ರನಾಗಲಿ, ಹರ್ಶಲನಾಗಲಿ ಲಗ್ನ, ದಶಮ, ತೃತೀಯ, ನವಮದಲ್ಲಿದ್ದು ಶುಭ ಸಂಬಂಧಿತನಿದ್ದರೆ ದೀರ್ಘ ಪ್ರವಾಸಗಳಾಗುವವು.

ಚಂದ್ರ ಹರ್ಶಲ್ ಯುುತಿ, ಸಮಕ್ರಾಂತಿ ಯೋಗ:— ಯಾವ ರಾಶಿಯಲ್ಲಿ ಯಾವ ಭಾವದಲ್ಲಿ ಆಗುವವು ಎಂಬುದನ್ನು. ಶುಭಾಶುಭ ದೃಷ್ಟಿಯನ್ನೂ ನೋಡಿ ಯೋಗ ಫಲವನ್ನು ನಿರ್ಣಯಿಸಬೇಕು. ಇವರ ವಯಸ್ಸಿನ ೭, ೧೪, ೨೧, ೨೮, ೩೫, ೪೨, ೪೯, ೫೬ ನೆಯ ವರ್ಷಗಳಲ್ಲಿ ಮಹತ್ವದ ಸ್ಥಿತ್ಯಂತರಗಳಾಗುವವು. ಶುಭ ಸಂಬಂಧಿತವಿದ್ದರೆ ಪ್ರಗತಿಪರ ಸುಧಾರಣೆ

ಗಳಾಗುವವು. ಪೀಡಿತ ಯುತಿ, ಧನ. ಅಷ್ಟಮ. ದ್ವಾದಶದಲ್ಲಿ ಇರಬಾರದು. ಚಂದ್ರ ಹರ್ಶಲ್ ಯುತಿಯು ಬಲಿಷ್ಠವಿದ್ದರೆ ಕವಿಗಳನ್ನೂ ಗಾಯಕರನ್ನೂ ಹುಟ್ಟಿಸುವದು. ಇವರು ಸ್ವಪ್ನ ಸೃಷ್ಟಿಯಲ್ಲಿ ವಿಚಿತ್ರ ಅನುಭವವನ್ನು ಕಾಣುವರು. ವಾರ್ಷಿಕ ಕುಂಡಲಿಯಲ್ಲಿ ಶುಭಯೋಗವಾದಾಗ ಮಹತ್ವದ ಪ್ರಮೋಶನ್ ಆಗಿ ಸ್ಥಲಾಂತರವಾಗಬಹುದು. ಅಶುಭಯೋಗವಾದಾಗ ತಾರುಣ್ಯದಲ್ಲಿ ಕಾಲು ಜಾರುವ ಸಂಭವವಿರುವದು.

ಚಂದ್ರ ನೇಪಚ್ಯೂನ ಶುಭಯೋಗ:— ಇದು ಅಂತಃಕರುಣವನ್ನೂ ಬುದ್ಧಿಯನ್ನೂ ಸಂಸ್ಕರಿಸುವ ಯೋಗವು. ಇವರು ಸ್ಫೂರ್ತಿಪ್ರಧಾನರೂ ಗಾಯನ ವಾದನದ ಅಭಿರುಚಿಯುಳ್ಳವರೂ ಇರುವರು. ಜಲ ಪ್ರವಾಸ ಸಂಭವವಿರುವದು. ಇವರಿಗೆ ಸೂಚಕ ಸ್ವಪ್ನಗಳು ಬೀಳುವವು. ಆಧ್ಯಾತ್ಮ ವಿಷಯಗಳ ಅಭ್ಯಾಸದಲ್ಲಿ ರುಚಿ ತೋರಿಸುವರು. ವ್ಯಾಪಾರಸ್ಥರ ಕುಂಡಲಿಯಲ್ಲಿ ಈ ಯೋಗವಿದ್ದರೆ ಅವರ ಧಾರಣಿ ಅಂದಾಜು ಬರೋಬರಿ ಬರುವದು.

ಚಂದ್ರ ನೇಪಚ್ಯೂನ ಅಶುಭಯೋಗ:— ಈ ಯೋಗವು ತ್ರಾಸದಾಯಕವಾದುದು. ಪ್ರಗತಿಯಲ್ಲಿ ಅಡ್ಡಿಗಳುಂಟಾಗುವವು. ಮನೋವಿಕಾರಕ್ಕೆ ಅಧೀನರಾಗುವರು. ಮನಸ್ಸಿನ ಸಮತೋಲವನ್ನು ಕಳೆದುಕೊಳ್ಳುವರು. ದುರ್ಬಲ ಇಚ್ಛಾಶಕ್ತಿಯಿಂದ ಪರಾಧೀನತೆಯನ್ನು ತಂದುಕೊಳ್ಳುವರು. ಸ್ಥಲಾಂತರವಾಗುವದು. ವಿವಾಹ ಸೌಖ್ಯದಲ್ಲಿ ಆತಂಕಗಳುಂಟಾಗುವವು. ಒರ ಪಟ್ಟಿನ ವರ್ಷಗಳು ತ್ರಾಸದಾಯಕವಾಗುವವು. ಚಂದ್ರನು ಮತ್ತೊಂದು ಗ್ರಹದ ಶುಭದೃಷ್ಟಿಯಲ್ಲಿದ್ದರೆ ತ್ರಾಸವು ಕಡಿಮೆಯಾಗುವದು. ಕಾಲ್ಪನಿಕ ರೋಗದಿಂದ ಬಳಲುವರು. ಸ್ತ್ರೀಯರ ಕುಂಡಲಿಯಲ್ಲಿದ್ದರೆ ಹಿಸ್ಟಿರಿಯಾ ರೋಗದ ಸಂಭವವಿರುವದು. ಚಂದ್ರ ನೇಪಚ್ಯೂನರ ಅಶುಭ ಯೋಗಕ್ಕೆ ಶನಿ, ಮಂಗಳ, ಹರ್ಶಲರ ಪುಷ್ಟಿ ಸಿಕ್ಕರೆ ಹುಚ್ಚು ಹಿಡಿಯುವ ಸಂಭವವು.

ಬುಧ

ಶರೀರ ಮನಸ್ಸುಗಳೆರಡನ್ನೂ ಉದ್ಯೋಗದಲ್ಲಿ ತೊಡಗಿಸುವ ಗ್ರಹವೆಂದು ಕರೆಯುವರು. ಬುಧನ, ಗುಣಧರ್ಮದವರು ಎಂದೂ ಸುಮ್ಮನೆ ಕೂಡ್ರುವದಿಲ್ಲ. ಇವರು ಸ್ಥಾನಾಂತರ ಪ್ರಿಯರು. ಶಾಬ್ದಿಕವಾದ ವಿವಾದ ಪ್ರಿಯರು. ಬುಧನು ಜಾಣನು. ಅವನು ಬುದ್ಧನೆಂದು ಕೆಲವರು ನುಡಿಯುವರು. ಬುಧನು ವಿಚಾರಿ ವಿದ್ವಾನ್ ಗ್ರಹಸ್ಥನು. ಇವನ ಆಳಿಕೆಯಲ್ಲಿ ಹುಟ್ಟಿದ ಜನರು ಧ್ಯಾನಾಸಕ್ತರೂ ಅಭ್ಯಾಸಿಗಳೂ ಇರುವರು. ಜಗದ ಗೊಂದಲವು ಅವರಿಗೆ ರುಚಿರುವದಿಲ್ಲ. ಆದರಿಂದ ಅವರು ನಿವೃತ್ತಿಯನ್ನು ಬಯಸಿ ಏಕಾಂತದಲ್ಲಿ ಇರಲು ಬಯಸುವರು. ಬುಧನು, ಕನ್ಯಾ, ಮಿಥುನ ರಾಶಿಯಲ್ಲಿ ಲಗ್ನದಲ್ಲಿದ್ದಾಗ ಹುಟ್ಟಿದವರು ವಿದ್ವಾಂಸರೂ ಸಂಶೋಧಕರೂ ಆಗುವರು. ಬುಧನು, ಕನ್ಯಾ, ಮಿಥುನ, ಧನೂ ರಾಶಿಯಲ್ಲಿದ್ದು ಗುರುವಿನ ಶುಭ ದೃಷ್ಟಿಯಲ್ಲಿದ್ದರೆ ಮಾನವನು ಉದಾತ್ತ, ಉದಾರ, ಸೊಗಸುಗಾರ, ಉತ್ತಮ ಮಾನಸಿಕ ಸಾಮರ್ಥ್ಯವುಳ್ಳವನು ಇರುವನು. ಬುಧನನ್ನು ಜ್ಯೋತಿರ್ವಾಙ್ಮಯದಲ್ಲಿ ಯುವರಾಜನೆಂದು ಕರೆಯುವರು. ಸೂರ್ಯನು ರಾಜ, ಬುಧನು ಯುವರಾಜ. ಸೂರ್ಯನಿಂದ ೨೮ ಅಂಶಕ್ಕಿಂತ ಅವನು ದೂರ ಸರಿಯುವದಿಲ್ಲ. ಸೂರ್ಯನ ಸುತ್ತು ಭ್ರಮಿಸುವ ಗ್ರಹಗಳಲ್ಲಿ ಬುಧನೇ ಮೊದಲಿಗನು. ಚಂದ್ರನು ಪೃಥ್ವಿಯ ಸುತ್ತು ತಿರುಗತಕ್ಕವನು. ಮಾನವನ ಬುದ್ಧಿಶಕ್ತಿಯನ್ನು ವಿಚಾರಿಸುವಾಗ ಚಂದ್ರನೊಡನೆ ಬುಧನ ರಾಶಿ ಸ್ಥಾನ ಯೋಗಬಲಗಳನ್ನು ವಿಚಾರಿಸುವರು. ಬುಧನು ವಾಣಿಯ ಕಾರಕನು. ಅವನ ಧರ್ಮ ಬುದ್ಧಿಮತ್ತೆ. ಆತ್ಮಕಾರಕ ರವಿ. ಮನಃಕಾರಕ ಚಂದ್ರ, ಬುದ್ಧಿ ಬಲದರ್ಶಕ ಬುಧನು. **"ಯೋಬುದ್ಧೇಃ ಪರತಸ್ತು ಸಃ"** ಎಂಬಂತೆ ಬುದ್ಧಿಯು ಅಂಕಿಗಿರುವವನು. ಆತನು ಆತ್ಮಾರವಿ, ಬುಧನಿಗೆ ಜ್ಞ, ಜಾಣನು ಎಂದು ಹೆಸರಿರುವದು. ಬುಧನ ಆಕಾರವು ಸಣ್ಣದಾಗಿದ್ದರೂ ಅವನ ಜಾಣತನ ದೊಡ್ಡದು. ಕುಂಡಲಿಯಲ್ಲಿ ಬಲವಾನ್ ಬುಧನಿದ್ದರೆ ಅವನು ವಕ್ತಾ ಲೇಖಕನಾಗುವನು. ಕುಂಡಲಿಯಲ್ಲಿ ೨ನೆಯ ಭಾವವು ವಾಣಿಯದು. ಇಲ್ಲಿ ಬಲಿಷ್ಠ ಬುಧನಿದ್ದರೆ ವಾಕ್ ಚಾತುರ್ಯವುಳ್ಳವನೂ

ವಿದ್ಯಾಂಸನೂ ಆಗುವನು. ಪಂಚಮಸ್ಥಾನ ಬುದ್ಧಿಯದು. ಅಲ್ಲಿ ಬಲಿಷ್ಠ ಬುಧನಿದ್ದರೆ ಉತ್ತಮ ಬುದ್ಧಿಶಕ್ತಿಯನ್ನು ಕೊಡುವನು. ಬುದ್ಧಿವಂತರಾದ ಮಕ್ಕಳು ಹುಟ್ಟುವರು. ದ್ವಿತೀಯ, ಪಂಚಮ. ಲಗ್ನ, ನವಮ, ತೃತೀಯ ದಶಮ ಇಲ್ಲಿ ಬುಧನಿರುವದು ಮಹತ್ವದ್ದು. ಮಿಥುನ, ಕುಂಭ, ತುಲಾ, ಕನ್ಯಾ ರಾಶಿಯ ಅಥವಾ ನವಾಂಶದಲ್ಲಿರುವ ಬುಧನು ಲೇಖನ, ವಕ್ತೃತ್ವ ಬುದ್ಧಿ ಸಾಮರ್ಥ್ಯಗಳನ್ನು ಕೊಡುವನು.

ಮಿಥುನ ರಾಶಿ ಅಥವಾ ನವಾಂಶದಲ್ಲಿ ಬುಧನು ಶಾಸ್ತ್ರಜ್ಞಾನ ಪಾಠಾಂತರಶಕ್ತಿ, ಸ್ಮರಣಶಕ್ತಿ, ವಕ್ತೃತ್ವ ಗ್ರಂಥಲೇಖನ ಗುಣಗಳನ್ನು ಕೊಡುವನು. ಕುಂಭರಾಶಿ, ಕುಂಭನವಾಂಶದಲ್ಲಿ ಬುಧನು ತತ್ತ್ವಜ್ಞಾನ ಲಾಲಸೆ, ವೇದಾಂತಾದಿ ಗೂಢ ವಿದ್ಯೆಗಳಲ್ಲಿ ಪ್ರಾವೀಣ್ಯವನ್ನು ಕೊಡುವನು. ಸಂಶೋಧಕರನ್ನು ಉತ್ತಮ ಲೇಖಕರನ್ನು ಈ ರಾಶಿಯ ನವಾಂಶದ ಬುಧನು ಹುಟ್ಟಿಸುವನು. ತುಲಾ ರಾಶಿಯ. ತುಲಾನವಾಂಶದ ಬುಧನಿದ್ದವರು ಎಲ್ಲ ವಿಷಯ ಮತಿವಂತರಿರುವರು. ಉತ್ತಮ ಭಾಷಣ ಲೇಖನ ಶೈಲಿಗಳನ್ನು ಕೊಡುವನು. ಕನ್ಯೆಯಲ್ಲಿ ಬುಧನು ಉಚ್ಚನಿರುವನು. ಹಸ್ತಕೌಶಲ್ಯ, ವೈದ್ಯರೀ, ಸಾಂಪತ್ತಿಕ ರಾಜಕೀಯ ವೈಭವ, ವ್ಯಾಪಾರ ಕೌಶಲ್ಯವನ್ನು ಕೊಡುವನು. ಅಚ್ಚುಕಟ್ಟುತನ, ವ್ಯವಸ್ಥೆ, ಕನ್ಯೆಯ ಬುಧನ ಗುಣಧರ್ಮಗಳು.

ಕನ್ಯಾನವಾಂಶದ ಬುಧನು ಪದ್ಧತಿ ಪ್ರಿಯರನ್ನಾಗಿ ಮಾಡುವನು. ಸಪ್ತಮದಲ್ಲಿ ಬುಧನು ವಾಕ್ ಶಕ್ತಿಯನ್ನು ಕೊಡುವನು. ವಾಗ್ಯುದ್ಧದಲ್ಲಿ ಪ್ರಖ್ಯಾತರಾಗುವರು.

ಕುಂಡಲಿಯಲ್ಲಿ ರವಿಯ ಮುಂದೆ ಬುಧನಿದ್ದಷ್ಟು ನೆಟ್ಟಗೆ. ರವಿಯ ಹಿಂದೆ ಇರುವದು ಅಷ್ಟು ನೆಟ್ಟಗಲ್ಲ. ರವಿ, ಬುಧ ಯೋಗ ಉತ್ತಮ. ಇದು ಶುಭ ಸಂಬಂಧಿತವಿದ್ದರೆ ವಿದ್ಯಾಬುದ್ಧಿ ವೈಭವಗಳನ್ನು ಕೊಡುವದು. ಬುಧನು ಕುಶಾಗ್ರಬುದ್ಧಿಯವನು. ಗಣಿತ ಜಮಾಖರ್ಚುಗಳು ಅವನಿಗೆ ಪ್ರಿಯವಿರುವವು. ಬ್ಯಾಂಕು, ಮುದ್ರಣಾಲಯ, ಕಾಗದದ ಕಾರಖಾನೆ ಮುಂತಾದವುಗಳ ಮೇಲೆ ಅವನ ಅಮಲು ಕಂಡು ಬರುವದು. ಬುಧನು ಸಹವಾಸ ಪ್ರಿಯನು. ಅವನ ಸಹವಾಸವು ಯಾರೊಡನೆ ಆಗು

ವದೋ ಅವರ ಗುಣಧರ್ಮಗಳನ್ನು ಸ್ವೀಕರಿಸುವನು. ಯಾವ ರಾಶಿಯಲ್ಲಿರುವನೋ ಆ ರಾಶಿಯ ಸ್ವಾಮಿಯ ಗುಣಧರ್ಮಗಳನ್ನು ಸ್ವೀಕರಿಸುವನು. ಉಗ್ರಗ್ರಹದಿಂದ ಯುಕ್ತನಾದರೆ ಉಗ್ರ; ಸೌಮ್ಯಗ್ರಹದಿಂದ ಯುಕ್ತನಾಗಿದ್ದರೆ ಸೌಮ್ಯ. ಅವನು ಅಸ್ತಂಗತನಾಗಿದ್ದರೆ ಅವನ ಫಲ ಶೂನ್ಯವೆಂದು ಕೆಲವರೆನ್ನುವರು. ಆದರೆ ಹಾಗೇನೂ ಅನುಭವ ಬರಲಾರದು.

ಸಂತತಿ, ಶಾಂತಿ, ವಿನಯ, ಭಕ್ತಿ, ಮತಿ, ಮಾತುಲ, ಬಾಂಧವ ಜ್ಞಾತಿ, ಗೋತ್ರ ಸಮೃದ್ಧಿ. ಗಣಿತ, ಪ್ರಜ್ಞಾ, ವೇದಾಂತ ವಿದ್ಯೆಗಳ ಕಾರಕ ಬುಧನಾಗಿರುವನು.

ಬುಧನು ಬುದ್ಧಿ ಪರಿಚಯದವರು, ನೆರೆಯವರು. ಪತ್ರ, ಲೇಖ, ಚಾಕರ. ನೌಕರ, ಭೂಮಿಯ ಮೇಲಿನ ಲೀಲೆಯ ಪ್ರವಾಸಗಳು. ಅಣ್ಣ–ತಮ್ಮಂದಿರು. ದಾಯಾದರು. ವ್ಯಾಪಾರ, ಉದ್ಯೋಗ, ಧಂದೆ, ವೃಕ್ತೃತ್ವ, ಲೇಖನ ಕಲೆ, ವಿದ್ಯೆಯಲ್ಲಿ ಯಶಸ್ಸು, ವಿದ್ಯಾವ್ಯಾಸಂಗಿ ಜನರು, ಲೇಖಕರು, ಅಕೌಂಟಂಟ್ಸ, ಶಾಲಾಮಾಸ್ತರರು, ದ್ವಿಭಾಷಿಗಳು, ಸೆಕ್ರೆಟರಿ, ರಜಿಸ್ಟರ್, ಸಂದೇಶ, ವಾಹಕರು, ಮುದ್ರಕರು, ಪುಸ್ತಕ ವಿಕ್ರೇತಾರರು, ಕಾರಕೂನ, ಪೋಷ್ಟಮನ್, ರೇಲ್ವೆ ನೌಕರರು ಇತ್ಯಾದಿ ದರ್ಶಕನಾಗಿರುವನು.

ಗೂಢಯುಕ್ತಿವಿದಃ, ಅಲೇಖ್ಯ, ಶಬ್ದ ಗಣಿತ ಪ್ರಸಾಧಕ
ಶಿಲ್ಪಿಜ್ಞಾಃ, ಹಾಸ್ಯಜ್ಞ, ಭೂತ ತಂತ್ರೇಂದ್ರ, ಜಾಲಜ್ಞಾಃ,
ನಟ. ನರ್ತಕ. ಘೃತ, ತೈಲ, ಸ್ನೇಹ, ಬೀಜ ತಿಕ್ತಾನಿ, ಪ್ರತಚಾರಿ
ರಸಾಯನ ಕುಶಲ ಇತ್ಯಾದಿ ಬುಧನ ಕಾರಕತ್ವವುಳ್ಳವುಗಳು. ಬುಧಾದಿ ಗ್ರಹಗಳ ಕಾರಕತ್ವವನ್ನು ವರಾಹಮಿಹಿರಾಚಾರ್ಯರು ಬೃಹತ್ ಸಂಹಿತೆಯಲ್ಲಿ ಗ್ರಹಭಕ್ತಿಯೋಗದಲ್ಲಿ ವಿವರವಾಗಿ ಹೇಳಿರುವರು. ಅಭ್ಯಾಸಿಗಳು ಅದನ್ನು ಅವಶ್ಯವಾಗಿ ನೋಡಬೇಕು. ಬುಧನ ಅಮಲು ಮೂಗು ಕೈ, ಮಜ್ಜಾತಂತು. ನಾಲಿಗೆ, ಮೆದುಳಿನ ಮೇಲೆ ಇರುವದು. ಮಾನಸಿಕ ರೋಗ; ಮೂಕತ್ವ. ನಾಲಿಗೆಯಲ್ಲಿ ಅಂದರೆ ಮಾತಿನಲ್ಲಿ ದೋಷ, ಮಲರೋಗ ಮುಂತಾದವುಗಳು ಬುಧನ ರೋಗಗಳು.

ಬುಧನ ರತ್ನ ಪಚ್ಚ. ಭಾಗ್ಯಾಂಕ ೫. ಬಣ್ಣ–ಹಳದಿ.

ಬುಧನ ಲಗ್ನದಲ್ಲಿ:— ಲಗ್ನದಲ್ಲಿ ಬುಧನಿದ್ದರೆ ಬುದ್ಧಿಶಕ್ತಿ ತೀವ್ರವಿರುವದು. ವಾಕ್ ಚಾತುರ್ಯವು ಚೆನ್ನಾಗಿರುವದು. ಸ್ವಭಾವವು ವಿನೋದಿ, ಹಾಸ್ಯರಸ ಪ್ರಿಯರಿರುವರು. ಕಲ್ಪನಾಶಕ್ತಿ ಚೆನ್ನಾಗಿರುವದು. ಲಗ್ನದಲ್ಲಿ ಮೇಷ, ಸಿಂಹ, ಧನು ರಾಶಿಯ ಬುಧನು ತೀಕ್ಷ್ಣ ಋಣ ಋಣಿತ. ಧಾಡಸಿ, ಬೇಗ ಸಿಟ್ಟಿಗೆ ಬರುವವರು ಇರುವರು. ಮಾತನಾಡುವಲ್ಲಿ ಚತುರ, ಲಲಿತ ಕಲೆಯ ಅಭಿರುಚಿಯುಳ್ಳವನಿರುವನು. ಸ್ಪಷ್ಟವಕ್ತಾ ಇರುವನು. ಅಂಥವರ ವಾಕ್ ಸಾಮರ್ಥ್ಯವು ಚೆನ್ನಾಗಿರುವದು. ನಾಟಕಾದಿಗಳ ಅಭಿರುಚಿ ಇರುವದು. ಗಣಿತ ಪ್ರಿಯನು. ಮೇಷ, ಸಿಂಹ ರಾಶಿಗಳು ಧನೂರಾಶಿಗಿಂತ ನೆಟ್ಟಗೆ. ಧನೂ ರಾಶಿಯಲ್ಲಿ ವಾಚಾಲತೆ, ಮೂರ್ಖತೆಗಳು ಕಂಡು ಬರುವವು.

ಲಗ್ನದಲ್ಲಿ ವೃಷಭ, ಮಕರ ರಾಶಿಯ ಬುಧನಿದ್ದರೆ ಧೂರ್ತತೆ ಸ್ರತಿಕರಿಸುವ ಸ್ವಭಾವಗಳಿರುವವು. ಆಗ್ರಹಿಗಳು, ತಮ್ಮದೇ ನಿಜವೆನ್ನುವ ಹಟವಾದಿಗಳು ಇರುವರು. ಲಗ್ನದಲ್ಲಿ ಮಿಥುನ, ಕನ್ಯಾ, ತುಲಾ, ಕುಂಭ ರಾಶಿಯ ಬುಧನಿದ್ದರೆ ಯಾವುದೇ ವಿದ್ಯೆಯನ್ನಾಗಲಿ, ಕಲೆಯನ್ನಾಗಲಿ ಸಹಜವಾಗಿ ವಶಪಡಿಸಿಕೊಳ್ಳುವರು. ಈ ಶಾಸ್ತ್ರೀಯ ರಾಶಿಯಲ್ಲಿಯ ಬುಧನು ಶಾಸ್ತ್ರಜ್ಞರನ್ನು ಹುಟ್ಟಿಸುವನು. ಪ್ರತಿಭಾಶಕ್ತಿಯನ್ನೂ ವಾಕ್‌ಸಾಮರ್ಥ್ಯವನ್ನೂ ಕೊಡುವನು. ವೃಶ್ಚಿಕದ ಬುಧನು ರಸಾಯನ ಶಾಸ್ತ್ರ, ವೈದ್ಯ ಶಾಸ್ತ್ರಗಳಲ್ಲಿ ಪ್ರಗತಿಯುಂಟಾಗುವಂತೆ, ಮಾಡುವಂತೆ ತೋರುವನು. ವೃಶ್ಚಿಕದ ಬುಧನಿಂದ ಗೂಢತೆ, ಪ್ರತಿಕಾರಕ ಶಕ್ತಿಗಳು ತೋರುವವು. ಕರ್ಕ, ಮೀನ ರಾಶಿಯ ಬುಧನಿಂದ ಶ್ರೇಷ್ಠ ಬುದ್ಧಿಶಕ್ತಿ ಕಾಣಲಾರದು. ಮೂರ್ಖತೆ, ವಾಚಾಳತೆ, ಆತ್ಮಪ್ರೌಢಿಮೆಗಳು ಕಂಡು ಬರುವವು. ಮೀನಕ್ಕಿಂತ ಕರ್ಕ ಕೊಂಚ ಮಟ್ಟಿಗೆ ನೆಟ್ಟಗೆ. (ಬುಧನು ಮೀನದಲ್ಲಿ ನೀಚನಿರುವನು)

ಧನಭಾವದಲ್ಲಿ:— ದ್ವಿತೀಯದಲ್ಲಿ ರಾಶಿಬಲಿ ಶುಭದೃಷ್ಟ ಬುಧನಿದ್ದರೆ ವಕ್ತೃತ್ವ–ವಾಙ್ಮಯದಿಂದ ಸಂಪತ್ತು ಬರುವದು. ಲೇಖನ ಕಲೆಯಿಂದ ಲಾಭವು. ಆದರಿಂದ ಉಪಜೀವಿಕೆ. ದಲಾಲಿ ಧಂದೆ, ಏಜನ್ಸಿಗಳಿಂದ ಲಾಭವಾಗುವದು. ಬುದ್ಧಿಜೀವಿಗಳು ಶರೀರ ಶಕ್ತಿಗಿಂತ ವಿಚಾರ ಶಕ್ತಿಯ

ಉಪಯೋಗ ಮಾಡಿಕೊಳ್ಳುವರು. ಇಂತಹ ವ್ಯವಹಾರಗಳಿಂದ ಅರ್ಥಪ್ರಾಪ್ತಿಯಾಗುವದು. ಬೇರೆ ಬೇರೆ ಭಾಷೆಗಳನ್ನು ಕಲಿಯುವ ಅಭಿರುಚಿಯಿರುವದು. ಈ ಸ್ಥಾನದಲ್ಲಿಯ ಬುಧನು ವಿದ್ಯೆ. ಮಾನಸಿಕ ಪ್ರಗತಿಯನ್ನುಂಟುಮಾಡುವನು. ವ್ಯಾಪಾರದಲ್ಲಿ ಬುದ್ಧಿ ನಡೆಯುವದು. ಪೀಡಿತ ಬುಧನು ಧನದ ಚೌರ್ಯವನ್ನು ಸೂಚಿಸುವನು. ಕಪಟಿ ಜನರು ಅವನನ್ನು ವಂಚಿಸುವರು. ಕಾಗದ–ಪತ್ರಗಳ ವ್ಯವಹಾರದಲ್ಲಿ ಅಂಥವರು ಸಾವಧರಾಗಿರಬೇಕು. ಸಹಿ ಮಾಡುವಾಗ ಕಾಳಜಿ ತಕ್ಕೊಳ್ಳಬೇಕು. ಇಲ್ಲಿ (೨ರಲ್ಲಿ) ಬುಧ, ಶನಿಯರ ಯುತಿ ಇದ್ದರೆ ತೊದಲು ಮಾತು ತೋರಿಸುವದು.

ತೃತೀಯದಲ್ಲಿ ಬುಧನು:— ಕುಶಾಗ್ರಬುದ್ಧಿಯ ದರ್ಶಕನು ಅನೇಕ ವಿಷಯಗಳಲ್ಲಿ ಚಾಲನೆ ಕೊಡುವನು. ಒಂದೇ ವಿಷಯದಲ್ಲಿ ಮನವು ರಮಮಾಣವಾಗಬಾರದು. ಪ್ರವಾಸ ಪ್ರೀತಿ ಇರುವದು. ಅನೇಕ ಪ್ರವಾಸಗಳುಂಟಾಗುವವು. ಫಲ ಜ್ಯೋತಿಷ ಮೊದಲಾದ ಗೂಢ ಶಾಸ್ತ್ರಗಳ ಅಭಿರುಚಿ ಇರುವದು. ಇಲ್ಲಿ ಬುಧನಿಗೆ ನೈಸರ್ಗಿಕ ಬಲವಿರುವದು. ಉತ್ತಮ ಲೇಖನ ಶಕ್ತಿಯನ್ನು ಕೊಡುವನು. ಬೇರೆ ಬೇರೆ ಭಾಷೆಗಳನ್ನು ಕಲಿಯುವ ಅಭಿರುಚಿ ಇರುವದು. ಶಾಸ್ತ್ರೀಯ ವಿಷಯಗಳ ಲಾಲಸೆ ಇರುವದು. ಬೇರೆ ಬೇರೆ ವಸ್ತುಗಳನ್ನು ಸಂಗ್ರಹಿಸುವ ಮನಃ ಪ್ರವೃತ್ತಿ ಇರುವದು. ವಿದ್ಯಾ, ಮಾನಸಿಕ ಉನ್ನತಿಗೆ ಅನುಕೂಲ. ಇಲ್ಲಿ ಬುಧನು ಶನಿ ಮಂಗಳರ ಅಶುಭ ಯೋಗದಲ್ಲಿದ್ದರೆ ಮಾನಸಿಕ ದುರ್ಬಲತೆ ಕಂಡು ಬರುವದು.

ಚತುರ್ಥದಲ್ಲಿ ಬುಧನು:— ೪ರಲ್ಲಿ ಪೀಡಿತನಿದ್ದರೆ ಕೊನೆಯ ಆಯುಷ್ಯವು ತ್ರಾಸದಾಯಕವಾಗುವದು. ಮಾನಸಿಕ ದೌರ್ಬಲ್ಯ ಸೂಚಕವದು. ಸ್ವಭಾವದಲ್ಲಿ ಅನಿಶ್ಚಿತತೆ ತೋರುವದು. ಉದ್ಯೋಗ ಧಂದೆಯಲ್ಲಿ ಸ್ಥೈರ್ಯವಿರುವದಿಲ್ಲ. ವಾಸಸ್ಥಾನವನ್ನು ಮೇಲಿಂದ ಮೇಲೆ ಬದಲಿಸುವರು. ಈ ಸ್ಥಾನದಲ್ಲಿ ಬುಧನು ರಾಶಿಬಲಿ ಹಾಗು ಶುಭಸಂಬಂಧಿತನು ಇಲ್ಲದೆ ಒಳ್ಳೆಯ ಫಲವನ್ನು ಕೊಡಲಾರನು. ಬಲಿಷ್ಠ ಬುಧನು ಗೃಹಸುಖ ವಿದ್ಯಾಸುಖಗಳನ್ನು ಕೊಡುವನು. ಇಲ್ಲಿ ಬುಧನು ಬಲಶಾಲಿಯಾಗಿದ್ದರೆ ಸರಸ್ವತೀ ಯೋಗವೆಂದು ನಮ್ಮವರು ಹೇಳುವರು. (ಪರೀಕ್ಷ್ಯ ಗ್ರಾಹ್ಯಂ.)

ಪಂಚಮದಲ್ಲಿ ಬುಧನು:— ೫ ರಲ್ಲಿ ಬುಧನು ಗಾಯನ, ವಾದನ, ಕವಿತ್ವ, ವಿಲಾಸ ಕ್ರೀಡೆ ಮೊದಲಾದ ಸುಖಗಳನ್ನು ಕೊಡುವನು. ಪರರ ಅನುಕರಣ ನಕಲುಗಳನ್ನು ಸಹಜವಾಗಿ ಮಾಡುವರು. ಮಕ್ಕಳ ಮೇಲೆ ಪ್ರೇಮವಿರುವದು. ಪಂಚಮದಲ್ಲಿ ವಂಧ್ಯಾ ರಾಶಿಯು ಬುಧನಿದ್ದರೆ ಸಂತತಿ ಸುಖ ದೊರಕಲಾರದು. ಆದರೆ ಪಂಚಮದಲ್ಲಿ ಬಲವಾನ್ ಬುಧನು ಬೇಗ ಬೇಗ ಸಂತತಿಯನ್ನು ಕೊಡುವನು. ಕರ್ಕ, ಮೀನ, ವೃಶ್ಚಿಕದಲ್ಲಿ ಬುಧನು ಮಂಗಳ ಶನಿ ನೇಪಚ್ಯೂನರಿಂದ ಪೀಡಿತನಿದ್ದರೆ ಹುಚ್ಚ, ಭೋಳೆ. ವ್ಯಂಗ ಸಂತತಿಯನ್ನು ಕೊಡುವನು. ಜಲರಾಶಿಯು ಬುಧನು ಬೇಗ ಬೇಗ ಮಕ್ಕಳನ್ನು ಕೊಡುವನು. ದ್ವಿಸ್ವಭಾವ ರಾಶಿಯಲ್ಲಿ ಬುಧನಿದ್ದರೆ ಅವಳಿ-ಜವಳಿ ಹುಟ್ಟುವ ಸಂಭವವಿರುವದು.

ಷಷ್ಠದಲ್ಲಿ ಬುಧನು:— ೬ ರಲ್ಲಿ ಬಲವಾನ್ ಬುಧನಿದ್ದರೆ ವೈದ್ಯಕೀ ಡಾಕ್ಟರಕೀ, ಸ್ಯಾನಿಟರೀ ಖಾತೆಯಲ್ಲಿ ಇಲ್ಲವೆ ತತ್ಸಮ ಧಂದೆಗಳಲ್ಲಿ ನೌಕರಿ ದೊರಕುವದು. ಧನು, ಮೀನ ರಾಶಿಯಲ್ಲಿ ಬುಧನಿದ್ದರೆ ಕ್ಷಯ, ಪುಪ್ಪುಸ ವಿಕಾರಗಳುಂಟಾಗುವವು. ಪಾಪಗ್ರಹಗಳಿಂದ ಪೀಡಿತನಿದ್ದ ಬುಧನು ಆರೋಗ್ಯಕ್ಕೆ ಚೆನ್ನಾಗಿರುವದಿಲ್ಲ. ದ್ವಿಸ್ವಭಾವ ರಾಶಿಯಲ್ಲಿ ಪೀಡಿತ ಬುಧನು ಕ್ಷಯ ವಿಕಾರ ಸೂಚಕನು. ಇಂಥವರು ಅತಿಶ್ರಮ, ಕಾಳಜಿ, ವಾಚನ ಲೇಖನ ವಗೈರೆ ಮಾಡಬಾರದು. ಮಜ್ಜಾತಂತುಗಳ ವಿಕಾರವಾಗುವ ಸಂಭವವಿರುವದು. ೬ ರಲ್ಲಿ ಬುಧನು ಮಂಗಳನಿಂದ ಪೀಡಿತನಿದ್ದರೆ ಸ್ವಭಾವವು ಲಹರೀ ಕ್ರೋಧಿ ಇರುವದು.

ಸಪ್ತಮದಲ್ಲಿ ಬುಧನು:— ಸಪ್ತಮದಲ್ಲಿ ಬುಧನು ಪೀಡಿತನಿದ್ದರೆ ಕ್ಷುಲ್ಲಕ ಕಾರಣಗಳಿಗಾಗಿ ತಂಟೆಗಳು ಉದ್ಭವಿಸುವವು. ಉದ್ಯೋಗದಲ್ಲಿ ಅನೇಕ ಪ್ರತಿಸ್ಪರ್ಧಿಗಳುಂಟಾಗಿ ತ್ರಾಸವಾಗುವದು. ಪ್ರಕಟ ಶತ್ರುತ್ವವು ಲೇಖನ ಭಾಷಣಗಳಿಂದ ಉಂಟಾಗುವದು. ವಯಸ್ಸಿಗಿಂತ ಚಿಕ್ಕ ಹೆಂಡತಿ ಸಿಗುವಳು. ಪೀಡಿತನಿದ್ದರೆ ತ್ರಾಸ ಬಲಿಷ್ಠನಿದ್ದರೆ ಚತುರ ಪತ್ನೀ ಯೋಗ. ಕಲಿತ, ಕಲ್ಪಕ, ವಿನೋದಿ, ಹುಷಾರ ಪತ್ನಿ ಸಿಗುವಳು. ೭ ರಲ್ಲಿ ಶನಿ ಬುಧರು ಇದ್ದಲ್ಲಿ ವಿವಾಹ ಸೌಖ್ಯಕ್ಕೆ ಮಾರಕವಾಗುವದು.

ಅಷ್ಟಮದಲ್ಲಿ ಬುಧನು:— ೮ ರಲ್ಲಿ ಬುಧನು ಪೀಡಿತನಿದ್ದರೆ ಮಜ್ಜಾತಂತು ವಿಕಾರ, ಮಾನಸಿಕ ದೌರ್ಬಲ್ಯಗಳು ತೋರುವವು. ಇಲ್ಲಿ ಬುಧನು ಹರ್ಶಲ್, ಮಂಗಳ, ಶನಿಯಿಂದ ಪೀಡಿತನಿರಬಾರದು. ಅಶುಭ ಸಂಬಂಧಿತ ಬುಧನು ದಾರಿದ್ರ್ಯಕ್ಕೆ ಕಾರಣನಾಗುವನು. ಸಾಂಪತ್ತಿಕ ಸ್ಥಿತಿ ಒಂದೇ ಸವನೆ ಉಳಿಯುವದಿಲ್ಲ. ಮೃತ್ಯುಪತ್ರ ದ್ವಾರಾ ವಾರಸಾಸಾತೆಯಿಂದ ಧನ ಪ್ರಾಪ್ತಿಯಾಗುವದಿಲ್ಲ. ಇಲ್ಲಿ ನೀಚ ಬುಧನು ವಿದ್ವತ್ತೆಯನ್ನು ಕೊಡುವನೆಂದು ಒಂದು ತಮಿಳು ಗ್ರಂಥ ಹೇಳುವದು.

ನವಮದಲ್ಲಿ ಬುಧನು:— ನವಮದಲ್ಲಿ ಬುಧನು ಉತ್ತಮ ಬುದ್ಧಿ ಶಕ್ತಿಯನ್ನು ಕೊಡುವನು. ಚಿಕಿತ್ಸಕ ಬುದ್ಧಿ ಇರುವದು. ವಿದ್ಯಾವ್ಯಾಸಂಗಿ ಜಿಜ್ಞಾಸುಗಳು ಇರುವರು. ಲೇಖನ ವಾಙ್ಮಯಗಳ ಅಭಿರುಚಿ ಇರುವದು. ಸರ್ವಪ್ರಕಾರದ ಚಮತ್ಕಾರಿಕ ವಸ್ತುಗಳನ್ನು ಸಂಗ್ರಹಿಸುವ ಬುದ್ಧಿ ಇರುವದು. ಪರದೇಶ ನೋಡುವ ಅಭಿರುಚಿ ಇರುವದು. ಪ್ರವಾಸ ವರ್ಣನವನ್ನು ಇವರು ಚೆನ್ನಾಗಿ ಮಾಡುವರು. ಸತತ ವಿದ್ಯಾವ್ಯಾಸಂಗಿಗಳಿರುವರು. ಕಲಾಶಾಸ್ತ್ರ, ಭಾಷೆಗಳಲ್ಲಿ ಅಭಿರುಚಿ ಇರುವದು. ಒಂದು ಪುಸ್ತಕದ ಮೇಲೆ ಭಾಷ್ಯ ಬರೆಯುವರು. ನೋಟ್ಸ ಬರೆಯಲು, ಗ್ರಂಥ ಪ್ರಕಾಶನ ಮಾಡಲು ಇಲ್ಲಿ ಶುಭ ಸಂಬಂಧಿತ ಬುಧನಿರಬೇಕಾಗುವದು. ಇಲ್ಲಿ ಬುಧನು ಪುರಾಣ, ಧಾರ್ಮಿಕ ವಿಚಾರಗಳನ್ನು ಹುಟ್ಟಿಸುವನು. ಪೀಡಿತ ಬುಧನು ಮಾನಸಿಕ ದೌರ್ಬಲ್ಯವನ್ನು ಸೂಚಿಸುವನು. ಕಾಗದ-ಪತ್ರಗಳಿಂದ ಕಾಯ್ದೆ ಪ್ರಶ್ನೆ ಹುಟ್ಟಿ ತ್ರಾಸವಾಗುವದು. ಶುಭದೃಷ್ಟ ಬುಧನು ಜೋತಿಷ ಮೊದಲಾದ ಗೂಢ ಶಾಸ್ತ್ರಗಳನ್ನು ಅವಗತ ಮಾಡುವನು.

ದಶಮದಲ್ಲಿ ಬುಧನು:— ದಶಮಸ್ಥ ಬುಧನು ಬಲಿಷ್ಠನಿರುವನು. ಸ್ಥಾನಬಲಕ್ಕೆ ರಾಶಿಬಲವೂ ಯೋಗ ಬಲವೂ ಕೂಡಿದರೆ ಬಹಳ ಒಳ್ಳೆಯದು. ಬುದ್ಧಿ ತೀವ್ರ ಇರುವದು. ಭಾಷಣ ಶೈಲಿ ಚೆನ್ನಾಗಿರುವದು. ವಾಯು ರಾಶಿಯಲ್ಲಿಯ ಬುಧನು ಉತ್ತಮ ವಕ್ತೃತ್ವ ಶಕ್ತಿಯನ್ನು ಕೊಡುವನು. ದೀರ್ಘಕಾಲ ಒಂದೇ ಉದ್ಯಮದಲ್ಲಿ ಇರಲಾರರು. ಕೀರ್ತಿ, ಉದ್ಯೋಗಗಳು ದಶಮಭಾವಕ್ಕೆ ಸಂಬಂಧಪಟ್ಟಿವೆ. ಈ ಗ್ರಹವು ಮಾನಸಿಕ ಶಕ್ತಿಗೆ

ಸಂಬಂಧಪಟ್ಟಿದ್ದರಿಂದ ಬೇರೆ ಬೇರೆ ರಾಶಿಯಲ್ಲಿ ಆಯಾ ರಾಶಿಯಂತೆ ತೀವ್ರ ಫಲವನ್ನು ಕೊಡುವನು. ದಶಮದಲ್ಲಿ ಬುಧನು ಪೀಡಿತನಿರಬಾರದು. ಬಲವಾನ್ ಬುಧನು ವಕ್ತೃತ್ವ ಗ್ರಂಥ ಲೇಖನ ವಾಙ್ಮಯ ದ್ವಾರಾ ಕೀರ್ತಿ ಗೌರವಗಳನ್ನು ಕೊಡುವನು. ಭಾಗ್ಯೋದಯವನ್ನು ಮಾಡುವನು. ದಶಮದ ಬುಧನು ಕಮೀಶನ್ ಏಜನ್ಸಿ ಧಂದೆ, ಟೆಲಿಗ್ರಾಫ್, ಟೆಲಿಫೋನ, ಬುಕ್‌ಡಿಪೋ, ಸ್ಟೇಶನರಿ ವ್ಯಾಪಾರಗಳಲ್ಲಿ ಯಶಸ್ಸನ್ನು ಕೊಡುವನು. ಹೆಡ್‌ಕ್ಲಾರ್ಕ, ಸೆಕ್ರೆಟರಿ, ಸುಪರಿಂಟೆಂಡೆಂಟ, ಅಧಿಕಾರ ಕೊಡುವನು. ಶಾರ್ಟ-ಹ್ಯಾಂಡ, ಟಾಯಿಪಿಂಗ ಕೆಲಸಗಳೂ ಯಶಸ್ವಿಯಾಗುವವು. ವರ್ತಮಾನ ಪತ್ರದ ಸಂಬಂಧದ ಕೆಲಸಗಳಲ್ಲಿ, ಛಾಪಖಾನೆಯ ವ್ಯವಹಾರದಲ್ಲಿ, ಹಸ್ತ ಕೌಶಲ್ಯಗಳಲ್ಲಿ ಲಾಭದರ್ಶಕನಾಗಿರುವನು. ಇಲ್ಲಿಯ ಬುಧನು ಪಾಪಗ್ರಹ ಗಳೊಡನೆ ಅಶುಭ ಸಂಬಂಧದಲ್ಲಿದ್ದರೆ, ಪೀಡಿತನಿದ್ದರೆ, ದುರ್ಬಲನಿದ್ದರೆ ಲುಚ್ಚೇಗಿರಿ, ಅಪ್ರಾಮಾಣಿಕತನ, ದುಃಶೀಲಗಳ ದ್ಯೋತಕನಾಗುವನು. ಉನ್ನತ ದರೋಡೆಖೋರನಿಂದ ಖೊಟ್ಟಿ ಕಾಗದ-ಪತ್ರಗಳನ್ನು ನಿರ್ಮಿಸುವ ಕೆಲಸಕ್ಕೆ ಕೈಹಾಕಬಹುದು. ಲಬಾಡಖೋರ, ದಂದಶೂಕ ವೃತ್ತಿ (ಚಾಡಿ ಖೋರ) ಗಳು ಕಾಣುವವು. ಯಾವ ರಾಶಿಯಲ್ಲಿರುವನೋ ಆ ರಾಶಿಯಂತೆ ಫಲ ಕೊಡುವನು. ಗ್ರಹಸ್ಥಿತಿಯಂತೆ ತೀವ್ರತೆ, ಸೌಮ್ಯತೆಗಳು ಗೋಚರಿಸುವವು.

ದಶಮದಲ್ಲಿ ಬುಧನು ಮಂಗಳನಿಂದ ಪೀಡಿತನಿದ್ದರೆ, ಸುಳ್ಳು ಹೇಳುವದು. ಥಾಪಾಕುಟ್ಟುವದು, ವಾಚಾಳತೆ ಮೊದಲಾದ ಗುಣಗಳು ಕಾಣುವವು. ದಶಮದಲ್ಲಿ ಶನಿಯಿಂದ ಪೀಡಿತನಾದ ಬುಧನಿರುವವರ ಬುದ್ಧಿಯು ಅವಕಾಶದಿಂದ ವಿಕಸಿತವಾಗುವದು. ಇವರು ಮುಖದುರ್ಬಲರೂ ಏಕಾಂತವಾಸ ಪ್ರಿಯರೂ ಇರುವರು. ಶಿಕ್ಷಣದಲ್ಲಿ ವ್ಯತ್ಯಯ ಉಂಟಾಗುವದು. ವೃತ್ತಿಯು ಅತಿರಿಕ್ತ ಚಿಕಿತ್ಸಕ ಸಂಶಯಿತವಾಗಿರುವದು. ದಶಮ ಬುಧನು ಮಂಗಳನಿಂದ ಪೀಡಿತನಿದ್ದರೆ ನೀಚ ಕೃತ್ಯಗಳು ಜರಗುವವು. ಖೊಟ್ಟಿ ಕಾಗದ-ಪತ್ರಗಳು ಹುಟ್ಟುವವು. ದುಡ್ಡಿನ ಅಪವ್ಯಯವಾಗುವದು. ಭಾನಗಡಿಯ ಸಂಭವ. ಅದರಿಂದ ಸಂಕಟ ಪರಂಪರೆಗಳನ್ನು ಸೂಚಿಸುವದು.

ಏಕಾದಶದಲ್ಲಿ ಬುಧನು:— ಏಕಾದಶದಲ್ಲಿಯ ಬುಧನು ವಿದ್ಯಾ, ಶಿಕ್ಷಣ, ಮಾನಸಿಕ ಉನ್ನತಿಗೆ ಪೋಷಕನು. ಶಾಸ್ತ್ರೀಯ ವಿಷಯ, ವಾಙ್ಮಯಗಳ ಅಭಿರುಚಿ ಇರುವದು. ಬುದ್ಧಿ ಚೆನ್ನಾಗಿರುವದು. ಬುದ್ಧಿಯು ಒಂದೇ ವಿಷಯದಲ್ಲಿ ಚೆನ್ನಾಗಿ ಸ್ಥಿರತೆಯಿಂದ ನಿಲ್ಲುವದು. ಧ್ಯಾನ, ಧಾರಣ ಶಕ್ತಿ ಚೆನ್ನಾಗಿರುವದು. ಫಲಜ್ಯೋತಿಷ, ಸಾಮುದ್ರಿಕ ಶಾಸ್ತ್ರಗಳ ಅಭಿರುಚಿ ಇರುವದು. ಮಿತ್ರಪ್ರೇಮವಿರುವದು. ಸ್ಥಿರವೃತ್ತಿಯ ಕಾಯಂ ಮಿತ್ರರು ವಿರಲರು. ಈ ಸ್ಥಾನದಲ್ಲಿಯ ಬುಧನು ಪ್ರಾಪ್ತಿಯ ಮಾನವನ್ನು ಒಂದೇ ಸವನೆ ಇರುವದನ್ನು ಸೂಚಿಸಲಾರನು. ಶಾಸ್ತ್ರಜ್ಞರೊಡನೆ, ವಾಙ್ಮಯ ಸೇವಕರೊಡನೆ ಸಂಬಂಧ ಬರುವದು. ಪೀಡಿತ ಬುಧನು ಲಫಂಗ ಮಿತ್ರರನ್ನು ಸೂಚಿಸುವನು. ಅದರಿಂದ ಅತ್ಯಂತ ಮಾನಸಿಕ ತ್ರಾಸವಾಗುವದು. ಟೊಪ್ಪಿಗೆ ಹಾಕುವ ಗೆಳೆಯರು ಗಂಟು ಬೀಳುವರು. ಇಂಥವರು ಪತ್ರವ್ಯವಹಾರದಲ್ಲಿ ದಕ್ಷತೆಯನ್ನು ಕಾಯ್ದುಕೊಳ್ಳಬೇಕು. ಇಲ್ಲಿ ಬುಧ ಗುರು ಅಶುಭ ಯೋಗವಾದಲ್ಲಿ ಎರಡನೆಯವರಿಗೆ ಜಾಮೀನು ನಿಲ್ಲಬಾರದು.

ದ್ವಾದಶದಲ್ಲಿ ಬುಧನು:— ೧೨ರಲ್ಲಿ ದುರ್ಬಲ ಬುಧನಿದ್ದರೆ ವರ್ತಮಾನಪತ್ರ, ಕಾಗದಪತ್ರಗಳಿಂದ ಸಂಕಟವನ್ನು, ಶತ್ರುತ್ವವನ್ನೂ ಉತ್ಪನ್ನ ಮಾಡಿಕೊಳ್ಳುವರು. ನಾನಾತರದ ಅಶುಭ ವಾರ್ತೆಗಳು ಪ್ರಸಿದ್ಧವಾಗಿ ದುರ್ಲೌಕಿಕವುಂಟಾಗುವದು. ಈ ಸ್ಥಾನದಲ್ಲಿ ವೃಷಭ, ಮಕರ, ಕರ್ಕ, ವೃಶ್ಚಿಕ ರಾಶಿಯ ಬುಧನು ಪೀಡಿತನಿದ್ದರೆ (ಶನಿ, ಮಂಗಳ, ಹರ್ಶಲರಿಂದ) ಪೀಡೆ ಬಲವತ್ತರವಿರುವದು. ಗುಪ್ತ ಶತ್ರುತ್ವ ಮಾನಸಿಕ ತ್ರಾಸ ಉಂಟಾವದು. ತುರಂಗವಾಸ, ಅನಿಷ್ಟ ಘಟನೆಗಳ ಸಂಭವವಿರುವದು. ಇಲ್ಲಿ ಮಿಥುನ ಕನ್ಯಾ, ತುಲಾ ಕುಂಭ ರಾಶಿಗಳ ಶುಭ ಸಂಬಧಿತ ಬುಧನಿದ್ದರೆ ಗೂಢ ಶಾಸ್ತ್ರಗಳ ಅಭಿರುಚಿಯಿರುವದು. ಪ್ರವಾಸದಿಂದ ಲಾಭಗಳುಂಟಾಗುವವು. ಪೀಡಿತ ಬುಧನಿದ್ದವರು ವಿಶೇಷ ಜಾಗರೂಕರಾಗಿರಬೇಕು. ಮಾನಸಿಕ ದೌರ್ಬಲ್ಯ, ಮಜ್ಜಾ ತಂತು ವಿಕಾರ, ಪುಪ್ಫುಸ ವಿಕಾರ, ಕಫಕ್ಷಯಗಳ ಭಯವಿರುವದು. ಪೀಡಿತ ಬುಧನಿದ್ದವರು ಭಾಷಣದ ಬಗೆಗೆ ಕಾಳಜಿ ತಕ್ಕೊಳ್ಳಬೇಕು. ತಪ್ಪು ತಿಳುವಳಿಕೆ, ಶತ್ರುತ್ವಗಳು ದೂರವಾಗುವವು.

ಚಿತ್ತ ಕ್ಷೋಭ ಮಾಡುವ ಸಂಗತಿಗಳಿಂದ ದೂರ ಉಳಿಯಬೇಕು. ಮನಸ್ಸನ್ನು ಶಾಂತವಾಗಿ ಪ್ರಸನ್ನವಾಗಿ ಇಟ್ಟುಕೊಳ್ಳಬೇಕು. ದೀರ್ಘ ವಿಚಾರ ಅಭ್ಯಾಸ ಮಾಡಬಾರದು. 'ದೀರ್ಘ ಸೂತ್ರೀ ವಿನಶ್ಯತಿ.'

ಬುಧ ಶುಕ್ರರ ದೃಷ್ಟಿಯೋಗ:— ಈಗಿರುವ ಭೂಮಧ್ಯಸ್ಥ ಪದ್ಧತಿಯಂತೆ ೭೬ ಅಂಶಕ್ಕಿಂತ ಹೆಚ್ಚು ಅಂತರವಾಗುವದಿಲ್ಲ. ಆದರಿಂದ ಯುತಿ, ಸಮಕ್ರಾಂತಿಯೋಗ ೩೦, ೩೬, ೪೫, ೬೦, ೭೨ ಅಂಶಗಳ ಅಂತರದ ದೃಷ್ಟಿ ಯೋಗವು ಮಾತ್ರ ಸಂಭವಿಸುವದು. ಈ ಎರಡು ಗ್ರಹಗಳಲ್ಲಿ ಯುತಿ, ಸಮಕ್ರಾಂತಿ, ದ್ವಿರಾಶ್ಯಾಂತರ ದೃಷ್ಟಿಯೋಗ ಉಂಟಾದಾಗ ಮನಸ್ಸು ಆನಂದಿ, ಉಲ್ಲಸಿತವಾಗಿರುವದು. ಗಾಯನ–ವಾದನ ಕವಿತ್ವ ಲಲಿತ ವಾಙ್ಮಯ ಕಾವ್ಯ ಶಾಸ್ತ್ರಗಳ ಅಭಿರುಚಿಯನ್ನು ಹುಟ್ಟಿಸುವದು. ಬುಧ ಶುಕ್ರರ ಯುತಿ ಲಗ್ನದಲ್ಲಾದರೆ ಕಾವ್ಯ ಶಕ್ತಿ ಚೆನ್ನಾಗಿರುವದು. ೩, ೯, ೧೦ ರಲ್ಲಿ ಆದರೆ ಮನಸ್ಸು ಸುಸಂಸ್ಕೃತವಾಗಿರುವದು. ಕಾವ್ಯ, ವಾಙ್ಮಯ ಸಾಹಿತ್ಯ ಶಾಸ್ತ್ರದ ಕಡೆಗೆ ಮನಸ್ಸಿನ ಪ್ರವೃತ್ತಿ ಇರುವದು. ಚಿಕ್ಕವರನ್ನು ಇವರು ಅತಿಶಯವಾಗಿ ಪ್ರೀತಿಸುವರು. ಅನೇಕ ಸಾರೆ ಇವರು ತಮಗಿಂತ ಚಿಕ್ಕ ವಯಸ್ಸಿನ ಸ್ತ್ರೀಯರೊಂದಿಗೆ ವಿವಾಹ ಬದ್ಧರಾಗುವರು. ಬುಧ ಶುಕ್ರರಲ್ಲಿ ದೃಷ್ಟಿಯೋಗ ಇರದಿರುವದಕ್ಕಿಂತ ಇರುವುದು ನೆಟ್ಟಗೆ.

ಬುಧ ಮಂಗಳ ಯುತಿ–ಅಶುಭಯೋಗ:— ಈ ಯೋಗವುಂಟಾದರೆ ಬುದ್ಧಿಯು ತೀವ್ರವಾಗಿರುವದು. ಮಾರ್ಮಿಕ ಚುಚ್ಚು ಮಾತುಗಳನ್ನಾಡುವ ಸ್ವಭಾವವಿರುವದು. ವಾದ–ವಿವಾದದಲ್ಲಿ ಅಭಿರುಚಿಯಿರುವದು. ಸ್ವಭಾವವು ತ್ರಾಸಿಕ, ತಂಟೆ ಮಾಡುವದು ಆಗಿರುವದು. ಅಸತ್ಯ ಪ್ರಲಾಪ. ಸುಳ್ಳು ಸುದ್ದಿಗಳನ್ನು ಪಸರಿಸುವರು. ಖೊಟ್ಟಿ ಕಾಗದ ಪತ್ರ ತಯಾರಿಸುವದು, ಕೆಟ್ಟಚಾಳಿ, ಸಾಲಗಾರ, ಮನೋವೃತ್ತಿಯಿರುವದು. ಯಾವ ಮಾರ್ಗದಿಂದಲಾದರೂ ಮುಂದೆ ಬರುವ ಹಂಬಲವಿರುವದು. ಕಲಾ ಕಸೂತಿ ಕಾರ್ಯದಲ್ಲಿ ತಜ್ಞರಾಗುವರು.

ಬುಧ ಮಂಗಳ ಶುಭಯೋಗವಿದ್ದರೆ ಬುದ್ಧಿ ಮತ್ತೆ ಚೆನ್ನಾಗಿರುವದು. ಗಣಿತದ ನಾದವಿರುವದು. ತಪ್ಪದೆ ಕೆಲಸ ಮಾಡುವ ಪ್ರವೃತ್ತಿ ಇರುವದು.

ಸಿಟ್ಟುಬೇಗಬರುವದು. ರಸಾಯನ ಶಾಸ್ತ್ರ, ಇಂಜನೀಯರಿಂಗ, ಶಿಲ್ಪಕಲಾ ಯಂತ್ರ ಶಾಸ್ತ್ರ, ಹಸ್ತಕೌಶಲ್ಯ, ಬುದ್ಧಿ ಮತ್ತೆ ಅವಶ್ಯವಿರುವ ಉದ್ಯೋಗದಲ್ಲಿ ಮುಂದಾಗುವರು. ಆಲಸ್ಯದಿಂದ ಕುಳಿತುಕೊಳ್ಳುವದು ಇವರಿಗೆ ಸೇರುವದಿಲ್ಲ. ಸದೋದಿತ ಯಾವುದಾದರೊಂದು ಉದ್ಯೋಗದಲ್ಲಿ ತೊಡಗಿರುವರು. ಬುಧ ಮಂಗಳರ ಯಾವ ಯೋಗದಿಂದಲೂ ಬುದ್ಧಿಗೆ ತೀವ್ರತೆಯುಂಟಾಗುವದು. ಶುಭಯೋಗದಲ್ಲಿ ವಿಚಾರದ ದಿಕ್ಕು ಚೆನ್ನಾಗಿರುವದು. ಉನ್ನತಿಗೆ ಸಹಾಯಕವಾಗುವದು. ಕೈಯಿಂದ ಸಾಹಸದ ಕಾರ್ಯಗಳುಂಟಾಗುವವು. ನಿಂದ್ಯ ವರ್ತನವು ಉಂಟಾಗಲಾರದು. ಅಶುಭಯೋಗದಲ್ಲಿ ವಿರುದ್ಧ ಕ್ರಿಯೆಗಳುಂಟಾಗುವವು. ಪ್ರಾರಬ್ಧ ಕರ್ಮದಿಂದುಂಟಾದ ಈ ಯೋಗವನ್ನು ಜಾಣರಾಗಿ ಯೋಗ್ಯ ಮಾರ್ಗಕ್ಕೆ ತಿರುಗಿಸಬಹುದು.

ಬುಧ ಗುರು ಯುತಿ:— ಶುಭದೃಷ್ಟಿ ಯೋಗವು. ಒಳ್ಳೇ ಆಚಾರ–ವಿಚಾರಗಳು. ಬುದ್ಧಿಯು ಶ್ರೇಷ್ಠ ತರಗತಿಯದಾಗಿರುವದು. ಬುಧನಿಂದ ದರ್ಶಿತವಾಗುವ ವಾಙ್ಮಯ ಲೇಖ, ಗ್ರಂಥ ಕರ್ತೃತ್ವಗಳಿಂದ ಸಾಂಪತ್ತಿಕ ಲಾಭವಾಗುವದು. ಈ ವ್ಯಕ್ತಿಯು ಉದಾರ ಮತವಾದಿಯಾಗಿದ್ದು ಸ್ಥಿರ ಬುದ್ಧಿ, ಶಾಂತ, ಗಂಭೀರ, ಮನವೊಲಿಸುವ ಸುಸ್ವಭಾವವಿರುವದು. ಸಹಸಾ ಯಾವ ಸಂಕಟಕ್ಕೂ ಬೆದರುವದಿಲ್ಲ. ಬುಧ ಗುರು ಯುತಿ–ಶುಭಯೋಗವು ಜನ್ಮಕಾಲದಲ್ಲಾಗುವದು. ಮಾನಸಿಕ ಪ್ರಗಲ್ಭತೆಗೂ ವ್ಯಾಪಾರ, ಉದ್ಯೋಗಗಳಿಗೂ ಉತ್ತಮವಾದದ್ದು.

ಬುಧ ಗುರುಗಳ ಅಶುಭಯೋಗ:— ಈ ಅಶುಭಯೋಗವಿರುವವರು ಅವಿಚಾರಿಯಾಗಿರುವರು. ಅಂಥವರಿಗೆ ಪ್ರತ್ಯೇಕ ಸಂಗತಿಗಳಲ್ಲಿ ಸರಲತೆ ತೋರುವದಿಲ್ಲ. ಮನವು ಅಸ್ಥಿರವಾಗಿರುವದು. ವ್ಯರ್ಥವಾಗಿ ವಿತ್ತಂಡವಾದವನ್ನು ಹೂಡುವರು. ಧಾರ್ಮಿಕ ಆಚಾರ ಬಂಧನಗಳನ್ನು ಪಾಲಿಸುವ ಪ್ರವೃತ್ತಿ ಕಂಡು ಬರುವದಿಲ್ಲ. ಇವರು ತಮ್ಮ ಆಚಾರ ವಿಚಾರಗಳ ಬಗೆಗೆ ದಕ್ಷರಾಗಿರಬೇಕು. ಯಾಕಂದರೆ ಇವರು ಅನೇಕ ಸಾರೆ ಕಾಯ್ದೆಯ ಜಾಲದಲ್ಲಿ ಸಿಗುವ ಸಂಭವವಿರುವದು.

ಬುಧ ಶನಿ ಸಮಕ್ರಾಂತಿ ಯುತಿ ಯೋಗ:— ಈ ಯೋಗವು

N.V.Rudi

ಒಳ್ಳೇ ರಾಶಿಯಲ್ಲಿ ಉಂಟಾದರೆ, ಬುಧನ ಪ್ರಾಬಲ್ಯವಿರುವ (ಮಿಥುನ, ಕನ್ಯಾ, ತುಲಾ, ಕುಂಭ) ರಾಶಿಯಲ್ಲಿ ಉಂಟಾದರೆ ಈ ಯೋಗದ ಫಲವು ಅಶುಭವಾಗಲಾರದು. ಈ ಯೋಗದಲ್ಲಿ ಹುಟ್ಟುವವರು ಆಳವಾಗಿ ವಿಚಾರ ಮಾಡುವವರೂ ಕಾಯ್ದೆಯ ಅಭಿರುಚಿಯುಳ್ಳವರೂ ವಿದ್ಯಾವ್ಯಾಸಂಗಿಗಳೂ ಇರುವರು. ಈ ಯೋಗವು ಲಗ್ನ ತೃತೀಯ, ನವಮ ಏಕಾದಶದಲ್ಲಿ ಆದರೆ ಅತ್ಯುತ್ತಮವು. ಆದರೆ ಬುಧ ಶನಿಯಲ್ಲಿ ಅಶುಭಯೋಗವುಂಟಾಗುತ್ತಿದ್ದರೆ, ಬುಧ ಶನಿ ಯುತಿ ಯೋಗಕ್ಕೆ ಪಾಪಗ್ರಹದ ಸಂಬಂಧ ಬಂದರೆ ಸ್ವಭಾವವು ಖುನಸಿ, ಸಂಶಯೀ ದುಷ್ಟವಾಗಿರುವದು. ವಾಣಿಯಲ್ಲಿ ಯಾವುದಾದರೊಂದು ದೋಷವು ಕಂಡು ಬರುವದು. ಸುಳ್ಳು ಅಪ್ರಾಮಾಣಿಕತನಗಳು ಕಂಡು ಬರುವವು. ಅವಿಶ್ವಾಸಿಗಳೂ ದಾಂಭಿಕರೂ ವ್ಯಸನಿಗಳೂ ಆಗುವರು. ಮಿತ್ರತ್ವಕ್ಕೆ ಅಯೋಗ್ಯರು. ಕಾಪಟ್ಯ ಕಂಡು ಬರುವದು.

ಬುಧ ಶನಿ ಶುಭಯೋಗ:— ಈ ಯೋಗವಿರುವವರು ವಿಚಾರೀ, ನ್ಯಾಯೀ, ಸ್ಥಿರಬುದ್ಧಿಯವರಿರುವರು. ಆಚಾರದಲ್ಲಿ ಶ್ರೇಷ್ಠರು, ಸಭ್ಯರು, ಕಾಳಜಿಯಿಂದ ಕಾರ್ಯ ಮಾಡುವವರು. ವಿದ್ಯಾವ್ಯಾಸಂಗಿಗಳು. ಶಾಸ್ತ್ರೀಯ ವಿಷಯದ ಅಭಿರುಚಿಯುಳ್ಳವರು. ಸ್ಥಿರ ವೃತ್ತಿಯವರು ಕಂಡು ಬರುವರು.

ಈ ಶುಭಯೋಗವು ವಾಯು ರಾಶಿಯಲ್ಲಿ ಆಗುವದು ಶ್ರೇಷ್ಠವು. ಹಾಗೆ ಲಗ್ನ, ತೃತೀಯ, ನವಮ, ಏಕಾದಶದಲ್ಲಿ ಆಗುವದು ಅತ್ಯುತ್ತಮ. "**ಅಧಿಕಸ್ಯಾಧಿಕಂ ಫಲಂ**" ಎಲ್ಲ ಪ್ರಕಾರದ ವಿದ್ಯೆಗಳನ್ನು ಕಲಿಯಲಿಕ್ಕೆ ಶ್ರೇಷ್ಠ ಪ್ರತಿಯ ಬುದ್ಧಿ ಇರುವದು. ಇಂಥವರು ಸಲ್ಲಾಗಾರರಾಗಲಿಕ್ಕೆ ಯೋಗ್ಯರಿರುವರು. — ಯಾವುದಾದರೊಂದು ಕಾರ್ಯವನ್ನು ಆಶಕ್ತಿಯಿಂದ ಮಾಡುವರು. ನ್ಯಾಯ, ವ್ಯಾಕರಣ, ವೇದಾಂತ ಮೊದಲಾದ ಶಾಸ್ತ್ರಗಳಾಕಲನಕ್ಕೆ ಯೋಗ್ಯವಾದ ಬುದ್ಧಿಯನ್ನು ಇವರು ಪಡೆದು ಬಂದಿರುವರು.

ಬುಧ ಹರ್ಶಲ್ ಯುತಿ - ಸಮಕ್ರಾಂತಿ ಯೋಗ:— ಈ ಯೋಗವು ಲಗ್ನದಲ್ಲಿ ಉಂಟಾದರೆ ಮನುಷ್ಯನು ವಿದ್ವಾಂಸನೂ ಕುಶಾಗ್ರ ಬುದ್ಧಿಯವನೂ, ಪಂಡಿತನೂ ಆಗುವನು. ವಾಙ್ಮಯದ ಅಭಿರುಚಿಯಿರು

ವದು. ಬುದ್ಧಿಯು ಶೀಘ್ರ ಸಂಸ್ಕಾರಕ್ಕೆ ಯೋಗ್ಯವಾಗಿರುವದು. ಈ ಯೋಗವು ೩-೯ ರಲ್ಲಿ ಉಂಟಾದರೆ ಜ್ಯೋತಿಷ, ಸಾಮುದ್ರಿಕ ಮೊದಲಾದ ಗೂಢ ವಿದ್ಯೆಗಳು ಬರುವವು. ಈ ಯೋಗವಿರುವವರು ಕಾಲ್ಪನಿಕರು ಬುದ್ಧಿಮತ್ತೆಯಿಂದ ಶ್ರೇಷ್ಠರಾಗಿರುವವರು ಆಗಿರುವರು. ಲಹರೀ ಸ್ವಭಾವವು ಕಂಡು ಬರುವದು. ನವೀನ ವಿಚಾರಗಳು ಕಂಡು ಬರುವವು. ಈ ಯೋಗವು ಕರ್ಕ, ಮೀನ, ವೃಶ್ಚಿಕ ರಾಶಿಗಳಲ್ಲಿ ಅಷ್ಟು ಒಳ್ಳೆಯದಲ್ಲ. ಆದರಲ್ಲಿಯೂ ಕರ್ಕ, ಮೀನಗಳಲ್ಲಿ ಬುಧನಿಗೆ ಅಷ್ಟು ಬಲವಿರುವದಿಲ್ಲ. ವಾಚಾಳಿ ಸ್ವಾರ್ಥ ಲಂಪಟತೆಗಳು ತೋರಿ ಬರುವವು.

ಬುಧ ಹರ್ಶಲ್ ಅಶುಭಯೋಗ:— ಸ್ವಭಾವವು ತಿರಸಟ್ಟಿ ಇರುವದು. ಲಹರೀ ನಿಂದಕ ಸ್ವಭಾವವು. ಈ ಯೋಗವಿರುವವರು ಎರಡನೆಯವರ ದೋಷೋದ್ಘಾಟನದಲ್ಲಿ ಕುಶಲರಿರುವರು. ಬುಧ ಹರ್ಶಲರಲ್ಲಿ ಯಾವ ಯೋಗವಾದರೂ ಬುದ್ಧಿಗೆ ತೀವ್ರತೆ ಬರುವದು. ಕಲ್ಪನಾಶಕ್ತಿ ಚೆನ್ನಾಗಿರುವದು. ಶುಭಯೋಗದಲ್ಲಿ ಬುದ್ಧಿ ಪ್ರವಾಹವು ಒಳ್ಳೇ ಕಾಯ ಗಳ ಕಡೆಗೆ ಹರಿಯುವದು. ಅಶುಭಯೋಗದಲ್ಲಿ ಕುಮಾರ್ಗ ಪ್ರವೃತ್ತಿ ಕಂಡು ಬರುವದು. ಬುಧ ಹರ್ಶಲ್ ಅಶುಭಯೋಗದಲ್ಲಿ ಲೇಖನದ ಅಭಿರುಚಿ ಇರುವದು. ವಿಚಾರಶಕ್ತಿ ತೀವ್ರ ಇರುವದು. ಆದರೆ ವರ್ತಮಾನ ಪತ್ರ, ಲೇಖನ ವ್ಯವಸಾಯ, ಸಾರ್ವಜನಿಕ ಕಾರ್ಯಗಳಲ್ಲಿ ಯಶಸ್ಸು ಸಿಗ ಲಾರದು. ಪುಸ್ತಕ ಲೇಖನಗಳಿಂದ ಹಾನಿ, ಟೀಕೆಗಳಾಗುವವು.

ಶುಭಯೋಗವು:— ಮಿಥುನ, ಕನ್ಯಾ, ತುಲಾ, ಕುಂಭ ರಾಶಿಗಳಲ್ಲಿ ೧. ೩, ೯ ರಲ್ಲಿ ಶುಭಯೋಗವುಂಟಾದರೆ ಲೇಖನ ವ್ಯವಸಾಯ. ಪುಸ್ತಕ ಪ್ರಕಾಶನಾದಿಗಳಲ್ಲಿ ಯಶಸ್ಸು ಸಿಗುವದು. ಇವರು ಕುರಲರೂ ಕಲ್ಪಕರೂ ಇರುವರು. ಸರ್ವಪ್ರಕಾರದ ಗೂಢ ವಿದ್ಯೆಯ ಅಭಿರುಚಿ ಇರುವದು. ಇವರು ಮಹತ್ವಾಕಾಂಕ್ಷಿಗಳಾಗಿರುವರು. ಇವರಿಂದ ಚಮತ್ಕಾರಿಕ ಶೋಧ ಗಳಾಗುವವು. ವಿಲಕ್ಷಣ, ಅದ್ಭುತ ವಿಚಿತ್ರ ವಸ್ತು, ಪುರಾಣ ವಸ್ತುಗಳ ಸಂಗ್ರಹದ ಅಭಿರುಚಿ ಇರುವದು.

ಬುಧ ನೇಪಚ್ಯೂನರ ಶುಭಯೋಗ:— ಇದು ಉತ್ತಮ ಬುದ್ಧಿ ಪೋಷಕ ಯೋಗವು. ಕವಿತ್ವ ಶಕ್ತಿ, ಗಾಯನ-ವಾದನ ಕಲೆ, ಲಲಿತ ಕಲೆ ಇವುಗಳ ಅಭಿರುಚಿ ಪ್ರಾವೀಣ್ಯಗಳು ತೋರುವವು. ಅನೇಕ ವಿದ್ಯಾವ್ಯಾಸಂಗಿ ಮಿತ್ರರು ದೊರಕುವರು. ಅವರಿಂದ ಲಾಭವಾಗುವದು. ಉತ್ತಮ ಕಾದಂಬರೀಕಾರರು, ಕವಿಗಳೂ ತಂತು ವಾದ್ಯ ವಿಶಾದರೂ ಆಗುವರು.

ಅಶುಭಯೋಗವಿದ್ದರೆ ಸ್ವಭಾವವು ಲಹರೀ, ಅಸ್ಥಿರವಿರುವದು. ಒಂದೇ ವಿಷಯದ ಕಡೆಗೆ ಚಿತ್ತ ಸ್ಥೈರ್ಯವಿರುವದಿಲ್ಲ. ವಿಚಿತ್ರ ಕಲ್ಪನೆ, ಮತಗಳು ಇರುತ್ತವೆ ಒಡೆದ ಗನ್ನಡಿಯಲ್ಲಿ ಛಿನ್ನ-ವಿಚ್ಛಿನ್ನ ಪ್ರತಿಬಿಂಬ ನೋಡಿದಂತೆ. ಮಜ್ಜಾತಂತು ವಿಕಾರದ ಭಯವಿರುವದು. ವಾರ್ಧ್ಯಕ್ಯದಲ್ಲಿ ಮಸ್ತಕ ವಿಕಾರ ಸಂಭವವಿರುವದು. ಒಂದೇ ಯೋಗದಿಂದ ಫಲಿತ ಹೇಳಬಾರದು.

ಬುಧ ನೇಪಚ್ಯೂನ ಯುತಿ:— ಶುಭ ಭಾವದಲ್ಲಿ ಶುಭ ರಾಶಿಯಲ್ಲಿ ಆದರೆ ಉತ್ತಮ ಫಲಕೊಡುವದು. ಕಲ್ಪಕ ಚತುರ, ಗೂಢ ಶಾಸ್ತ್ರ, ಪ್ರೇಮಿ ಇರುವರು. ಭ್ರಮಿಷ್ಟರಂತೆ ಇವರು ನಿಮಗೆ ಕಾಣಬಹುದು. ಶನಿ ಮಂಗಳರಿಂದ ಪೀಡಿತರಿದ್ದರೆ ಮಾತ್ರ ನಿಜವಾದ ಭ್ರಮೆ ಇರುವದು. ಬುದ್ಧಿಗೆ ಕುಮಾರ್ಗ ಪ್ರವೃತ್ತಿಯುಂಟಾಗುವದು. ಖೊಟ್ಟಿ ಕಾಗದ, ಖೊಟ್ಟಿ ಸಹಿ, ವಂಚನೆಗಳು ಕಂಡು ಬರುವವು.

೭—

ಶುಕ್ರನು

'ಕರ್ಣಂಗತೇ ಶುಷ್ಯತಿ ಕರ್ಣಂ ತವ ಸಂಗೀತಕಂ ಸೈಕತವಾರಿರೀತ್ಯಾ' ಫಲದೀಪಿಕೆ ವರ್ಣಿಸುತ್ತದೆ.

ಶುಕ್ರನ ಸುಖವು ಕ್ಷಣಿಕ. ಅವನು ಸಂಗೀತ ಕೇಳಿದಂತೆ, ಕರ್ಣದಲ್ಲಿ ಗೀತ ಲೀನವಾಗುವಂತೆ ಶುಕ್ರನ ಸುಖವು ಉಸುಕಿನಲ್ಲಿ ನೀರು ಚೆಲ್ಲಿದಂತೆ. ಅಲ್ಲಿಯೇ ಇಂಗಿ ಹೋಗುವದು. ಇದು ಒಂದು ಬದಿಯಿಂದ ವಿಚಾರಿಸಿದರೆ ನಿಜವಿರಬಹುದು. ಆದರೆ ಶುಕ್ರನು ಅನೇಕ ದೃಷ್ಟಿಯಿಂದ ವಿಚಾರಿಸಿದರೆ ಶುಭ ಗ್ರಹವಾಗಿರುವನು. ಅವನು ಸೌಂದರ್ಯ ಸುಖಗಳ ಪೋಷಕನಾಗಿರುವಂತೆ ಭಕ್ತಿಯ ಪೋಷಕನೂ ಆಗಿರುವನು. ಚೈತನ್ಯ ನಂತಹ ಭಗವದ್ಭಕ್ತರು ಅವನ ಅಧಿಕಾರದಲ್ಲಿ ಹುಟ್ಟುವರು. ಅವನು ಶೃಂಗಾರ ರಸ ಪೋಷಕನೂ ಆಗಿರುವನು. ಅಗ್ನಿವರ್ಣನಂತಹ ವಿಲಾಸಿ ರಾಜರೂ ಅವನ ಅಧಿಕಾರದಲ್ಲಿ ಹುಟ್ಟುವರು. ಈ ತಾರತಮ್ಯವು ಇತರ ಗ್ರಹಗಳ ಶುಭಾ ಶುಭ ದೃಷ್ಟಿಯೋಗ ತಾರತಮ್ಯದಲ್ಲಿರುವದು. ಶುಕ್ರನ ಬಲವಿಲ್ಲದಿದ್ದರೆ ಜಗತ್ತು ಅರಸಿಕ ಮರುಭೂಮಿಯಾಗುವದು. ಗೊಂಡಾರಣ್ಯವಾಗುವದು. ಕತ್ತಲೆಯ ರಾತ್ರಿಯಲ್ಲಿ ಶುಕ್ರನ ಪ್ರಕಾಶವು ಬೆಳದಿಂಗಳಂತೆ ಕಾಣುವದು. ಚಂದ್ರನು ನಮಗೆ ಸಮೀಪದಲ್ಲಿರುವನು. ವಾಸ್ತವಿಕವಾಗಿ ಶುಕ್ರನು ಚಂದ್ರನಿಗಿಂತ ತೇಜಸ್ವಿಯಾಗಿರುವನು. ವಿವಾಹ, ಸ್ತ್ರೀ ರತಿಸುಖ, ಸೌಂದರ್ಯ, ಕಾಮವಾಸನೆ, ಸ್ತ್ರೀಯರ ಲಾವಣ್ಯ, ಉತ್ತಮ ಫ್ಯಾಶನ್ನದ ಉಡುಪು-ತೊಡವುಗಳು, ವಾದ್ಯ, ನಾಟ್ಯಕಲೆ, ಮಂತ್ರ-ತಂತ್ರ, ಗಾರುಡೀ ವಿದ್ಯೆ, ಅಷ್ಟಸಿದ್ಧಿಯ ಪ್ರಕಾರಗಳು ಜಾರಣ-ಮಾರಣ ಕ್ರಿಯೆಗಳು ವಜ್ರರತ್ನಾಭರಣಗಳು ಶುಕ್ರನ ಕಾರಕತ್ವದಲ್ಲಿ ಬರುವವು. ಸುರಭಿ ಕುಸುಮ, ಅಮಾತ್ಯ, ವಣಿಗ್ ಜನರು, ರೇಶಿಮೆ ಬಟ್ಟೆ, ಜಾತೀ ಫಲ, ಪಿಪ್ಪಲಿ ಚಂದನ ವೃಷ್ಯಾನ್ನ ಉದ್ಯಾನಗಳ ಸಂಬಂಧವು ಶುಕ್ರನಿಂದ ಪ್ರಾಪ್ತವಾಗುವದು. ಜೈನೀ ವಿಲಾಸಗಳ ಕಾರಕನು ಶುಕ್ರನು. ಸ್ತ್ರೀಯರಿಂದ ಲಾಭ ಪ್ರೇಮಗಳನ್ನು ಕೊಡುವವನು ಶುಕ್ರನು.

ಯಶಸ್ಸು, ದೌಲತ್ತು, ಸ್ತ್ರೀಧನ, ರತ್ನಗಳು, ಡೌಲಿನ ಒಡವೆಗಳು ಪಲಂಗ, ಖುರ್ಚಿ, ಶೋಭೆಯನ್ನು ಕೊಡುವ ಸಾಮಾನುಗಳನ್ನು ಶುಕ್ರನು ಕೊಡುವನು. ವಿದ್ಯಾ, ಕಲಾ, ಗಾಯನ, ಚಿತ್ರಕಲೆಗಳನ್ನು ಪಡೆಯಲಿಕ್ಕೆ ಶುಕ್ರನ ಅನುಗ್ರಹವು ಬೇಕು. ವರಾಹಮಿಹಿರಾಚಾರ್ಯರು ಇವನನ್ನು "**ಭೃಗುಃ ಸುಖೀ ಕಾಂತವಪುಃ ಕಫಾ ನಿಲಾತ್ಮಾ ಸುಲೋಚನಃ**" ಎಂದು ಬಣ್ಣಿಸಿರುವರು.

ಮೀನ ರಾಶಿಯಲ್ಲಿ ಶುಕ್ರನು ಉಚ್ಚನಿರುವನು. ವೃಷಭ, ತುಲಾ ರಾಶಿಗಳಲ್ಲಿ ತನ್ನ ಮನೆಯಲ್ಲಿರುವನು. ಇದನ್ನು ನೋಡಿ ಸ್ತ್ರೀ ಸ್ವಭಾವಾದಿಗಳನ್ನು ಊಹಿಸುವರು. ಪುರುಷರ ಕುಂಡಲಿಯಲ್ಲಿ ಸ್ತ್ರೀ ಸುಖವನ್ನು ವಿಚಾರಿಸುವಾಗ ಶುಕ್ರನ ಸ್ಥಿತಿಗತಿಯನ್ನು ವಿಚಾರಿಸುವುದೂ ಸಹಜವದೆ. ಮೇಷ, ಸಿಂಹ, ಧನೂ ರಾಶಿಯ ಶುಕ್ರನು ಸಾಧಾರಣ ಒಳ್ಳೇ ಫಲ ದರ್ಶಕನು. ಕರ್ಕ, ವೃಶ್ಚಿಕ ರಾಶಿಯ ಶುಕ್ರನು ಪೀಡಿತನಿದ್ದರೆ ಕಾಮವಾಸನೆಯಿಂದ ಅಡ್ಡ ದಾರಿಯನ್ನು ಹಿಡಿಯುವ ಸಂಭವವಿರುವದು. ಮಕರ ರಾಶಿಯ ಶುಕ್ರನು ಶುಭ ಸಂಬಂಧಿತನಿದ್ದರೆ ಭಾಗ್ಯೋದಯ ಸೂಚಕನು. ಪೀಡಿತ ಶುಕ್ರನು ವಯಸ್ಸಿನಿಂದ ಹಿರಿಯಳಾದ ಸ್ತ್ರೀ ಸಂಬಂಧ ಸೂಚಕವಾಗಿದೆ. ಕುಂಭ ರಾಶಿಯ ಶುಕ್ರನು ಅಷ್ಟಕಷ್ಟೇ! ಅವನು ಸ್ತ್ರೀ ವೈತ್ರಿಯನ್ನು ಕೊಡಬಹುದು. ಶುಕ್ರನ ಅಮಲು ಜನನೇಂದ್ರಿಯ, ಕುತ್ತಿಗೆ ಮೂತ್ರಪಿಂಡ ಗದ್ದದ ಮೇಲೆ ಇರುವದು. ಶುಕ್ರನ ಭಾಗ್ಯಾಂಕ ೬. ಇವನ ರತ್ನ ವಜ್ರ.

ಶುಕ್ರನ ಭಾವಗತ ಫಲ

ಲಗ್ನದಲ್ಲಿ:— ಲಗ್ನದಲ್ಲಿ ಶುಕ್ರನಿದ್ದರೆ ಮನುಷ್ಯನು ವಿಲಾಸಿ, ಸುಂದರನಿರುವನು. ಶುಭ ಸಂಬಂಧಿತ ಶುಕ್ರನು ಉದ್ಯೋಗದಲ್ಲಿ ಲಾಭವನ್ನುಂಟು ಮಾಡುವನು. ಆಯುಷ್ಯವು ಯಶಸ್ವಿಯಾಗುವದು. ಆದರೆ ಉಡುಪು-ತೊಡವುಗಳಲ್ಲಿ, ಆಭರಣಗಳಿಗಾಗಿ ಸಡಿಲು ಕೈಯಿಂದ ದುಡ್ಡು ವೆಚ್ಚವಾಗುವದು. ಆದರೂ ಇವರಿಗೆ ಸಾಂಪತ್ತಿಕ ಅಡಚಣಿ ಭಾಸವಾಗುವದಿಲ್ಲ. ಕೈಯಲ್ಲಿ ನಾಣ್ಯಗಳು ಯಾವಾಗಲೂ ಆಡುತ್ತಿರುವವು.

ಧನಸ್ಥಾನದಲ್ಲಿ:— ಧನಸ್ಥಾನದಲ್ಲಿ ಶುಭ ಸಂಬಂಧಿತ ಶುಕ್ರನಿರುವ ಮನುಷ್ಯನು ಉದ್ಯೋಗದಲ್ಲಿ ಯಶಸ್ವಿಯಾಗುವನು. ಕೈಯಲ್ಲಿ ರೊಕ್ಕವು ಓಡಾಡುವದು. ಆಯುಷ್ಯವು ಯಶಸ್ವಿಯಾಗುವದು. ಪರಂತು ಉಡುಪು ತೊಡವುಗಳಿಗಾಗಿ, ಮೋಜುಗಾಳಿಗಾಗಿ, ರೊಕ್ಕವನ್ನು ವೆಚ್ಚ ಮಾಡುವರು. ಅಂಥವರಿಗೆ ದುಡ್ಡಿನ ಕೊರತೆ ಎನಿಸುವದಿಲ್ಲ. ಲೋಕಪ್ರಿಯರಿರುವರು. ಮಿತ್ರರಿಂದ, ಪರಿಚಯದವರಿಂದ ಲಾಭವಾಗುವದು. ಶುಕ್ರನು ಕಾರಕನಾಗಿರುವ ಧಂದೆಗಳಿಂದ, ವಸ್ತುಗಳಿಂದ— ಶುಕ್ರನು ಶುಭ ಸಂಬಂಧಿತನಿದ್ದಷ್ಟು ಲಾಭವಾಗುವದು. ಇದು ಸುಖಾನ್ನ ಭೋಜನ ಯೋಗವೆಂದು ನಮ್ಮವರು ಕರೆಯುತ್ತಾರೆ.

ತೃತೀಯದಲ್ಲಿ:— ತೃತೀಯ ಸ್ಥಾನದಲ್ಲಿ ಶುಕ್ರನಿದ್ದರೆ ಕಾದಂಬರಿ, ನಾಟಕ ಕವಿತೆಗಳನ್ನು ಬರೆಯುವ ಹಂಬಲವಿರುವದು. ಬಂಧು-ಬಗನಿಯರಿಂದ, ನೆರೆಯುವರಿಂದ ಸುಖ ಸಿಗುವದು. ಸ್ವಭಾವವು ಆನಂದಿ, ಉಲ್ಹಾಸಿ ಇರುವದು. ಪ್ರವಾಸದಿಂದ ಸುಖವಾಗುವದು. ಅದರಿಂದ ಸ್ನೇಹ ವಿವಾಹಗಳು ಘಟಿಸುವವು. ಪತ್ರವ್ಯವಹಾರದಿಂದ ವಿವಾಹವು ಕೂಡಿಬರುವದು. ಮಿತ್ರತ್ವ ಉಂಟಾಗುವದು, ಬರೆಯುವದು, ಓದುವದು, ಗಾಯನ-ವಾದನಗಳ ನಾದವಿರುವದು.

ಚತುರ್ಥದಲ್ಲಿ:— ಚತುರ್ಥದಲ್ಲಿ ಶುಕ್ರನಿದ್ದರೆ ಆಯುಷ್ಯದ ಉತ್ತರಾರ್ಧವು ಚೈನಿಯಲ್ಲಿ ಹೋಗುವದು. ಉತ್ತರಾರ್ಧದಲ್ಲಿ ಭರಭರಾಟವಾಗುವದು. ತೋಟ ಪಟ್ಟಿ, ಹೊಲಮನೆ, ವಾಹನಾದಿಗಳಿಂದ ಸುಖ ಸಿಗುವದು. ಬಲಿಷ್ಠ ಶುಕ್ರನು ಗೃಹ ಸುಖವನ್ನು ಕೊಡುವನು.

ಪಂಚಮದಲ್ಲಿ :— ಪಂಚಮದಲ್ಲಿ ಶುಕ್ರನಿದ್ದರೆ ನಾಟಕ ಸಿನೇಮಾಗಳನ್ನು ನೋಡುವ ಅಭಿರುಚಿಯಿರುವದು. ಇವರು ವಿಷಯ ಲೋಲುಪರಿ-

ರುವರು. ಇವರಿಗೆ ಸ್ತ್ರೀಯರ ಸಹವಾಸವು ವಿಶೇಷ ರುಚಿಸುವದು. ವಿಶೇಷ ಸಂತತಿ ಕೊಡುವನು. ಹುಡುಗೆಯರ ಸಂಖ್ಯೆ ಹೆಚ್ಚು. ಸಂತತಿ ಅಜ್ಞಾಧಾರಕವಾಗುವದು. ಬಲಿಷ್ಠ ಶುಕ್ರನು ಸಟ್ಟಾ, ಲಾಟರಿ, ರೇಸಗಳಲ್ಲಿ ಲಾಭ ದಾಯಕನಾಗುವನು. ಪ್ರಥಮ ಸಂತತಿಯು ಸುಂದರವಾಗಿದ್ದು ಲಲಿತಕಲೆ ವಾಙ್ಮಯಗಳಲ್ಲಿ ಅಭಿರುಚಿಯುಳ್ಳದ್ದಾಗುವದು. ಪಂಚಮದಲ್ಲಿಯ ಶುಕ್ರನು, ಬಲಿಷ್ಠನಿದ್ದರೆ ಮಾತ್ರ, ನಾಟಕ-ಸಿನೇಮಾಗಳಿಂದ ಲಾಭದಾಯಕನಾಗುವನು.

ಷಷ್ಠದಲ್ಲಿ:— ೬ ರಲ್ಲಿ ಶುಕ್ರನು ಶುಭ ಸಂಬಂಧಿತನಿದ್ದರೆ ನೌಕರ, ಚಾಕರರಿಂದ, ಸೇವಕರಿಂದ ಲಾಭ ಸೂಚಕನು. ಉಡುಪು-ತೊಡಪುಗಳ ಅಭಿರುಚಿ ಇರುವದು. ಲಗ್ನವಾದ ಬಳಿಕ ಪ್ರಕೃತಿ ಚಿನ್ನಾಗಿರುವದು. ಆಹಾರ ವಿಹಾರದಲ್ಲಿ ಇವರು ಬಹುಜಪ್ಪಿಸಿಕೊಂಡಿರುವರು. ಈ ಸ್ಥಾನದಲ್ಲಿ ಶುಕ್ರನು ಪೀಡಿತನಿದ್ದರೆ ವಿಷಯ ಸುಖದ ಅತಿರೇಕದಿಂದ ಪ್ರಕೃತಿ ಕೆಡುವದು. ಜನನೇಂದ್ರಿಯದ ವಿಕಾರವುಂಟಾಗುವ ಸಂಭವವಿರುವದು. ಉಪದಶ ವಿಕಾರ, ಕಂಠ ವಿಕಾರಗಳ ಸಂಭವ. ಇಂದ್ರಿಯ ನಿಗ್ರಹದಿಂದ ಇಂಥವರು ಇವುಗಳನ್ನು ತಡೆಯಬಹುದು.

ಸಪ್ತಮದಲ್ಲಿ:— ಸಪ್ತಮದಲ್ಲಿ ಶುಕ್ರನು ನೈಸರ್ಗಿಕ ರೀತಿಯಿಂದ ಬಲಿಷ್ಠನಿರುವನು. ಶುಭ ಸಂಬಂಧಿತ ಶುಕ್ರನು ವಿವಾಹದಿಂದ ಭಾಗ್ಯೋದಯ ಮಾಡುವನು. ಅರ್ಥಪ್ರಾಪ್ತಿಯಾಗುವದು. ವಿವಾಹವು ಬೇಗ ಆಗುವದು. ಸ್ತ್ರೀ ರೂಪವತಿ, ಸದ್ಗುಣಿ ಸಿಗುವಳು. ಪಾಲುಗಾರಿಕೆಯ ವ್ಯವಹಾರದಲ್ಲಿ ಕೋರ್ಟು ದರ್ಬಾರಿ ಕೆಲಸಗಳಲ್ಲಿ ಯಶಸ್ಸು ಸಿಗುವದು. ನಾಟಕಾದಿ ಧಂದೆಗಳಲ್ಲಿ, ಜನಸಮಾಜದಲ್ಲಿ ಮನೋರಂಜನೆ ಮಾಡುವ ಸಂದರ್ಭಗಳು ಬರುವವು. ಸಾರ್ವಜನಿಕ ವ್ಯವಹಾರ, ಭಾಗೀದಾರಿಯಲ್ಲಿ ಲಾಭದಾಯಕನಾಗುವನು. ಎಲ್ಲ ಸಂಗತಿಗಳು ತಂಟೆಯಿಲ್ಲದೆ ಜರಗುತ್ತವೆ. ಈ ಸ್ಥಾನದಲ್ಲಿ ಶುಕ್ರನು ಅಪತ್ಯ ಪ್ರೇಮ ಸೂಚಕನು. ವೃಶ್ಚಿಕ, ಮಕರ ರಾಶಿಯ ಪೀಡಿತ ಶುಕ್ರನು ಇಲ್ಲಿ ಇರಬಾರದು. ಸ್ತ್ರೀಯರ ಕುಂಡಲಿ

ಯಲ್ಲಿ ಸಪ್ತಮದಲ್ಲಿ ಶುಕ್ರನಿದ್ದರೆ ವಯಸ್ಸಿನ ೧೯ ನೆಯ ವರುಷ ಮದುವೆಯಾಗುವದು.

ಅಷ್ಟಮದಲ್ಲಿ:— ಅಷ್ಟಮ ಭಾವದಲ್ಲಿ ಬಲಿಷ್ಠ ಶುಕ್ರನಿದ್ದರೆ ವಿವಾಹದಿಂದ ಸಾಂಪತ್ತಿಕ ಲಾಭವಾಗುವದು. ವರದಕ್ಷಿಣೆ ಇಲ್ಲವಾದರೆ ಸಾಲಂಕೃತ ಕನ್ಯಾದಾನವಾಗುವದು. ಸ್ತ್ರೀಧನ ಸಿಗುವದು. ಮೃತ್ಯು ಪತ್ರ ದ್ವಾರಾ, ವಾರಸಾನಾತೆಯಿಂದ ಧನ ಪ್ರಾಪ್ತಿಯ ಸಂಭವವಿರುವದು. ಶುಕ್ರನು ಪೀಡಿತನಿದ್ದರೆ ಪತಿ ಅಥವಾ ಪತ್ನಿ ಅತಿ ಖರ್ಚಿನವರಿರುವರು. ಬಲಿಷ್ಠ ಶುಕ್ರನು ಮೃತ್ಯುವಿನಿಂದ ಲಾಭ ದರ್ಶಕನು. ಇಂಥವರು ಹೆಚ್ಚಾಗಿ ವಿಮೆಯನ್ನು ಇಳಿಸಬಹುದು. ಇಲ್ಲಿಯ ಶುಕ್ರನು ವಿಮೆಯಿಂದ ಲಾಭದರ್ಶಕನಾಗುವನು. ಮೃತ್ಯು ಶಾಂತ ರೀತಿಯಿಂದಾಗುವದು. ಅಪಘಾತ ಭಯವನ್ನು ತಪ್ಪಿಸುವನು.

ನವಮದಲ್ಲಿ :— ನವಮದಲ್ಲಿ ಶುಭ ಸಂಬಂಧಿತ ಶುಕ್ರನಿದ್ದರೆ ಸರ್ವ ಪ್ರಕಾರದ ಐಶ್ವರ್ಯವನ್ನು ಕೊಡುವನು. ಬೀಗರು-ಬಿಜ್ಜರಿಂದ ಹಿತವಾಗುವದು. ಆಚಾರ-ವಿಚಾರಗಳು ಚಿನ್ನಾಗಿರುವವು. ಮನಸ್ಸು ಆನಂದಿ, ಮಮತಾಳು ಇರುವದು. ವಿದ್ಯಾವ್ಯಾಸಂಗಿ ಇರುವರು. ಕಾವ್ಯ ನಾಟಕ, ಸಂಗೀತಗಳ ಅಭಿರುಚಿ ಇರುವದು.

ದಶಮದಲ್ಲಿ :— ದಶಮದಲ್ಲಿ ಶುಭ ಸಂಬಂಧಿತ ಶುಕ್ರನು ಸರ್ವ ಪ್ರಕಾರದ ಐಸಿರಿಯನ್ನು ಕೊಡುವನು. ನೌಕರಿ, ಉದ್ಯೋಗ, ಮಾನ, ಕೀರ್ತಿಗಳಿಗೆ ಇವನು ಪೋಷಕನಾಗಿರುವನು. ಆಯುಷ್ಯವು ಸುಖದಲ್ಲಿ ಹೋಗುವದು. ಸ್ವಭಾವವು ಶಾಂತವು, ಮನಸ್ಸಿಗೆ ಒಪ್ಪಿಗೆಯಾಗುವಂತಹದು ಇರುವದು. ಕಲಹಗಳ ತಿರಸ್ಕಾರವಿರುವದು. ಸ್ತ್ರೀಯರಿಂದ ಆಶ್ರಯ, ಮಾನಗಳು ಸಿಗುವವು. ಶ್ರೀಮಂತ ಕುಲೀನ ಸ್ತ್ರೀಯರೊಡನೆ ವಿವಾಹವಾಗುವದು. ವಿವಾಹದಿಂದ ಭಾಗ್ಯೋದಯವಾಗುವದು. ಸ್ತ್ರೀಧನ ಸಿಗುವದು. ದಶಮದಲ್ಲಿ ಶುಕ್ರನಿರುವದು ಭಾಗ್ಯದ ಲಕ್ಷಣವು. ಗಾಯನ, ವಾದನ, ಚಿತ್ರಕಲೆ ಲಲಿತ ಕಲೆಗಳಿಂದ ಉದ್ಯೋಗ ಸೂಚಕನು. ಭವಿಷ್ಯ ಜ್ಞಾನ, ತತ್ಸಮ ಧಂದೆಯ ದರ್ಶಕವಾಗಿದೆ. ದಶಮದಲ್ಲಿಯ ಶುಕ್ರನಿಂದ

ನೈತಿಕ ವರ್ತನವೂ ಚೆನ್ನಾಗಿರುವದು. ಪೀಡಿತ ಶುಕ್ರನಿಂದ ಮಾನ ಹಾನಿಯ ಕಾರ್ಯಗಳಾಗುವವು. ದಶಮದಲ್ಲಿ ತುಲಾ, ವೃಷಭ, ಮೀನ ರಾಶಿಯ ಶುಕ್ರನು ಉತ್ತಮ ಫಲ ದರ್ಶಕನು. ದಶಮದಲ್ಲಿಯ ಶುಕ್ರನು ಚಂದ್ರನ ಶುಭ ಸಂಬಂಧದಲ್ಲಿದ್ದರೆ ಲಾಭವಾಗುವದಲ್ಲದೆ, ಸಾಂಪತ್ತಿಕ ಕೌಟುಂಬಿಕ ಸುಖಗಳು ಸಿಗುತ್ತವೆ. ಸ್ತ್ರೀಯರ ಕುಂಡಲಿಯಲ್ಲಿಯ ದಶಮದ ಶುಕ್ರನು ಅಧಿಕಾರಿ, ಸಂಪತ್ತಿವಾನ್ ಉತ್ತಮ ದರ್ಜೆಯ ಪತಿಯನ್ನು ಕೊಡುವನು.

ಏಕಾದಶದಲ್ಲಿ :— ಉದ್ಯೋಗದಲ್ಲಿ ಅರ್ಥಪ್ರಾಪ್ತಿಯನ್ನು ಏಕಾದಶದ ಶುಕ್ರನು ಸೂಚಿಸುವನು. ಸುವರ್ಣ ಮೌಕ್ತಿಕ, ಜವಾಹಿರ ಇವುಗಳ ಸಂಗ್ರಹ ಮಾಡುವರು. ಇಲ್ಲವೆ ಇವುಗಳಿಂದ ಲಾಭವಾಗುವದು. ಆಶೆ-ಆಕಾಂಕ್ಷೆಗಳು ಸಫಲವಾಗುವವು. ಒಳ್ಳೆಯ ಮಿತ್ರರು ದೊರಕುವರು. ಸ್ತ್ರೀಯರ ಆಶ್ರಯ ಇಲ್ಲವೆ ಅವರ ಸಹವಾಸದಿಂದ ಭಾಗ್ಯೋದಯವಾಗುವದು. ಲಗ್ನ ಸಂಬಂಧವು ಮಿತ್ರರಿಂದ ಉಂಟಾಗುವದು. ಸಂತತಿ ಹೆಚ್ಚಾಗಿ ಸ್ನೇಹಿತರಿಂದ ಉನ್ನತಿಯಾಗುವದು. ಪೀಡಿತ ಶುಕ್ರನು ವಿಪರೀತ ಫಲವನ್ನು ಕೊಡುವನು. ಇಲ್ಲಿಯ ಶುಕ್ರನು, ಶನಿ, ಮಂಗಳ, ಹರ್ಶಲ, ನೇಪಚ್ಯೂನ ಇವರ ಅಶುಭ ಸಂಬಂಧದಲ್ಲಿ ಇರಬಾರದು.

ದ್ವಾದಶದಲ್ಲಿ:— ದ್ವಾದಶದಲ್ಲಿ ಶುಕ್ರನಿದ್ದರೆ ಬೇಗ ಮದುವೆಯಾಗುವದು ಒಳಿತು. ಪೀಡಿತ ಶುಕ್ರನು ಬಹಿರಂಗ ಪ್ರವೃತ್ತಿ ದರ್ಶಕನಾಗಿರುವನು. ಶುಕ್ರನು ಹರ್ಶಲ ಮಂಗಳ ಶನಿಗಳಿಂದ ಪೀಡಿತನಿದ್ದರೆ ಅಪಕೀರ್ತಿಯನ್ನು ಕೊಡುವನು. ಇಲ್ಲಿ ವೃಶ್ಚಿಕ, ಮಕರ, ಕನ್ಯಾ, ಮೇಷದ ಪೀಡಿತ ಶುಕ್ರನಿರುವದು ಯೋಗ್ಯವಲ್ಲ. ಅಪಕೀರ್ತಿಯನ್ನು ಕೊಡುವನು. ಸ್ತ್ರೀಯರ ಶತ್ರುತ್ವ, ಸಾಂಪತ್ತಿಕ ಹಾನಿಯನ್ನು ಸೂಚಿಸುವದು. ಗುಪ್ತ ಪ್ರೇಮ ಪ್ರಕರಣಗಳು ಉದ್ಭವಿಸುವವು. ಇಲ್ಲಿಯ ಶುಕ್ರನೊಡನೆ ಶನಿ ಮಂಗಳ ಹರ್ಶಲರು ಅಶುಭಯೋಗ ಮಾಡುತ್ತಿದ್ದರೆ ತಾಯ್ತಂದೆಗಳು ಮಗಳ ಮದುವೆಯನ್ನು ಬೇಗ ಮಾಡುವುದು ಒಳಿತಾದುದು.

ಶುಕ್ರ ಮಂಗಳ ಸಮಕ್ರಾಂತಿ – ಅಶುಭಯೋಗ:— ಖರ್ಚು ವಿಶೇಷವಾಗಿರುವದು. ಸಂಗ್ರಹದಲ್ಲಿ ದುಡ್ಡು ಉಳಿಯಲಾರದು. ಸ್ತ್ರೀ ಸಹ

ವಾಸವು ಅತ್ಯಂತ ಪ್ರಿಯವಾಗಿರುವದು. ವಿಷಯ ಸುಖಾಭಿಲಾಷೆ ಹೆಚ್ಚಾಗಿರುವದು. ಯುತಿ, ಸಮಕ್ರಾಂತಿಗಳು ಅಶುಭಯೋಗದಷ್ಟು ಅಶುಭ ಫಲವನ್ನು ಕೊಡಲಾರವು. ಶುಕ್ರ ಮಂಗಳ ಯುತಿಯು ಮನಸ್ಸಿಗೆ ಒಪ್ಪುವ ಸುಸ್ವಭಾವವನ್ನುಂಟುಮಾಡುವದು. ಮಂಗಳನ ಕಟುತ್ವವು ಶುಕ್ರನಿಂದ ಸೌಮ್ಯವಾಗುವದು. ಈ ಯುತಿ, ಸಮಕ್ರಾಂತಿಗಳು ಯಾವ ರಾಶಿಯಲ್ಲಿ ಯಾವ ಗ್ರಹಗಳ ಶುಭಾಶುಭಯೋಗದಲ್ಲಿ ಉಂಟಾಗುವದೆಂಬುದನ್ನು ನಿರೀಕ್ಷಿಸಿ ಫಲವನ್ನು ಊಹಿಸಬೇಕು.

ಶುಕ್ರ ಮಂಗಳರ ಶುಭಯೋಗ:— ವಿಷಯ ವಾಸನೆ ತೀವ್ರವಾಗಿರುವದು. ಗಾಯನ ವಾದನ ನಾಟಕಗಳ ಅಭಿರುಚಿ ಇರುವದು. ಖರ್ಚು ವಿಶೇಷವಾಗುವದು. ಡೌಲು ಇವರಿಗೆ ಸೇರುವದು. ಖರ್ಚಿನ ಸ್ವಭಾವದಿಂದ ಮಿತ್ರಮಂಡಳಿಯಲ್ಲಿ ಪ್ರಿಯರಾಗುವರು. ಸ್ವಭಾವವು ಮಹತ್ವಾಕಾಂಕ್ಷಿಯಾಗಿರುವದು. ಜೀವನ ಶಕ್ತಿಯು ಚೆನ್ನಾಗಿರುವದು. ಕಲೆಯ ಕಾರ್ಯದಲ್ಲಿ, ಉದ್ಯೋಗದಲ್ಲಿ ಪ್ರಾವೀಣ್ಯ ತೋರುವದು.

ಶುಕ್ರ ಗುರು ಯುತಿ–ಸಮಕ್ರಾಂತಿ:— ಶುಭಯೋಗದ ಫಲವು. ಸ್ವಭಾವವು ಕರುಣಾಳು ಇರುವದು. ಉದಾರ ನ್ಯಾಯಿ ಆಗಿರುವರು. ಕೈಯಿಂದ ಪರೋಪಕಾರದ ಕಾರ್ಯಗಳು ಘಟಿಸುವವು. ಈ ಶುಭಯೋಗವು ಭಾಗ್ಯ ಸಂಪತ್ತಿಯನ್ನು ಸಮೃದ್ಧಿಯನ್ನೂ ಉಂಟುಮಾಡುವದು. ಲಗ್ನದಿಂದ ಭಾಗ್ಯ ವೃದ್ಧಿಯಾಗುವದು. ಜನಸಮಾಜದಲ್ಲಿ ಮಾನ-ಸನ್ಮಾನಗಳು ದೊರಕುವವು. ಶ್ರೀಷ್ಠತೆ ಸಿಗುವದು. ಇವರು ಸಮಾಜ ಪ್ರಿಯರಿದ್ದು ಚೈನಿ ಸುಖಾಸಕ್ತರಿರುವರು. ಪ್ರವಾಸದಿಂದ ಲಾಭಗಳಾಗುವವು. ಪ್ರವಾಸದ ಅಭಿರುಚಿ ಇರುವದು.

ಗುರು ಶುಕ್ರರ ಅಶುಭಯೋಗ:— ಈ ಅಶುಭಯೋಗವು ಸಾಂಪತ್ತಿಕ ಹಾನಿಯನ್ನುಂಟುಮಾಡುವದು. ವಿಷಯಾಸಕ್ತಿಯಿಂದ ಹಾನಿಯು. ಸಾಲಕ್ಕೆ ಕಾರಣವಾಗುವದು. ಉದ್ಯೋಗವನ್ನು ಚೆನ್ನಾಗಿ ನಡೆಯಿಸುವ ಬುದ್ಧಿ ಇರುವದಿಲ್ಲ. ಸ್ವಾರ್ಥ ಪರಾಯಣತೆ ಕಂಡು ಬರುವದು. ಸ್ವಸುಖಕ್ಕಿಂತ ಬೇರೆ ಏನನ್ನೂ ಇವರು ಕಾಣರು.

ಶುಕ್ರ ಶನಿ ಯುತಿ–ಸಮುಕ್ರಾಂತಿ ಅಶುಭಯೋಗಃ— ಇದರಿಂದ ಸ್ತ್ರೀ ಸೌಖ್ಯ ಸಿಗಲಾರದು. ಧಾರ್ಮಿಕತೆಯ ಆಡಂಬರವಿರುವದು. ಸಾರಾಸಾರ ವಿಚಾರಶಕ್ತಿಯು ಕಡಿಮೆಯಾಗಿರುವದು. ಮಾತ್ಸರ್ಯ, ಕಾರ್ಪಣ್ಯ, ಲೋಭಗಳಿಗೆ ಈ ಯೋಗವು ಪೋಷಕವಾಗಿರುವದು. ಮನೋಭಿಲಷಿತವನ್ನು ಕೂಡಲೆ ಪೂರೈಸಿಕೊಳ್ಳುವ ಲವಲವಿಕೆ ಇರುವದು. ಕರ್ಕ, ವೃಶ್ಚಿಕ, ಮೀನ ರಾಶಿಗಳಲ್ಲಿ ಈ ಯೋಗವಾಗಕೂಡದು. ಶುಭ ಸಂಬಂಧಿತ ಶುಕ್ರನಿದ್ದರೆ ಅವಗುಣಗಳನ್ನು ಮರೆಮಾಡುವದು.

ಶುಕ್ರ ಶನಿ ಶುಭಯೋಗ:— ವಿಷಯ ವಾಸನೆಗೆ ಸ್ಥೈರ್ಯವನ್ನು ಕೊಡುವದು. ನ್ಯಾಯಿ, ಸತ್ಯವಾದಿ, ಸದಾಚಾರ, ಏಕ ಪತ್ನೀವೃತ ಪಾತಿವೃತ್ಯಗಳಿಗೆ ಈ ಯೋಗವು ಪೋಷಕವಾಗಿದೆ. ವಿನಯ ದಕ್ಷತೆ ಕೌಶಲ್ಯಗಳನ್ನು ಕೊಡುವದು. ಸ್ತ್ರೀಸುಖ ಚೆನ್ನಾಗಿ ಸಿಗುವದು. ಸಾಂಪತ್ತಿಕ ಸುಖಕ್ಕೆ ಸ್ಥೈರ್ಯ ಒದಗಿಸುವದು. ಸಂಗ್ರಹ ಮಾಡುವ ಬುದ್ಧಿ, ಗಳಿಸುವ ಸಾಮರ್ಥ್ಯವಿರುವದು. ನೀತಿಮಂತರಿರುವರು. ಬಾಹ್ಯ ಆಚಾರವಿರುವದಿಲ್ಲ. ವಿಶ್ವಾಸಿಗಳಿರುವರು. ಗಂಭೀರ ಬುದ್ಧಿಯಿರುವದು. ಲೋಕಾದರಕ್ಕೆ ಪಾತ್ರರಾಗುವರು.

ಶುಕ್ರ ಹರ್ಶಲ್ ಯುತಿ ಸಮುಕ್ರಾಂತಿ:— ಶುಕ್ರನು ಇತರ ಗ್ರಹಗಳಿಂದ ಪೀಡಿತನಿದ್ದರೆ ಮಾತ್ರ ಶುಕ್ರ ಹರ್ಶಲ ಯುತಿ–ಸಮುಕ್ರಾಂತಿಗಳು ಅಶುಭ ಫಲವನ್ನು ಕೊಡುವವು. ಶುಕ್ರ ಹರ್ಶಲರು ಇತರ ಗ್ರಹಗಳಿಂದ ಶುಭದೃಷ್ಟವಾಗಿದ್ದರೆ ಶುಭಫಲವನ್ನೇ ಕೊಡುವವು.

ಶುಕ್ರ ಹರ್ಶಲರ ಅಶುಭಯೋಗವು ಒಳ್ಳೆಯದಲ್ಲ. ಕಲಹ, ಅಪಕೀರ್ತಿ, ಲಗ್ನದಲ್ಲಿ ಗೊಂದಲ, ಸ್ತ್ರೀ ಸುಖದಲ್ಲಿ ನ್ಯೂನತೆ, ಅತಿಖರ್ಚು ವಿಷಯಾಸಕ್ತಿ, ಸಾಂಪತ್ತಿಕ ಹಾನಿ ಮೊದಲಾದ ಅಶುಭ ಫಲಗಳು ಉಂಟಾಗುವವು.

ಶುಕ್ರ ಹರ್ಶಲ ಶುಭಯೋಗ:— ಈ ಯೋಗ ಇರುವವರಲ್ಲಿ ನೈಸರ್ಗಿಕ ಮೋಹಕತೆ ಇರುವದು. ಲೋಕಪ್ರಿಯರಿರುವರು. ಸ್ತ್ರೀಯರ ಪ್ರೇಮ ಬದ್ಧತೆಯುಂಟಾಗುವದು. ಮಿತ್ರವತ್ಸಲರೂ ಕುಶಲರೂ, ಕುಶಲ

ಮತಿಗಳೂ ಇರುವರು. ಕಾವ್ಯ ಪ್ರಾವೀಣ್ಯವು ತೋರಿಬರುವದು. ಲಲಿತ ಕಲೆಗಳಲ್ಲಿ ಅಭಿರುಚಿ ಕಾಣುವದು. ಲಗ್ನವು ಬೇಗ ಆಗುವದು. ಸ್ತ್ರೀ ಸುಖವು ಚೆನ್ನಾಗಿರುವದು. ಈ ಶುಭಯೋಗವು ಆರ್ಥಿಕ ಸಾಂಪತ್ತಿಕ ಅಭಿವೃದ್ಧಿ ಕಾರಕವಾಗಿರುವದು. ಪ್ರಗತಿ ಸೂಚಕವಾಗಿದೆ. ವಿಷಯ ಸುಖ ಪೋಷಕವಾಗಿದೆ.

ಶುಕ್ರ ನೇಪಚ್ಯೂನ ಯುತಿ - ಸಮುಕ್ರಾಂತಿ:— ಇವರೀರ್ವರಲ್ಲಿ ಮೈತ್ರಿ ಇರುವದು. ಪಾಪಗ್ರಹದ ಸಂಬಂಧ ಬಂದರೆ ಅಶುಭ ಫಲ ಕೊಡುವದು. ಶುಭಗ್ರಹದ ಸಂಬಂಧದಲ್ಲಿ ಭಕ್ತಿ ಭಾವನಾ ಪೋಷಕವು. ದುರ್ಬಲರಿದ್ದರೆ ವಿಷಯ ವಾಸನೆಯಿಂದ ಹಾನಿಯುಂಟಾಗುವದು. ವ್ಯಸನಿಗಳಾಗುವರು. ಅಮಲ ತರುವ ಪದಾರ್ಥ ಸೇವನೆಯಿಂದ ಹಾನಿ ಸಂಭವಿಸುವದು.

ಶುಕ್ರ ನೇಪಚ್ಯೂನ ಅಶುಭಯೋಗ:— ಈ ಅಶುಭಯೋಗವು ವಿಷಯಾಸಕ್ತತೆ, ವ್ಯಸನಿಗಳನ್ನು ಮಾಡುವದು. ವಿಷಯ ಸೇವನೆಯ ಕಲ್ಪನೆಗಳು ವಿಚಿತ್ರವಾಗಿರುವವು. ಸಂಸಾರ ಸೌಖ್ಯದಲ್ಲಿ ಅಡಚಣಿಗಳು ಬರುವವು. ಮಂಗಳ, ಹರ್ಶಲರ ಅಶುಭಯೋಗಗಳೂ ಕೂಡಿದರೆ ದೊಡ್ಡ ಕಂಪನಿಗಳಿಂದ, ಸಂಸ್ಥೆಗಳಿಂದ ಹಾನಿಯಾಗುವದು.

ಶುಕ್ರ ನೇಪಚ್ಯೂನ ಶುಭಯೋಗಃ— ಇದು ಸುಸ್ವಭಾವವನ್ನು ಕೊಡುವುದು. ಗಾಯನ, ಚಿತ್ರಕಲೆಗಳಲ್ಲಿ ಪ್ರೇಮವಿರುವದು; ಪ್ರಗತಿಯೂ ಆಗುವದು. ಸುಂದರ ವಸ್ತುಗಳನ್ನು ಸಂಗ್ರಹಿಸುವರು. ಉತ್ತಮ ಕವಿಗಳೂ, ಗಾಯಕರೂ ತಂತುವಾದ್ಯ ವಿಶಾರದರೂ ಈ ಯೋಗದಲ್ಲಿ ಹುಟ್ಟುವರು. ಸ್ವಪ್ನ ಸೃಷ್ಟಿಯಲ್ಲಿ ರಮಮಾಣರು. ಭಕ್ತಿಮಂತರು ಆಸ್ತಿಕರು ಆಗುವರು.

ಶುಕ್ರ ರಾಹುವಿನ ನವಪಂಚಮ ಯೋಗ; ತ್ರಿಕೋಣ ಯೋಗವುಂಟಾದರೆ ಹೆಂಡತಿಯು ಉಚ್ಚ ಕುಲದವಳು ದೊರಕುವಳು. ಪರಸ್ತ್ರೀಯರನ್ನು ಮಾತೃ ಸಮಾನವೆಂದು ಪರಿಗಣಿಸುವರು.

ಮಂಗಳ

ಮಂಗಳನು ಒಂದು ರಾಶಿಯಲ್ಲಿ ವಕ್ರಿ ಆದರೆ ಕೆಲವು ತಿಂಗಳು ಅವನು ಮಾರ್ಗಿಯಾಗುವದಕ್ಕೆ ಬೇಕಾಗುತ್ತವೆ. ಆದ್ದರಿಂದ ಅವನಿಗೆ ವಕ್ರನೆಂಬ ಹೆಸರು ಬಂದಿರುವದು. ಅವನು ಸ್ತಂಭೀಭೂತನಾಧಾಗ ಕುಜ ಸ್ತಂಭ ವೆನ್ನುವರು. ಈ ವೇಳೆಯಲ್ಲಿ ಅನಿಷ್ಟ ಫಲಗಳುಂಟಾಗುವವು. ಅಗ್ನಿ ಪ್ರಳಯ, ದಾಹಗಳು, ಖೂನಿ ಮಾರಾಮಾರಿ, ಅಪಘಾತಗಳು, ದರೋಡೆಗಳು, ಯುದ್ಧ ಗಳು— ಇವುಗಳಿಗೆ ಸುಗ್ಗಿಯ ಕಾಲವು ಬರುವದು. ಜ್ಯೋತಿರ್ವಿದರು ಇವನಿಗೆ ಪರಾಕ್ರಮ, ವಿಜಯ, ವಿಖ್ಯಾತಿ, ಸಂಗ್ರಾಮ, ಸಾಹಸ, ಸೇನಾಧಿ ಪತ್ಯ ದಂಡನೇತೃತ್ವ, ಕೊಡಲಿ ಕುಂತ ಕುಠಾರಗಳು, ಧನುರ್ಬಾಣ ನೈಪುಣ್ಯ, ಧೈರ್ಯ, ಗಾಂಭೀರ್ಯ, ಕ್ರೋಧ, ಶತ್ರುವೃದ್ಧಿ, ಆಗ್ರಹ, ಅವಗ್ರಹ, ಪರಾಪವಾದ, ಸ್ವಾತಂತ್ರ್ಯ, ಧಾತು, ಭೂಮಿ, ಕೆಂಪು ಫಲ ಕುಸುಮಗಳು, ವಿದ್ರುಮ, ಸೇನಾಪತಿ, ದುರ್ಗ ಇವುಗಳ ಕಾರಕತ್ವವನ್ನು ಕೊಟ್ಟಿರುವರು.

ಈ ಗ್ರಹವು ಉಷ್ಣರುಕ್ಷ, ದಾಹಕಾರಕ, ಉದ್ಯೋಗಿ, ಸಾಹಸಿ, ವಂಧ್ಯ, ಪುರುಷ ಪ್ರಕೃತಿಯವನೆಂದು ತಿಳಿಯುವರು. ಕುದಿಯುವ ಪದಾರ್ಥ ಗಳು, ದಾಹಜನಕ ತೈಲಗಳು, ತೀವ್ರ ಔಷಧಗಳು, ಆಮ್ಲಾರ್ಕ, ಉಷ್ಣ ಖಾರ, ಉಗ್ರವಾಸನೆ ಬರುವ ಪದಾರ್ಥಗಳು, ವೈರ, ಕಲಹ, ಅಗ್ನಿಯಿಂದ, ಶಸ್ತ್ರದಿಂದ ಘಾಯವಾಗುವದು— ಇವೆಲ್ಲ ಮಂಗಳನ ಅಧಿಕಾರದಲ್ಲಿ ಬರು ವವು. ಕಬ್ಬಿಣ, ಉಕ್ಕು, ಯುದ್ಧದ ಶಸ್ತ್ರಾಸ್ತ್ರಗಳು, ಕತ್ತರಿ, ಚಾಕು ಇತ್ಯಾದಿ ವಸ್ತುಗಳ ಕಾರಕನು. ಚೌರ್ಯ, ಅಪಘಾತ, ದರೋಡೆ, ಲಷ್ಕರ ದಲ್ಲಿ ಕೀರ್ತಿ, ಬಲ, ಮಹತ್ವಾಕಾಂಕ್ಷೆ, ಶಕ್ತಿ ಸಾಮರ್ಥ್ಯ, ಪುರುಷತ್ವ ರಾಗ ಕ್ರೋಧ, ಮದ ಮತ್ಸರ, ಅಗ್ನಿಪ್ರಳಯ, ವಿಷಪ್ರಯೋಗ, ಜ್ವರ, ವಿಷಮ ಜ್ವರ, ಉನ್ಮಾದ, ದ್ರೋಹ, ನಿಂದೆ, ಪೋಲೀಸ, ಫೌಜದಾರಿ ಖಟ್ಲೆಗಳು, ತುರಂಗವಾಸ, ಕೈದು, ಮೃತ್ಯು, ಪುರುಷ ಬಂಧುಗಳು— ಇವುಗಳ ದರ್ಶ ಕನು ಮಂಗಳನಾಗಿರುವನು.

ಡಾಕ್ಟರ, ಸರ್ಜನ್, ವೈದ್ಯ, ರಸಾಯನ ಶಾಸ್ತ್ರಜ್ಞರು ಮಂಗಳನ ಅಧಿಕಾರದಲ್ಲಿ ಬರುವರು. ಶಸ್ತ್ರಕರ್ತರು, ಅಗ್ನಿಯಿಂದ ಉಪಜೀವನ ಮಾಡು ವವರು, ಪತ್ತಾರರು, ಕಮ್ಮಾರರು, ಮೆಕ್ಯಾನಿಕಲ್ ಇಂಜನೀಯರ, ಅಡಿಗೆ- ಯವರು ಇವರೆಲ್ಲರ ಆಧಿಪತ್ಯವು ಮಂಗಳನ ಕಡೆಗಿರುವದು. ಬಲಿಷ್ಠ ಮಂಗಳನು ಯೋಗಕಾರಕನಾಗಿರುವನು. ಬಲಿಷ್ಠ ಮಂಗಳನಿರುವವರು ಸಶಕ್ತರಿರುವರು. ಸಾಹಸಿಗಳು, ಸಿಟ್ಟಿನವರು, ಆತ್ಮಾವಿಶ್ವಾಸಿ, ಕಲಹ ಪ್ರಿಯರು, ಒರಟು ಸ್ವಭಾವದವರು, ಯೋದ್ಧಾ, ಸಂಕಟದ ಎಚ್ಚರವಿಲ್ಲದ- ವರು, ಆತ್ಮಪ್ರೌಢಿಮೆ ಕೊಚ್ಚುವವರು ಆಗುವರು.

ದುರ್ಬಲ ಮಂಗಳನಿದ್ದರೆ ನಿರ್ಲಜ್ಜರು, ವಾಚಾಳರು, ಚೋರ ಕರ್ಮ ಕುಶಲರು, ದ್ರೋಹಿಗಳು, ಕ್ರೂರ ಕರ್ಮಿಗಳು ಇರುವರು.

ಮಂಗಳನ ವರ್ಣ ರಕ್ತ. ಇಂದಿನ ಕಾಲದಲ್ಲಿ ಈ ಬಣ್ಣವನ್ನು ಅಪ ಘಾತ ಸೂಚಕವೆನ್ನುವರು. ರೇಲ್ವೆ, ಟ್ರಾಮ ಗಾಡಿಗಳಿಗಾಗಿ ಉಪಯೋಗಿ ಸುವರು. ಸಾಮರ್ಥ್ಯದ ಬಣ್ಣವು ಕೆಂಪು. ಮನುಷ್ಯನು ಸಿಟ್ಟಿಗೆದ್ದಾಗ ಅವನ ತೇಜಸ್ಸು ಪ್ರಕಟವಾಗುವದು. ಅವನ ಮೋರೆ ಕೆಂಪಗಾಗುವದು. **“ಪ್ರಾಯಃ ಸ್ವಂ ಮಹಿಮಾನಂ ಕೋಪಾತ್ ಪ್ರತಿಪದ್ಯತೇ ಜಂತುಃ”** ಎಂದು ಕಾಳಿದಾಸನೂ ಹೇಳಿರುವನು.

“ ಸತ್ವಂ ಕುಜಃ ” ಎಂದು ಜ್ಯೋತಿಷಿಗಳ ಭಾಷೆಯು ಆ ತತ್ವಕ್ಕನು ಸರಿಸಿ ಇರುವದು. ಪಾಶ್ಚಾತ್ಯರು ಮಂಗಳನನ್ನು ಯುದ್ಧದ ದೇವತೆಯೆಂದು ಕರೆಯುವರು. ಆಕಾಶದಲ್ಲಿ ಮಂಗಳನೊಡನೆ ಇತರ ಗ್ರಹದ ಯುತಿ ಯಾದಾಗ ಯುದ್ಧವಾಯಿತೆಂದು ನಮ್ಮ ಸಂಹಿತಾ ಗ್ರಂಥಕಾರರು ಭಾವಿಸು ತ್ತಾರೆ. ಉತ್ತರ ಶರವಿದ್ದ ಗ್ರಹವು ವಿಜಯಿಯಾಗುವದು. ಅಂತೂ ಮಂಗಳನು ಯುದ್ಧಕಾರಕನು. ಮೇಷ ಸಂಕ್ರಮಣ ಕುಂಡಲಿಯಲ್ಲಿ ಸಪ್ತಮ ದಲ್ಲಿ ಶನಿ ಮಂಗಳ ಯುತಿಯಾದರೆ ಆ ದೇಶದಲ್ಲಿ ಕಲಹ ಮಾರಾಮಾರಿ ದಂಗೆ ಧೋಪೆ, ಯುದ್ಧಗಳಾಗುತ್ತಿರುತ್ತವೆ.

ಮಾನವ ಆಯುಷ್ಯದಲ್ಲಿಯ ಕರ್ತೃತ್ವ ಶಕ್ತಿಯ ವಯಸ್ಸನ್ನು ಮಂಗ ಳನು ತೋರಿಸುತ್ತಾನೆ. ಯುದ್ಧದಲ್ಲಿ ಮಾನ, ಕೀರ್ತಿ, ಬಲ, ಮಹತ್ವಾ-

ಕಾಂಕ್ಷೆಗಳ ಕಾರಕತ್ವವು ಮಂಗಳನ ಕಡೆಗಿರುತ್ತದೆ. ಬಲಾಬಲ ತಾರತಮ್ಯದಿಂದ ಅರ್ಥಮಾಡಬೇಕು.

ಮಂಗಳನ ವರ್ಷ ೨೬೪. ೬೬. ಕಡಿಮೆ ೪೦. ಅದಕ್ಕೂ ಚಿಕ್ಕದು ೧೫. ಪರಿಭ್ರಮಣ ಪದ್ಧತಿಯಲ್ಲಿ ಮಂಗಳನು ೧೫ ವರ್ಷಕ್ಕೊಮ್ಮೆ ಮೂಲ ಕುಂಡಲಿಯಲ್ಲಿರುವ ತನ್ನ ಜಾಗೆಗೆ ಬರುತ್ತಾನೆ. ಈ ಗ್ರಹದ ಉಪಾಸನೆಗಾಗಿ ಕೆಂಪು ಆಕಳು, ಎತ್ತು, ಸುವರ್ಣ, ತಾಮ್ರ, ಹಳದಿ ಅವರಿ, ರಕ್ತ ವಸ್ತ್ರ, ರಕ್ತ ಪುಷ್ಪಗಳನ್ನು ಹೇಳಿರುವರು. ನಮ್ಮಲ್ಲಿ ಈ ಗ್ರಹವು ಭಯಂಕರ ಋಣಕರ್ತಾ ಎಂದು ಹೇಳಿರುವರು. ಋಣಹರಣಕ್ಕಾಗಿ ಮಂಗಳನ ವ್ರತ ಮಾಡಬೇಕು. ೨೧ ಮಂಗಳವಾರ ಮಂಗಳನ ಸ್ತೋತ್ರ ಪಠನ ಮಾಡಬೇಕು. ಸುಬ್ರಹ್ಮಣ್ಯನ ಉಪಾಸನೆಗಳನ್ನು ಹೇಳಿರುವರು. ಸಾಮರ್ಥ್ಯಕ್ಕಾಗಿ ಮಂಗಳನ ಉಪಾಸನೆ ಮಾಡಬೇಕು. ಕುಂಡಲಿಯಲ್ಲಿ ಯಾವ ಗ್ರಹವು ಪೀಡಿತವದೆ ನೋಡಿ ಉಪಾಸನೆಯನ್ನು ನಿರ್ಣಯಿಸಬೇಕು.

ಮಂಗಳನ ಕೇಂದ್ರ ಪ್ರತಿಯೋಗಗಳು ಅನಿಷ್ಟವಾದವುಗಳು ೮ ರಲ್ಲಿರುವ ಅವನ ದೃಷ್ಟಿಯ ಬಗೆಗೆ ಇನ್ನೂ ಸಂಶೋಧನವಾಗಬೇಕಾಗಿರುವದು.

ಮೇಷ, ವೃಶ್ಚಿಕಗಳು ಮಂಗಳನ ಸ್ವನಿಕೇತನಗಳು. ಅವನು ಭೂಮಿ ಪುತ್ರನು. ಪೃಥ್ವಿ ರಾಶಿಯಾದ ಮಕರದಲ್ಲಿ ಉಚ್ಚನಿರುತ್ತಾನೆ. ಕನ್ಯಾ ರಾಶಿಯಲ್ಲಿಯೂ ಒಳ್ಳೇ ಫಲ ಕೊಡುವನೆಂದು ಕೆಲವರ ಮತ. ಪೃಥ್ವಿ ರಾಶಿಗಳಾದ ಕನ್ಯಾ, ವೃಷಭ, ಮಕರಗಳಲ್ಲಿ ಗುರು, ಶುಕ್ರ, ಚಂದ್ರರ ಶುಭ ಸಂಬಂಧದಲ್ಲಿದ್ದರೆ ದ್ರವ್ಯ ಪ್ರಾಪ್ತಿ, ಕರ್ತೃತ್ವ, ಭೂಮಿ ಲಾಭಗಳನ್ನು ಕೊಡುವನು. ಕರ್ಕ ರಾಶಿಯಲ್ಲಿ ಅವನು ನೀಚನಿರುವನು. ಅಲ್ಲಿ ಪೀಡಿತನಿದ್ದಾಗ ಅವನ ಅನಿಷ್ಟ ಫಲವು ಹೆಚ್ಚುವದು. ಮಾತೃಕಷ್ಟ, ನೀಚ ಮನೋವೃತ್ತಿ, ತೇಜೋಭಂಗ, ಅಧಿಕಾರಭಂಗ, ಋಣ ಡೌಲುಗಳು ಕಂಡು ಬರುವವು. ದಶಮದಲ್ಲಿ ಕರ್ಕ ರಾಶಿಯ ಮಂಗಳನು ಅಧಿಕಾರ ಭಾಗ್ಯ ನೌಕರಿಗಳಲ್ಲಿ ಅಡ್ಡಿಗಳನ್ನು ತರುವನು. ಕರ್ಕ ರಾಶಿಯ ತರುವಾಯ ಮೀನ ರಾಶಿಯ ಮಂಗಳನ ಫಲಗಳೂ ಅನಿಷ್ಟವಾದವು. ಮೇಷ, ಸಿಂಹ, ಧನೂ ಅಗ್ನಿರಾಶಿಯಲ್ಲಿಯ ಅಶ್ವಿನೀ, ಮಘಾ, ಮೂಲಾಗಳಲ್ಲಿಯ ಮಂಗಳನು

ಮನುಷ್ಯನ ಉನ್ನತಿಯನ್ನು ಮಾಡುವನು. ಅಧಿಕಾರ, ಭಾಗ್ಯವೃದ್ಧಿ ಕಾರಕನಾಗುವನು. ಮಂಗಳನು ಸಾಮರ್ಥ್ಯ, ಬಲ, ಓಜಸ್ಸುಗಳ ಕಾರಕನು. ರಜೋಗುಣಿ. ಅವನು ವಾಯು ರಾಶಿಯಲ್ಲಿ ಮಿಥುನ, ತುಲಾ, ಕುಂಭಗಳಲ್ಲಿ ವಿದ್ಯೆಯ ಅಹಂಕಾರ ಪ್ರದರ್ಶಕನಾಗುವನು.

ಮಂಗಳ ಫಲವು ಖಾತ್ರಿಯಿಂದ ಅನುಭವಕ್ಕೆ ಬರುವದೆಂದು ಆರ್ಯ ಗ್ರಂಥಕಾರರು,

"ಲಗ್ನೇ ವ್ಯಯೇಚ ಪಾತಾಲೇ ಜಾಮಿತ್ರೇಚಾಷ್ಟಮೇ ಕುಜೇ |
ಕನ್ಯಾ ಭರ್ತೃ ವಿನಾಶಾಯ ಭರ್ತಾ ಕನ್ಯಾಂ ವಿನಾಶಯೇತ್ ‖"

ಎಂದು ಭಾವಿಸಿರುವರು. ಇದನ್ನು ಕುಜ ದೋಷವೆಂದು ಕರೆಯುವರು. ಇದನ್ನು ಮೊದಲು ಕೇರಳದಲ್ಲಿ ನೋಡುತ್ತಿದ್ದರು. ತದನಂತರ ಮಹಾರಾಷ್ಟ್ರೀಯರು ಈ ಭೇರಿನಾದವನ್ನು ಎಲ್ಲೆಡೆಗೆ ಕೇಳುವಂತೆ ಮಾಡಿದರು. ಇದಕ್ಕೆ ಹದಿನೆಂಟು ಅಪವಾದಗಳಿರುವವು. ಅವನ್ನೆಲ್ಲ ನೋಡುವದನ್ನು ಬಿಡುತ್ತಾರೆ. ಇದರಿಂದ ಕನ್ಯಾವಿವಾಹ ಸಮಸ್ಯೆ ಮತ್ತಷ್ಟು ಜಟಿಲವಾಗಿದೆ. ೧, ೧೨, ೪, ೭, ೮. ಅಂತೂ ೧೨ ಸ್ಥಾನಗಳಲ್ಲಿ ೫ ಸ್ಥಾನಗಳಲ್ಲಿ ಮಂಗಳನಿರಬಾರದು. ಇದರಂತೆ ಶುಕ್ರನಿಂದ, ಚಂದ್ರನಿಂದ ನೋಡಬೇಕು. ಸಪ್ತೇಶನಿಂದ ನೋಡಬೇಕು. ಅಂತೂ ಮಂಗಳನಿಗೆ ಸ್ಥಾನವಿಲ್ಲದಂತಾಗುವದು. ಅವನು ಕುಂಡಲೀ ಬಿಟ್ಟು ಪರತ ಮಂಗಳ ಲೋಕಕ್ಕೆ ಹೋಗಬೇಕೆ ?

ಇದು ವಿಚಾರಣೀಯ ಪ್ರಶ್ನವು. ಶ್ರೀ ನವಾಥೆಯವರು ಸುಲಭ ಜಾತಕ ಭಾಗ ೫ ರಲ್ಲಿ ಕುಜದೋಷದ ಬಗೆಗೆ ಮನನೀಯ ವಿಚಾರಗಳನ್ನು ವ್ಯಕ್ತಪಡಿಸಿರುವರು. ಅವುಗಳನ್ನು ಕುಜದೋಷ ವಿಚಾರಿಸುವವರು ನೋಡಬೇಕು. ಕುಜದೋಷಕ್ಕೆ ಒಂದು ಅಪವಾದವಿದೆ. ಇದೇ ಸ್ಥಾನದಲ್ಲಿ ರಾಹು ಶನಿಗಳಿದ್ದರೆ ಕುಜ ದೋಷ ಹಾರುತ್ತದೆ. "**ಸಮಂ ಸಮೇನ ಯೋಜಯೇತ್**" ಇದು ಹೋಮಿಯೋ ಪಥಿ ತತ್ವವು. ಇದನ್ನು ಮಾಧವೀ ವಸಂತರು ಹೇಳುವಂತೆ ಗುರು ಶುಕ್ರರ ಶುಭ ದೃಷ್ಟಿಯಿಂದ ಕುಜ ದೋಷವನ್ನು ಹಾರಿಸುತ್ತೇನೆಂದರೆ ಸಮಂಜಸವಾದೀತು! ಶ್ರೀ ಬಿ. ವ್ಹಿ. ರಾಮನ್ನರೂ ಕುಜದೋಷ ನಿವಾರಣೆಯ ಬಗೆಗೆ ತಮ್ಮ ಮುಹೂರ್ತ ಸಾಧನೆಯ

ಪುಸ್ತಕದಲ್ಲಿ ಕೆಲವು ವಿಚಾರಗಳನ್ನು ವ್ಯಕ್ತಪಡಿಸಿರುವರು. ಅವುಗಳನ್ನು ವಾಚಕರು ವಿಚಾರಿಸಬೇಕು. ನಾವು ಇಲ್ಲಿ ಹೇಳುವದೇನಂದರೆ ಬಲಿಷ್ಠ ಮಂಗಳನಿಂದ ಅವನ ಸದ್ಗುಣಗಳು ಕಾಣುವವು. ಕಾರ್ಯ, ಸಾಹಸ, ಧೈರ್ಯ ಇತ್ಯಾದಿ ಬಲಿಷ್ಠ ಮಂಗಳನ ಗುಣಧರ್ಮಗಳು. ದುರ್ಬಲ ಮಂಗಳನಿಂದ ಕುಜ ದೋಷವುಂಟಾಗುವದು. ಆದರೆ ಅವನೊಡನೆ ಗುರು ಶುಕ್ರರ ತ್ರಿರೇಕಾದಶ ತ್ರಿಕೋಣ ಯೋಗಗಳಿದ್ದರೆ ಕುಜದೋಷಕ್ಕೆ ಪ್ರಾಶಸ್ತ್ಯ ಬರಲಾರದು. ಅಂತೂ ಸೂಕ್ಷ್ಮ ವಿಚಾರದಿಂದ ಹೇಳಬೇಕು. ವಧೂವರರ ಕುಂಡಲಿಯಲ್ಲಿ ದೀರ್ಘಾಯುಷ್ಯ ಯೋಗವಿದ್ದರೆ ಕುಜದೋಷ ಏನೂ ಮಾಡಲಾರದು. ಕುಂಡಲಿಯಲ್ಲಿಯ ಇತರ ಮಹತ್ವದ ಎಲ್ಲ ಯೋಗ ಗಳನ್ನೂ ವಿಚಾರಿಸದೆ ಬರೀ ಮಂಗಳನ ಮೇಲೆಯೇ ಭಾರವನ್ನು ಊರು ವದು. "**ವಾಖ್ಯಸ್ಖಲಿತ ಮೇತತ್**" ರವಿ ಮಂಗಳರು ಪುರುಷ ಗ್ರಹ ಗಳು. ಅವರ ಬಲವನ್ನು ಸ್ತ್ರೀಯರ ಕುಂಡಲಿಯಲ್ಲಿ ವಿಚಾರಿಸುವದು ಉಚಿತ.

ಇನ್ನೂ ಒಂದು ಮಾತು. ರವಿ ಪಿತೃಕಾರಕ ಮಂಗಳ ಪತಿಕಾರಕ. ಪಿತೃಸುಖ ಪತಿ ಸುಖಕ್ಕಾಗಿ ರವಿ ಮಂಗಳರ ಬಲವನ್ನು ನೋಡುವಲ್ಲಿ ಔಚಿತ್ಯವಿರುವದು. ಸಾಯನವಾದಿಗಳೆಲ್ಲ ರವಿಯನ್ನು ಪತಿ ಸುಖಕ್ಕೂ ವಿಚಾರಿಸಬೇಕೆಂದು ಹೇಳುವರು. ಇದರಲ್ಲಿ ಎಷ್ಟರ ಮಟ್ಟಿಗೆ ಔಚಿತ್ಯವಿರುವ ದೆಂಬುದನ್ನು ಸಾಯನ–ನಿರಯನ ವಾದಿಗಳಿಬ್ಬರೂ ಅನುಭವದ ದೃಷ್ಟಿ ಯಿಂದ ವಿಚಾರಿಸಬೇಕು. ಪತಿ ಸುಖಕ್ಕಾಗಿ ಸಪ್ತಮಭಾವ, ಮಂಗಳನ ವಿಚಾರವನ್ನು ಮಾಡಬಹುದು. ಆತ್ಮಬಲ, ಪಿತೃಬಲಕ್ಕಾಗಿ ರವಿ, ೯–೧೦ ಭಾವಗಳನ್ನು ವಿಚಾರಿಸಬಹುದು. ವರಾಹಮಿಹಿರಾಚಾರ್ಯರು ಯಾವು ದೊಂದು ಸಂಗತಿಯನ್ನು "**ಪರೀಕ್ಷ್ಯ ಗ್ರಾಹ್ಯ**" ಎಂದು ಹೇಳುತ್ತಾರೆ. "**ಕಚ್ಚಿ ದೇತತ್ ಶ್ರುತಂ, ಪಾರ್ಥ.... ಯಥೇಚ್ಛಸಿ ತಥಾ ಕುರು**" ಕುಜದೋಷ ಗೊಂದಲವೆಬ್ಬಿಸುವ ನಾಮಧಾರಿ ಜ್ಯೋತಿಷಿಗಳಿಗೆ ಹೇಳ ಬೇಕಾಗಿದೆ.

ಮಂಗಳನ ಭಾವಗತ ಫಲ

ಲಗ್ನದಲ್ಲಿ:— ಮೇಷ, ಸಿಂಹ, ಧನು ಅಗ್ನಿರಾಶಿಯ ಮಂಗಳನಿದ್ದರೆ ನಿಶ್ಚಯಿ ಮಹತ್ವಾಕಾಂಕ್ಷಿ. ಶೂರ, ಉದಾರ, ಸಿಟ್ಟಿನವನು, ಶೀಘ್ರ ಕೋಪಿ ಇರುವರು. ಪ್ರಯತ್ನ ಶೀಲನಾಗಿರುವನು. ಪೃಥ್ವಿ ರಾಶಿಯಲ್ಲಿ ಮಕರ, ವೃಷಭ, ಕನ್ಯಾ ರಾಶಿಯಲ್ಲಿ ಮಂಗಳನಿದ್ದರೆ ವಿಷಯಿ, ಕಲಹಪ್ರಿಯ, ಮತ ಲಬಿ, ಖುನಸಿ ಇರುವರು. ಶುಭಯೋಗ, ಅಶುಭಯೋಗಗಳನ್ನು ನೋಡಿ ಗುಣಾವಗುಣಗಳನ್ನು ಪೃಥಕ್ಕರಿಸಬೇಕು. ಲಗ್ನದಲ್ಲಿ ವೃಷಭ ರಾಶಿಯ ಮಂಗಳನು ಒಳ್ಳೆಯ ಉಡುಪು-ತೊಡಪುಗಳಲ್ಲಿ ಆಸಕ್ತಿ ತೋರಿಸುವನು. ಸ್ತ್ರೀಯರ ವಿಷಯದಲ್ಲಿ ಆಸಕ್ತಿಯಿರುವದು. ಪೀಡಿತನಿದ್ದರೆ ವ್ಯಸನಿ. ಶುಕ್ರನ ರಾಶಿಗಳಿಂದ ವೃಷಭ ತುಲೆಯ ರಾಶಿಯ ಮಂಗಳನಿದ್ದರೆ ವಿಷಯಿ ಲಂಪಟತೆ ಇರುವದು. ಶುಭ ದೃಷ್ಟನಾಗಿದ್ದರೆ ಒಳ್ಳೇ ಫಲವನ್ನು ಕೊಡು ವನು.

ಭೂಲಾಭ, ಧನಲಾಭಗಳ ಸೂಚಕನಾಗುವನು. ವಾಯು ರಾಶಿಯಲ್ಲಿ ಮಿಥುನ, ತುಲಾ, ಕುಂಭ ರಾಶಿಯಲ್ಲಿ ಮಂಗಳನಿದ್ದರೆ ವಿದ್ಯಾವ್ಯಾಸಂಗಿ ಯಾಗಿರುವನಲ್ಲದೆ ಪ್ರವಾಸದ ಅಭಿರುಚಿಯಿರುವದು.

ಜಲರಾಶಿಯಲ್ಲಿ ಕರ್ಕ, ಮೀನ ರಾಶಿಗಳಲ್ಲಿ ಅಶುಭ ದೃಷ್ಟ ಮಂಗಳನು ಅನಿಷ್ಟ ಫಲವನ್ನು ಕೊಡುವನು. ವ್ಯಸನಿ, ವ್ಯಭಿಚಾರಿಗಳಿರುವರು. ಆದರೆ ವೃಶ್ಚಿಕದ ಮಂಗಳನು ಡಾಕ್ಟರ, ವೈದ್ಯರು, ರಸಾಯರ ಶಾಸ್ತ್ರಜ್ಞರಿಗೆ ಪೋಷಕನಿರುವನು. ಇವರು ಪೋಲೀಸ, ಮಿಲಟರಿ, ಡಿಟೆಕ್ಟಿವ್ಹ ಖಾತೆಗೆ ಯೋಗ್ಯರಿರುತ್ತಾರೆ. ಸ್ವತಂತ್ರರು, ಶೂರರು, ಮಹತ್ವಾಕಾಂಕ್ಷಿಗಳು, ಧೀರೋ ದಾತ್ತರು ಇರುವರು. ಲಗ್ನದಲ್ಲಿ ಮಂಗಳನಿರುವಾಗ ಮುಖ, ತಲೆಯಲ್ಲಿ ತಿಲ, ಮಶಕ ಚಿಹ್ನಗಳಿರುವವು. ಪೀಡತನಿದ್ದರೆ ವ್ರಣ, ಘಾಯ, ಶಸ್ತ್ರಾ- ಘಾತಗಳ ಚಿಹ್ನಗಳಿರುವವು.

ಧನಭಾವದಲ್ಲಿ:— ಧನಭಾವದಲ್ಲಿ ಮಂಗಳನಿದ್ದರೆ ದುಡ್ಡಿನ ಬಗೆಗೆ ನಿಷ್ಕಾಳಜಿ ಇರುವದು. ಖರ್ಚಿನ ವಿಚಾರದಲ್ಲಿ ಹಿಂದು-ಮುಂದಿನ ವಿಚಾರ ವಿರುವದಿಲ್ಲ. ಸಟ್ಟಾ, ಜಿದ್ದಿನ ವ್ಯವಹಾರದಲ್ಲಿ ಮುಂದಿನ ವಿಚಾರವಿಲ್ಲದೆ ನುಗ್ಗುವರು. ಇವರಿಗೆ ಸಾಂಪತ್ತಿಕ ಅಡಚಣಿ ಲುಕ್ಸಾನಗಳು ಉಂಟಾಗುತ್ತವೆ. ಇವಕ್ಕೆ ಎದೆಗೊಡಬೇಕಾಗುತ್ತದೆ. ಧನಸ್ಥಾನದಲ್ಲಿ ಶುಭ ಸಂಬಂಧಿತ ಮಂಗಳನಿದ್ದರೆ ದುಡ್ಡು ದೊರಕಿಸುವ ಕರಾಮುತ್ತು ಇರುವದು. ಆದರೂ ಇವರು ಸಂಚಯ ಮಾಡಲಾರರು. ಧನಸ್ಥಾನದಲ್ಲಿ ಮಂಗಳನಿರುವವರು ಉದಾರ ಭಾವದಿಂದ ಖರ್ಚುಮಾಡಿ ಬಿಡುವರು.

ತೃತೀಯದಲ್ಲಿ:— ತೃತೀಯ ಸ್ಥಾನದಲ್ಲಿ ಮಂಗಳನಿದ್ದರೆ ಯುದ್ಧ ಪ್ರವೃತ್ತಿ ಕಂಡು ಬರುವದು. ಕರ್ತೃತ್ವ ಶಕ್ತಿ ಇರುವದು. ಸ್ವಭಾವವು ಹಟ, ಕರಾರಿ, ತಮ್ಮದೇ ನಿಜವೆನ್ನುವದಿರುವದು. ಶೀಘ್ರ ಕೋಪಿ ಇರುವರು. ಇವರಿಗೆ ಸಹೋದರ ಸುಖವು ಚೆನ್ನಾಗಿರುವದಿಲ್ಲ. ಅವರೊಡನೆ ತಂಟೆಯಾಗುವದು. ನೆರೆಯವರ ಕೂಡ ಮತ್ತೈಕ್ಯ ಉಂಟಾಗುವದಿಲ್ಲ. ೩ ರಲ್ಲಿ ಮಂಗಳನು ಪೀಡಿತನಿದ್ದರೆ ರೇಲ್ವೆ ಮೊದಲಾದ ಸಮೀಪದ ಪ್ರವಾಸದಲ್ಲಿ ಅಪಘಾತದ ಸಂಭವವಿರುವದು. ಪೀಡಿತ ಮಂಗಳನಿಂದ ಮಾನಸಿಕ ತ್ರಾಸವೂ ಉಂಟಾಗುವದು. ಇತರ ಗ್ರಹಸ್ಥಿತಿ ಪ್ರತಿಕೂಲವಿದ್ದರೆ ಹುಚ್ಚು ಹಿಡಿಯುವ ಸಂಭವವಿರುವದು. ಇವರು ಪತ್ರವ್ಯವಹಾರದಲ್ಲಿ ಕಾಳಜಿ ತಕ್ಕೊಳ್ಳಬೇಕು. ಇವರ ಕಟೂಕ್ತಿಗಳಿಂದ ಕಲಹ ಉಂಟಾಗುವ ಸಂಭವ ವಿರುವದು.

ಚತುರ್ಥದಲ್ಲಿ: ೪ ರಲ್ಲಿ ಮಂಗಳನು ಪೀಡಿತನಿದ್ದರೆ ಅಗ್ನಿಭಯ, ಚೋರಭಯ, ಮಾತೃಕಷ್ಟ, ತಾಯಿ ತಂದೆಗಳೊಡನೆ ವಿರೋಧ ಗೃಹಸುಖ ನ್ಯೂನತೆ ಇತ್ಯಾದಿ ಅಶುಭಗಳು ತೋರುವವು. ಗೃಹ ಭೂಮಿ ಇವುಗಳ ಬಗೆಗೆ ತ್ರಾಸವಾಗುವದು. ಸಟ್ಟಾ ವ್ಯವಹಾರದಲ್ಲಿ ಒದೆತ ತಿನ್ನುವರು. ಈ ಸ್ಥಾನದಲ್ಲಿಯ ಮಂಗಳನ ಪ್ರವೃತ್ತಿ ನಾಶದ ಕಡೆಗಿರುವದು. ವಾರ್ಧಕ್ಯದಲ್ಲಿ ತೊಂದರೆ; ಶುಭ ದೃಷ್ಟನಿದ್ದರೆ ತೊಂದರೆಗಳು ಕಡಿಮೆ.

೯—

ಪಂಚಮದಲ್ಲಿ:— ಇಲ್ಲಿ ಅಥವಾ ೧೧ ರಲ್ಲಿ ಕ್ರೂರ ನಕ್ಷತ್ರದ
ಮಂಗಳನಿದ್ದರೆ ಗರ್ಭಪಾತ ಸೂಚಕನು. ಅಶುಭ ದೃಷ್ಟ ಮಂಗಳ
ತಾಮಸೀ ಸ್ವಭಾವದ ಸಂತತಿ ಜನಕನಾಗಬಹುದು. ಸಟ್ಟಾ ವ್ಯವಹ
ದಲ್ಲಿ ಯಶಸ್ಸು ಸಿಗಲಾರದು. ಸ್ತ್ರೀಯರ ಕುಂಡಲಿಯಲ್ಲಿ ದುರ್ಬಲ ಮ
ಳನು ಪ್ರಸೂತಿ ವೇದನೆಯನ್ನು ಸೂಚಿಸುವನು. ದೋಷಿ ಜ್ವರವ
ಹುಟ್ಟಿಸುವ ಸಂಭವ. ಕ್ರೂರ ನಕ್ಷತ್ರದಲ್ಲಿದ್ದರೆ ಹೆಚ್ಚು ತೊಂದರೆ. ಶ
ದೃಷ್ಟ ಬಲವಾನ್ ಮಂಗಳನಿದ್ದರೆ ಸಂತತಿಯಲ್ಲಿ ಸಾಹಸ ಕಾರ್ಯಗ
ತೋರುವವು.

ಷಷ್ಠದಲ್ಲಿ:— ೬ ರಲ್ಲಿ ಮಂಗಳನು ಹರ್ಷಸ್ಥಾನದಲ್ಲಿ ಇರುವನೆಂ
ಆರ್ಯಜ್ಯೋತಿರ್ವಿದರು ತಿಳಿಯುತ್ತಾರೆ. ಶುಭ ಸಂಬಂಧಿತ ಮಂಗಳ
ಪೋಲೀಸ, ಮಿಲಿಟರಿ, ವೈದ್ಯಕಿ, ಡಾಕ್ಟರಕಿ, ಮೆಕ್ಯಾನಿಕಲ್ ಇಂಜನೀ
ರಿಂಗದಲ್ಲಿ ಉಪಜೀವಿಕೆಯನ್ನು ಸೂಚಿಸುವನು. ದುರ್ಬಲ ಮಂಗಳನಿ
ನೌಕರ ಚಾಕರ, ಚೋರರ ಭಯವಿರುವದು. ಅರಿವೆ ಅಂಚಡಿಗಳ ಬ
ಫಾಜಲ ಖರ್ಚು ಮಾಡುವರು. ದಾಹಜನ್ಯ ವಿಕಾರವು ತೋರುವ
ಮಂಗಳನಿರುವ ರಾಶಿ ಸೂಚಕ ಅವಯವದಲ್ಲಿ ವಿಕಾರ ರೋಗ ಸಂಭ
ಸ್ಥಿರ ರಾಶಿಯಲ್ಲಿ ಕಂಠವಿಕಾರ, ಹೃದಯ ವಿಕಾರ, ಮೂತ್ರಖಡಾ ಉಂಟ
ಬಹುದು. ದ್ವಿಸ್ವಭಾವ ರಾಶಿಯಲ್ಲಿ ಕಫಕ್ಷಯ, ಪುಪ್ಪುಸ ವಿಕಾರ ದರ್ಶಕ
ಚರರಾಶಿಯಲ್ಲಿ ಸುಡುವದು, ಮೂತ್ರಪಿಂಡ ವಿಕಾರ, ಮಧುಮೇಹ, ಸಂ
ವಾತ ರೋಗ ಜನಕನು. ರಾಶಿ ದುರ್ಬಲ, ಯೋಗ ದುರ್ಬಲ ಮಂಗಳ
ಇಂಥ ವಿಕಾರಗಳನ್ನು ಹುಟ್ಟಿಸುವನು.

ಸಪ್ತಮದಲ್ಲಿ:— ಸಪ್ತಮದಲ್ಲಿ ಮಂಗಳನಿದ್ದರೆ ಪತ್ನಿ ಅಥವಾ ಪ
ಕಲಹಪ್ರಿಯರಿರುವರು. ಪೀಡಿತನಿದ್ದರೆ ವಿವಾಹ ಸುಖಕ್ಕೆ ಅಡ್ಡಿ ಬರುವ
ವಿಭಕ್ತರಾಗಿ ಇರುವ ಪ್ರಸಂಗ ಬರುವದು. ನಿತ್ಯದಲ್ಲಿ ಕಲಹಗಳಾಗು
ಸಂಭವ. ಸುಖ ಸ್ವಲ್ಪ. ಸ್ತ್ರೀ ಸಲುವಾಗಿ ಕಲಹಗಳೇಳುವವು. ಕ್ಷುಲ್ಲ
ಕಾರಣಗಳಿಂದ ಸಿಟ್ಟಿಗೇಳುವರು. ಸಪ್ತಮದಲ್ಲಿ ಪೀಡಿತನಿರುವ ಮಂಗಳ
ಜೈಮಿನಿಯ ಚಂಡೀ ಕಥೆಯನ್ನು ನೆನಪಿಗೆ ತಂದು ಕೊಡುವ ಸ್ತ್ರೀಯನ

ಗಂಟು ಹಾಕುವನು. ಕರ್ಕ, ಮೀನ ರಾಶಿಯ ಮಂಗಳನಿಂದ ಮತ್ತಿಷ್ಟು ಪೀಡೆ ಹೆಚ್ಚು. ಸ್ತ್ರೀಯರ ಕುಂಡಲಿಯಲ್ಲಿಯೂ ಇದು ಕುಜದೋಷವು. ಭರ್ತೃಸುಖಕ್ಕೆ ವಿರೋಧಕವು. ಪೀಡಿತ ಮಂಗಳನು ಲಗ್ನಾಂಶದ ಇದಿರಿಗಿದ್ದರೆ ಅಪಘಾತ ಸೂಚಕನು.

ಅಷ್ಟಮದಲ್ಲಿ:— ೮ ರಲ್ಲಿ ಮಂಗಳನು ಅಪಘಾತ ಸೂಚಕನು. ಹರ್ಶಲ ಶನಿಯಿಂದ ಪೀಡಿತನಿದ್ದರೆ ಮೃತ್ಯು ಅಪಘಾತದಿಂದ ಉಂಟಾಗುವದು. ಮೃತರ ಇಸ್ಟೇಟ ಸಲುವಾಗಿ ತಂಟೆಗಳಾಗುವವು. ಸ್ತ್ರೀಧನ ಸಿಗಲಾರದು. ಸ್ವಭಾವವು ಖರ್ಚಿಕವಿರುವದು. ಸ್ತ್ರೀಯೂ ಅದೇ ಸ್ವಭಾವದವಳಿರುವಳು.

ನವಮದಲ್ಲಿ :— ನವಮದಲ್ಲಿ ಮಂಗಳನು ಪೀಡಿತನಿದ್ದರೆ ಧಾರ್ಮಿಕ ಸ್ವಚ್ಛಂದ್ಯವು, ಅಥವಾ ನಾಸ್ತಿಕರು ಆಗುವರು. ತಮ್ಮ ಮತವೇ ನಿಜವಾದದು; ಉಳಿದ ಮತಗಳೆಲ್ಲ ಅಸತ್ಯ ಎಂದು ಹೇಳುವ ಸ್ವಭಾವವಿರುವದು. ಧರ್ಮದ ಹುಚ್ಚು ಇರುವದು. ಹಟವಾದಿಗಳು, ಮತ್ಸರಿಗಳು, ಪರೋತ್ಕರ್ಷ ದ್ವೇಷಿಗಳು ಇರುವರು.

ಇಲ್ಲಿ ಅನುಕೂಲ ರಾಶಿಯಲ್ಲಿ ಮಂಗಳನಿದ್ದರೆ, ಶುಭ ಸಂಬಂಧಿತನಿದ್ದರೆ ಬುದ್ಧಿಯು ಉತ್ತಮ ತೀವ್ರವಾಗಿರುವದು. ಪರರ ಮೇಲೆ ಸಹಜ ವರ್ಚಸ್ಸು ಕೂಡ್ರಿಸುವರು. ತಮ್ಮ ಕಾರ್ಯ ಸಾಧಿಸುವರು. ಉದಾರ ಮನಸ್ಸಿನವರು ಇರುವರು. ಕೈಯಲ್ಲಿ ಕೈಕೊಂಡ ಕಾರ್ಯವನ್ನು ಉತ್ಸಾಹದಿಂದ ಮುಗಿಸುವರು. ಇಲ್ಲಿ ಮಂಗಳನು ಪೀಡಿತನಿದ್ದರೆ ದೂರ ಪ್ರವಾಸ ಕೈಕೊಳ್ಳಬಾರದು. ಸ್ವದೇಶಬಿಟ್ಟು ಪರದೇಶಕ್ಕೆ ಹೋಗಬಾರದು. ಕೋರ್ಟು ನ್ಯಾಯದರಬಾರಗಳಲ್ಲಿ ಹಾನಿಯಾಗುವದು. ಲಹರೀ ಸ್ವಭಾವವು ಕಾಣುವದು. ಬೀಗರು-ಬಿಜ್ಜರಿಂದ ತೊಂದರೆಗಳು ತೋರಿಬರುವವು.

ದಶಮದಲ್ಲಿ :— ದಶಮದಲ್ಲಿ ಮಂಗಳನು ಬಲಿಷ್ಠನಿದ್ದರೆ— "**ದಶಮೇಂಗಾರಕಶ್ಚೈವ ಸುಪುತ್ರಃ ಕುಲದೀಪಕಃ**" ಎಂಬ ಮಾತು ಅನುಭವಕ್ಕೆ ಬರುವದು. ಇಲ್ಲಿ ಮಂಗಳನು ಮೇಷ, ಮಕರ, ವೃಶ್ಚಿಕ,

ಕನ್ಯಾ, ಧನು ರಾಶಿಯಲ್ಲಿ ಇಲ್ಲವೆ ನವಾಂಶದಲ್ಲಿರಬೇಕು. ಅಂಥವರು ಮಹತ್ವಾಕಾಂಕ್ಷಿಗಳೂ ಕರ್ತೃತ್ವ ಶಕ್ತಿಯುಳ್ಳವರೂ ಇರುವರು. ಸಾಮರ್ಥ್ಯಕ್ಕಿಂತ ಹೆಚ್ಚಿನ ಕಾರ್ಯ ಕೈಕೊಂಡು ದೀರ್ಘೋದ್ಯೋಗದಿಂದ ಸಾಧಿಸುವರು. ಅತಿಶಯ ಮಾನಿ, ಅಧಿಕಾರ ಜಯಿಸುವವರು, ಕುಲದೀಪಕರು ಇರುವರು. ದಶಮದಲ್ಲಿ ಮಂಗಳನು ಪೀಡಿತನಿದ್ದು, ಮೀನ ರಾಶಿ, ಕರ್ಕ ರಾಶಿಯಲ್ಲಿ, ಕರ್ಕ, ಮೀನ ನವಾಂಶದಲ್ಲಿ ಇರಬಾರದು. ಹಾಗಿದ್ದರೆ ಭಯಂಕರ ಶತ್ರುತ್ವವು ಉಂಟಾಗುವದು. ಅಧಿಕಾರ ನಷ್ಟವಾಗುವದು. ಲಹರೀ ಸ್ವಭಾವ, ವ್ಯಸನಾಧೀನತೆಗಳು ಕಂಡು ಬರುವವು. ಸಾಧಾರಣವಾಗಿ ಸ್ತ್ರೀಯರ ಕುಂಡಲಿಯಲ್ಲಿ ಪೀಡಿತ ಮಂಗಳನು ೧೦ ರಲ್ಲಿ ಇರಬಾರದು. ಜಗಳಗಂಟುತನವು ಕಂಡು ಬರುವದು.

ಏಕಾದಶದಲ್ಲಿ:— ೧೧ ರಲ್ಲಿ ಮಂಗಳನು ಮಿತ್ರ ಸುಖವನ್ನು ಕೊಡಲಾರನು. ಕಲಹ, ಮಾರಾಮಾರಿಯ ಪ್ರಸಂಗಗಳು ಬರುವವು. ಸಮಾಜದೊಡನೆ ಇವರು ಕೂಡಿ ನಡೆಯಲಾರರು. ಮಿತ್ರರಿಂದ ಧನದ ಹಾನಿ. ಕೆಟ್ಟ ಮಿತ್ರರ ಸಹವಾಸ, ಸಂಗತಿಯಿಂದ ದುರಾಚಾರದ ಅತಿರೇಕವು. ಭ್ರಷ್ಟಶೀಲತ್ವಗಳು ಪುರುಷರ ಕುಂಡಲಿಯಲ್ಲಿ ಕಂಡು ಬರುವವು. ಅವನ ಸ್ತ್ರೀಗೆ ಪ್ರಸೂತಿ ಸಮಯದಲ್ಲಿ ದೇಹಕಷ್ಟ, ಸಂತತಿ ನಾಶಗಳುಂಟಾಗುವವು. ಜಲ ರಾಶಿಯಲ್ಲಿ ಮಂಗಳನು ಅಶುಭ ಫಲವನ್ನು ಹೆಚ್ಚಿಸುವನು. ಈ ಸ್ಥಾನದಲ್ಲಿ ಮಂಗಳನು ಲಗ್ನಾಧಿಪತಿಯಾಗಿದ್ದರೆ, ಅಥವಾ ಮಕರ, ಸಿಂಹ, ಮೇಷ, ಕನ್ಯಾ, ವೃಶ್ಚಿಕ, ಧನು, ವೃಷಭ ರಾಶಿಯಲ್ಲಿದ್ದರೆ, ಇತರ ಗ್ರಹಗಳಿಂದ ಶುಭ ಸಂಬಂಧಿತನಾಗಿದ್ದರೆ, ಸಾಂಪತ್ತಿಕ ಲಾಭ, ಮಿತ್ರರಿಂದ ಉದಯ, ಅಥವಾ ದೊಡ್ಡಿಸ್ತಿಕೆ ಪ್ರಾಪ್ತವಾಗುವದು— ಮೊದಲಾದ ಫಲಗಳು ಕಂಡು ಬರುವವು. ಪ್ರಾಪ್ತಿಯ ಪ್ರಮಾಣದ ಪರಿಮಿತಿ ಚೆನ್ನಾಗಿರುವದು. ಆದರೆ ಇಲ್ಲಿಯ ಮಂಗಳನು ಗುರುವಿನೊಡನೆ ಅಶುಭಯೋಗ ಮಾಡುತ್ತಿದ್ದರೆ ಕೋರ್ಟು, ಸಟ್ಟಾ ವ್ಯಾಪಾರದಲ್ಲಿ ಅಪಯಶ ಕೊಡುವನು. ಸಾಂಪತ್ತಿಕ ಹಾನಿ; ಫಿರ್ಯಾದಿಯ ಪ್ರಸಂಗಗಳು ಬರುವವು.

ದ್ವಾದಶದಲ್ಲಿ:— ೧೨ ರಲ್ಲಿ ಮಂಗಳನಿದ್ದರೆ ಗುಪ್ತ ಶತ್ರುಗಳ

ಚೋರರ, ಲೂಟಿ ಮಾಡುವವರ, ಹಿಂಸ್ರ ಪಶುಗಳ ಭೀತಿ ಇರುವದು. ಇವುಗಳಿಂದ ತ್ರಾಸ. ವ್ಯಯಸ್ಥಾನದಲ್ಲಿ ಪೀಡಿತ ಮಂಗಳನು ತನ್ನ ಕೃತಿಯಿಂದ ಅಪಯಶಸ್ಸನ್ನು ತರುವನು. ದುರ್ಭಾಗ್ಯ, ಶರೀರ ಸಂಪತ್ತಿಯ ಹ್ರಾಸವನ್ನುಂಟುಮಾಡುವನು. ಇಲ್ಲಿ ಕರ್ಕ, ಮೀನ ರಾಶಿಯ ಪೀಡಿತ ಮಂಗಳನಿರಬಾರದು. ಇಲ್ಲಿ ವೃಶ್ಚಿಕದ ಮಂಗಳನಿದ್ದು ಶುಕ್ರನೊಡನೆ ಅಶುಭ ಸಂಬಂಧವಿದ್ದರೆ ನೀಚ ಆಚರಣೆಗಳು ಕಂಡು ಬರುವವು. ಪ್ರಮೇಹ, ಗರಮಿ, ನಪೂಂಸಕತ್ವಗಳನ್ನು ತನ್ನ ಕೃತಿಯಿಂದ ತಂದುಕೊಳ್ಳುವನು. ಇಲ್ಲಿ ಶನಿ ಹರ್ಶಲ, ನೇಪಚ್ಯೂನರಿಂದ ಪೀಡಿತ ಮಂಗಳನಿರಬಾರದು. ಇದರಿಂದ ಬಂಧನ, ಕೈದು, ಇತ್ಯಾದಿ ಅರಿಷ್ಟಗಳನ್ನು ಎಳೆದುಕೊಳ್ಳುವ ಸಂಭವವಿರುವದು.

ಯೋಗ ಫಲ

ರವಿ, ಚಂದ್ರ, ಬುಧ, ಶುಕ್ರರೊಡನೆ ಆಗುವ ಯೋಗ ಫಲಗಳನ್ನು ಈ ಹಿಂದೆಯೇ ವಿವರಿಸಲಾಗಿದೆ.

ಮಂಗಳ ಗುರು ಯುತಿ-ಸಮಕ್ರಾಂತಿ:— ಮಂಗಳ ಗುರುಗಳ ನಡುವೆ ಆಗುತ್ತಿದ್ದ ಯಾವ ಅಶುಭಯೋಗವೂ ಅರ್ಥ ಸಂಚಯ ದೃಷ್ಟಿಯಿಂದ ಒಳ್ಳೆಯದಲ್ಲ. ಅಂಥವರು ಖರ್ಚಿಕರಿರುವರು. ಫಾಜಲ ಉದಾರರರು; ಹಟಿ ಇರುವರು. ದುಡ್ಡಿನ ವ್ಯವಹಾರದಲ್ಲಿ ಮೂರ್ಖರಿರುವರು. ಈ ಯೋಗವಿರುವವರು ಸಟ್ಟಾ, ಜಿದ್ದು ಮೊದಲಾದ ವ್ಯವಹಾರಗಳಲ್ಲಿ ಬೀಳಬಾರದು. ಚೋರರಿಂದ ಕಪಟಿಗಳಿಂದ ಧನ ಹಾನಿಯ ಸಂಭವವಿರುವದು. ಗುರು ಮಂಗಳರ ಅಶುಭಯೋಗವು ಬಹುತರವಾಗಿ ಪುತ್ರ ಸಂತತಿಯನ್ನು ಅಶಕ್ತವಾಗಿ ಮಾಡುವದು. ಯುತಿ ಯೋಗ-ಸಮಕ್ರಾಂತಿ ಯೋಗದ ಫಲವು ಅಷ್ಟು ಅಶುಭವಲ್ಲ. ವಿಶೇಷ ಶುಭ ಫಲವು ಸಿಗುವದೆಂದೂ ಭಾವಿಸಬಾರದು. ಆದರೆ ಈ ಯೋಗವು ಕರ್ಕ ಮೀನ ರಾಶಿಯಲ್ಲಿ ಅಶುಭ ಫಲವನ್ನೇ ಕೊಡುವದು. ಗುರು ಮಂಗಳ ಅಶುಭಯೋಗದಲ್ಲಿ ಧಾರ್ಮಿಕ ಆಚರಣೆಯು ಚೆನ್ನಾಗಿರುವದಿಲ್ಲ.

ಮಂಗಳ ಗುರು ಶುಭಯೋಗ:— ಈ ಗ್ರಹಗಳ ಶುಭಯೋಗವಾಗುತ್ತಿದ್ದರೆ ಜಾಣರೂ, ಕಲ್ಪಕರೂ, ಸಮಾಜ ಪ್ರಿಯರೂ ಉದಾರರೂ ಉತ್ಸಾಹಿಗಳೂ ಇರುತ್ತಾರೆ. ಆಟ, ಪ್ರವಾಸಗಳಲ್ಲಿ ಅಭಿರುಚಿಯುಳ್ಳವರಿರುವರು. ಶರೀರದಲ್ಲಿರುವ ರಕ್ತದ ಕೆಂಪು ಕಣಗಳ ಮೇಲೆ ಮಂಗಳನ ಅಧಿಕಾರವಿರುವದು. ಇವು ಕಬ್ಬಿಣದ ಕಣಗಳು. ಮಂಗಳ ಗುರು ಶುಭಯೋಗದಿಂದ ರಕ್ತದಲ್ಲಿಯ ಕೆಂಪು ಕಣಗಳು ಹೆಚ್ಚಿಗಿರುವವು. ಆದುದರಿಂದ ಶರೀರವು ನಿರೋಗಿ, ಸದೃಢವಾಗಿರುವದು; ಉತ್ತಮ ಜೀವನ ಶಕ್ತಿಯನ್ನೂ ಕಾರ್ಯಕಾರೀ ಉತ್ಸಾಹ ಶಕ್ತಿಯನ್ನೂ ಕೊಡುವದು. ಗುರು ಮಂಗಳ ಶುಭಯೋಗವು ದುಡ್ಡು ದೊರಕಿಸುವ ಶಕ್ತಿಯನ್ನು ಕೊಡುವದು. ಆದರೆ ಇವರ ಕೈ ಸಡಿಲು ಇರುವದರಿಂದ ಅರ್ಥ ಸಂಚಯದ ದೃಷ್ಟಿಯಿಂದ ಇದು ಒಳ್ಳೆಯದಲ್ಲ. ಆದರೆ ಇವರು ನ್ಯಾಯಿ, ಉದಾರ, ಸತ್ಯವ್ರತ, ಸರಳ ಮಾರ್ಗದಿಂದ ನಡೆಯುವವರು, ಯಾವ ಕಾರ್ಯವನ್ನಾದರೂ ಅಂತಃಕರುಣದಿಂದ ಮಾಡುವವರು ಇರುವರು. ಆದ್ದರಿಂದ ಸಂಸಾರದಲ್ಲಿ ಯಶಸ್ವಿಯಾಗುವರು.

ಮಂಗಳ ಶನಿ ಯುತಿ-ಸಮಕ್ರಾಂತಿ :— ಯುತಿ ಸಮಕ್ರಾಂತಿ ಯೋಗಗಳು ಒಳ್ಳೆಯವಲ್ಲ. ಸ್ವಭಾವವು ಸಿಟ್ಟಿನದು ತಿರಸಟ್ಟಿ, ತಾಪಸಿ, ಸ್ವಾರ್ಥಿ, ಅಪ್ರಾಮಾಣಿಕ, ಕಪಟಿ, ನೀಚ ಕರ್ಮಕಾರಿ ಇರುವದು. ಅದರಿಂದ (ದುರ್ಲೌಕಕದಿಂದ) ಅಪಮಾನ ತುರಂಗ ವಾಸ ಮೊದಲಾದ ಫಲಗಳ ಸಂಭವವಿರುವದು. ಈ ಯೋಗವು ಅಪಘಾತಕ್ಕೂ ಘಾಯವಾಗುವದಕ್ಕೂ, ಎಲವು ಮುರಿಯುವದಕ್ಕೂ ಕಾರಣವಾಗಬಹುದು. ಎತ್ತರದಿಂದ ಬೀಳುವದು ಸಂಭವಿಸುವ ಸಂಭವವಿರುವದು. ಯಾವ ರಾಶಿಯಲ್ಲಿ ಶನಿ ಮಂಗಳರಿರುವರೋ ಆ ರಾಶಿ ಸೂಚಕ ಭಾಗದಲ್ಲಿ ಅಪಘಾತವು ಸಂಭವಿಸುವದು.

ಶನಿ ಮಂಗಳರ ಯೋಗವು ಭಯಂಕರವಾದದ್ದು. ಯಾವ ಸ್ಥಾನದಲ್ಲಿ ಆಗುವದೋ ಆ ಸ್ಥಾನಕ್ಕೆ ಅಪಾಯಕರ. ಲಗ್ನದಲ್ಲಿ ಉಂಟಾದರೆ ವ್ಯಾಧಿ, ಅಕಾಲಮರಣ. ದ್ವಿತೀಯದಲ್ಲಿ ಸಾಂಪತ್ತಿಕ ಹ್ರಾಸ, ಕುಟುಂಬ

ನಾಶ. ತೃತೀಯದಲ್ಲಿ ಬಂಧುನಾಶ. ಚತುರ್ಥದಲ್ಲಿ ಮಾತೃಪಿತೃ ಸುಖ, ಗೃಹಸುಖ ನಾಶ. ಎತ್ತರದಿಂದ ಬೀಳುವದು, ಬಾವಿಯಲ್ಲಿ ಬೀಳುವದು, ಅಥವಾ ಮನೆ ಬೀಳುವದರಿಂದ ಮೃತ್ಯು ಸಂಭವಿಸಬಹುವಾಗಿದೆ. ಪಂಚಮ ದಲ್ಲಿ ಸಂತತಿ ನಾಶ. ಸಪ್ತಮದಲ್ಲಿ ಸ್ತ್ರೀ ನಾಶ, ಭಯಂಕರ ಶತ್ರುತ್ವ. ಅಷ್ಟಮದಲ್ಲಿ ಸಾಂಪತ್ತಿಕ ಹಾನಿ. ಮುಳಗುವದರಿಂದ ದಾಹದಿಂದ ಅಕಾಲ ದಲ್ಲಿ ಮೃತ್ಯು. ದಶಮದಲ್ಲಿ ಕೈದು, ರಾಜಭಯ, ರಾಜಕೀಯ ಸಂಕಟ. ವ್ಯಯಸ್ಥಾನದಲ್ಲಿ ತುರಂಗ ವಾಸ, ಶತ್ರುತ್ವ ಸಾಂಪತ್ತಿಕ ಹಾನಿ, ದರೋಡೆ ಖೋರರ ಭೀತಿ ಅಪಘಾತದಿಂದ ಮೃತ್ಯು ಇತ್ಯಾದಿ ಸಂಭವ. ಶನಿಮಂಗ ಳರ ಕೇಂದ್ರ ಪ್ರತಿಯೋಗಗಳು ಭಯಂಕರ ಅನಿಷ್ಟ ಸೂಚಕವಾಗಿವೆ. ಫಲದ ವಿಚಾರವನ್ನು ಮಾಡುವಾಗ ಒಂದೇ ಯೋಗದಿಂದ ಭಯಂಕರ ಆಪತ್ತು ಬರುವದೆಂದು ಊಹಿಸಲಾರದು. ಇತರ ಗ್ರಹಸ್ಥಿತಿಯನ್ನು ಚೆನ್ನಾಗಿ ವಿಚಾರ ಮಾಡಿ ಅರ್ಥಮಾಡಬೇಕು. ಶುಭಯೋಗಗಳ ಪ್ರಾಬಲ್ಯವಿದ್ದರೆ ಅನಿಷ್ಟ ಫಲಗಳು ಸೌಮ್ಯವಾಗುವವು.

ಮಂಗಳ ಹರ್ಶಲರ ಶುಭಯೋಗ:— ಈ ಶುಭಯೋಗವಿರುವ-ವರು ಉತ್ಸಾಹೀ, ಮಹತ್ವಾಕಾಂಕ್ಷೀ, ಕಲ್ಪಕ, ಚತುರ, ಹುಷಾರ, ಪ್ರತಿಭಾ ಸಂಪನ್ನ, ಅಂತಃಸ್ಫೂರ್ತಿಮಾನ್, ಪ್ರಸಂಗಕ್ಕೆ ಎದೆಗೊಡುವ, ಯೋಜಕ, ದಿಟ್ಟ, ಸ್ವಾಭಿಮಾನಿ, ಶೂರ, ಉದಾರರು ಇರುವರು. ಶಸ್ತ್ರಕ್ರಿಯೆ, ಯಂತ್ರ ಕಲೆ, ಇಂಜನಿಯರಿಂಗ, ಪೋಲೀಸ ಖಾತೆ, ಸೈನ್ಯ ಖಾತೆ ಈ ಉದ್ಯೋಗ ಗಳಿಗೆ ಈ ಯೋಗವಿರುವವರು ಪಾತ್ರರಿರುವರು, ಕೇವಲ ಕಲ್ಪಕರಿರದೆ ತಮಗೆ ಸೂಚಿತವಾದ ಕಲ್ಪನೆಗಳನ್ನು ಸಹಜವಾಗಿ ಅಮಲಿನಲ್ಲಿ ತರುವರು. ರಸಾಯನ ಶಾಸ್ತ್ರ, ಯಂತ್ರ ಶಾಸ್ತ್ರ, ವಿದ್ಯುತ್ ಶಾಸ್ತ್ರ, ವಿಮಾನ ವಿದ್ಯೆ, ಹವಾ ಸಂಚಾರ ಶಾಸ್ತ್ರಗಳಲ್ಲಿ ಇವರು ಅಗ್ರಪೂಜೆಯ ಮಾನವನ್ನು ಪಡೆಯು ವರು. ಮಂಗಳ ಹರ್ಶಲರ ಶುಭಯೋಗದಲ್ಲಿ ಹುಟ್ಟಿದವರು ಕೇವಲ ಸ್ವಪ್ನ ಸೃಷ್ಟಿಯಲ್ಲಿ ಮಗ್ನರಾಗುವದಿಲ್ಲ. ಕಾರ್ಯಕ್ಕೆ ಬೇಕಾಗುವ ಧೈರ್ಯ ಸ್ಥೈರ್ಯಗಳನ್ನು ಪಡೆದವರು ಇರುವರು. ಇವರು ಜಾತಿ, ಗೋತ್ರ, ಧರ್ಮಗಳನ್ನು ವಿಚಾರಿಸುವದಿಲ್ಲ. ಸ್ವಭಾವವು ಉದಾರ, ದೂರದೃಷ್ಟಿ-

ಯುಳ್ಳದ್ದಿರುವದು. ವಿಶ್ವಬಂಧುತ್ವದ ಭೋಕ್ತಾರರಿರುವರು. ಇವರನ್ನು ಸುಧಾರಕ ಪಂಥದವರಲ್ಲಿ ಎಣಿಸಬಹುದು.

ಮಂಗಳ ಹರ್ಶಲ್ ಯುತಿ–ಸಮುಕ್ರಾಂತಿ:— ಈ ಅಶುಭಯೋಗ ವಿರುವವರ ಸ್ವಭಾವವು ವಿಲಕ್ಷಣ, ವಿಕ್ಷಿಪ್ತವಾಗಿರುವದು. ಭ್ರಮಣ ಶೀಲರು, ಸಹಜ ಕ್ಷೋಭವನ್ನು ಹೊಂದುವವರು ಆಗಿರುವರು. ಸಾಹಸೀ, ಪ್ರತಿ ಬಂಧವನ್ನು ಗಣನೆಗೆ ತಾರದವರು ಇರುವರು. ಯಾವ ಕಾರ್ಯವನ್ನೇ ಮಾಡಲಿ ಪ್ರಾಣದ ಪರಿವೆಯಿಲ್ಲದಲೆ ಮಾಡುವರು. ರಾಜ್ಯ ಕ್ರಾಂತಿಗೆ, ಬೇಬಂದಶಾಹಿ ಆಳಿಕೆಗೆ ಒತ್ತಾಯಗಳ ಪುರಸ್ಕರ್ತರು. ಭಯಂಕರ ಕೃತ್ಯ-ಕ್ಕೆಳಸುವರು. ತುರಂಗ ವಾಸದ ಸಂಭವವಿರುವದು. ಕೇಂದ್ರದಲ್ಲಿ ಈ ಯೋಗವಾಗಬಾರದು. ಸಪ್ತಮದಲ್ಲುಂಟಾದರೆ ಸ್ತ್ರೀಯ ಆಯುರ್ಮ-ಯಾದೆಗೆ ಕೊರತೆಯನ್ನುಂಟುಮಾಡುವದು. ದಶಮ ವ್ಯಯಗಳಲ್ಲಿ ರಾಜ ಕೀಯ ವಿರೋಧ, ಕೈದುಗಳನ್ನು ಸೂಚಿಸುವದು. ಮಾನಭಂಗ, ಅಧಿಕಾರ ಚ್ಯುತಿಗಳೂ ನಡೆಯುವವು. ಮಂಗಳ ಹರ್ಶಲರ ಅಶುಭಯೋಗವು ಅಗ್ನಿ ವಿದ್ಯುತ್ ಸ್ಫೋಟ, ಜ್ವಾಲಗ್ರಾಹಿ ಪದಾರ್ಥಗಳ ಸ್ಫೋಟ, ಯಂತ್ರ ಭಂಗ ಇತ್ಯಾದಿಗಳ ಭಯ ಸೂಚಕ ದರ್ಶಕವಾಗಿರುವದು. ವೃಷಭ, ವೃಶ್ಚಿಕ ರಾಶಿಗಳಲ್ಲಿ ಈ ಯೋಗವುಂಟಾಗುವದು ಒಳ್ಳೆಯದಲ್ಲ. ಈ ರಾಶಿಗಳಲ್ಲಿ ಯೋಗವುಂಟಾದರೆ ಮನೋವಿಕಾರವು ತಲೆದೋರುವದು, ಒಮ್ಮೆಲೆ ಕ್ಷುಬ್ಧ ರಾಗುವ ಸಂಭವವಿರುವದು. ಅವಿಚಾರದ ಕೃತ್ಯಗಳು ಸಂಭವಿಸುವ ಸಂಭವ ವಿರುವದು. ಸ್ತ್ರೀಯರ ಕುಂಡಲಿಯಲ್ಲಿಯೂ ಈ ರಾಶಿಗಳಲ್ಲಿ ಕೇಂದ್ರ, ಪ್ರತಿಯೋಗಗಳು ಸಂಭವಿಸಬಾರದು. ಯಾಕಂದರೆ ಇದರಿಂದ ಬೇಗನೆ ವಂಚಿಸಲ್ಪಟ್ಟು ಅಡ್ಡಮಾರ್ಗವನ್ನು ಹಿಡಿಯುವ ಸಂಭವವಿರುವದು. ಭಿನ್ನ ಭಿನ್ನ ರಾಶಿಯಲ್ಲಿ ಸ್ವಭಾವ ವೈಚಿತ್ರ್ಯವನ್ನುಂಟು ಮಾಡುವದು. ವೃಷಭ ವೃಶ್ಚಿಕ, ತುಲೆಗಳಲ್ಲಿ ವಿಷಯಭೋಗದ ವಾಸನೆಯನ್ನು ತೀವ್ರಮಾಡು ವದು. ವೃಶ್ಚಿಕದ ಹರ್ಶಲನಿದ್ದವರು ಶಸ್ತ್ರ ವೈದ್ಯರಿದ್ದರೆ ಅವರಿಗೆ ಶಸ್ತ್ರ ಕ್ರಿಯೆಯನ್ನು ಮಾಡುವಲ್ಲಿ ಏನೂ ವ್ಯಥೆಯೆನಿಸುವದಿಲ್ಲ. ನೀಚ ವೃಶ್ಚಿಕ ದಲ್ಲಿ ಮಂಗಳ ಹರ್ಶಲರಿದ್ದರೆ ಲಬಾಡ ಲುಚ್ಚಾ, ಲಫಂಗರು, ಸುಳ್ಳು

ಮಾತನಾಡುವವರು ಹುಟ್ಟುವರು. ಚೌರ್ಯ, ನಿಪುಣರಿರುವರು. ಆದರೆ ಮೇಲೆ ಸಭ್ಯತೆಯ ಪ್ರದರ್ಶಕರು. ಮೇಷದಲ್ಲಿ ವಾಚಾಳರು; ಶೀಘ್ರಕೋಪಿ. ಮಿಥುನ ಕನ್ಯೆಯಲ್ಲಿ ಹುಷಾರ ಕಲ್ಪಕರು, ಸಹಜವಾಗಿ ಮಾತಾಡುತ್ತ ಜನರಿಗೆ ಟೊಪ್ಪಿಗೆ ಹಾಕುವ ಸ್ವಭಾವದವರಿರುವರು. ಧನುವಿನಲ್ಲಿ ಧಾರ್ಮಿಕ ಆಚಾರ ವಿಹೀನರು. ಸಮಾಜ ರಚನೆಯ ವಿರುದ್ಧ ನಡೆಯುವರು.

ಮಂಗಳ ನೇಪಚ್ಯೂನ ಯುತಿ – ಸಮಕ್ರಾಂತಿ ಯೋಗ:— ಅಶುಭಯೋಗ. ಅಸಭ್ಯರು, ಗ್ರಾಮ್ಯರು, ಅರಣ್ಯಕರನ್ನು ಬೋಧಿಸುವದು. ವಿಷಯಾಸಕ್ತರು, ವಿಷಯಲಂಪಟರು, ಕಾಮಿಗಳು, ಶೀಘ್ರಕೋಪಿಗಳು, ಜಂಭಕೊಚ್ಚುವವರು. ಅತಿರೇಕಕ್ಕೆ ಒಯ್ಯುವವರು. ಸ್ವಸುಖಕ್ಕಾಗಿ ಬೇಕಾದ ಕಾರ್ಯಮಾಡುವವರು. ದಂಗೆ ಧೋಪೆ, ಬಂಡು, ಚೌರ್ಯ, ಖೂನಿ, ಧರ್ಮದ ಹುಚ್ಚು ಇವೆಲ್ಲ ಅವಗುಣಗಳು ಕಂಡು ಬರುವ ಸಂಭವವಿರುವದು. ಈ ಯೋಗದಲ್ಲಿ ಅಪಘಾತ, ಜಲಭಯ, ಕ್ಷುದ್ರ ಜನರ ಶತ್ರುತ್ವ, ಮಾದಕ ದ್ರವ್ಯ, ಔಷಧಗಳ ಭಯ, ಭೂತಪ್ರೇತ ಪಿಶಾಚಿ ಬಾಧೆ ವ್ಯಸನಾಧೀನತೆ, ಒಟ್ಟಿನ ಮೇಲಿಂದ ಈ ಯೋಗವು ಜನ್ಮಕಾಲದಲ್ಲಿ ಆಗುವದು, ಒಳ್ಳೆಯದಲ್ಲ.

ಮಂಗಳ ನೇಪಚ್ಯೂನ ಶುಭಯೋಗ:— ಮಂತ್ರಶಾಸ್ತ್ರ, ಗುಪ್ತ ವಿದ್ಯಾ ಇತ್ಯಾದಿ ವಿದ್ಯೆಗಳ ಅಭಿರುಚಿ ಇರುವದು. ಈ ಗ್ರಹಗಳಲ್ಲಿ ಒಂದು ದಶಮದಲ್ಲಿದ್ದು, ಗುರುವಿನ ಶುಭ ಸಂಬಂಧದಲ್ಲಿದ್ದರೆ ಅಧಿಕಾರ, ಭಾಗ್ಯ, ಕೀರ್ತಿ ಕೊಡುವದು. ಈ ಶುಭಯೋಗದೊಡನೆ ಚಂದ್ರ ಬುಧರ ಶುಭಸಂಬಂಧ ಬಂದರೆ ಪ್ರವಾಸ, ಚಿತ್ರಕಲಾ ಪೇಂಟಿಂಗ, ರಂಗಜ್ಞಾನ, ಗಾಯನ, ತಂತುವಾದ್ಯ, ಜಲ ಸಂಬಂಧಜ್ಞಾನ, ಗೂಢಶಕ್ತಿಗಳಲ್ಲಿ ಪ್ರಗತಿಯನ್ನೂ ಪ್ರಾವೀಣ್ಯವನ್ನೂ ಮಾಡುವವು. ಇವರಿಗೆ ಸೂಚಕ ಸ್ವಪ್ನಗಳು ಬೀಳುವವು. ಸಾಕ್ಷಾತ್ಕಾರದ ಸಂಭವವಿರುವದು. ಸ್ಫೂರ್ತಿಪ್ರಧಾನರು, ಭವಿಷ್ಯ ಜ್ಞಾನವು ಸಹಜವಾಗಿ ಆಗುವದು. ರೋಗವನ್ನು ನೆಟ್ಟಗೆ ಮಾಡುವ ಸಾಮರ್ಥ್ಯವಿರುವದು. ಸಂಘ ಶಕ್ತಿಯನ್ನು ನಿರ್ಮಾಣ ಮಾಡುವ ಶಕ್ತಿ ಇರುವದು. ಕಾರ್ಯವನ್ನು ಕೊನೆಗೆ ಮುಟ್ಟಿಸುವ ಜ್ಞಾನವಿರುವದು.

ಗುರು

ಶುಕ್ರನನ್ನು ಬಿಟ್ಟರೆ ಗುರುವೇ ಗ್ರಹಗಳಲ್ಲಿ ತೇಜಸ್ವಿಯಾದದ್ದು. ಆಕಾರದಿಂದ ಗುರು ದೊಡ್ಡವನು. ನಮ್ಮ ಪೃಥ್ವಿಯ ೧೩೪೦ ಪಟ್ಟ ಇರುವದು. ಬೃಹಸ್ಪತಿಯು ಶ್ರಾವಣ ಶುದ್ಧ ಪೂರ್ವಾಷಾಢಾ ನಕ್ಷತ್ರವಿದ್ದಾಗ ಗುರುವಾರ ಸಾಯಂಕಾಲ ಹುಟ್ಟಿದನೆಂದು ಒಂದು ಕಥೆ ಇರುವದು.

ಫಲಿತ ಶಾಸ್ತ್ರದಲ್ಲಿ ಗುರುವಿಗೆ ವಾಕ್ ಧೋರಣೀ ಮಂತ್ರ, ರಾಜತಂತ್ರ, ತುರಂಗಯಾನ ನಿಗಮಬೋಧಕ ಕರ್ಮ ಪುತ್ರ, ಸಂಪಜ್ಜೀವನೋಪಾಯ, ಕರ್ಮಯೋಗ, ಮೊದಲಾದವುಗಳ ಕಾರಕತ್ವ ಕೊಟ್ಟಿರುವರು. ಸಿಂಹಾಸನ ಕಾರಕೋ ಗುರುಃ.

ಗುರುವಿನ ಕಾರಕತ್ವದ ಬಗ್ಗೆ ಕಾಲಿದಾಸನ ಉತ್ತರ. ಕಾಲಾಮೃತ ನೋಡಿರಿ. ಇನ್ನೂ ಹೆಚ್ಚಿನ ಅಂಶಗಳು ಸಿಗುವವು. ಜ್ಞಾನ, ಜ್ಞಾನಸುಖ, ಸಂಪತ್ತಿ ವೈಭವ, ಆನೆ, ಕುದುರೆಗಳಿಂದ ಯುಕ್ತವಾದ ರಾಜವೈಭವ ಸಂತತಿ ರಾಜಕಾರಣ ಪಟುತ್ವ, ಜಾಣತನ ಆಧ್ಯಾಪಕತ್ವ, ಪರಮಾರ್ಥ ಪ್ರಾಪ್ತಿ, ದಾತೃತ್ವ ಪುಣ್ಯಕರ್ಮ, ತೀರ್ಥಯಾತ್ರೆ, ಸಾಧುಸಮಾಗಮ, ಯೋಗ ಮಾರ್ಗ ದೀಕ್ಷಾ, ದೀರ್ಘಾಯು ಇವುಗಳ ಕಾರಕತ್ವ ಗುರುವಿನ ಕಡೆಗೆ ಇರುವದು. ಧಾರ್ಮಿಕರು, ಪೌರರು, ಮಹಾಧನಿಕರು, ವಿದ್ವಾಂಸರು, ಗುರುವಿನ ಆಧಿಪಾತ್ಯದಲ್ಲಿ ಬರುವರು. ಛತ್ರ ಚಾಮರ, ಮಧುರ ರಸ, ಮಾನಸನ್ಮಾನ, ಅಧಿಕಾರ, ಭಾಗ್ಯ, ಕೀರ್ತಿ ವೃದ್ಧಿ ಮೈತ್ರಿ ಸಂರಕ್ಷಣ ಪರಿಪಾಲನ, ಬಹುಪ್ರಸವ, ಬಹುಫಲತ್ವ ಇವುಗಳನ್ನು ಕೊಡುವವನು. ಗುರುವೆಂದೂ ಆಂಗ್ಲ ಜ್ಯೋತಿರ್ವಿದರೂ ಹೇಳುವರು. ಈ ಗ್ರಹವು ಉದಾರ, ಪ್ರಸರಣ ಶೀಲ, ಅತಿವಿಸ್ತೀರ್ಣ ಉತ್ಸಾಹ ವರ್ಧಕ, ಸುಖಕರ, ರುಚಿರ, ಮವಾಳ (ಸೌಮ್ಯ) ಜೀವನಾಧಾರ, ಜೀವ-

ನೋಪಯೋಗಿ, ಜೀವನ ರಕ್ಷಕ, ಸಾಧಾರಣ ಉಷ್ಣ, ಆರ್ದ್ರ ಸ್ವಭಾವದಿಂದ ಆನಂದಿ, ಉತ್ಸಾಹೀ ಮಹತ್ವಾಕಾಂಕ್ಷೀ, ಸಭ್ಯ, ದಯಾಳು, ಅನುಕಂಪೀ ಈ ಗ್ರಹವು ಪಿನೇಬರ, ನ್ಯಾಯ, ರಾಜವ್ಯವಸ್ಥೆ ಕಾಯದೆ ಮಾಡುವ ಜನರನ್ನು ಸೂಚಿಸುವದು. ನ್ಯಾಯಾಧೀಶರೂ ಕೌನ್ಸಿಲರ್ಸ, ಧರ್ಮಗುರುಗಳು ಶಕುನಗಳನ್ನು ಭವಿಷ್ಯವನ್ನು ಹೇಳುವವರು. ವಕೀಲರು, ಸಾವಕಾರರು, ಶ್ರೀಮಂತರು, ವಿಧ್ಯಾರ್ಥಿಗಳು, ವಿದ್ಯಾಲಯ ವಾಸಿಗಳು, ವಿಶ್ವವಿದ್ಯಾಲಯಗಳು, ಲೌಕರೀ ಬಟ್ಟೆಯ ವ್ಯಾಪಾರಿಗಳು, ಅನ್ನ ಸಾಮಗ್ರಿಗಳ ವ್ಯಾಪಾರಿಗಳು ಇವರೆಲ್ಲ ಗುರುವಿನ ಕಕ್ಷೆಯಲ್ಲಿ ಬರುವರು. ಮಸಾ ಮೆದಸ್ಸುಗಳ ಕಾರಕ ಗುರು. ಲಠ್ಠರಾಗಿರುವರು ಗುರುವಿನ ಕಕ್ಷೆಯಲ್ಲಿ ಬರುವರು. ಗುರುವಿನ ಅಂಕ ೩. ಅವನ ವರ್ಷಗಳ ದೊಡ್ಡ ಸಂಖ್ಯೆ ೪೫೪. ಅದಕ್ಕಿಂತ ಕಡಿಮೆ ೭೯. ಮಧ್ಯಮ ವರ್ಷ ೪೫. ಸಣ್ಣ ವರ್ಷ ೧೨. ೩೩ ರಿಂದ ೪೫ ವರ್ಷದ ಮನುಷ್ಯನನ್ನು ಗುರು ತೋರುವವನು. ಸಾರಾಸಾರ ವಿಚಾರದ ಪ್ರಗಲ್ಭ ವ್ಯಕ್ತಿತ್ವ ಅವನದು. ಗುರುವಿನ ಬಲವುಳ್ಳವರು ಈ ವಯಸ್ಸಿನಲ್ಲಿ ಮುಂದೆ ಬರುವರು.

"ಬೃಹತ್ತನುಃ ಪಿಂಗಲಮೂರ್ಧಜೇಕ್ಷಣೋ ಬೃಹಸ್ಪತಿಃ ಶ್ರೇಷ್ಠಮತಿಃ ಕಫಾತ್ಮಕಃ"

ಈ ಗ್ರಹವು ಧನು ಮೀನ ರಾಶಿಗಳಲ್ಲಿ ಸ್ವಗ್ರಹದಲ್ಲಿರುವದು. ಕರ್ಕ ರಾಶಿಯಲ್ಲಿ ಉಚ್ಚವಾಗಿರುವನು. ಮೇಷ, ಸಿಂಹ, ಕರ್ಕ, ಧನು, ಮೀನ, ಮಕರ ರಾಶಿಗಳಲ್ಲಿ ಗುರು ಇದ್ದರೆ ಸಂಪತ್ತಿ ಅಧಿಕಾರಗಳನ್ನು ಕೊಟ್ಟು ಭಾಗ್ಯ ವೃದ್ಧಿ ಮಾಡುವನು. ಮಕರವು ನೀಚರಾಶಿಯಾದರೂ ದಶಮದಲ್ಲಿ ಮಕರ ೧೦ ಅಂಶದೊಳಗೆ ಗುರು ಶುಭ ಸಂಬಂಧಿತನಾಗಿದ್ದರೆ ಅತ್ಯುತ್ತಮ ಫಲ ದಾಯಕನಾಗುವನು.

(ಕುಂಭೇಪಿ ನೀಚ ಭವನೇಪಿ ಬಲೀಸುರೇಜ್ಯಃ)

ಮಿಥುನ, ಕುಂಭ, ತುಲಾ ರಾಶಿಯ ಗುರು ವಿದ್ಯಾಭಾಷಾ ಶಾಸ್ತ್ರೀಯ ವಿಷಯಗಳಿಗಾಗಿ ಒಳ್ಳೇ ಫಲಗಳನ್ನು ಕೊಡುವನು. ವೃಶ್ಚಿಕ ರಾಶಿಯಲ್ಲಿ ಶುಭ ಸಂಬಂಧಿತನಿದ್ದರೆ ರಸಾಯನ ವಿದ್ಯೆ, ಸರ್ಜರೀ ಶಸ್ತ್ರ ವೈದ್ಯಕಗಳಿಗೆ

ಅನುಕೂಲನಾಗಿರುವನು. ದಶವರ್ಗಗಳಲ್ಲಿ ಬಲಿಷ್ಠನಾಗಿದ್ದರೆ "**ಅಧಿಕ ಸ್ವಾಧಿಕಂ ಫಲಂ;** ಲಗ್ನ ದಶಮ ನವಮ ಧನ ಏಕಾದಶ ಪಂಚಮ ಭವನಗಳಲ್ಲಿ ಗುರುವಿನ ಮಹತಿ ಹೆಚ್ಚಿಗೆ. ಚಂದ್ರನಿಂದಾಗಲಿ, ಲಗ್ನದಿಂದಾಗಲಿ ೬,೮,೧೨ ರಲ್ಲಿ ಗುರುವಿನ ಬಲ ಕಡಿಮೆ. ಚಂದ್ರನಿಂದ ೧,೧೦,೨, ೧೧,೫,೪ ರಲ್ಲಿ ಗುರು ಭಾಗ್ಯ ವೃದ್ಧಿಕಾರಕ, ಚಂದ್ರನಿಂದ ಗುರು ಕೇಂದ್ರ (೧, ೪, ೭, ೧೦) ದಲ್ಲಿ ಇದ್ದರೆ ಅದನ್ನು ಗಜಕೇಸರೀ ಯೋಗವೆಂದು ನಮ್ಮವರು ಕರೆಯುತ್ತಾರೆ. ಗಜಕೇಸರೀ ಯೋಗ ಸಂಜಾತೋ ಧನವಾನ್ ಗುಣವಾನ್ ಭವೇತ್.

ಗುರು ಸಂತತಿಕಾರಕನಿರುವದರಿಂದ ಅಸ್ತಂಗತ ವಕ್ರೀ ಪೀಡಿತನಿದ್ದರೆ ಸಂತತಿಗೆ ಪೀಡಾಕಾರಕನೆಂದು ಹೇಳುವರು. ಇವನು ವಂಧ್ಯಾ ರಾಶಿಯಲ್ಲಿದ್ದರೆ ಸಂತತಿಯ ಅಭಾವವನ್ನು ಸೂಚಿಸುವನು. ಬಹುಪ್ರಸವ ರಾಶಿಯಲ್ಲಿ ವಿಪುಲ ಸಂತತಿಯನ್ನು ಕೊಡುವನು. ಪುರುಷ ರಾಶಿಯಲ್ಲಿ ಪುತ್ರ ಸಂತಾನವನ್ನೂ ಸ್ತ್ರೀ ರಾಶಿಯಲ್ಲಿ ಸ್ತ್ರೀ ಸಂತಾನವನ್ನು ಕೊಡುದನು. ಸಾಧಾರಣವಾಗಿ ವಕ್ರೀ ಗುರು ಪುತ್ರ ಸಂತಾನ ಚಿಂತೆಯನ್ನುಂಟುಮಾಡುವನು. ಆದರೆ ಕನ್ಯಾ ಸಂತತಿಯನ್ನು ಕೊಡುವನು. ಮಂಗಳ ಯುಕ್ತನಾಗಿರುವಲ್ಲಿ ಇತರ ಗ್ರಹಗಳಿಂದ ಪೀಡಿತನಾಗಿರುವಲ್ಲಿ ಸಂತತಿ ನಾಶ, ಗರ್ಭಪಾತ. ಶನಿಯಿಂದ ಪೀಡಿತನಾಗಿದ್ದರೆ ಸಂತತಿಯ ಅಭಾವ. ಎರಡೂ ಗ್ರಹಗಳ ರಾಶಿ ಬಲ ಭಾವಬಲಗಳನ್ನು ನೋಡಿ ನಿರ್ಣಯಿಸಬೇಕು. ಈ ಗ್ರಹವು ೫, ೭, ೯ ರಲ್ಲಿ ನೋಡುವದು. ೫, ೯ ದೃಷ್ಟಿ ಉತ್ತಮ. ಸಪ್ತಮ ದೃಷ್ಟಿಯ ಬಗ್ಗೆ ಉತ್ತಮ ಫಲವೇ ಸಿಗುವದೆಂದು ಹೇಳಲು ಬಾರದು. ಶನಿ ಗುರು, ಮಂಗಳ ಗುರು, ಪ್ರತಿಯೋಗವು ಅನಿಷ್ಟ ಫಲಗಳನ್ನೇ ಕೊಡುವದು.

ಇದು ಅಭಿವೃದ್ಧಿ ಮಾಡುವ ಗ್ರಹವಾದ್ದರಿಂದ △ ದೃಷ್ಟಿಯಲ್ಲಿ ನಿಜವಾಗಿ ಅಭಿವೃದ್ಧಿಯನ್ನು ಮಾಡುವದು. ತೃತೀಯ ಏಕಾದಶ ದೃಷ್ಟಿಯನ್ನೂ ಈ ಗುಣಾಭಿವೃದ್ಧಿಗೆ ಸೇರಿಸಬಹುದು. ಚಂದ್ರ ಗುರು ಯುತಿ, ತ್ರಿರೇಕಾದಶ, △ ಯೋಗಗಳು ಉತ್ತಮ.

ಶನಿ ಮಂಗಳ ಹರ್ಶಲ ನೇಪಚ್ಯೂನರೊಡನೆ ಉಂಟಾಗುವ ಗುರುವಿನ

ಕೇಂದ್ರ ಯೋಗವು ಸಾಂಪತ್ತಿಕನಾಶವನ್ನು ಮಾಡುವದು. ಚಂದ್ರನ ಚತುರ್ಥದಲ್ಲಿ, ದಶಮದಲ್ಲಿ ಗುರು ಒಳ್ಳೇ ಫಲಗಳನ್ನು ಕೊಡುವದೆಂದು ಮೇಲಿನ ನಿರ್ದಿಷ್ಟ ಗ್ರಹಗಳ ಕೇಂದ್ರ ಯೋಗದಲ್ಲಿ ಒಳ್ಳೇ ಫಲ ಸಿಗುವದೆಂದು ಭ್ರಮಿಸ ಕೂಡದು. ಗುರು ಯಾವ ಗ್ರಹದೊಡನೆ ಯಾವ ಭಾವದೊಡನೆ ಶುಭ ಸಂಬಂಧವನ್ನು ಮಾಡುವನೋ ಆ ಗ್ರಹದ ಭಾವದ ಅಭಿವೃದ್ಧಿಯಾಗುವದು. ಗುರು ಪೀಡಿತನಿದ್ದರೆ, ದುರ್ಬಲನಿದ್ದರೆ ಹಳದೀ ಧಾನ್ಯ, ಕದಲೀ ಬೇಳೆ, ಹಳದೀ ಫಲ, ಪುಸ್ತಕ, ಸಕ್ಕರೆ, ಕುದುರೆ ಪುಷ್ಯರಾಗ ರತ್ನ ಕಮಂಡಲು ಇತ್ಯಾದಿಗಳನ್ನು ದಾನಮಾಡಬೇಕು. ಗುರುವಿನ ಪೂಜೆ, ಮಂತ್ರ ಜಪ, ಹೋಮಗಳನ್ನು ಮಾಡಬೇಕು.

ಗುರು ಲಗ್ನದಲ್ಲಿ:— ಶುಭ ಸಂಬಂಧಿತನಿದ್ದರೆ ಭಾಗ್ಯಶಾಲಿ ಉದಾರ ನ್ಯಾಯಶೀಲ ಸಮತೋಲ ಬುದ್ಧಿಯವನು, ನಿಷ್ಪಕ್ಷಪಾತಿ ಆಗುವನು. ಕೈಕೊಂಡ ಕಾರ್ಯಗಳು ಯಶಸ್ವಿ ಆಗುವವು. ನಾನಾವಿಧವಾದ ಲಾಭಗಳುಂಟಾಗುವವು. ಇವರು ಕ್ರೀಡಾ ಪ್ರೇಮಿಗಳೂ ಇರುವರು. ಎರಡನೇಯವರಿಂದ ಕೆಲಸ ಮಾಡಿಸಿಕೊಳ್ಳುವ ಶಕ್ತಿ ಚೆನ್ನಾಗಿರುವದು. ಆದ್ದರಿಂದ ಅಧಿಕಾರಸ್ಥಾನಕ್ಕೆ ಇವರು ಪಾತ್ರರಿರುವರು. ಉತ್ತರ ವಯಸ್ಸಿನಲ್ಲಿ ಇವರು ಲಠ್ಠರಾದದ್ದು ಕಾಣಬರುವದು. ಲಗ್ನದಲ್ಲಿ ಅಗ್ನಿರಾಶಿಯಲ್ಲಿ ಗುರು ಇದ್ದರೆ ಸುಸ್ವಭಾವಿಗಳೂ ಉದ್ಯೋಗದಲ್ಲಿ ಯಶಸ್ವಿಗಳೂ ಆಗುವರು. ಮಿತ್ರತ್ವಕ್ಕೆ ಯೋಗ್ಯರು, ಶತ್ರುಗಳ ಕೂಡ ಔದಾರ್ಯದಿಂದ ನಡೆಯುವರು. ಧನುವಿನ ಗುರು ಆಟದಲ್ಲಿ ಪ್ರಾವೀಣ್ಯವನ್ನು ತೋರುವನು. ಪೃಥ್ವಿರಾಶಿಗಳಲ್ಲಿ (ವೃಷಭ ಕನ್ಯಾ ಮಕರಗಳಲ್ಲಿ) ಢೋಂಗಿ, ದಾಂಭಿಕ:, ಮರ್ಕಟವಿಚಾರಿಗಳು ತಮ್ಮ ದೊಡ್ಡಿಸ್ತನವನ್ನೇ ಹೇಳುವವರನ್ನು ಗುರು ತೋರುವನು. ವಾಯು ರಾಶಿಗಳಲ್ಲಿ ವಿಶೇಷವಾಗಿ ತುಲಾ ಕುಂಭಗಳಲ್ಲಿ ಗುರು ಸ್ವಭಾವ ನ್ಯಾಯಿ, ಉದಾರ, ಸಮತೋಲ, ಆಚರಣೆ, ನಿಷ್ಪಾಕ್ಷಪಾತಿ, ವಿಶ್ವಾಸಿ ಪ್ರತಿಯೊಬ್ಬರಿಗೆ ಸಹಾಯ ಮಾಡುವ ತತ್ಪರತೆ ಇರುವವರನ್ನು ಗುರು ಹುಟ್ಟಿಸುವನು. ಜಲರಾಶಿಗಳಲ್ಲಿ ಶುಭ ಸಂಬಂಧಿತ ಗುರು ಲಗ್ನದಲ್ಲಿದ್ದರೆ ಭಾಗ್ಯವೃದ್ಧಿ ಕಾರಕನೆಂದು ತಿಳಿಯಬೇಕು. ಅತ್ಯಂತ

ಭಾಗ್ಯಕಾರಕ, ವೃಶ್ಚಿಕಕ್ಕಿಂತ ಕರ್ಕ ಮೀನಗಳ ಗುರು ಹೆಚ್ಚು ಭಾಗ್ಯಕಾರಕ. ವೃಶ್ಚಿಕದ ಗುರುವಿನಲ್ಲಿ ಸ್ವಾರ್ಥ ಪರಾಯಣತೆ ಕಂಡು ಬರುವದು. ಗುರು ಸಾಮಾನ್ಯವಾಗಿ ಉದಾರ, ಸರಳ, ನ್ಯಾಯಿ, ವಿಶ್ವಾಸಿ, ದೂರದರ್ಶಿ, ನೀಚ ದುಷ್ಟ ಆಚಾರಗಳನ್ನು ತಿರಸ್ಕರಿಸುವವ. ಇವನು ಶುಭ ಸಂಬಂಧಿತನಿದ್ದರೆ ಸದ್ಗುಣಗಳ ಪರಿಪೋಷಕ. ಪೀಡಿತನಿದ್ದರೆ ಯಾವ ರಾಶಿಯಲ್ಲಿರುವನೋ ಆ ರಾಶಿಯ ಧರ್ಮದಂತೆ ಭೋಗಾಸಕ್ತಿ ವಿಷಯಾಸಕ್ತಿಯನ್ನುಂಟುಮಾಡುವನು. ಕರ್ಕ ರಾಶಿಯಲ್ಲಿ ಆಹಾರಾಸಕ್ತಿ ತಿನಸುಗುಳಿ ಇರುವರು. ಇವರು ಲಠ್ಠರಾಗುವರು. ಅವರಿಗೆ ಯಕೃದ್ವಿಕಾರ, ಲಿವ್ಹರ ವಿಕಾರಗಳಾಗುವ ಸಂಭವವಿರುವದು. ಧನುವಿನಲ್ಲಿ ಪೀಡಿತ ಗುರು ಕುದುರೆಯ ಶರ್ಯತ್ತಿನ ನಾದವಿರುವದು. ಮೀನದಲ್ಲಿ ಪೀಡಿತ ಗುರು ಸೆರೆಗುಡುಕರನ್ನು ಮಾಡುವ ಸಂಭವವಿರುವದು. ವೃಶ್ಚಿಕದ ಪೀಡಿತ ಗುರು ವಿಷಯಾಸಕ್ತರನ್ನು ಮಾಡುವನು. ಗುರು ಶುಭ ಗ್ರಹವಿದ್ದು ೬, ೮, ೧೨ ರ ಅಧಿಪತಿಯಾಗಿ ಲಗ್ನದಲ್ಲಿ ಇರಬಾರದು. ಶುಭತ್ವದೊವನೆ ಅಶುಭ ಫಲಗಳನ್ನು ಅನುಭವಿಸಬೇಕಾಗುವದು. ಪೀಡಿತನಿದ್ದರೆ ಅಶುಭ ಫಲದ ತೀವ್ರತೆ ಕಂಡು ಬರುವದು. ಪೀಡಿತ ಗುರು ರಕ್ತ ವಿಕಾರದ ರೋಗಗಳನ್ನು ಉಂಟು ಮಾಡುವನು.

ಗುರು ಧನಸ್ಥಾನದಲ್ಲಿದ್ದರೆ:— ರಾಶಿ ಬಲಿಯಾಗಿ ಶುಭದೃಷ್ಟನಾಗಿದ್ದರೆ ಸಂಪತ್ತಿಯ ಅಭಿವೃದ್ಧಿಯನ್ನು ಮಾಡುವನು. ಲಕ್ಷ್ಮೀ ಕೃಪಾಕಟಾಕ್ಷಕ್ಕೆ ಪಾತ್ರನಾಗುವನು. ಜಗತ್ತಿನಲ್ಲಿ ಅತ್ಯಂತ ಭಾಗ್ಯಶಾಲಿ ಆಗಿ ಹೋದವರ ಕುಂಡಲಿಯಲ್ಲಿ ಧನದಲ್ಲಿ ಅಥವಾ ದಶಮದಲ್ಲಿ ಬಲಿಷ್ಠ ಗುರು ಇರುವದು ಕಂಡು ಬಂದಿರುವದು. ಧನದಲ್ಲಿ ಗುರು ಯಾವ ಪ್ರಮಾಣದಲ್ಲಿ ಬಲ ಇರುವನೋ ಆ ಪ್ರಮಾಣದಲ್ಲಿ ಸಂಪತ್ತಿ ಭಾಗ್ಯಗಳನ್ನು ಬಳೆಯಿಸುವನು. ಸ್ವನವಾಂಶದಲ್ಲಿ, ಉಚ್ಚ ನವಾಂಶದಲ್ಲಿ ರವಿ ಚಂದ್ರರ ಶುಭಯೋಗದಲ್ಲಿ ಇರುವದು ಒಳ್ಳೆಯದು. ರಾಶಿ ಬಲವಿದ್ದು, ರವಿಚಂದ್ರರ ಶುಭಯೋಗದಲ್ಲಿ ಹೆಚ್ಚಿನ ಶುಭಫಲವನ್ನು ಕೊಡುವನು. ಪೀಡಿತ ಗುರು ಧನ ಹಾನಿ ಸೂಚಕನು.

ಗುರು ತೃತೀಯದಲ್ಲಿದ್ದರೆ:— ಭ್ರಾತೃ ಬಂಧು ನೆರೆಯವರ ಸುಖಕ್ಕೆ ಅನುಕೂಲನಾಗಿರುವನು. ರೇಲ್ವೇ ಪ್ರವಾಸ, ಸಣ್ಣ ಪ್ರವಾಸಗಳಿಂದ ಲಾಭ

ದಾಯಕನಾಗುವನು. ಒಳ್ಳೆಯ ಕಾರ್ಯಗಳನ್ನು ಮಾಡುವ ಮಾನಸಿಕ ಪ್ರವೃತ್ತಿ ಇರುವದು. ಶಿಕ್ಷಣಕ್ಕೆ ಅನುಕೂಲ, ಅದರಿಂದ ಉನ್ನತಿಯಾಗುವದು. ಮನಸ್ಸು ಉಲ್ಲಸಿತವಾಗಿರುವದು. ಲೇಖನ ಪ್ರವಾಸ ಗ್ರಂಥ ಪ್ರಕಾಶನಗಳಿಂದ ಲಾಭ. ಇಲ್ಲಿ ಗುರು ಶನಿಯಿಂದ ಪೀಡಿತನಿದ್ದರೆ ಆಲಸ್ಯ, ಭ್ರಾತೃ ಬಂಧುಗಳ ಸುಖ ನ್ಯೂನತೆ. ಮಂಗಳನಿಂದ ಪೀಡಿತನಿದ್ದರೆ ಅವಿಚಾರಿ ಉತಾವಳಿ, ದಾಯಾದರಲ್ಲಿ ಅವಿಶ್ವಾಸವುಂಟಾಗುವದು.

ಗುರು ಚತುರ್ಥಸ್ಥಾನದಲ್ಲಿದ್ದರೆ:— ಶುಭ ಸಂಬಂಧಿತನಿದ್ದರೆ ಒಳ್ಳೇ ಫಲ ಸೂಚಿಕ. ಎಲ್ಲ ಕೆಲಸಗಳಲ್ಲಿ ಯಶಸ್ಸು ಸಿಗುವದು. ಆಯುಷ್ಯದ ಕೊನೆಯ ಚಾಪ್ಟರ ವಾರ್ಧಕ್ಯ ಸುಖಕರವಾಗುವದು. ಮಾತಾಪಿತೃ ಸುಖ ಚೆನ್ನಾಗಿರುವದು. ಅದರಿಂದ ಸ್ಥಾವರ ಆಸ್ತಿ, ಧನಲಾಭ, ಪೃಥ್ವೀ ರಾಶಿಯಲ್ಲಿ ಹೊಲ–ಮನೆಗಳ ಲಾಭ. ಜನ್ಮಸ್ಥಳದಲ್ಲಿ ಅಥವಾ ಅದರ ಸಮೀಪದಲ್ಲಿ ಉದ್ಯೋಗ ವ್ಯವಸಾಯಗಳನ್ನು ಕೈಕೊಳ್ಳಬಹುದು. ಪೀಡಿತ ಗುರು ವಿದ್ದರೆ ಜನ್ಮಭೂಮಿಯನ್ನು ಬಿಟ್ಟು ದೂರ ಸರಿಯಬೇಕು. ಪೀಡಿತ ಗುರು ಇದ್ದವರು ಡೌಲಿನವರು ಇರುವರು, ಅಹಂಕಾರಿಗಳು. ಇದರಿಂದ ಅವರು ಜನ್ಮಸ್ಥಳದಲ್ಲಿ ಅವಮಾನವನ್ನು ಹೊಂದುವರು. ಇಂಥವರು ಸ್ವದೇಶ ತ್ಯಾಗವನ್ನು ಮಾಡುವದು ನೆಟ್ಟಗೆ.

ಗುರು ಪಂಚಮಸ್ಥಾನದಲ್ಲಿದ್ದರೆ:—ವಿಪುಲ ಸಂತತಿಯನ್ನು ಕೊಡುವನು. ಪೀಡಿತ ಗುರು ಪುತ್ರವಿಯೋಗವನ್ನುಂಟುಮಾಡುವನು. ಬಲಿಷ್ಠ ಗುರು ಸಂತತಿ ಸುಖವನ್ನು ಕೊಡುವನು. ಸಂತತಿ ಹೆಸರು ವಾಸಿ, ಆಜ್ಞಾ ಧಾರಕವಾಗುವದು. ಮಕ್ಕಳು ಕುಲದೀಪಕರಾಗುವರು. ಶಿಕ್ಷಣ ಖಾತೆಯಲ್ಲಿ ಇವರು ಮುಂದೆ ಬರುವರು. ವರ್ತಮಾನಪತ್ರ ಪುಸ್ತಕ ಪ್ರಕಾಶನಗಳಿಂದ ಯಶಸ್ಸು ಸಿಗುವದು. ಇವರು ಉತ್ತಮ ಅಧ್ಯಾಪಕರಾಗುವರು. ಸಮಾಜ ಪ್ರಿಯರು, ಮಿತ್ರವತ್ಸಲರು, ಮೇಜವಾನಿ, ಉಣ್ಣುವದು, ತಿನ್ನುವದು, ಆಮಂತ್ರಣ ಪ್ರಿಯರು, ಅನೇಕ ಮಿತ್ರರಿದ್ದು ಅವರಿಂದ ಹಿತವಾಗುವದು. ರೇಸಿಂಗ, ಸ್ಪೆಕ್ಯುಲೇಶನ್, ಲಾಟರಿಗಳಲ್ಲಿ ಲಾಭವಾಗುವದು. ಇಲ್ಲಿ ಧನು ರಾಶಿಯಲ್ಲಿ ಪೀಡಿತ ಗುರು ಇದ್ದರೆ ಜಿದ್ದಿನಲ್ಲಿ ಹಣ ಕಳೆದು

ಕೊಳ್ಳುವ ಸಂಭವವಿರುವದು. ಬಲಿಷ್ಠ ಗುರು ಕೀಡಾವಟುಗಳನ್ನು ನಿರ್ಮಿಸುವನು. ಅದರಿಂದ ಲಾಭ. ಕಾರಕೋಭಾವನಾಶಕಃ ಎಂಬ ವಚನದ ಸತ್ಯಾಸತ್ಯತೆಯನ್ನು ವಾಚಕರು ವಿಚಾರಿಸಲಿ.

ಷಷ್ಠದಲ್ಲಿ ಗುರು:– ಬಲಿಷ್ಠ ಗುರು ಆರೋಗ್ಯವನ್ನು ಚೆನ್ನಾಗಿರಿಸುವನು ನೌಕರ,ಚಾಕರರು,ವಿಧೇಯರು ಸಿಗುವರು. ವೈದ್ಯಕೀ,ಡಾಕ್ಟರೀ ಧಂದೆಗೆ ಈ ಸ್ಥಾನದ ಗುರು ಪೋಷಕನಿರುವನು. ಇವರು ಆರೋಗ್ಯ ಖಾತೆಯಲ್ಲಿ ನೌಕರೀ ಕೈಕೊಳ್ಳಬಹುದು. ವರಿಷ್ಠಾಧಿಕಾರಿಗಳಿಗೆ ಪ್ರಿಯರಾಗಿರುವರು. ಪೀಡಿತ ಗುರು ಯಕೃತ್ ವಿಕಾರ, ಮೇದೋವೃದ್ಧಿ ಆಹಾರ ವಿಹಾರದಲ್ಲಿ ಮಿತಿ ಇಲ್ಲದ್ದರಿಂದ ಪಚನ ವಿಕಾರಗಳ ಸಂಭವವಿರುವದು.

ಸಪ್ತಮದಲ್ಲಿ ಗುರು:— ಇದು ಸತ್ಕಲತ್ರಯೋಗವೆಂದು ಭಾವಿಸಲು ಅಡ್ಡಿಯಿಲ್ಲ. ಪತಿ ಇಲ್ಲವೆ ಪತ್ನಿ ಸುಸ್ವಭಾವಿ ಉದಾರರಿರುವರು. ಲಗ್ನದಿಂದ ಭಾಗ್ಯೋದಯ, ಸಾಂಪತ್ತಿಕ ಉನ್ನತಿ, ಶ್ರೇಷ್ಠ ಪದವಿ ಸಿಗುವದು. ಸ್ತ್ರೀ ಅಥವಾ ಪತಿ ಉಚ್ಚಕುಲದವರು ಇರುವರು. ಶ್ರೀಮಂತ ಸುಖಿ ಇರುವರು. ಶತ್ರುಗಳು ಮಿತ್ರರಾಗುವರು. ಕಲಹಗಳಿಂದಲೂ ಲಾಭ. ಪಾಲುಗಾರಿಕೆಯ ವ್ಯವಹಾರದಲ್ಲಿ ಲಾಭ. ಕೋರ್ಟು-ಕಚೇರಿ ಕೆಲಸಗಳಲ್ಲಿ ವಿಜಯ ಸಿಗುವದು. ಪ್ರತಿಸ್ಪರ್ಧಿಗಳನ್ನು ಒಲಿಸಿಕೊಳ್ಳುವ ಕಲೆ ಇವರಿಗೆ ಅವಗತವಾಗಿರುವದು. ಕನ್ಯಾ ರಾಶಿಯಲ್ಲಿ ಪೀಡಿತ ಗುರು ಇದ್ದರೆ ವಿಶೇಷ ಲಾಭವಿಲ್ಲ. ಒಳ್ಳೆಯ ಪಾಲುಗಾರರು ಸಿಗುವದಿಲ್ಲ. ಕೋರ್ಟು-ಕಚೇರಿ ಕೆಲಸಗಳಲ್ಲಿ ಅನೇಕ ಅಡ್ಡಿಗಳು ಬರುವವು. ಪತಿ–ಪತ್ನಿಯರಲ್ಲಿ ವಿಷಯಾಧೀನತೆ, ಆಲಸ್ಯ ಕಂಡು ಬರುವದು. ಮನೋಭಿಲಷಿತದಂತೆ ಅವರು ಸಿಗಲಾರರು.

ಗುರು ಅಷ್ಟಮದಲ್ಲಿದ್ದರೆ:— ಬಲವಾನ್ ಗುರುವು ಲಗ್ನದಿಂದ ಲಾಭವನ್ನು ಸೂಚಿಸುವನು. ಸಾಂಪತ್ತಿಕ ಅಭಿವೃದ್ಧಿ ಅಥವಾ ಲಗ್ನದ ನಂತರ ಭಾಗ್ಯೋದಯ ಮೃತ್ಯುವಿನಿಂದ, ಮೃತ್ಯುಪತ್ರದಿಂದ ಲಾಭವಾಗುವದು. ಬಲಿಷ್ಠ ಗುರು ಶುಭ ಸಂಬಂಧಿತನಿರಬೇಕು. ಉತ್ತರ ಕ್ರಿಯೆಯನ್ನು ಮಾಡಿಸುವ ವೈದಿಕ ಬ್ರಾಹ್ಮಣರ ಕುಂಡಲಿಯಲ್ಲಿ ೮ರಲ್ಲಿ ಗುರು ಇರುವದನ್ನು ನಾವು ನೋಡಿರುವೆವು. ಮೃತ್ಯುಪತ್ರದಿಂದ ಸ್ಥಾವರ ಇಸ್ಟೇಟ ಸಿಗಲಿಕ್ಕೆ

ಈ ಯೋಗವು ಅನುಕೂಲವಾಗಿರುವದು. ಅಷ್ಟಮ ಗುರು ದೀರ್ಘಾಯುಷ್ಯವನ್ನು ಕೊಡುವನು. ಶಾಂತರೀತಿಯಿಂದ ಮರಣ ಸೂಚಕನಾಗಿರುವನು. ಇಂತಹರು ಶಾಂತರೀತಿಯಿಂದ ತಮ್ಮ ಅವತಾರ ಕಾರ್ಯವು ಮುಗಿಯಿತೆಂದು ದೇಹತ್ಯಾಗವನ್ನು ಮಾಡುವರು. ದುರ್ಬಲ ಪೀಡಿತ ಗುರು ಇದ್ದರೆ ಅಷ್ಟಮ ಭಾವ ಸೂಚಕ ವಿಷಯಗಳಲ್ಲಿ ಹಾನಿ.

ಗುರು ಭಾಗ್ಯದಲ್ಲಿದ್ದರೆ: - ಮನುಷ್ಯನು ಧಾರ್ಮಿಕನು. ಸತ್ಯವಂತನು ನೀತಿವಂತನು, ವಿಚಾರಿ ಸನ್ಮಾನೀಯನಾಗುವನು. ಧಾರ್ಮಿಕ ಸಂಸ್ಥೆಗಳಲ್ಲಿ ಚೆನ್ನಾಗಿ ಮಾನ ಸಿಗುವದು. ವಿಶ್ವವಿದ್ಯಾಲಯಗಳಲ್ಲಿ ಗೌರವವನ್ನು ಪಡೆಯುವನು. ಧಾರ್ಮಿಕ ವಿಷಯ, ವೇದಾಂತ ವಿಷಯ, ಕಾಯ್ದೆಯ ಜ್ಞಾನ, ಪರಪ್ರದೇಶದಲ್ಲಿ ಲಾಭ, ಹೆಂಡತಿ ಬಳಗದವರಿಂದ ಸುಖ. ಪೀಡಿತ ಗುರು ಶುಷ್ಕ ಅಭಿಯಾನ ದ್ಯೋತಕ. ಶಕ್ತಿಗಿಂತ ಹೆಚ್ಚು ಡೌಲನ್ನು ತೋರಿಸಿ ಕೊನೆಗೆ ಟೊಪ್ಪಿಗೆ ಬೀಳುವರು.

ದಶಮಸ್ಥಾನದಲ್ಲಿ:— ಗುರು ದಶಮಸ್ಥಾನದಲ್ಲಿದ್ದರೆ ಮಾನಸನ್ಮಾನ ಕೀರ್ತಿಭಾಗ್ಯಗಳನ್ನು ಕೊಡುವನು. ದಶಮದಲ್ಲಿ ಇಲ್ಲವೆ ಧನದಲ್ಲಿ ರಾಶಿಯಿಂದ ಶುಭದೃಷ್ಟಿಯಿಂದ ಕೂಡಿದ ಗುರು ಭಾಗ್ಯಕಾರಕನಿರುವನು. ಇವರು ದೊಡ್ಡ ಅಧಿಕಾರದಲ್ಲಿರುವರು. ಅವರ ಉತ್ಕರ್ಷವು ಬೇಗನೆ ಆಗುವದು. ಆಚರಣವು ಅತ್ಯಂತ ಶುದ್ಧವಾಗಿರುವದು. ಜಗತ್ತಿನಲ್ಲಿ ಹೆಸರು ಪಡೆಯುವರು. ಈ ಗುರು ರವಿ ಚಂದ್ರ ಶನಿ ಹರ್ಶಲರ ಶುಭ ಸಂಬಂಧದಲ್ಲಿದ್ದರೆ ಅತ್ಯಂತ ಭಾಗ್ಯಕಾರಕನಾಗುವನು. ಇಂತಹ ಗುರು ಇದ್ದವರು ಬ್ಯಾರಿಸ್ಟರ, ಮುಖ್ಯ ಅಧ್ಯಾಪಕರಾಗುವರು. ವಿಶ್ವವಿದ್ಯಾಲಯ ವಿದ್ಯಾಖಾತೆ, ಬ್ಯಾಂಕ, ಫ್ರಾಯನಾನ್ಸ ಡಿಪಾರ್ಟಮೆಂಟ, ನ್ಯಾಯಖಾತೆ ಇವುಗಳಲ್ಲಿ ಅಧಿಕಾರ ಮಾನ ಸನ್ಮಾನಗಳನ್ನು ಹೊಂದುವರು. ಸಾಂಪತ್ತಿಕ ಸ್ಥಿತಿಯ ಅಭಿವೃದ್ಧಿಯಾಗುವದು. ಆದರೆ ದಶಮದಲ್ಲಿ ದುರ್ಬಲ ಪೀಡಿತ ಗುರು ಇದ್ದರೆ ವಿಶೇಷವಾಗಿ ರವಿ ಚಂದ್ರ ಶನಿಗಳ ಅಶುಭ ಸಂಬಂಧದಲ್ಲಿದ್ದರೆ ಆಚರಣವು ಚೆನ್ನಾಗಿರದು. ಅಷ್ಟು ಭಾಗ ವೃಧ್ಧಿಯಾಗದು. ಇವರ ದೊಡ್ಡಿಸ್ತನವು ನೀಚ ವರ್ತನದಿಂದ ಕೆಳಗೆ ಬೀಳುವದು. ಪೀಡಿತ ಗುರು ಚಿರಕಾಲ ಒಳ್ಳೆಯ ಫಲವನ್ನು ಕೊಡ

ಲಾರನು. ದಶಮದಲ್ಲಿ ಗುರು ರವಿ ಚಂದ್ರರ ಶುಭ ಸಂಬಂಧದಲ್ಲಿದ್ದರೆ ಮಹದ್ಭಾಗ್ಯದ ಲಕ್ಷಣವು. ಜನ್ಮವು ಉಚ್ಚಕುಲದಲ್ಲಿ ಸಂಭವಿಸುವದು. ಆಪ್ತೇಷ್ಟರಿಂದ ಸಹಾಯ ಸಿಗುವದು. ಸಂತತಿ, ಸಾಂಪತ್ತಿಕ ಅನುಕೂಲತೆ ಇರುವದು. ದಶಮದಲ್ಲಿ ಗುರು ಕರ್ಕ ಮೀನ ಮಕರ ಧನು ರಾಶಿಯಲ್ಲಿದ್ದರೆ ಬಹಳ ಒಳ್ಳೆಯದು. ಅದಕ್ಕಿಂತ ಕೆಳಗೆ ಮೇಷ, ಸಿಂಹ ವೃಷಭ ತುಲಾ ಕುಂಭ ವೃಶ್ಚಿಕಗಳಲ್ಲಿ ಗುರುವಿಗೆ ಬಲವಿರುವದು. ಕನ್ಯಾ ರಾಶಿಯ ಗುರು ದುರ್ಬಲನು. ಮಿಥುನ ರಾಶಿಯವನು ಸಾಧಾರಣನು. ಮಿಥುನ ರಾಶಿಯಲ್ಲಿ ಬೌದ್ಧಿಕ ಕಾರ್ಯಗಳನ್ನು ಮಾಡಿಸುವನು. ಬೌದ್ಧಿಕ ಉನ್ನತಿ ಭಾಷಾ ವಿಷಯಕ ಉನ್ನತಿಗೆ ಮಿಥುನದ ಗುರು ನೆಟ್ಟಗೆ.

ಏಕಾದಶದಲ್ಲಿ:— ಬಲಿಷ್ಠ ಗುರು ಏಕಾದಶದಲ್ಲಿದ್ದರೆ ಲಾಭದಾಯಕ ಒಳ್ಳೆಯ ಮಿತ್ರರು ಸಿಗುವರು. ಸರ್ವ ಆಶೆಗಳು ಮಹತ್ವಾಕಾಂಕ್ಷೆಗಳು ಮಿತ್ರರ ಮುಖಾಂತರ ಫಲಿಸುವವು. ಸಮಾಜದಲ್ಲಿ ಹೆಸರು ಗಳಿಸುವ ಕಾರ್ಯಗಳಾಗುವವು. ಸಂತತಿ ಸುಖವು ಚೆನ್ನಾಗಿರುವದು. ಪುತ್ರಜನ್ಮ ದಿಂದ ಭಾಗ್ಯೋದಯವು. ಏಕಾದಶದಲ್ಲಿ ಗುರು ಚಂದ್ರಯುತಿ, ರವಿ ಗುರು ಯುತಿ, ಹರ್ಶಲ್ ಗುರುಯುತಿ, ನೇಪಚ್ಯೂನ ಗುರುಯುತಿ, ಶನಿ ಗುರು ಯುತಿ ಚೆನ್ನಾಗಿರುವದು. ಇದು ಅಶುಭ ಸಂಬಂಧಿತವಿರಬಾರದು.

ವ್ಯಯಸ್ಥಾನದಲ್ಲಿ ಗುರು: — ಪ್ರಾಚೀನ ಆಚಾರ-ವಿಚಾರಗಳ ಬಗೆಗೆ ಆದರವಿರುವದು. ಆಧ್ಯಾತ್ಮ ಗೂಢ ಶಾಸ್ತ್ರಗಳ ಬಗೆಗೆ ಅಭಿರುಚಿಯಿರುವದು. ಜನಸಮಾಜದ ಲಕ್ಷ್ಯದಲ್ಲಿ ಬಾರದಂತಹ ಸಂಗತಿಗಳಿಂದ ಲಾಭವಾಗುವದು. ಶತ್ರುಗಳು ಮಿತ್ರರಾಗುವರು. ಸಹಜ ಕಾರ್ಯಸಿದ್ಧಿಯಾಗುವದು. ಇಲ್ಲಿ ಪೀಡಿತ ಗುರು ಲಗ್ನ ಸಂಬಂಧದಲ್ಲಿ ಭಾನಗಡಿ ದರ್ಶಕನು. ಆದರೆ ಶುಭಸಂಬಂಧಿತ ಗುರು ೩೦ ವರ್ಷದ ನಂತರ ಮಿತ್ರರಿಂದ ಗುಪ್ತ ಸಹಕಾರ ಸಿಕ್ಕು ಉದಯವನ್ನುಂಟುಮಾಡುವನು. ಇಲ್ಲಿ ಬಲಿಷ್ಠ ಗುರು ಇದ್ದರೆ ದಾನಾಧ್ಯಕ್ಷರಾಗುವರು. ದಾನಸಂಸ್ಥೆಗಳೊಡನೆ ಸಂಬಂಧ ಸಾರ್ವಜನಿಕ ಹಿತಸಂಬಂಧದ ಸಂಸ್ಥೆಗಳಲ್ಲಿ ಏಳಿಗೆಯಾಗುವದು. ದವಾಖಾನೆ ಧಾರ್ಮಿಕ ಸಂಸ್ಥೆಗಳ ಸಂಬಂಧ ಬರುವದು. ಏಕಾಂತ ಉದ್ಯೋಗ

ಗಳಲ್ಲಿ ಲಾಭ ಯಶ ಸೂಚಕನಾಗಿರುವನು. ಏಕಾಂತವಾಸ, ಅಜ್ಞಾತವಾಸ, ದೂರ ಪ್ರದೇಶ ಗಮನಗಳ ಸಂಭವವಿರುವದು. ಇದರಿಂದ ಯಶಸ್ಸು, ಲಾಭ ದೊರಕುವವು.

ಮೇಲೆ ನಿರ್ದೇಶಿಸಿದ ಸಂಸ್ಥೆಗಳಿಂದ ಲಾಭವಾಗುವದು. ಕೆಲವರು ಇಂತಹ ಸಂಸ್ಥೆಗಳಿಗೆ ದೊಡ್ಡ ದೊಡ್ಡ ದೇಣಿಗೆಗಳನ್ನು ಕೊಡುವರು. ಬಲಿಷ್ಠ ಗುರು ಆಧ್ಯಾತ್ಮಿಕ ಉನ್ನತಿಗೂ ಸಹಾಯನಾಗುವನು. ಪೀಡಿತ ಗುರು ದಾನ ಸಂಸ್ಥೆಯಲ್ಲಿ, ಅನ್ನ ಛತ್ರದಲ್ಲಿ ಆಯುಷ್ಯ ಕಳೆಯುವಂತೆ ಮಾಡುವನು. ಮಠಾಶ್ರಯಿಗಳ ಕುಂಡಲಿಗಳನ್ನು ನಿರೀಕ್ಷಿಸಬಹುದು.

ರವಿ ಚಂದ್ರ ಮಂಗಳ ಬುಧರೊಡನೆ ಆಗುವ ಗುರುವಿನ ಯೋಗಫಲಗಳನ್ನು ಹಿಂದೆ ಕೊಟ್ಟಿದೆ. ನೋಡಿಕೊಳ್ಳಬೇಕು.

ಗುರು ಶನಿ ಶುಭಯೋಗ:— ಈ ಗ್ರಹಗಳು ಕಾರಕವಾಗಿರುವ ವಸ್ತುಗಳಿಂದ ಲಾಭವಾಗುವದು. ಇಂತಹ ವ್ಯಕ್ತಿಗಳು ನೀತಿವಂತರು ಶುದ್ಧ ಆಚರಣವುಳ್ಳವರು ನ್ಯಾಯಿ, ವಿಚಾರಿ ಅಂತಃಕರುಣದವರು ಇರುವರು. ಸಮಾಜದಲ್ಲಿ ಇಲ್ಲವೆ ತಮ್ಮ ಜ್ಞಾತಿಗಳಲ್ಲಿ ಇವರು ಆಧಾರ ಸ್ತಂಭದಂತಿರುವರು. ಸಾಂಪತ್ತಿಕ ಉನ್ನತಿಗೆ ಸ್ಥಾವರ ಆಸ್ತಿಗೆ ಇದು ಒಳ್ಳೇ ಅನುಕೂಲ ಯೋಗವು. ಬ್ಯಾಂಕಿಂಗದ ಬಗೆಗೆ, ನಾಣ್ಯಗಳ ಬಗೆಗೆ ಉತ್ತಮ ಜ್ಞಾನವಿರುವದು. ವ್ಯವಹಾರ ಕುಶಲರಿರುವರು. ನಾಣ್ಯಗಳ ಸಂಗ್ರಹ, ಇಸ್ಟೇಟ ಮಾಡುವ ಕಾರ್ಯಗಳಲ್ಲಿ ಯಶಸ್ವಿಯಾಗುವರ್ರ. ಗುರು ಸಪ್ತಮಾಧಿ ಪತಿ ಇದ್ದು ಶನಿಯೊಡನೆ ಶುಭಯೋಗಿ ಇದ್ದರೆ ಅತ್ತೆ ಮಾವನ ಮನೆಯಿಂದ ಲಾಭವಾಗುವದು; ಇಸ್ಟೇಟ ಪ್ರಾಪ್ತಿ. ಸಪ್ತಮದಲ್ಲಿ ಬಲಿಷ್ಠ ಗುರು ಈ ವೇರಿಗೆ ಲಾಭದಾಯಕನು; ಸ್ತ್ರೀಧನ ಪ್ರಾಪ್ತಿಯಾಗುವದು. ಮೃತ್ಯು ಪತ್ರದಿಂದ ಸ್ಥಾವರ ಜಮೀನ ಜುಮ್ಲಾ ಪ್ರಾಪ್ತಿ. ಗುರು ಧನಸ್ಥಾನದಲ್ಲಿದ್ದು ಶನಿಯೊಡನೆ ಶುಭಯೋಗ ಮಾಡುತ್ತಿದ್ದರೆ ಉದ್ಯೋಗದಲ್ಲಿ, ವ್ಯಾಪಾರದಲ್ಲಿ ಒಳ್ಳೇ ಯಶಸ್ವಿಯಾಗುವರು. ದಶಮದಲ್ಲಿ ಗುರು ಶನಿಯ ಶುಭ ಸಂಬಂಧದಲ್ಲಿದ್ದರೆ ಮಾನ ಮರ್ಯಾದೆ ಗೌರವಗಳು ಚೆನ್ನಾಗಿ ದೊರಕುವವು. ಅಧಿಕಾರ ಭಾಗ್ಯ ವೃದ್ಧಿಯಾಗುವದು.

ಗುರು ಶನಿಯುತಿ-ಸಮಕ್ರಾಂತಿ:— ಮೇಲಿನಂತೆ ಶುಭ ಫಲವನ್ನು ಕೊಡುವದು. ಸಮಕ್ರಾಂತಿ ಯೋಗದ ಫಲವು ನವಪಂಚಮ ಯೋಗಕ್ಕಿಂತ ಕಡಿಮೆ ತರಗತಿಯದು. ಪೀಡಿತ ಯುತಿ ಸಮಕ್ರಾಂತಿಗಳನ್ನು ಅಶುಭ ಯೋಗದಲ್ಲಿ ಪರಿಗಣಿಸಬೇಕು. ಶನಿ ಗುರುಗಳ ಸಂಗಮವು ದುರ್ಜನ ಸಜ್ಜನರ ಸಂಗಮದಂತಿರುವದು ಎಂದು ಭಾವಾರ್ಥ ರತ್ನಾಕರ ಕಾರರು ಹೇಳುವದು ಯಥೋಚಿತವದೆ. ಶನಿ ಸ್ವಲ್ಪ ಸುಧಾರಿಸುವನು; ಗುರು ಸ್ವಲ್ಪ ಕೆಡುವನು. ರಾಶಿಬಲವಿಲ್ಲದ ಗುರು ಶನಿ ಯುತಿ ಕೇಂದ್ರ ಪ್ರತಿಯೋಗಗಳು ಶರೀರಾಂತರ್ಗತ ಧಮನಿಗಳಲ್ಲಿ ರಕ್ತ ಪ್ರವಾಹವು ಸರಿಯಾಗಿ ನಡೆಯದೆ ರೋಗಜನಕವಾಗಬಹುದು.

ಗುರು ಶನಿ ಅಶುಭಯೋಗ:— ಈ ಅಶುಭಯೋಗವು ಆಳಸಿ, ಸಂಶಯಿ, ಮತ್ಸರೀ, ಭೀರು ಆತ್ಮವಿಶ್ವಾಸವಿಲ್ಲದವರನ್ನು ಹುಟ್ಟಿಸುವದು. ನಿಶ್ಚಿತ ಮತವಿರುವದಿಲ್ಲ. ದೈವವು ಎಳೆದತ್ತ ಹೋಗುವರು. ಅಪ್ರಾಮಾಣಿಕತೆ ನೀಚ ವೃತ್ತಿಗಳು ತಲೆದೋರುವವು. ದುಡ್ಡು, ಇಸ್ಟೇಟಗಳು ದಾಯಾದದಿಂದ ಕೋರ್ಟು-ಕಚೇರಿಗಳ ಫಿರ್ಯಾದದಿಂದ ನಾಶವಾಗುವವು. ಕಲಹದಿಂದ ವಿನಾಶ ಸಂಭವ. ವಿಶ್ವಸ್ತರ ವಂಚನೆಯಿಂದ ಹಾನಿಯು. ಸಪ್ತಮಾಧಿಪತಿ ಗುರು ಇದ್ದು ಶನಿಯ ಅಶುಭ ಸಂಬಂಧವಿದ್ದಲ್ಲಿ ಶ್ರೀಮಂತರ ಬಾಲಿಕೆಯೊಡನೆ ಮದುವೆಯಾಗಬೇಕೆಂದು ಇಚ್ಛೆ ಇರುವದು. ಆದರೆ ಅದು ಸಫಲವಾಗಲಾರದು. ಸಾಂಪತ್ತಿಕ-ಸಂತತಿ-ಸುಖಕ್ಕೆ ಈ ಯೋಗವು ಪ್ರತಿಕೂಲವಾಗಿದೆ. ರಾಶಿ ದುರ್ಬಲರಾಗಿ ಅಶುಭಯೋಗದಲ್ಲಿದ್ದರೆ ರಕ್ತ ಸಂಚಾರವು ಸರಿಯಾಗಿ ಸಾಗಲಾರದು.

ಗುರು ಹರ್ಶಲ್ ಶುಭಯೋಗ:— ಈ ಶುಭಯೋಗವಿರುವವರು ನ್ಯಾಯಿ, ಮಮತಾಳು, ಉದಾರ ಮತವಾದಿ ಇರುವರು. ಸತ್ಯವ್ರತ, ಅಂತಃಕರುಣದವ, ನಿಷ್ಕಪಟಿ, ಜನರೊಡನೆ ಹೊಂದಿಕೊಂಡು ಹೋಗುವ ಸ್ವಭಾವದವರಿರುವರು. ಗೂಢವಿದ್ಯೆ, ಶಾಸ್ತ್ರಗಳಲ್ಲಿ ಅಭಿರುಚಿ ಇರುವದು. ಸಂಪ್ರದಾಯದ ಅನುಯಾಯಿಗಳಾಗುವರು. ಭಾಗ್ಯ, ಕೀರ್ತಿ, ಸಾಂಪತ್ತಿಕ

ಸುಖಗಳನ್ನು ಕೊಡುವದು. ಅಧಿಕಾರ ದ್ಯೋತಕವಾಗಿರುವದು. ಮಿತ್ರರು, ಪುರಸ್ಕರ್ತರು ಹೆಚ್ಚಾಗಿ ಸಿಗುವರು. ಉದ್ಯೋಗದಲ್ಲಿ ಅಧಿಕಾರ ಪ್ರಾಪ್ತಿಯಲ್ಲಿ ಸಹಕಾರ ಸಿಕ್ಕುವದು. ಈ ಯೋಗವು ಅಧಿಕಾರಿ ವರ್ಗದಲ್ಲಿ, ಸಿವ್ಹಿಲಿಯನ್ನ, ರಾಜಮಹರಾಜರ ಆಶ್ರಯವನ್ನು, ಮೈತ್ರಿಯನ್ನು ಒದಗಿಸುವದು. ಅಧಿಕಾರ, ಪದವಿ, ವಿಶ್ವವಿದ್ಯಾಲಯಗಳ ಮಾನವನ್ನು ಕೊಡಿಸುವದು. ಗುರು ಹರ್ಶಲರಿಗೆ ಅಷ್ಟಮಸ್ಥಾನದ ಸಂಬಂಧ ಬಂದರೆ ರಾಶಿ ಬಲಿಯಾಗಿದ್ದಲ್ಲಿ ವಾರಸಾಧನವು ಒಮ್ಮೆಲೆ ಸಿಗುವದು. ಉದ್ಯೋಗ ಧಂದೆಗಳಲ್ಲಿ ಚೆನ್ನಾಗಿ ಪ್ರಗತಿ ಸಾಧಕವು. ಇದು ಧಾರ್ಮಿಕ ವಿಷಯದಲ್ಲಿಯೂ ಪ್ರಗತಿ ಸಾಧಕ ಯೋಗವು.

ಗುರು ಹರ್ಶಲ ಯುತಿ-ಸಮಕ್ರಾಂತಿ:— ಕೆಲಮಟ್ಟಿಗೆ ಶುಭ ಪ್ರಾಪ್ತಿ. ಆದರೆ ಶುಭಯೋಗದಷ್ಟು ಜೋರು ಇರುವದಿಲ್ಲ. ರಾಶಿಯಿಂದ ನಿರ್ಬಲರಿದ್ದರೆ, ಪೀಡಿತರಿದ್ದರೆ ಕಟು ಅನುಭವಗಳೇ ಬರುವವು. ಯುತಿ–ಸಮಕ್ರಾಂತಿಗಳಲ್ಲಿ ಕೆಲಮಟ್ಟಿಗೆ ಗುರು ಹರ್ಶಲನಿಂದ ದೂಷಿತವಾಗುವನು. ಆದರೆ ಗುರು ಹರ್ಶಲರ ಯೋಗದೊಡನೆ ರವಿ ಚಂದ್ರ ಬುಧ ಶುಕ್ರರ ಶುಭ ಸಂಬಂಧವಿರುವಲ್ಲಿ ಐಶ್ವರ್ಯಾಭಿವೃದ್ಧಿಯಾಗುವದು ಎಂದು ನಮ್ಮ ಅನುಭವಕ್ಕೆ ಬರುವದು.

ಗುರು ಹರ್ಶಲರ ಅಶುಭಯೋಗ:— ಈ ಅಶುಭಯೋಗವಾಗುತ್ತಿದ್ದರೆ ಸ್ವಭಾವದಲ್ಲಿ ಉತಾವಳಿತನ, ಲಹರೀತನಗಳು ಕಂಡು ಬರುವವು. ತಮ್ಮ ಹಾನಿಯನ್ನು ತಮ್ಮ ಕೈಯಿಂದಲೇ ತಾವೇ ಮಾಡಿಕೊಳ್ಳುವ ಸಂಭವವಿರುವದು. ಇವರು ಸಟ್ಟಾ, ಲಾಟರೀ ವ್ಯವಹಾರದಲ್ಲಿ ಕೈಹಾಕಬಾರದು. ಕೋರ್ಟು–ಕಚೇರಿ ಕಾರ್ಯಗಳಿಂದಲೂ ಹಾನಿಯಾಗುವ ಸಂಭವವಿರುವದು. ಖರ್ಚಿನಲ್ಲಿ ತಾಳತಂತ್ರವಿರುವದಿಲ್ಲ. ಉದ್ಯೋಗದಲ್ಲಿ ಹಾನಿ, ಮಿತ್ರರ ಹಾನಿಯಾಗುವ ಸಂಭವವಿರುವದು.

ಗುರು ನೇಪಚ್ಯೂನರ ಶುಭಯೋಗ:— ಉನ್ನತ ಪರಿಣತಾವಸ್ಥೆಗೆ ಮುಟ್ಟಿದವರ ಕುಂಡಲಿಯಲ್ಲಿ ಈ ಯೋಗವು ಅತ್ಯುತ್ತಮ ಫಲವನ್ನು ಕೊಡು

ವದು. ಅಧ್ಯಾತ್ಮ ವಿಷಯದಲ್ಲಿ ಗೂಢ ಶಾಸ್ತ್ರದಲ್ಲಿ ಚೆನ್ನಾಗಿ ಪ್ರಗತಿಯಾಗುವದು. ದೈವೀ ಸಾಕ್ಷಾತ್ಕಾರದ ಸಂಭವವಿರುವದು. ಇದು ಐಹಿಕಸುಖಕ್ಕೂ ಅನುಕೂಲವಾದದ್ದು. ಸಟ್ಟಾದಿ ವ್ಯವಹಾರದಲ್ಲಿ ಜಲಪರ್ಯಟನದಲ್ಲಿ ಲಾಭದಾಯಕವಾಗಿರುವದು.

ಗುರು ನೇಪಚ್ಯೂನ ಯುತಿ-ಸಮಕ್ರಾಂತಿಯೋಗ:— ಮೇಲೆ ಹೇಳಿದ ಶುಭಫಲಗಳು ಪ್ರಾಪ್ತವಾಗುವವು. ಆದರೆ ಗುರು ನೇಪಚ್ಯೂನರು ರಾಶಿ ಬಲಿಯಾಗಿರಬೇಕು. ಇತರ ಗ್ರಹಗಳಿಂದ ಪೀಡಿತರಿರಬಾರದು.

ಗುರು ನೇಪಚ್ಯೂನ ಅಶುಭಯೋಗ:— ಈ ಅಶುಭಯೋಗವಿರುವವರು ಮನೋವಿಕಾರಕ್ಕೆ ಅಧೀನರಾಗುವರು. ಪಿಶಾಚ ಭೂತ ಬಾಧೆಗಳ ಸಂಭವವಿರುವದು. ಮೇಲಿಂದಮೇಲೆ ಸಾಂಪತ್ತಿಕ ಅಡಚಣಿಗಳು ಬರುವವು. ವಿಶ್ವಾಸಘಾತದಿಂದ ಹಾನಿ ಸಂಭವ. ಲೂಟಿ ಕಂಪನಿಗಳಿಂದ ಹಾನಿ ಸಂಭವ.

ಸ್ತ್ರೀಯರ ಕುಂಡಲಿಯಲ್ಲಿ ಈ ಅಶುಭಯೋಗವಾಗುತ್ತಿದ್ದರೆ ಹಿಸ್ಟಿರಿಯಾದ ಸಂಭವವಿರುವದು.

" ದೇವಾನಾಂಚ ಋಷೀಣಾಂಚ ಗುರುಂ ಕಾಂಚನ ಸನ್ನಿಭಂ।
ಬುದ್ಧಿ ಭೂತಂ ತ್ರಿಲೋಕೇಶಂ ತಂನಮಾಮಿ ಬೃಹಸ್ಪತಿ॥ "

ಶನಿ

ಪೂರ್ವಜರಿಗೆ ಜ್ಞಾತವಿದ್ದ ಗ್ರಹಗಳಲ್ಲಿ ಇದು ಕೊನೆಯದು. ಗುರುವಿನ ಆಚೆಗೆ ಇರುವದು. ೧ ನೆಯ ಪ್ರತಿಯ ತಾರೆಯಷ್ಟು ಬೆಳಕು ಇರುವದು. ಕಪ್ಪು ಪಿಂಗಟ ವರ್ಣವಿರುವದು. ಭಸ್ಮದ ಬಣ್ಣದಂತೆ ಕಾಣುವದು. ಗತಿಮಂದ. ಸೂರ್ಯನ ಸುತ್ತು ತಿರುಗಲಿಕ್ಕೆ ೨೯ ವರ್ಷ, ೧೫೭ ದಿವಸ ೫ ತಾಸು ಹತ್ತುವದು. ಒಂದು ರಾಶಿಯಲ್ಲಿ ಎರಡುವರೆ ವರ್ಷ ಇರುವನು. ಅವನು ಯಾವ ರಾಶಿಯಲ್ಲಿರುವನೋ ಆ ರಾಶಿಯ ಹಿಂದಿನ ಮುಂದಿನ ರಾಶಿಯನ್ನೂ ಪೀಡಿಸುವದರಿಂದ ಶನಿಯ ೭॥ ಪ್ರಖ್ಯಾತವಾಗಿರುವದು. ಕಣ್ಣಿಗೆ ಕಾಣುವ ಗ್ರಹಗಳಲ್ಲಿ ಇದು ಮಂದಗತಿಯ ಗ್ರಹವಾಗಿರುವದು. ಗುರು ಶುಕ್ರರ ತೇಜಸ್ಸಿನ ಮುಂದೆ ಇವನ ತೇಜಸು ಏನೂ ಅಲ್ಲ.

ಶನಿ ಖಲ ಗ್ರಹವೆಂದು ಪ್ರಾಚೀನ ಕಾಲದಿಂದಲೂ ತಿಳುವಳಿಕೆಯಿರುವದು. ಕೌರವ–ಪಾಂಡವರ ಯುದ್ಧ ಕಾಲದಲ್ಲಿ ಅವನು ರೋಹಿಣೀಶಕಟ ಭೇದ ಮಾಡಿದ್ದನೆಂದು ವರ್ಣನೆ ಇರುವದು. ಈ ಬಗೆಗೆ ವರಾಹಮಿಹಿರಾಚಾರ್ಯರು ಬೃಹತ್ ಸಂಹಿತೆಯಲ್ಲಿ,

"ರೋಹಿಣೀ ಶಕಟಮರ್ಕನಂದನೋ ಯದಿ
ಭಿನತ್ತಿ ರುಧಿರೋಽಥವಾ ಶಿಖೀ" ಹೇಳಿರುವರು.

ಶನಿ ಮಂಗಳ ಚಂದ್ರ ಯಾರಾದರೂ ಈ ಶಕಟ ಭೇದ ಮಾಡಿದರೆ ಮಹಾನ್ ಅನಯಃ ಎಂದು ಹೇಳಿರುವರು. ಶನಿಗೆ ಕಾಲ, ಯಮನೆಂದೂ ಹೆಸರುಗಳಿರುವವು. ಲೀವೋ ಇವರು ರೀಪರ ಕುಯಿಲಂಗಾರನೆಂದು ಕರೆಯುವರು. ಅವನು ದುಃಖ ದೈನ್ಯಗಳ ಕಾರಕನು. ಸೈತಾನನೆಂದೂ ಕರೆಯಲ್ಪಟ್ಟಿರುವನು. ಅವನು ಲೋಭ, ಮೋಹ, ವಿಷಮ, ಪರಪೀಡಾ, ನಿರ್ಘಾತ, ನೈಷ್ಠುರ್ಯ, ದುರ್ಮತಿ, ದಾರಿದ್ರ್ಯ, ದುರ್ದಶಾ, ಭಯ, ವಾತ, ವಂಚನಾ, ಮಹಿಷೀ, ಯವಾಗಲಾ (ಅಂಬಲಿ) ಕೃಷ್ಣ ಧಾನ್ಯ, ಆಯುಷ್ಯ, ಜೀವನೋ-

ಪಾಯ ಇತ್ಯಾದಿಗಳ ಕಾರಕನಾಗಿರುವನು. ವಿಶೇಷ ಕಾರಕಗಳು ಬೇಕಿದ್ದರೆ ಕಾಲಿದಾಸನ ಕಾಲಾಮೃತವನ್ನು ನೋಡಿರಿ. ಆಂಗ್ಲ ಜ್ಯೋತಿರ್ವಿದರು ದೀರ್ಘಕಾಲ ಬಾಳುವ ರೋಗ, ಅಡ್ಡಿಗಳು, ವಿಲಂಬ, ವ್ಯಂಗ್ಯ, ವೈಕಲ್ಯ, ಛಿದ್ರ ಮೃತ್ಯು, ಉನ್ನತ ಸ್ಥಾನದಿಂದ ಪತನ, ದೈನ್ಯ, ಬಡತನ ಮೊದಲಾದವುಗಳು ಅವನ ಕಕ್ಷೆಯಲ್ಲಿ ಬರುವವೆಂದು ಹೇಳುವರು. ಖನಿಜಗಳಲ್ಲಿ ಕೆಲಸ ಮಾಡುವವರು, ಇದ್ದಲಿ ವ್ಯಾಪಾರಿಗಳು ಹೆಣಕ್ಕಾಗಿ ಗೋರಿ ಕಡಿಯುವವರು— ಇವರ ಕಾರಕನಾಗಿರುವನು. ಶೀತ, ರುಕ್ಷ, ವಂಧ್ಯ, ಕಠಿನ ಭೀರು, ಮೌನಿ, ಬಂಧನ ಕಾರಕ, ಆತ್ಮರಕ್ಷಕ, ಸ್ಥಿರಾತ್ಮಾ, ಸ್ಥಿರಚಿತ್ತ ಇರುವವರಲ್ಲಿ ಶನಿಯ ಅಮಲ ಇರುವದು.

ಆಚಾರ್ಯ ವರಾಹಮಿಹಿರರು **"ಮಂದೋಲಸಃ ಕಪಿಲದೃಕ್ ಕೃಶ ದೀರ್ಘಗಾತ್ರಃ ಸ್ಥೂಲೋದ್ವಿಜಃ ಪುರುಷರೋಮ ಕಚೋಽನಿಲಾತ್ಮಾ"** ಎಂದು ಶನಿಯ ಸ್ವರೂಪವನ್ನು ಹೇಳಿರುವರು. (ದ್ವಿಜ; ದೊಡ್ಡ ಹಲ್ಲುಗಳು.)

ಮಕರ ಕುಂಭಗಳು ಶನಿಯ ಸ್ವಕ್ಷೇತ್ರಗಳು. ತುಲೆಯಲ್ಲಿ ಉಚ್ಚನಿರುವನು. ಮಿಥುನ ತುಲಾ ಕುಂಭ ಶಾಸ್ತ್ರೀಯ ರಾಶಿಗಳಲ್ಲಿ ಶನಿ ಬಲಿಯಾಗಿರುವನು. ಈತನು ಒಂದು ರಾಶಿಯಲ್ಲಿ ೨॥ ವರುಷ ಇರುವದರಿಂದ ರಾಶಿ ಫಲಕ್ಕಿಂತ ಭಾವ ಫಲವು ಹೆಚ್ಚಿಗೆ ಅನುಭವಕ್ಕೆ ಬರುವದೆಂದು ಬಲ್ಲವರು ಹೇಳುತ್ತಾರೆ. ಒಂದು ರಾಶಿಯಲ್ಲಿ ಬಹುಕಾಲ ನಿಲ್ಲುವ ಗ್ರಹಗಳ ರಾಶಿ ಫಲಕ್ಕಿಂತ ನಕ್ಷತ್ರ ಫಲ, ನವಾಂಶ ಫಲಗಳನ್ನು ನೋಡಬೇಕು. ವಿಶೇಷತಃ ಶನಿ ಹರ್ಷಲ ನೇಪಚ್ಯೂನರ ಫಲಗಳನ್ನು ಈ ಮೇರೆಗೆ ನೋಡುವದು ಉಚಿತ.

ಶನಿ ಕೇವಲ ಅಶುಭ ಫಲಗಳನ್ನೇ ಕೊಡುವನೆಂದು ಗ್ರಹಿಸಕೂಡದು. ಶುಭ ಸ್ಥಾನದಲ್ಲಿ ಶುಭ ಸಂಬಂಧದೊಡನೆ ಇರುವಾಗ ಶುಭಫಲವನ್ನು ಕೊಡುವನು. ಸ್ಥಿರಸಂಪತ್ ಕೊಡಲಿಕ್ಕೆ ಇವನು ಮುಂದಾಳು. ಸ್ಥಾವರ ಆಸ್ತಿ, ಬಿಲ್ಡಿಂಗ, ಹೊಲ, ತೋಟಗಳು ಶನಿಯ ಕೃಪೆಯಿಂದ ದೊರಕುವವು. ಜನ್ಮ ಕುಂಡಲಿಯಲ್ಲಿ ಈ ಗ್ರಹವು ಬುಧ ಶುಕ್ರ ಚಂದ್ರ ಗುರುಗಳ ಶುಭ ಸಂಬಂಧದಲ್ಲಿರಬೇಕು.

ಶನಿಯ ಭಾಗ್ಯಾಂಕ ೮. ಇವನ ಬಣ್ಣ ಕರೀ ನೀಲಿ. ಇವನ ರತ್ನ ಇಂದ್ರನೀಲಮಣಿ. (Saphire)

ಲಗ್ನದಲ್ಲಿ:— ಶನಿಯು ಲಗ್ನದಲ್ಲಿ ಶುಭ ಸಂಬಂಧಿತನಿದ್ದರೆ ಭಾಗ್ಯ ವೃದ್ಧಿಯನ್ನು ಮಾಡುವನು. (ಇತ್ಥಸಿ ಘಟೀ ಚಾಪೇಷು ಯೋಗ ಪ್ರದಃ) ಪೂರ್ವ ವಯಸ್ಸಿನಲ್ಲಿ ಸಂಕಟಗಳು ಬಂದರೂ ದೀರ್ಘೋದ್ಯೋಗದಿಂದ ಆತ್ಮವಿಶ್ವಾಸದಿಂದ, ಧೈರ್ಯದಿಂದ ಅವುಗಳಿಗೆ ಟಕ್ಕರ ಕೊಟ್ಟು ಮುಂದೆ ಬರುವರು. ಸಂಕಟಕ್ಕೆ ಇವರು ಬೆದರುವದಿಲ್ಲ. ಅಶುಭ ಸಂಬಂಧಿತ ಶನಿ ಇದ್ದರೆ ಭೀರುಗಳಿರುವರು. ಎರಡನೇಯವರ ಮೇಲೆ ವಿಶ್ವಾಸವಿಡುವರು. ಯಾವ ಕಾರ್ಯದ ಜವಾಬ್ದಾರಿಯನ್ನು ಹೊತ್ತುಕೊಳ್ಳಲಾರರು. ಒಳಗಂಟಿನವರು, ಖುನಸೀ, ಲೋಭೀ. ಮತ್ಸರೀ, ದೀರ್ಘ ದ್ವೇಷಿ, ಲಬಾಡ, ಲುಚ್ಚಾ, ಏಕಾಂತ ಪ್ರಿಯ, ದುಃಖಿ, ಮಲಿನ ಇರುವರು. ಇದರಿಂದ ಎಲ್ಲರಿಗೂ ಅವರು ಬೇಡಾಗುವರು. ನಿರಾಶಾ, ದುಃಖ, ತ್ರಾಸಗಳನ್ನು ಅನುಭವಿಸುವರು. ಪೂರ್ವ ವಯಸ್ಸಿನಲ್ಲಿ ರೋಗಿಗಳಾಗಿರುವರು. ಶೀತ ವಿಕಾರ, ಮಸ್ತಕ ವೇದನೆಗಳು ಉಂಟಾಗುವವು. ಶನಿ ವೃಶ್ಚಿಕದಲ್ಲಿ ಉದಿತನಾಗುತ್ತಿದ್ದರೆ ಬದ್ಧ ಕೋಷ್ಟದ ವಿಕಾರ, ಅಪೆಂಡಿಟಾಯಿಟಿಸ್‌ಗಳು ತೋರಿಬರುವವು. ಸಿಂಹದಲ್ಲಿ ಉದಿತವಿದ್ದರೆ ರಕ್ತಾಭಿಸರಣ ಸರಿಯಿಲ್ಲದ್ದರಿಂದ ಉಂಟಾಗುವ ರೋಗಗಳು ತಲೆದೋರುವವು. ಕರ್ಕದಲ್ಲಿ ಪಚನ ಜಠರ ವಿಕಾರಗಳು, ತುಲೆಯಲ್ಲಿ ಮೂತ್ರಾಶಯದ ವಿಕಾರಗಳು ತಲೆದೋರುವವು. ಇದೇ ಪ್ರಕಾರ ಬೇರೆ ಬೇರೆ ರಾಶಿಗಳಿಂದ ಊಹಿಸಬಹುದು. ಸಾಧಾರಣವಾಗಿ ಲಗ್ನದಲ್ಲಿ ಉದಿತವಾಗುವ ಶನಿ ಲಜ್ಜಾಶೀಲ, ಏಕಾಂತ ಪ್ರಿಯ, ಉದಾಸೀನ ವೃತ್ತಿಯವನನ್ನಾಗಿ ಮಾಡುವನು. ಹಟ, ಒಂದೇ ವಿಷಯದ ಚಿಂತನ ಮಾಡುವವನಾಗುವನು. ಸ್ವಾರ್ಥಿ, ಲಬಾಡ, ಲುಚ್ಚಾ, ಯಾವುದಾದರೊಂದು ರೀತಿಯಿಂದ ಸ್ವಾರ್ಥ ಸಾಧಿಸುವವನು ಆಗುವನು. ಧಾರ್ಮಿಕ ಆಚಾರ-ವಿಚಾರಗಳಲ್ಲಿ ಚಮತ್ಕಾರಿಕ ಮತವಿರುವದು.

ಅಗ್ನಿರಾಶಿಯ ಶನಿಯು ಕೆಲಮಟ್ಟಿಗೆ ಸಾರಲ್ಯವನ್ನು ಕೊಡುವನು. ಪ್ರಾಮಾಣಿಕತೆ ತೋರುವದು. ವೃಷಭ ರಾಶಿಯ ಶನಿ ಮಂದ, ಸಂಶಯಿ,

ಖುನಸಿ, ದೀರ್ಘ ಸೂತ್ರಿಯನ್ನಾಗಿ ಮಾಡುವನು. ಕನ್ಯಾರಾಶಿಯ ಶನಿಯು ಚಿಕಿತ್ಸಕರನ್ನು, ತ್ರಾಸಿಕ, ಪಿರಿಪಿರಿ, ಕಿರಿಕಿರಿ ಮಾಡುವ ಸ್ವಭಾವವನ್ನು ಕೊಡುವನು. ಮಕರದ ಶನಿ (ಲಗ್ನದಲ್ಲಿ) ಇರುವವರು ವಾದ-ವಿವಾದ ಮಾಡುವ, ಧೂರ್ತ, ಕಾರಸ್ಥಾನೀ, ಸ್ವಾರ್ಥಿ, ಕಷ್ಟಾಳು, ದೀರ್ಘಶ್ರಮ ಮಾಡುವವರು, ಲೋಭಿ, ಕೃಪಣರಿರುವರು. ಲಗ್ನದಲ್ಲಿ ವಾಯು ರಾಶಿಯ ಶನಿ ಇದ್ದರೆ ವಿಚಾರಿ, ಅಭ್ಯಾಸಿ, ವಿದ್ಯಾವ್ಯಾಸಂಗಿ, ಉದ್ಯೋಗಿ, ಲೆಕ್ಕಿಗ, ದುಡ್ಡಿನ ವ್ಯವಹಾರದಲ್ಲಿ ದಕ್ಷತೆಯಿಂದ ಇರುವವ, ಧಾರ್ಮಿಕ, ಸತ್ಯಪ್ರತಿಜ್ಞ, ಭಾವಿಕ, ಕರ್ಮಠ ಇರುವರು. ತುಲೆಗಿಂತ ಮಿಥುನ ಕುಂಭಗಳಲ್ಲಿ ಈ ಗುಣಗಳು ಹೆಚ್ಚಾಗಿ ತೋರಿಬರುವವು. ತುಲೆಯ ಶನಿಯಲ್ಲಿ ಅಹಂಕಾರ, ಆಗ್ರಹೀ ಸ್ವಭಾವವಿರುವದು. ಕರ್ಕ, ಮೀನ ರಾಶಿಯಲ್ಲಿ ಉದಿತವಾಗುವ ಶನಿ ಮಂದ ಬುದ್ಧಿ, ಜಾಡ್ಯ ಸೂಚಕನಾಗಿರುವನು. ವೃಶ್ಚಿಕ ಶನಿ ಲುಚ್ಚಾ, ಖುನಸೀ, ವಿಶ್ವಾಸವಿಡಲಿಕ್ಕೆ ಅಯೋಗ್ಯರನ್ನಾಗಿ ಮಾಡುವನು.

ಧನಸ್ಥಾನದಲ್ಲಿ:— ದ್ವಿತೀಯದಲ್ಲಿ ಶುಭ ಸಂಬಂಧಿತ ಶನಿ ಇದ್ದರೆ— ವಿಶೇಷವಾಗಿ ತುಲೆಯ ಶನಿ ಇದ್ದರೆ— ವಾರಸಾ ನಾತೆಯಿಂದ— ತಂದೆಗಳಿಸಿದ ಆಸ್ತಿ— ಸಿಗುವದು. ಜಿಂದಗಿ ಪ್ರಾಪ್ತವಾಗುವದು. ಜಾಗರೂಕತೆಯಿಂದ ಮಿತವ್ಯಯ ಸಾಧಿಸುವರು. ಭಾನಗಡಿ ಇಲ್ಲದ ವ್ಯವಹಾರದಲ್ಲಿ ದುಡ್ಡನ್ನು ತೊಡಗಿಸುವರು. ಅನೇಕ ಧನಾಢ್ಯರ ಕುಂಡಲಿಯಲ್ಲಿ ತುಲೆಯ ಶನಿ ಶುಭ ಸಂಬಂಧಿತನಿರುವದು ಕಂಡು ಬಂದಿರುವದು. ಹಿರಿಯರಿಂದ ಇವರಿಗೆ ವ್ಯವಹಾರಕ್ಕೆ ಬೇಕಾದ ದುಡ್ಡು ಸಿಗುವದು. ಆದರೆ ಧನಸ್ಥಾನದಲ್ಲಿ ಪೀಡಿತ ಶನಿ ಇದ್ದರೆ (ನಿರ್ಬಲಿ) ಆಯುಷ್ಯವಿರುವ ವರೆಗೆ ದಾರಿದ್ರ್ಯದೊಡನೆ ಹೋರಾಡಬೇಕಾಗುವದು. ವ್ಯಾಪಾರದಲ್ಲಿ ಲಾಭವಾಗುವದಿಲ್ಲ. ಶನಿಯ ಬಲಾಬಲ ವಿಚಾರಮಾಡಿ ಫಲವನ್ನು ಹೇಳಬೇಕು. ಶನಿಯು ಧನಭಾವದಲ್ಲಿದ್ದರೆ ನಮ್ಮವರು ಶ್ರಾದ್ಧಾನ್ನ ಭೋಜನ ಯೋಗವೆಂದು ಹೇಳುವರು. ಬಲಾಬಲ ತಾರತಮ್ಯದಂತೆ ಪಿಂಡಪ್ರಧಾನ ಶ್ರಾದ್ಧಾನ್ನ, ಚಟಕ ಶ್ರಾದ್ಧಾನ್ನ ಭೋಜನ ಯೋಗವೆಂದು ಹೇಳಬಹುದು. ಅನೇಕ ಫಂಡ ಗುಂಡರ ಕುಂಡಲಿಯಲ್ಲಿ ಈ ಯೋಗವಿರುವದು. ಕಂಡು ಬರುವದು. ಅದು ಆಧುನಿಕ ಯುಗದ ಶ್ರಾದ್ಧಾನ್ನವು.

ತೃತೀಯದಲ್ಲಿ:— ಬಲವಾನ್ ಶನಿ ತೃತೀಯದಲ್ಲಿದ್ದರೆ ಗಾಂಭೀರ್ಯ, ಶಾಂತಿ, ವಿವೇಕ, ಸೌಮ್ಯ ವಿಚಾರ ಶೀಲತೆಗಳನ್ನು ಕೊಡುವನು. ಚಿತ್ತದ ಏಕಾಗ್ರತೆಯನ್ನು ಇವರು ಬೇಗ ಸಾಧಿಸುವರು. ಕುಶಾಗ್ರ ಬುದ್ಧಿ ಮತ್ತೆ ಇರುವದು. ನ್ಯಾಯ ಪ್ರಾಮಾಣಿಕತೆ, ಚಾತುರ್ಯ ಇತ್ಯಾದಿ ಶನಿಯ ಸದ್ಗುಣಗಳು ಕಾಣಬರುವವು. ಇವರು ಯೋಗ್ಯ ಸಲಹೆಯನ್ನು ಕೊಡಲಿಕ್ಕೆ ತಕ್ಕವರಿರುವರು. ಪೀಡಿತ ದುರ್ಬಲ ಶನಿ ಭ್ರಾತೃ ಸುಖಕ್ಕೆ, ಗೆಳೆಯರ ಸುಖಕ್ಕೆ ಬಾಧಕನಾಗಿರುವನು. ಧಾರಣಾಶಕ್ತಿ ಕಡಿಮೆಯಾಗಿರುವದು. ಬುದ್ಧಿಯ ಪ್ರಗತಿ ಮಂದಗತಿಯಿಂದ ಆಗುವದು. ಲೇಖ, ಗ್ರಂಥ ಪ್ರಕಾಶನಗಳಿಂದ ಲಾಭವಾಗಲಾರದು. ಪ್ರವಾಸದಲ್ಲಿ ಥಂಡಿ, ಗಾಳಿಗಳಿಂದ ತ್ರಾಸವಾಗುವ ಸಂಭವವಿರುವದು. ಉದಾಸೀನತೆ, ನೈರಾಶ್ಯ ತೋರುವದು.

ಶನಿ ಚತುರ್ಥಭಾವದಲ್ಲಿ:— ಮಕರ, ಕುಂಭ ತುಲೆಗಳ ಶನಿ ಶುಭ ಸಂಬಂಧಿತನಿದ್ದರೆ ಜಮೀನ, ಜುಮಲಾ, ಸ್ಥಾವರ ಆಸ್ತಿ ದೊರಕುವವು. ಖನಿಜ ವ್ಯವಹಾರದಲ್ಲಿ ಲಾಭವಾಗುವದು. ಉತ್ತರ ವಯಸ್ಸಿನಲ್ಲಿ ಲಾಭ ಹೆಚ್ಚುವದು. ಇವರು ದುಡ್ಡಿನ ಬಗೆಗೆ ಲೋಭಿಗಳಾಗಿರುವರು. ಸಾಯುವವರೆಗೆ ಅವರಿಗೆ ದುಡ್ಡಿನ ಆಶೆ ತಪ್ಪಲಾರದು. (....ಧನಾಶಾಚ ಜೀರ್ಯತೋಪಿನ ಜೀರ್ಯತಿ) ಪೀಡಿತ ನಿರ್ಬಲಿ ಶನಿ ಮಾತ್ರ ಪಿತೃಸುಖಕ್ಕೆ ಬಾಧಕನು. ಆಯುಷ್ಯದ ಕೊನೆಯ ಭಾವದಲ್ಲಿ ಸುಖವಿಲ್ಲ. ಆದರೆ ಅವನು ಶುಭ ಸಂಬಂಧಿತನಿದ್ದರೆ ಉತ್ತರ ವಯಸ್ಸಿನಲ್ಲಿ ಏಕಾಂತ ವಾಸದ ಅಭಿರುಚಿಯನ್ನು ಹುಟ್ಟಿಸುವನು. ಪ್ರಾರಬ್ಧ ಕರ್ಮದಿಂದ ಅವರು ಒಂದೇ ಸ್ಥಳಕ್ಕೆ ಅಂಟಿಕೊಂಡು ಇರಬಹುದು.

ಶನಿ ಪಂಚಮದಲ್ಲಿ:— ಶನಿಯು ಪಂಚಮದಲ್ಲಿ ಗುರುವಿನ ಶುಭ ಸಂಬಂಧದಲ್ಲಿದ್ದರೆ ಶನಿಕಾರಕವಾಗಿರುವ ವಸ್ತುಗಳ ಸಟ್ಟಾ ವ್ಯವಹಾರದಲ್ಲಿ ಲಾಭವಾಗುವದು. ಸಾರ್ವಜನಿಕ ಅಧಿಕಾರದಿಂದ ಲಾಭವಾಗುವದು. ಶಿಕ್ಷಣ ಖಾತೆಯಲ್ಲಿ ಅಧಿಕಾರವನ್ನು ಕೊಡುವನು. ಪೀಡಿತ ಶನಿ ಪ್ರೇಮ ವ್ಯವಹಾರದಲ್ಲಿ ಅಪಯಶಸ್ಸನ್ನು ಕೊಡುವನು. ಸಂತತಿ ಸುಖಕ್ಕೆ ವ್ಯತ್ಯಯವನ್ನು ತರುವನು. ಸ್ತ್ರೀಯರ ಕುಂಡಲಿಯಲ್ಲಿ ಋತುಸ್ನಾತವಾದ ನಂತರ

ಅನೇಕ ವರ್ಷಗಳ ತರುವಾಯ ಸಂತಾನವಾಗುವದು. ಈ ಗ್ರಹವು ಗರ್ಭಸ್ಥಾನದಲ್ಲಿದ್ದರೂ (೧-೩-೫, ೭-೯-೧೧) ವಿಲಂಬ ಸಂತತಿಗೆ ಕಾರಣವಾಗುವದು. ೫, ೯, ೧೧ ರಲ್ಲಿ ವಿಶೇಷ ಅನುಭವಕ್ಕೆ ಬರುವದು. ಸಟ್ಟಾ, ಲಾಟರಿ, ರೇಸ, ಸಂತತಿ ಸುಖಕ್ಕೆ ಪಂಚಮ ಶನಿ ಪ್ರತಿಕೂಲನಾಗಿರುವನು. ಪಂಚಮದಲ್ಲಿ ಜಲರಾಶಿಯ ಶನಿಯು ಜಲಾಪಘಾತದಿಂದ ಮರಣವನ್ನು ಸೂಚಿಸುವನು.

ಷಷ್ಠದಲ್ಲಿ:— ಶುಭ ಸಂಬಂಧವಿಲ್ಲದ ದುರ್ಬಲ ಶನಿಯು ಷಷ್ಠದಲ್ಲಿದ್ದರೆ ಅಶುಭ ಫಲವನ್ನು ಕೊಡುವನು. ಪ್ರಕೃತಿಯ ಬಗೆಗೆ ಯಾವಾಗಲೂ ತಕರಾರು (ರಡಗಾಣಿ) ಇರುವದು. ಪ್ರಕೃತಿ ಅಶಕ್ತವಾಗಿರುವದು. ಯಾವಾಗಲೂ ರೋಗದ ತಕರಾರು ಇರುವದು. ಸ್ಥಿರ ರಾಶಿಯಲ್ಲಿ ಶನಿ ಪೀಡಿತನಿದ್ದರೆ ಹೃದಯ ವಿಕಾರ, ಘಟಸರ್ಪ, ಕಂಠ ವಿಕಾರ, ಮೂತ್ರ ವಿಕಾರ, ಲಘು ಶ್ವಾಸನಲಿಕಾದಾಹ ಮೊದಲಾದ ರೋಗಗಳಾಗುವ ಸಂಭವವಿರುವದು. ದ್ವಿಸ್ವಭಾವಿ ರಾಶಿಯಲ್ಲಿ ಪೀಡಿತ ಶನಿ ಇದ್ದರೆ ಕ್ಷಯ ಪುಪ್ಪುಸ ವಿಕಾರ, ದಮ್ಮು, ಶ್ವಾಸ ಆಮ ವಿಕಾರಗಳ ಸಂಭವವಿರುವದು. ಚರರಾಶಿಯಲ್ಲಿ ಪೀಡಿತ ಶನಿ ಜಠರ ಹೃದಯ ಸಂಧಿವಾತ ವಿಕಾರಗಳ ದರ್ಶಕನಾಗುವನು. ೬ ರಲ್ಲಿ ತುಲಾ ರಾಶಿಯಲ್ಲಿ ಪೀಡಿತ ಶನಿ ಪಿತ್ತಾಶಯ ವಿಕಾರ, ಲಿವ್ಹರ ವ್ಯಾಪಾರ ಸರಿಯಾಗಿ ಸಾಗದ್ದರಿಂದ ಯಕೃತ್ ವಿಕಾರ ತೋರುವನು. ಕನ್ಯಾರಾಶಿಯ ಶನಿ ಪಚನ ವಿಕಾರವನ್ನುಂಟುಮಾಡಬಹುದು. ಷಷ್ಠದಲ್ಲಿ ಪೀಡಿತ ಶನಿ ಇದ್ದವರು ಮಿತಾಹಾರಿಗಳಾಗಿರಬೇಕು. ಉಪವಾಸ ಲಂಘನಾದಿಗಳ ಕಡೆಗೆ ಅವರ ಲಕ್ಷ್ಯವಿರುವದು. ಅಗ್ನಿ ಮಾಂದ್ಯದ ವಿಕಾರವನ್ನು ಕಳೆದುಕೊಳ್ಳಲು ಪ್ರಯತ್ನಿಸಬೇಕು. (೬ ರಲ್ಲಿ ಬುಧನು ಶಾಸ್ತ್ರೀಯ ಚಿಕಿತ್ಸೆಯನ್ನು ತೋರುವನು. ಶುಕ್ರನಿದ್ದರೆ ಉಣ್ಣುವ ತಿನ್ನುವ ಪದಾರ್ಥಗಳು ಸುಗ್ರಾಸವಿರುವದು. ರಸಯುಕ್ತವಾಗಿರುವದನ್ನು ತೋರುವನು.) ೬ ರಲ್ಲಿ ಪೀಡಿತ ಶನಿ ಇದ್ದವರಿಗೆ ಕೈಕೆಳಗಿನ ನೌಕರರು ಸರಿಯಾಗಿ ಸಿಗುವದಿಲ್ಲ. ಅವರು ಲಕ್ಸಾನಕ್ಕೆ ಕಾರಣರಾಗುವರು. ನೌಕರಿಯಲ್ಲಿಯೂ ತ್ರಾಸವಾಗುವದು. ಬಲವಾನ್ ಶನಿ ಶಿಸ್ತಿನಿಂದ ಕೆಲಸ ಮಾಡುವ ಚಾಕರರನ್ನು ಕೊಡುವನು. ನೌಕರಿಯಲ್ಲಿ ಇವರು ವ್ಯವಸ್ಥೆಯಿಂದ, ಶಿಸ್ತಿನಿಂದ, ಅಚ್ಚುಕಟ್ಟುತನದಿಂದ ನಡೆಯುವರು.

ಶನಿ ಸಪ್ತಮದಲ್ಲಿ:— ಒರಲ್ಲಿ ಶನಿ ಇದ್ದರೆ ಹೆಂಡತಿಯಲ್ಲಿ ಅಥವಾ ಪತಿಯಲ್ಲಿ ಔದಾಶೀನ್ಯವು ತೋರುವದು. ಕೊಂಚ ಬಲವಿದ್ದರೆ ಮಿತಭಾಷಿ ಇರುವರು. ಪೀಡಿತ ಶನಿ ವೈಧವ್ಯವನ್ನು ಅಥವಾ ವೈಧುರ್ಯವನ್ನು ಕೊಡುವನು. ಇಂತಹ ಸಂಗತಿಗಳನ್ನು ನಿರ್ದಿಷ್ಟವಾಗಿ ಹೇಳುವಾಗ ಭಾವವನ್ನು ಭಾವಪತಿಯನ್ನು, ಕಾರಕ ಗ್ರಹವನ್ನು ನಿರೀಕ್ಷಿಸಿ ಹೇಳಬೇಕು. (ಭಾವಂ ಭಾವಪತಿಂ ಕಾರಕ ಖಗಂ ವೀಕ್ಷ್ಯ ಸರ್ವಂ ವದೇತ್) ಸಪ್ತಮದ ಕಾರಕಖಗ ಶುಕ್ರನು. ಅವನು ನಿರ್ಬಲಿಯಾಗಿರಬೇಕಾಗುವದು. ಪೀಡಿತ ಶನಿ ದ್ವಿಕಲತ್ರ, ತ್ರಿಕಲತ್ರ ಯೋಗಗಳನ್ನು ಉಂಟುಮಾಡಬಹುದು. ಆದರೆ ಶನಿಯು ಶುಭ ಸಂಬಂಧಿತನಿದ್ದರೆ ವಿವಾಹ ಸಂಬಂಧದಿಂದ ಸ್ಥಾವರ ಆಸ್ತಿ ಜಮೀನ ಜುಮಲಾ ಧನಲಾಭವಾಗುವ ಸಂಭವವಿರುವದು. ಸ್ತ್ರೀಯರಿಗೆ ಸ್ಥಾವರ ಆಸ್ತಿಯು ಪತಿ ಸಿಗುವನು. ಶನಿ ಸಪ್ತಮದಲ್ಲಿರುವದು ಅಷ್ಟು ಒಳ್ಳೆಯದಲ್ಲ. ವಿವಾಹ ಸುಖ ಚೆನ್ನಾಗಿರುವದಿಲ್ಲ. ವಿಶ್ವಾಸ ಘಾತಕೀ ಶತ್ರುಗಳಿಂದ ಹಾನಿಯಾಗುವ ಸಂಭವವಿರುವದು. ರಾಶಿ ಬಲಿ ಶುಭಸಂಬಂಧಿ ನಿದ್ದರೆ ಹಾನಿ ಇಲ್ಲ. ಶನಿಯ ಸದ್ಗುಣಗಳು ಪತಿಯಲ್ಲಿ ಅಥವಾ ಪತ್ನಿಯಲ್ಲಿ ಕಂಡು ಬರುವವು.

ಅಷ್ಟಮದಲ್ಲಿ ಶನಿ:— ಮಕರ ಕುಂಭ ತುಲೆಯಲ್ಲಿ ಶುಭ ಸಂಬಂಧಿತನಿದ್ದರೆ ವಿವಾಹದಿಂದ ಸಾಂಪತ್ತಿಕ ಲಾಭಗಳಾಗುವವು. ವಾರಸಾನಾತೆಯಿಂದ ಸ್ಥಾವರ ಆಸ್ತಿ ವಗೈರೆ ಸಿಗುವ ಸಂಭವವಿರುವದು. ಅಷ್ಟಮದಲ್ಲಿ ಶುಭ ಸಂಬಂಧಿತ ಶನಿ ಆಯುರ್ಮರ್ಯಾದೆಯನ್ನು ಹೆಚ್ಚಿಸುವನು. ಮೃತ್ಯು ನೈಸರ್ಗಿಕ ಕಾರಣಗಳಿಂದ ವೃದ್ಧಾವಸ್ಥೆಯಲ್ಲಿ ಆಗುವದು. ಪೀಡಿತ ಶನಿ ಇದ್ದರೆ ಸ್ತ್ರೀಧನ ಸಿಗಲಾರದು. ಬಡತನ ಮನೆತನದ ಹೆಂಡತಿ ದೊರಕುವಳು. ಮೃತ್ಯು ಪತ್ರದ್ವಾರಾ ವಾರಸಾನಾತೆಯಿಂದ ಧನವು ದೊರಿಯಲಾರದು. ಲಗ್ನವಾದನಂತರ ಸಾಂಪತ್ತಿಕ ಅಡಚಣಿಗಳು ಬರುವವು. ಮೃತ್ಯು ದೀರ್ಘ ಕಾಲದ ಬೇನೆಯಿಂದ ಬರುವದು.

ನವಮದಲ್ಲಿ:— ಈ ಭಾವದಲ್ಲಿ ಬಲಿಯಾದ ತುಲಾ ಕುಂಭ ಮಿಥುನ ಮಕರದ ಶನಿ ಶುಭ ಸಂಬಂಧಿತನಾಗಿದ್ದರೆ ವಿದ್ಯಾವ್ಯಾಸಂಗೀ ಶಾಂತ ವಿಚಾರೀ,

ಧೀರೋದಾತ್ತ, ಸ್ಥಿರ ವೃತ್ತಿ, ಮಿತಭಾಷಿ ಸ್ವಭಾವದವರು ಆಗುತ್ತಾರೆ. ಕಾಯ್ದೆ ಶಾಸ್ತ್ರ ವೇದಾಂತ ತತ್ವಜ್ಞಾನಾದಿ ಗಹನ ವಿಷಯಗಳಲ್ಲಿ ಪಾಂಡಿತ್ಯವಿರುವದು. ಇವರು ಕಾರ್ಪೊರೇಶನ್ ಸಂಸ್ಥೆ, ವಿದ್ಯಾಲಯಗಳಿಗೆ ಅಧ್ಯಕ್ಷರಾಗಲು ಅರ್ಹರಾಗಿರುವರು. ನ್ಯಾಯಖಾತೆ, ಧರ್ಮ ಸಂಸ್ಥೆಗಳಲ್ಲಿ ತಮ್ಮ ಬುದ್ಧಿ ಮತ್ತೆಯಿಂದ ಪಾವಿತ್ರ್ಯದಿಂದ ಶ್ರೇಷ್ಠಪದವನ್ನು ಪಡೆಯುವರು. ಜನರ ಮೇಲೆ ಇವರ ವರ್ಚಸ್ಸು ಚೆನ್ನಾಗಿರುವದು. ಪೀಡಿತ ಶನಿ ಇದ್ದರೆ ಕಾರ್ಪಣ್ಯ, ದ್ವೇಷಿ, ಸ್ವಾರ್ಥಿ, ಕ್ಷುದ್ರ, ಬುದ್ಧಿ, ಛದ್ಮಿ, ಜನರು ಹುಟ್ಟುವರು. ಧರ್ಮದ ಹುಚ್ಚುತನವಿರುವದು. ತಮ್ಮದೇ ಧರ್ಮ ಹೆಚ್ಚಿನದು ಎಂದು ತಿಳಿಯುವರು. ತಮ್ಮದೇ ಸತ್ಯ ಉಳಿದ ಧರ್ಮ ಖೊಟ್ಟಿ ಎಂದು ತಿಳಿಯುವರು. ವಿವಾಹ ಸಂಬಂಧವಾಗಿ ಆಪ್ತರಿಂದ ತ್ರಾಸವಾಗುವದು. ಪರದೇಶ ಗಮನದಿಂದ ಹಾನಿ. ಗ್ರಂಥ ಪ್ರಕಾಶನಾದಿ ಕಾರ್ಯಗಳಲ್ಲಿ ಅಪಯಶಸ್ಸು. ಈ ಸ್ಥಾನದಲ್ಲಿ ಬಲಿಷ್ಠ ಶನಿ ಇದ್ದರೆ ಪರದೇಶ ಗಮನಮಾಡಬೇಕು. ಪೀಡಿತ ಶನಿ ಹಾನಿಯನ್ನುಂಟುಮಾಡುವನು.

ದಶಮದಲ್ಲಿ:— ತುಲಾ, ಮಕರ, ಕುಂಭ, ಮಿಥುನ ರಾಶಿಯ ಶನಿ ಶುಭ ಸಂಬಂಧಿತನಿದ್ದರೆ ಸತ್ತಾ ಅಧಿಕಾರ ಭಾಗ್ಯ ಐಶ್ವರ್ಯಕಾರಕನಾಗುವನು. ಇವರು ದೀರ್ಘೋದ್ಯೋಗದಿಂದ, ಶ್ರಮ ಸಾತತ್ಯದಿಂದ, ಮಹತ್ವಾಕಾಂಕ್ಷಾ, ಪ್ರಾಮಾಣಿಕತನ, ದೂರದೃಷ್ಟಿ, ಪ್ರತ್ಯಕ್ಷವಾಗಿ ವ್ಯವಸ್ಥಿತವಾಗಿ ಮಾಡುವ ಶೀಲದಿಂದ ಮಹತ್ ಪಾರವನ್ನು ಪಡೆಯುವರು. ಎರಡನೆಯವರ ಸಹಾಯದ ಬಯಕೆ ಅವರಿಗಿರುವದಿಲ್ಲ. ತಮ್ಮ ಕಾಲ ಮೇಲೆ ತಾವು ನಿಂತು ಸದ್ಗುಣಗಳಿಂದ ಜಗದಲ್ಲಿ ಮುಂದೆ ಬರುವರು. ಅಧಿಕಾರದ ಜಾಗೆ ದೊರಕುವದು. ಉದ್ಯೋಗ ಧಂದೆಗಳ ಮಾಲಕರಾಗುವರು. ಬ್ಯಾಂಕಿನ ಪ್ರೆಸಿಡೆಂಟ ಜವಾಬುದಾರಿಯ ಜಾಗೆಗಳಿಗೆ ಅರ್ಹರಾಗಿರುವರು ಆದರೆ ದಶಮದಲ್ಲಿ ಪೀಡಿತ ಶನಿ ಇದ್ದರೆ ಅಧಿಕಾರದ ಜಾಗೆ ಸಿಗುವದು ಒಳ್ಳೆಯದಲ್ಲ. ನಿಂದ್ಯ ಆಚರಣದಿಂದ, ಕುಟಿಲ ಕಾರಸ್ಥಾನಗಳಿಂದ, ಅಪ್ರಾಮಾಣಿಕ ವ್ಯವಹಾರದಿಂದ ಅದು ಪ್ರಾಪ್ತವಾಗಿರುವದು. (ಅಧಿಕಾರದ ಜಾಗೆ) ಆದ್ದರಿಂದ ಭಾಗ್ಯವು ಸ್ಥಿರವಾಗಿ ನಿಲ್ಲಲಾರದು. ದಶಮದಲ್ಲಿ ಶನಿ ಬೇಗ

ಉನ್ನತಿಯನ್ನು ಮಾಡುವಂತೆ ಅವನತಿಯನ್ನು ಮಾಡುವವರ ಕಡೆಗೆ ಅವನ ಒಲವು ಇರುವದು. ಉದಯವನ್ನು ಬೇಗ ಮಾಡುವಂತೆ ಅಧಃ ಪತನವನ್ನೂ ಮಾಡುವನು. ಹರ್ಶಲ ಮಂಗಳ ಗುರು ರವಿ ಇವರೊಡನೆ ಅಶುಭ ಸಂಬಂಧ ಮಾಡುತ್ತಿದ್ದರೆ ಯಾವಾಗ ಅಧಃಪತನವಾಗುವದೆಂಬ ನಿಯಮವಿಲ್ಲ. ಬಾಲ್ಯ ಕಾಲದಲ್ಲಿಯೇ ತಂದೆ-ತಾಯಿಗಳ ಸುಖಾಭಾವ ಉಂಟಾಗುವ ಸಂಭವವಿರುವದು. ನೌಕರಿಯಲ್ಲಿ ಅಪಯಶ; ವರಿಷ್ಠರಿಂದ ತ್ರಾಸ; ಸಾರ್ವಜನಿಕ ಕಾರ್ಯಗಳಲ್ಲಿ ಅಪಕೀರ್ತಿ ಮೊದಲಾದ ಅನಿಷ್ಟ ಫಲಗಳನ್ನು ನಿರ್ಬಲಿ ಪೀಡಿತ ಶನಿ ಸೂಚಿಸುವನು. ರವಿ ಚಂದ್ರರ ಅಶುಭ ಸಂಬಂಧವಿದ್ದರೆ ಸಂಕಟ ಪರಂಪರೆ. ದಶಮದಲ್ಲಿ ಮೇಷ. ಕರ್ಕ, ವೃಶ್ಚಿಕ, ಮೀನ ರಾಶಿಯ ಪೀಡಿತ ಶನಿ ಇರಕೂಡದು.

ಏಕಾದಶದಲ್ಲಿ:— ತುಲಾ ಕುಂಭ ಮಕರ ರಾಶಿಯ ಶುಭ ಸಂಬಂಧಿತ ಶನಿ ಇದ್ದರೆ ಸಾಂಪತ್ತಿಕ ಸ್ಥಿತಿ ಉತ್ತರಾರ್ಧದಲ್ಲಿ ಚೆನ್ನಾಗಿ ಸಿಗುವದು. ಇವರು ದುಡ್ಡಿನ ಗಂಟನ್ನು ಕಟ್ಟಿಕೊಳ್ಳುವರು. ಇಲ್ಲಿಯ ಶನಿಯು ಕಡಿಮೆ ಮಿತ್ರರನ್ನು ತೋರಿಸುವನು. ಸಂತತಿ ಸುಖಕ್ಕೆ ಇಲ್ಲಿಯ ಶನಿ ಅನುಕೂಲನಲ್ಲ. ಈ ಸ್ಥಾನದಲ್ಲಿ ಶನಿ ಇರುವವರು ಮಿತ್ರರ ಸಲಹೆಯಂತೆ ನಡೆಯಬಾರದು. ಯಾರಿಗೂ ಜಾಮೀನ ಆಗಬಾರದು. ದುಡ್ಡನ್ನು ಸಾಲ ಕೊಡಬಾರದು. ಇಲ್ಲಿಯ ಶನಿ ರವಿ ಚಂದ್ರರೊಡನೆ ಅಶುಭಯೋಗ ಮಾಡುತ್ತಿದ್ದರೆ ದಾರಿದ್ರ್ಯ ಯೋಗ. ಚರರಾಶಿಯಲ್ಲಿ ಪೀಡಿತ ಶನಿ ಮಿತ್ರರಿಂದ ನಾಶವನ್ನು ಮಾಡುವನು. ಸ್ಥಿರ ರಾಶಿಯಲ್ಲಿಯ ಶನಿ ಪೂರ್ವ ವಯಸ್ಸಿನಲ್ಲಿ ಕಷ್ಟ ಸೂಚಕನು. ದ್ವಿಸ್ವಭಾವಿ ರಾಶಿಯ ಶನಿ ಮಹತ್ವಾಕಾಂಕ್ಷೆಯನ್ನು ಹಾಳು ಮಾಡುವನು. ಅಪಯಶಸ್ಸನ್ನು ಕೊಡುವನು. ಏಕಾದಶದಲ್ಲಿ ಪೀಡಿತ ಶನಿ ಮನೋರಥ ಭಂಗಕ್ಕೆ ಕಾರಣನಾಗುವನು.

ವ್ಯಯದಲ್ಲಿ:— ವ್ಯಯದಲ್ಲಿ ಶನಿ ಇದ್ದರೆ ಏಕಾಂತ ಪ್ರಿಯತಾ ಸನ್ಯಾಸ ವೃತ್ತಿಗಳು ಇರುವವು. ಪ್ರಗತಿಗೆ ಅಡ್ಡಿಗಳಾಗುವವು. ಪೀಡಿತ ದುರ್ಬಲ ಶನಿಯಿಂದ ತುರಂಗ ವಾಸದ ಭಯವಿರುವದು. ಶತ್ರುಗಳು ಗುಪ್ತವಾಗಿ ನಾಶದ ಪ್ರಯತ್ನ ಮಾಡುವರು. ಶುಭ ಸಂಬಂಧಿತ ಶನಿ ಏಕಾಂತ

ವಾಸದ ಪ್ರೇಮವನ್ನುಂಟುಮಾಡುವನು. ವಿಶೇಷವಾಗಿ ಜನಸಂಬಂಧ ಬಾರದ ಧಂದೆಯಲ್ಲಿ, ನೌಕರಿಯಲ್ಲಿ ಉನ್ನತಿ ಸೂಚಕವು. ದಾನಸಂಸ್ಥೆ, ಭಿಕ್ಷಾಗೃಹ, ದವಾಖಾನೆ, ತುರಂಗ ಇವುಗಳಲ್ಲಿಯು ನೌಕರಿಯಿಂದ ಇಲ್ಲವೆ ವ್ಯವಹಾರದಿಂದ ಲಾಭವಾಗುವದು. ಗುಪ್ತವಾಗಿ ಧನಸಂಚಯ ಮಾಡುವರು. ಬುಧನೊಡನೆ ಅಶುಭ ಸಂಬಂಧವಿದ್ದರೆ ಹುಚ್ಚರ ಆಸ್ಪತ್ರೆಗೆ ಹೋಗುವ ಸಂದರ್ಭ ಬರಬಹುದು. ಬಹುವಾಗಿ ಪೀಡಿತನಿರಲು ಮಾರಾಮರಿಯಲ್ಲಿ ಮರಣ ಸಂಭವ. ಹರ್ಶಲನಿಂದ ಪೀಡಿತನಿದ್ದರೆ ಅಧಿಕಾರಿಗಳೊಡನೆ, ದೊಡ್ಡ ಮನುಷ್ಯರೊಡನೆ ಶತ್ರುತ್ವವುಂಟಾಗುವ ಸಂಭವವಿರುವದು. ರವಿ ಚಂದ್ರರೊಡನೆ ಅಶುಭ ಸಂಬಂಧವಿದ್ದರೆ ಕುಟುಂಬದಲ್ಲಿಯ ಪ್ರೀತಿಯ ಜನರ ಮರಣದಿಂದ ಶೋಕವುಂಟಾಗುವ ಸಂಭವವಿರುವದು. ಇಲ್ಲಿಯ ಶನಿ ಔದಾಸೀನ್ಯಕ್ಕೂ, ದುಃಖಕ್ಕೂ ಕಾರಣನಾಗುವನು. ಪಶುಗಳಿಂದ ಪೀಡಾ ಸಂಭವವು. "ಆತ್ಮೈವ ರಿಪುರಾತ್ಮನಃ" ಇಲ್ಲಿಯ ಶನಿಗೆ ಲಾಗೂ ಮಾಡಬಹುದು.

ಒಂದು ರಾಶಿಯಲ್ಲಿ ದೀರ್ಘಕಾಲ ಇರುವ ಗ್ರಹಗಳ ದೃಷ್ಟಿಯೋಗವು ಬಹುಕಾಲ ಬಾಳುವದು ಇರುವದರಿಂದ ವ್ಯಕ್ತಿಯು ನಿಷ್ಕಾಫಲಾದೇಶವನ್ನು ತಕ್ಕೊಳ್ಳುವದಕ್ಕಿಂತ ಸರ್ವ ಸಾಧಾರಣ ಯಾವ ಸದ್ಗುಣಗಳ ಅಥವಾ ದುರ್ಗುಣಗಳ ವಿಕಾಸವು ಆಯಾ ಪಿಢಿಯಲ್ಲಿ ಆಗುವದು ಎಂಬುದನ್ನು ಬೋಧಿಸುವದು. ದೀರ್ಘಕಾಲ ರಾಶಿಯಲ್ಲಿರುವ ಗ್ರಹಗಳ ದೃಷ್ಟಿಯೋಗಗಳು ಮಾನವ ಜಾತಿ ಉತ್ಕ್ರಾಂತಿ ಮಾರ್ಗದಲ್ಲಿ ನಡೆದಿರುವದನ್ನು ಸೂಚಿಸುವವು. ಮುಂದಿನ ಕಾಲದಲ್ಲಿ ಎಂತಹ ಮನುವಿನ ಉದಯವಾಗುವವೆಂಬುದನ್ನು ಹೇಳುವವು.

ಶನಿ ಹರ್ಶಲರ ಶುಭಯೋಗ:— ಈ ಯೋಗವಿರುವವರಲ್ಲಿ ಎಲ್ಲ ಕಾರ್ಯಗಳನ್ನು ವ್ಯವಸ್ಥಿತವಾಗಿ ಮಾಡುವ ಶೀಲವಿರುವದು. ದೀರ್ಘೋದ್ಯೋಗಿ, ಮಹತ್ವಾಕಾಂಕ್ಷಿ, ದೂರ ದೃಷ್ಟಿಯವನು ಚಿಕಿತ್ಸಕನು ಇರುವನು. ಹೊಣೆಗಾರಿಕೆಯ ಸ್ಥಾನದಲ್ಲಿರಲು ಪಾತ್ರರಿರುವರು. ಶೋಧಕ ಬುದ್ಧಿ

ಯಂತ್ರಕಲೆಯ ಅಭಿರುಚಿ ಇರುವದು. ವಿದ್ಯುತ್ (ಇಲೆಕ್ಟ್ರಿಕ್ ಸಿಟಿ) ದಲ್ಲಿ ಪ್ರಗತಿ ಸಾಧಕವಾಗಿರುವದು.

ಶನಿ ಹರ್ಶಲಯುತಿ – ಸಮಕ್ರಾಂತಿ:— ಬಹಳಷ್ಟು ವಿಚಾರ ಮಾಡಿ ಫಲ ನಿರ್ಣಯಮಾಡಬೇಕು. ತುಲಾ ಮಕರ ಕುಂಭ ವೃಶ್ಚಿಕ ರಾಶಿಯಲ್ಲಿ ಇತರ ಗ್ರಹಗಳ ಶುಭ ಸಂಬಂಧವಿರುವಾಗ ಉತ್ತಮ ಫಲ ಸಿಗುವ ಸಂಭವವುಂಟು. ಆದರೆ ಮೇಷ, ವೃಷಭ, ಕರ್ಕ ಸಿಂಹಗಳಲ್ಲಿಯ ಯುತಿ ಒಳ್ಳೆಯ ಫಲವನ್ನು ಕೊಡಲಿಕ್ಕಿಲ್ಲ. ಈ ಗ್ರಹಗಳ ಯುತಿಯ ಫಲವು ಹೆಚ್ಚಾಗಿ ಅನಿಷ್ಟವೇ ಆಗಿರುವದು. ((೧೯೪೨ ರಲ್ಲಿ ಶನಿ ಹರ್ಶಲಯುತಿ–ವೃಷಭ ರಾಶಿಯಲ್ಲಿ ಆಗಿದ್ದನ್ನು ವಾಚಕರು ನೋಡಿಕೊಳ್ಳಬಹುದು. ರಾಜಕೀಯ ಆಂದೋಲನದಿಂದ ದೇಶವು ಕಂಪಿತವಾಯಿತು. ಹಿಂದುಸ್ಥಾನದ ರಾಶಿ ಮಕರವೆಂದು ಹಿಡಿದರೆ ಈ ಯುತಿ ಪಂಚಮದಲ್ಲಿ ಆಗಿತ್ತು.)

ಶನಿ ಹರ್ಶಲ್ ಅಶುಭಯೋಗ:— ಈ ಯೋಗವಿರುವವರು ಲಹರೀ ಇರುವರು. ಸಿಟ್ಟು ಶೀಘ್ರಕೋಪ ಆಲಸ್ಯಗಳು ತೋರುವವು. ಪಾಪ ಪುಣ್ಯಗಳ ವಿಚಾರಗಳನ್ನು ಮಾಡಲಾರರು. ಯಾವ ರಾಶಿಗಳಲ್ಲಿ ಈ ಯೋಗವಾಗುವದೋ ಆ ರಾಶಿ ಸೂಚಕ ಅವಯವಗಳಲ್ಲಿ ರೋಗವಾಗುವ ಸಂಭವವಿರುವದು. ಇಡೀ ಕುಂಡಲಿ ಕಡೆಗೆ ಲಕ್ಷ್ಯಗೊಟ್ಟು ಇಂತಹ ಯೋಗ ಫಲಗಳನ್ನು ಹೇಳಬೇಕು.

ಶನಿ ನೇಪಚ್ಯೂನ ಶುಭಯೋಗ:— ಈ ಯೋಗವಿದ್ದರೆ ಆತ್ಮ ವಿಶ್ವಾಸ, ನಿಶ್ಚಯ, ದೀರ್ಘೋದ್ಯೋಗ ಇತ್ಯಾದಿ ಶನಿಯ ಸದ್ಗುಣಗಳು ಕಂಡು ಬರುವವು. ಇವರಿಂದ ಇವರು ಮಹತ್ವವನ್ನೂ ಮಾನ ಸನ್ಮಾನವನ್ನೂ ಪಡೆಯುವರು. ಇವೆರಡೂ ಗ್ರಹಗಳಲ್ಲಿ ದೈವಿಕ ಸಾಮರ್ಥ್ಯವಿರುವದು. ದೈವೀಸಾಮರ್ಥ್ಯವು ವಿಕಸಿತವಾಗುವದು. ಆಧ್ಯಾತ್ಮವಿದ್ಯೆ, ಗೂಢ ಶಾಸ್ತ್ರ, ಯೋಗಾಭ್ಯಾಸ, ಮಂತ್ರಶಾಸ್ತ್ರ ಇವುಗಳಿಗೆ ಇದು ಅನುಕೂಲ ಯೋಗವು. ದೈವೀ ತೇಜಸ್ಸು, ದೈವೀ ಸಂಪತ್ತಿಯ ಲಾಭವಾಗುವದು. ಇತರ ಬಾಧಕ ಯೋಗಗಳು ಮಾತ್ರ ಇರಬಾರದು. ಸಾಮಾನ್ಯ ಜನರ ಕುಂಡಲಿಯಲ್ಲಿ

ಈ ಯೋಗವು ಶನಿ ನೇಪಚ್ಯೂನಕಾರಕವಾಗಿರುವ ವಸ್ತುಗಳ ವ್ಯವಹಾರದಲ್ಲಿ ಲಾಭವನ್ನು ಸೂಚಿಸುವದು.

ಶನಿ ನೇಪಚ್ಯೂನಯುತಿ–ಸಮಕ್ರಾಂತಿ ಯೋಗ:— ಈ ಯುತಿ ಕರ್ಕ, ಮೀನ, ತುಲಾ, ಮಕರ, ಕುಂಭ ರಾಶಿಗಳಲ್ಲಿ ಆಗುತ್ತಿದ್ದು ಶುಭ ಸಂಬಂಧಿತವಿದ್ದರೆ ಶುಭ ಫಲವು ಸಿಗುವ ಆಶೆ ಇರುವದು. ಅಶುಭ ಸಂಬಂಧಿತ ವಿದ್ದರೆ ಕಲ್ಪನೆಯನ್ನೇ ಮಾಡಬೇಕು. ಯಾವ ಸ್ಥಾನದಲ್ಲಿ ಆಗುವದು, ಯಾರ ಭಾವಾಧಿಪತ್ಯ ಇರುವದು, ಎಲ್ಲವನ್ನೂ ಚೆನ್ನಾಗಿ ವಿಚಾರಿಸಬೇಕು.

ಶನಿ ನೇಪಚ್ಯೂನ ಅಶುಭಯೋಗವಿದ್ದರೆ— ವಂಚನೆ ವಿಶ್ವಾಸ ಘಾತಗಳಿಂದ ಹಾನಿಯಾಗುವದು. ಯಾವ ಗ್ರಹಗಳ ಅಶುಭ ಸಂಬಂಧ ವಿರುವದೋ ಆಗ್ರಹ ಸೂಚಕ ಮಾನವರಿಂದ, ವಸ್ತುಗಳಿಂದ ಹಾನಿ ಸಂಭವಿಸುವದು.

ಹರ್ಶಲ (ಪ್ರಜಾಪತಿ)

೧೭೮೦ ರ ವರೆಗೆ ಹರ್ಶಲ ನೇಪಚ್ಯೂನರ ಶೋಧವಾಗಿರಲಿಲ್ಲ. ಮಾನವನಿಗೆ ಜಿಜ್ಞಾಸೆ ಇರುವುದು. ಅದು ಅವನಲ್ಲಿ ಇರುವದರಿಂದಲೇ ಅನೇಕ ಅದ್ಭುತ ಶೋಧಗಳಾಗಿರುವವು. ಹರ್ಶಲನಲ್ಲಿ ಇಂತಹ ಅದ್ಭುತ ಶೋಧನ ಕಾರಕತ್ವವೂ ಇರುವದು. ಹರ್ಶಲನೆಂಬ ಜ್ಯೋತಿಷಿಯು ಇಂಗ್ಲಂಡದಲ್ಲಿ ಆಗಿಹೋದನು. ಅವನು ದುರ್ಬೀನು ಮಾಡುತ್ತಿದ್ದನು. ಆಕಾಶದಲ್ಲಿ ಎಷ್ಟು ತಾರೆಗಳು ಕಾಣುವವು ಎಂಬ ಬಗೆಗೆ ಶೋಧ ನಡೆದಿತ್ತು. ೧೭೮೧ ಮಾರ್ಚ ೧೩ ನೆಯ ತಾರೀಖಿನ ದಿವಸ ರಾತ್ರಿ ೧೦ ಗಂಟೆಗೆ ಮಿಥುನ ರಾಶಿಯ ತಾರಕಾ ಪುಂಜವನ್ನು ನಿರೀಕ್ಷಿಸುವಾಗ ಇತರ ತಾರೆಗಳಿಗಿಂತ ಒಂದು ದೊಡ್ಡ ತಾರೆ ಅವನ ಕಣ್ಣಿಗೆ ಬಿತ್ತು. ಇದು ಸ್ಥಿರ ತಾರೆಯಲ್ಲ ಎಂದು ಅವನಿಗೆ ಸಂಶಯ ಬಂದಿತು. ೨೨೭ ಪ್ರಭಾವದ ಸೂಕ್ಷ್ಮ ಯಂತ್ರದಿಂದ ಅವನು ನೋಡುತ್ತಿದ್ದನು. ಗ್ರಹಗಳ ವ್ಯಾಸವು ದೊಡ್ಡದಾಗಿ ಕಾಣುವಂತೆ ಸ್ಥಿರ ತಾರೆಗಳ ವ್ಯಾಸವು ಕಾಣುವದಿಲ್ಲ. ಹೀಗೆ ಅನುಭವವಿತ್ತು. ಆದ್ದರಿಂದ ೨೦೦೦ ಪ್ರಭಾವದ ಯಂತ್ರದಿಂದ ನೋಡಲಾಗಿ ಅದು ಸ್ಥಿರತಾರೆಯಲ್ಲ ಎಂದು ಅವನು ನಿಶ್ಚಯಿಸಿದನು. ನೋಡಲು ಅವನು ಅದು ಧೂಮಕೇತು ವಿರಬೇಕೆಂದು ಭಾವಿಸಿದನು. ಮುಂದೆ ಕೆಲವು ದಿವಸ ಗತಿಯ ಗಣಿತ ಮಾಡಲಾಗಿ ಅದುಗ್ರಹವೆಂದು ತಿಳಿಯಿತು.

ಹರ್ಶಲನಿಗೆ ಸೂರ್ಯನ ಸುತ್ತು ತಿರುಗಲು ೮೪ ವರ್ಷಗಳು ಹಿಡಿಯುವವು. ಒಂದು ರಾಶಿಯಲ್ಲಿ ಏಳು ವರ್ಷ ಇರುವನು. ಇವನು ಶನಿಯಂತೆ ಖಿಲಗ್ರಹ. ಆದರೆ ಇವನಲ್ಲಿ ಆಕಸ್ಮಿಕತೆ, ಅನಿಶ್ಚಿತತೆ, ಅದ್ಭುತತ್ವ ಸ್ಥಿತ್ಯಂತರ ಕ್ರಾಂತಿ, ಕಲ್ಪನಾಚಾತುರ್ಯ, ಲಹರೀ, ಸ್ವಾರ್ಥ ಪರಾಯಣತೆಗಳನ್ನು ಉಂಟು ಮಾಡುವ ಸಾಮರ್ಥ್ಯವಿರುವದು. ಸ್ವಭಾವತಃ ಈ ಗ್ರಹವು ಗೂಢವಾಗಿರುವದು. ಇವನು ಗೂಢ ಶಾಸ್ತ್ರ ವಿದ್ಯೆಗಳ ಭೋಕ್ತಾರನಾಗಿರುವನು. ಮಂತ್ರ ತಂತ್ರ, ಜಾರಣ ಮಾರಣ, ಉಚ್ಚಾಟನ ಪ್ರಯೋಗ ಸಿದ್ಧಿ,-ಮಾನ-

ಸಿಕ ಆಧ್ಯಾತ್ಮಿಕ ವಿದ್ಯೆ, ಮೆಸ್ಮೋರಿಝುಂ, ಹಿಪ್ನಾಟಿಝುಂ ಪಿಶಾಚ ಸಂವಾದ ಟೆಲಿಪಥಿಗಳ ಕಡೆಗೆ ಇವನ ಆಕರ್ಷಣವಿರುವದು. ಶನಿಯಂತೆ ಇವನು ವಾಯು ತತ್ವದ ಗ್ರಹವಿದ್ದು; ಕುಂಭವು ಇವನ ಸ್ವಗೃಹವೆಂದು ತಿಳಿಯುವ ವಾಡಿಕೆಯಿದೆ. ತುಲಾ ಮಿಥುನಗಳೂ ಅವನಿಗೆ ಅನುಕೂಲ ರಾಶಿಗಳು. ಇವನಲ್ಲಿ ತರ್ಕಶಕ್ತಿ ಚೆನ್ನಾಗಿರುವದರಿಂದ ಬೌದ್ಧಿಕ ರಾಶಿಗಳು ಅವನಿಗೆ ಪ್ರಿಯವಾಗಿರುವವು. ಇವನ ವೃತ್ತಿ ಬುಧನಂತೆ ಸಂಸ್ಕಾರ ಪ್ರಿಯವಾಗಿರುವದು. ಸ್ವತಂತ್ರ ವೃತ್ತಿಯಿಂದ ಸ್ವತಂತ್ರ ಫಲವನ್ನು ಕೊಡಲು ಈ ಗ್ರಹದ ಪರಿಣಾಮಗಳು ಸ್ಪಷ್ಟವಾಗಿ ಕಂಡು ಬರದಿದ್ದರೂ ಇತರ ಗ್ರಹಗಳ ಪರಿಣಾಮದೊಂದಿಗೆ ಯೋಗಗಳಿಗೆ ಉತ್ತೇಜನನಾಗುವನು. ಆ ಗ್ರಹಗಳ ಪರಿಣಾಮದಲ್ಲಿ ವಿಚಿತ್ರ ಅನುಭವವನ್ನು ಕೊಡುವನು. ಪರಿಣಾಮದ ಮೂಲ ಬೀಜವನ್ನು ಉತ್ತೇಜನ ಮಾಡುವದು. ಅದನ್ನು ಶಿಖರಕ್ಕೆ ಮುಟ್ಟಿಸುವದು ಹರ್ಶಲನ ಗುಣಧರ್ಮವು. ಸ್ವತಂತ್ರ ಫಲವನ್ನು ಹುಟ್ಟಿಸುವಲ್ಲಿ ಬುಧನಿಗೆ ಎಷ್ಟು ಮಹತ್ವವೋ, ಹರ್ಶಲನಿಗೂ ಅಷ್ಟೇ ಮಹತ್ವವಿರುವದು.

ರಾಶಿಯ ಗುಣಧರ್ಮಗಳ ಪರಿಣಾಮವೂ ಈ ಗ್ರಹದ ಮೇಲೆ ಆಗುವದು. ಬುಧನಿಗಿಂತ ಹರ್ಶಲನ ಸಾಮರ್ಥ್ಯವು ದೊಡ್ಡದು. ರವಿ ಮಂಗಳ ಶನಿಗಳು ಸ್ವತಂತ್ರ ಫಲವನ್ನು ಹುಟ್ಟಿಸುವರು. ಹಾಗೆ ಹರ್ಶಲನು ಸ್ವತಂತ್ರ ಫಲವನ್ನು ಹುಟ್ಟಿಸಲಾರನು. ಪೀಡಿತ ಗ್ರಹದ ಉಚ್ಶೃಂಖಲ ವೃತ್ತಿಗೆ ಪ್ರೋತ್ಸಾಹ ಕೊಡುವನು. ಅಥವಾ ಅದನ್ನು ಪ್ರಮೋದಿತ ಮಾಡುವನು. ಪ್ರತ್ಯೇಕ ಪರಿಣಾಮದಲ್ಲಿ ವೈಚಿತ್ರ್ಯ, ಗೂಢತ್ವ, ಆಕಸ್ಮಿಕತೆ, ಅಸಾಮಾನ್ಯತೆಗಳು ಕಂಡು ಬರುವವು. ಇವುಗಳಲ್ಲಿ ಒಂದಾದರೂ ಗುಣದ ಪ್ರತಿಬಿಂಬವು ಅಲ್ಲಿ ಕಂಡು ಬರುವದು.

ಇತರ ಗ್ರಹಗಳೊಡನೆ ಹರ್ಶಲನ ಸಂಬಂಧ:— ಸೂಕ್ಷ್ಮ ರೀತಿಯಿಂದ ವಿಚಾರಿಸಲಾಗಿ ಬುಧನನ್ನು ಬಿಟ್ಟು ಅವನಿಗೆ ಮಿತ್ರನಿಲ್ಲ. ಯಾಕಂದರೆ ಈ ಗ್ರಹವು ಸ್ವಚ್ಛಂದಿ, ಲಹರೀ ಇರುವದು. ಬುಧನು ತಿಳುವಳಿಯವನು; ಶಾಂತ ವೃತ್ತಿಯವನೂ ಆದ್ದರಿಂದ ಪ್ರಜಾಪತಿಯೊಡನೆ ಹೊಂದಿಕೊಂಡು ಹೋಗುವನು. ಶನಿ ವಾಯು ತತ್ವದ ಗ್ರಹ. ಇವನೂ ವಾಯು ತತ್ವದ

ವನು. ಆದರೂ ಪರಿಣಾಮ ನೋಡಿದರೆ ಇವರೀರ್ವರಲ್ಲಿ ಮೈತ್ರಿಯಿಲ್ಲ. ಇಬ್ಬರೂ ಪಾಪಗ್ರಹಗಳಿದ್ದರೂ ಅನುಕೂಲ ಪರಿಸ್ಥಿತಿಯಲ್ಲಿ ಮಾತ್ರ ಅವರಿಗೆ ಸಖ್ಯ. ಪ್ರತಿಕೂಲ ಪರಿಸ್ಥಿತಿಯಲ್ಲಿ ಇಬ್ಬರ ದುಷ್ಟಗುಣವು ಶಿಖರಕ್ಕೆ ಮುಟ್ಟು ವದು. ಹರ್ಶಲನಲ್ಲಿ ವೈಚಿತ್ರ್ಯ, ಲಹರೀ ಸ್ವಭಾವಗಳಿರುವದರಿಂದ ಶನಿಯ ಮೈತ್ರಿಗೆ ಭಂಗ ಬರುವದಕ್ಕೆ ಅವಕಾಶವಾಗಲಾರದು.

ಶನಿ ಪ್ರಜಾಪತಿಗಳ ಅಶುಭಯೋಗವು ಅನಿಷ್ಟ ಫಲಗಳ ಆಘಾತದಲ್ಲಿ ತೀವ್ರತೆಯನ್ನು ತರುವದು. ಶನಿಯು ಯಾವ ಸ್ಥಾನದ ಅಧಿಪತಿ ಇರುವನೋ ಅಥವಾ ಶನಿ ಪ್ರಜಾಪತಿಗಳು ಯಾವ ಸ್ಥಾನದಲ್ಲಿರುವರೋ ತದ್ಯೋತಕ ಸಂಗತಿಗಳಲ್ಲಿ ಫಲದ ಅನುಭವವುಂಟಾಗುವದು. ಉದಾಹರಣಾರ್ಥವಾಗಿ ಒಬ್ಬನ ಕುಂಡಲಿಯಲ್ಲಿ ೬ ರಲ್ಲಿ ಶನಿ ೭ ರಲ್ಲಿ ಹರ್ಶಲನಿದ್ದರೆ ಕಕ್ಕ ಕಕ್ಕಿ, ಶತ್ರು, ಪತ್ನಿ ಸೌಖ್ಯ ಇವುಗಳಲ್ಲಿ ವ್ಯತ್ಯಯ ಉಂಟಾಗುವದು. ಶನಿಯು ತೃತೀಯೇಶನಿದ್ದರೆ ಬಂಧು-ಬಾಂಧವರ ಸುಖಕ್ಕೆ ಮಾರಕನಾಗುವನು. ಈ ದೃಷ್ಟಿಯಿಂದ ಪ್ರಜಾಪತಿಯ ಫಲವನ್ನು ವಿಚಾರಿಸಬೇಕು. ಶನಿ ಪ್ರಜಾಪತಿ ಗಳ ಅಶುಭಯೋಗವು ಕಾರಾವಾಸ, ಉಚ್ಚಸ್ಥಾನದಿಂದ ಪತನ, ಭಯಂಕರ ಹಾನಿ, ಖಟ್ಲೆ ಮೊದಲಾದವುಗಳಿಂದ ತ್ರಾಸ ನೌಕರಿಯಲ್ಲಿ ಅಪಯಶ ಇತ್ಯಾದಿ ಫಲಗಳನ್ನು ಕೊಡುವದು. ಪ್ರತಿಯೋಗ ಕೇಂದ್ರ ಯೋಗಗಳಲ್ಲಿ ಹೆಚ್ಚು ಅನುಭವ ಬರುವದು.

ಬೌದ್ಧಿಕ ರಾಶಿಯಲ್ಲಿ (ಮಿಥುನ ತುಲಾ ಕುಂಭ) ಯುತಿ ಒಳ್ಳೇ ಫಲವನ್ನು ಕೊಡುವದು. ಜನ್ಮತಃ ಹನಿ ಹರ್ಶಲರಲ್ಲಿ ಶುಭಯೋಗವಿದ್ದರೆ ತರ್ಕಶಕ್ತಿ, ವಿಚಾರಶಕ್ತಿ ಮಾರ್ಮಿಕ ಪರೀಕ್ಷಣ, ಅನುಮಾನ, ಕಲ್ಪನಾ-ನಾವೀನ್ಯಗಳು ತೋರಿಬರುವವು. ನೌಕರಿ ಕಾಯ್ದೆಗಳಲ್ಲಿ ಅಪ್ರತಿಮ ಪ್ರಗತಿ ಕಾರಕವಾಗುವದು. ಕುಂಭ ರಾಶಿಯಲ್ಲಿ ಹನಿ ಹರ್ಶಲಯುತಿ ಹಿತಪ್ರದ ವಾಗುವದು. ಆದರೆ ಅದಕ್ಕೂ ಸ್ಥಾನ ಬಲಬೇಕು.

ಶನಿಗಿಂತ ಹೆಚ್ಚಿನ ವೈರವು ಹರ್ಶಲನಿಗೆ ಮಂಗಳನೊಡನಿರುವದು. ಖುನಸೀ ಧಾಡಶೀತನ ಕಲಹದ ಹುರುಪು, ಮಾರಾಮರಿ, ಖೂನ, ತಾಪಟ

ವೃತ್ತಿ ಆವೇಗದ ಅತಿರೇಕ, ದಾಹ, ಅಪಘಾತ, ರುಧಿರಸ್ರಾವ, ಇತ್ಯಾದಿ ಪರಿಣಾಮಗಳನ್ನು, ಹರ್ಶಲ ಮಂಗಳರ ಅಶುಭಯೋಗವು ಮಾಡುತ್ತಿರುವದು. ಇವೆರಡೂ ಗ್ರಹಗಳಲ್ಲಿ ಶುಭಯೋಗವುಂಟಾದರೆ ಮಹತ್ವಾ-ಕಾಂಕ್ಷೆ, ಅಪರಿಮಿತ ಉತ್ಸಾಹ ಕರ್ತೃತ್ವ ಶಕ್ತಿಗಳು ತೋರಿಬರುವವು. ಮಿಲಟರಿ, ಸರ್ಜರಿ, ರಸಾಯನ, ಯಂತ್ರ ವಿದ್ಯೆಗಳಲ್ಲಿ ಉತ್ಕೃಷ್ಟ ಫಲವನ್ನು ಕೊಡುವದು. ಈ ಗ್ರಹಗಳ ಅಶುಭಯೋಗವು ಗೊಬ್ಬರ ದಾಹಜನ್ಯ ವಿಕಾರ, ಇನ್‌ಫ್ಲ್ಯುಯೆಂಝಾಗಳನ್ನು ಹುಟ್ಟಿಸುವದು. ಅಪರೇಶನ್ ಮಾಡಿಸಿಕೊಳ್ಳುವ ರೋಗದ ಉತ್ಪತ್ತಿಯೂ ಇವುಗಳಲ್ಲಿರುವದು. ಶನಿ ಪ್ರಜಾಪತಿಗಳ ಅಶುಭಯೋಗವು ಒಮ್ಮೆ ಕ್ಷಮ್ಯವಾಗಬಹುದು. ಆದರೆ ಮಂಗಳ ಹರ್ಶಲರ ಅಶುಭಯೋಗವು ಅದಕ್ಕಿಂತ ಘಾತಕವಾಗಿರುವದು. ಪ್ರಜಾಪತಿ ಶನಿಗಳ ಯೋಗವು ದೀರ್ಘಕಾಲ ನಿಲ್ಲುವದು. ಮಂಗಳ ಹರ್ಶಲರ ಯೋಗವು ಅಲ್ಪಕಾಲದ್ದು. ಅತಿ ತೀವ್ರ ಫಲವನ್ನುಂಟುಮಾಡುವದು. ಪ್ರಜಾಪತಿ ಕ್ರೂರ, ಸ್ವತಂತ್ರ, ಲಹರೀ ಅತ್ಯಂತ ಕಪಟೀ. ಮಂಗಳ ಕ್ರೂರ, ಹಟ. ಆದರೆ ಬಿಚ್ಚುಮನಸ್ಸಿನವನು. ಒಬ್ಬನ ಕ್ರೌರ್ಯ ಹಟ ಇನ್ನೊಬ್ಬನ ಕ್ರೌರ್ಯ ಲಹರಿಗಳಿಗೆ ಮಾರ್ಗಮಾಡಿಕೊಡುವದು ಅಶಕ್ಯವಾದದ್ದು.

ಜಲತತ್ವ ಪ್ರಧಾನ ಗ್ರಹಗಳೊಡನೆ ಹರ್ಶಲನದು ಕೂಡುವದಿಲ್ಲ. ಆದರೆ ಮಂಗಳ ಶನಿ ಯೋಗಕ್ಕಿಂತಲೂ ಅನಿಷ್ಟ ಫಲವು ಕಡಿಮೆಯಾಗುವದು. ಜಲತತ್ವದ ಮುಖ್ಯ ಗ್ರಹಗಳೆಂದರೆ ಚಂದ್ರ ನೇಪಚ್ಯೂನ. ಚಂದ್ರ ಹರ್ಶಲರ ಅಶುಭಯೋಗವುಂಟಾದಾಗ ಬಾಲ್ಯಾವಸ್ಥೆ ಕ್ಲೇಶ ಕಾರಕ ವಾಗುವದು. ಕ್ಷುದ್ರಬುದ್ಧಿ-ಚಂಚಲತೆಯುಂಟಾಗುವವು. ಉತಾವಳಿತನ, ವಿಕ್ಷಿಪ್ತತನ, ಲಹರಿ-ತಿರುಗಾಟ, ಬಹುಜನ ಸಮಾಜದ ತ್ರಾಸ ಜಲಾಪಘಾತ ಮಾತೃ ಸುಖದಲ್ಲಿ ಕೊರತೆ, ಇವು ನೋಡಲಿಕ್ಕೆ ಸಿಗುವವು. ಚಂದ್ರ ಹರ್ಶಲ್ ಯುತಿ ಮತ್ತು ಪ್ರತಿಯುತಿ ಜನ್ಮತಃ ಜಹಾಲ ರಾಶಿಯಲ್ಲಿ ತೀವ್ರ ನಕ್ಷತ್ರದಲ್ಲಿದ್ದರೆ ಪ್ರಸೂತಿ ಕಾಲ ಮತ್ತು ಬಾಲ್ಯ ಕಾಲದಲ್ಲಿ ಮಾತೆಗೆ ಕಷ್ಟ ವನ್ನು ಕೊಡುವದು. ಬಾಲಕನ ಪ್ರಕೃತಿಯು ಬಾಲ್ಯದಲ್ಲಿ ಅಶಕ್ತವಾಗಿರುವದು. ತಾಯಿಗೆ ಗಾಳಿಯ ಶಕಾ ಮತ್ತು ಮೂರ್ಛಾವಿಕಾರಗಳು ಆಗುವ

ಸಂಭವ. ಚಂದ್ರ ಹರ್ಶಲ ಶುಭಯೋಗವು ಸಮಾಜ ಸೇವೆಯ ಕಡೆಗೆ ಪ್ರವೃತ್ತಿಯನ್ನುಂಟುಮಾಡುವದು. ಹೊಸ ಉತ್ಸಾಹವನ್ನು ಕೊಡುವದು. ಚಂದ್ರ–ಹರ್ಶಲರ ಅಶುಭಯೋಗವು, ೧, ೪, ೬, ೮, ೧೨ ಸ್ಥಾನಗಳಲ್ಲಿ ಆಗುವದು, ಅಥವಾ ಈ ಸ್ಥಾನಗಳಲ್ಲಿ ಕ್ಷೀಣ ಚಂದ್ರನಿದ್ದು ಅವನು ಪ್ರಜಾಪತಿಯಿಂದ ಪೀಡಿತನಿದ್ದರೆ ಒಳ್ಳೆಯದಲ್ಲ. ಕ್ಷಯ, ಹೃದಯ ವಿಕಾರಗಳು ಉತ್ಪನ್ನವಾಗುವವು. ಚಂದ್ರ–ಹರ್ಶಲರ ಶುಭ ಯೋಗಕ್ಕಿಂತ ಅಶುಭ ಯೋಗದ ಫಲಗಳು ತೀವ್ರವಾಗುವವು.

ಪ್ರಜಾಪತಿ ಬುಧನ ಮೈತ್ರಿ ಇರುವದು. ಆದರಿಂದ ಅವರ ಯುತಿ-ಪ್ರತಿಯುತಿಗಳು ಅಷ್ಟು ಅನಿಷ್ಟ ಫಲವನ್ನುಂಟುಮಾಡಲಾರವು. ಬೌದ್ಧಿಕ ರಾಶಿಯಲ್ಲಿದ್ದರೆ ಬುದ್ಧಿ ಸಾಮರ್ಥ್ಯಕ್ಕೆ ಪೋಷಕವಾಗುವವು. ಈ ಎರಡು ಗ್ರಹಗಳಲ್ಲಿರುವ ಅಶುಭಯೋಗವು ಮಜ್ಜಾತಂತು ವಿಕಾರ, ಮಿದುಳಿನ ದೌರ್ಬಲ್ಯ, ಅವಿಚಾರ, ವಾಣಿಯ ದುರುಪಯೋಗ, ಮಾತಾಳಿತನ ಇವುಗಳನ್ನುಂಟುಮಾಡುವವು. ವ್ಯಾಪಾರಿಗಳಿಗೆ ಈ ಯೋಗವು ಹಾನಿಯನ್ನುಂಟುಮಾಡುವದು. ಬುಧ ಹರ್ಶಲರ ಶುಭಯೋಗವು ವಕ್ತೃತ್ವ ಶಕ್ತಿಯನ್ನು ಕೊಡುವದು. ಬಹುಶ್ರುತತ್ವವನ್ನುಂಟುಮಾಡುವದು. ಸ್ಥಾನಕ್ಕಿಂತ ಹೆಚ್ಚು ರಾಶಿಯ ಕಡೆಗೆ ಲಕ್ಷ್ಯಕೊಡಬೇಕು. ತೃತೀಯದಲ್ಲಿ ಬುಧ ಹರ್ಶಲ್ ಯುತಿಯು ಕುಂಭದಲ್ಲಿದ್ದರೆ ಅತ್ಯುತ್ತಮ. ಗ್ರಂಥಕಾರರಿಗೆ, ನಿಬಂಧಕಾರರಿಗೆ, ಕವಿಗಳಿಗೆ ಇದು ಉಪಯುಕ್ತವಾಗಿರುವದು. ಹೊಸ ಕಲ್ಪನೆ ವಾಚನಾಭಿರುಚಿ, ಸ್ವತಂತ್ರ ವಿಚಾರ, ಲೇಖನ ಕೌಶಲ್ಯ ಇವುಗಳಿಂದ ಖ್ಯಾತಿಯುಂಟಾಗುವದು.

ಪ್ರಜಾಪತಿ ಗುರುಗಳಲ್ಲಿ ಮೈತ್ರಿಯೂ ಇಲ್ಲ; ಶತ್ರುತ್ವವೂ ಇಲ್ಲ; ಉದಾಸೀನರೆಂದು ತಿಳಿಯಲು ಅಡ್ಡಿಯಿಲ್ಲ. ಹರ್ಶಲ ಗುರು ಅಶುಭಯೋಗವು ಸಾಂಪತ್ತಿಕ ಅಡ್ಡಿಗಳನ್ನುಂಟುಮಾಡುವದು. ಧರ್ಮದಲ್ಲಿ ಅಶ್ರದ್ಧೆ ನಾಸ್ತಿಕ್ಯ ಸಂತತಿಯಿಂದ ಅಸುಖ. ವಿದ್ಯಾರ್ಜನೆಯಲ್ಲಿ ವಿಘ್ನಗಳು ಇಂತಹ ಫಲಗಳು ಉತ್ಪನ್ನವಾಗುವವು. ರೋಗಗಳಲ್ಲಿ ಜಲೋದರವನ್ನು ಹುಟ್ಟಿಸಬಹುದು. ಅಶುಭಯೋಗದ ಫಲಕ್ಕಿಂತ ಶುಭಯೋಗದ ಫಲಗಳು ಅಪ್ರತಿಮವಾಗಿರು

ವವು. ಅನೇಕ ಧನಲಾಭಗಳಾಗುವವು. ವಾರಸಾನಾತೆಯಿಂದ ಅಥವಾ ಲಾಟರಿಯಿಂದ ಒಮ್ಮೆಲೆ ಧನಲಾಭವಾಗುವದು. ಜನ್ಮತಃ ಶುಭಯೋಗವಿದ್ದು, ಗೋಚರಿಯಿಂದ ಉಂಟಾದಾಗಲೂ ಯಾವದಾದರೊಂದು ರೀತಿಯಿಂದ ಲಾಭವಾಗುತ್ತಿರುತ್ತದೆ. ಧಾರ್ಮಿಕ ವೃತ್ತಿ ಬೆಳೆಯುವದು. ಸಾರ್ವಜನಿಕ ಕಾರ್ಯಗಳಲ್ಲಿ ಸಂಸ್ಥೆಗಳನ್ನು ಕಟ್ಟುವಲ್ಲಿ ಅಪ್ರತಿಮ ಯಶಸ್ಸನ್ನು ಕೊಡುವದು. ನೌಕರಿಯಲ್ಲಿ, ಉದ್ಯೋಗದಲ್ಲಿ ಉತ್ಕರ್ಷವಾಗುವದು. ಖ್ಯಾತಿಯುಂಟಾಗುವದು. ಈ ಎರಡು ಗ್ರಹಗಳ △ ಯೋಗವು ಮಹತ್ವದ್ದು. ಹರ್ಶಲ ಗುರು ಯುತಿ ಅನುಕೂಲ ರಾಶಿಯಲ್ಲಿ ಹಿತಕರ. ಪ್ರತಿಕೂಲ ರಾಶಿಯಲ್ಲಿ ಅಹಿತಕರ.

ಪ್ರಜಾಪತಿ ಶುಕ್ರರಲ್ಲಿ ಗುರುವಿನಂತೆ ಕಲ್ಪಿಸಬೇಕು. ಅಶುಭಯೋಗದಲ್ಲಿ ತೀವ್ರತೆ ಹೆಚ್ಚು. ಶುಭಫಲದಲ್ಲಿ ತೀವ್ರತೆ ಕಡಿಮೆ. ಪ್ರಜಾಪತಿ ಶುಕ್ರರ ಅಶುಭಯೋಗವು ಶನಿ ಮಂಗಳಗಿಂತ ಕಡಿಮೆ ತರಗತಿಯದು. ಸಂಸಾರ ಸೌಖ್ಯದಲ್ಲಿ ಹಾನಿ. ಚೈನಿ ವಿಲಾಸ, ಡೌಲುಗಳಲ್ಲಿ ಕಾಲದ ದುಡ್ಡಿನ ಅಪವ್ಯಯ. ಮಾದಕ ಪದಾರ್ಥಗಳ ವ್ಯಸನವಿರುವದು. ಆದರಿಂದ ಅಧಃಪಾತವು. ನಾಟ್ಯ ಜಿದ್ದು, ಶರ್ಯತ್ತುಗಳಿಂದ ಹಾನಿ. ವ್ಯಭಿಚಾರ ಪ್ರವೃತ್ತಿ, ಮತ್ಸರ, ಸ್ತ್ರೀಯರಿಂದ ಉಂಟಾಗುವ ತಿರಸ್ಕಾರ, ನಿರ್ಭತ್ಸನ, ಗರ್ಹ್ಯವರ್ತನ ಮೊದಲಾದ ಅನೇಕ ಅನಿಷ್ಟ ಫಲಗಳ ಪರಂಪರೆಯುಂಟಾಗುವದು. ವ್ಯಭಿಚಾರ ಜನ್ಯರೋಗಗಳುಂಟಾಗುವ ಸಂಭವವಿರುವದು. ಯುತಿ–ಪ್ರತಿಯುತಿಯಲ್ಲಿ ಅಶುಭ ಪ್ರಮಾಣವೇ ಹೆಚ್ಚು. ಶುಕ್ರ ಪ್ರಜಾಪತಿ ಶುಭಯೋಗವು ಪ್ರೇಮ ಪ್ರಣಯಗಳಲ್ಲಿ ಅಪ್ರತಿಮ ಯಶಸ್ಸನ್ನು ಕೊಡುವದು. ಗಾಯನ ನಾಟ್ಯ, ಚಿತ್ರಕಲೆ, ಜಲತರಂಗಗಳಲ್ಲಿ ನೈಪುಣ್ಯ. ಸೃಷ್ಟಿ ಸೌಂದರ್ಯದ ಮಾರ್ಮಿಕ ಪರೀಕ್ಷಣ, ಸ್ವಚ್ಛತೆ, ಸೌಂದರ್ಯ, ಅಚ್ಚುಕಟ್ಟುತನ ದಕ್ಷತೆ ನಾದಲುಬ್ಧತೆ ಮನಸ್ಸಿನ ಕೋಮಲತೆಗಳನ್ನುಂಟುಮಾಡುವದು. ಲಲಿತ ಕಲಾಭಿಜ್ಞರು ನಟರು, ಚಿತ್ರಕಾರರು, ಕಾದಂಬರೀಕಾರರು ಇವರಿಗೆ— ಈ ಯೋಗವು ಉಪಯುಕ್ತವಾಗಿರುವದು. ಶರ್ಯತ್ ಲಾಟರಿಗಳಿಂದಲೂ ಇದು ಧನವನ್ನು ಕೊಡಬಹುದು. ಮಂತ್ರ–ತಂತ್ರ ಸಾಧನೆಗಳಲ್ಲಿಯೂ ಅಭಿರುಚಿಯನ್ನು ಹುಟ್ಟಿಸುವದು.

ರವಿ ಆತ್ಮಕಾರಕ ಗ್ರಹವಿದ್ದು, ಅವನು ಹರ್ಶಲನಿಂದ ಪೀಡಿತನಿರುನಿರುವದು ಒಳ್ಳೆಯದಲ್ಲ. ಜನ್ಮವಿರುವ ವರೆಗೆ ತ್ರಾಸವನ್ನು ಅನುಭವಿಸಬೇಕಾಗುವದು. ಶೀಲ ಭ್ರಷ್ಟತೆ, ಪಿತೃಸೌಖ್ಯ ಹಾನಿ. ತಂದೆಗೆ ಆಪತ್ತುಗಳು ಬರುವವು. ಸರಕಾರಿ ನೌಕರಿಯಲ್ಲಿ ಅಧಿಕಾರಿಗಳಿಂದ ತ್ರಾಸ, ರಾಜಕಾರಣದಿಂದ ಆಪತ್ತುಗಳು ಬರುವವು. ಇಂತಹ ಫಲಗಳನ್ನು ಅಶುಭಯೋಗವು ಉಂಟುಮಾಡುವದು. ರವಿಯ ದಶಮದಲ್ಲಿ ಹರ್ಶಲನಿದ್ದರೆ ಆಯುಷ್ಯದಲ್ಲಿ ಕ್ರಾಂತಿಯುಂಟಾಗುವದು. ರವಿಯ ನವಮದಲ್ಲಿ ಹರ್ಶಲನು ಭಾಗ್ಯೋದಯಕ್ಕೆ ಕಾರಣನಾಗುವನು. ಮಾನಮರ್ಯಾದೆಗಳಿಂದ ಭಾಗ್ಯೋದಯವನ್ನುಂಟುಮಾಡುವನು.

ರವಿ ಹರ್ಶಲ ಶುಭಯೋಗ ಹಟಯೋಗಿ ಜನರಿಗೆ ಅತ್ಯುಪಯುಕ್ತವಾಗಿರುವದು. ರವಿ ಹರ್ಶಲಯುತಿ ಕೆಲವು ಪ್ರಸಂಗಗಳಲ್ಲಿ ಶುಭಫಲವನ್ನು ಕೊಡಬಹುದು. ಕೆಲವು ಸಾರಿ ಸುಖದ ನಾಶವನ್ನು ಮಾಡುವದು. ಪ್ರತಿಯುತಿ ಪಿತೃಸುಖಕ್ಕೆ ವಿಘಾತಕ. ಸಂಕಟ ಜನಕವೂ ಆಗಿರುವದು.

ಹರ್ಶಲ ರಾಹುಗಳಲ್ಲಿ ಐಕ್ಯವಿಲ್ಲ. ಅಶುಭ ಫಲಗಳೇ ಕಾಣಬರುವವು. ಅಶುಭಯೋಗವಿದ್ದರೆ ಸರ್ಪದಂಶಭಯ, ಅಪಮೃತ್ಯು ಭಯ, ಪಿಶಾಚ ಬಾಧೆ ಜಾರಣ–ಮಾರಣಗಳಿಂದ ತ್ರಾಸ. ಶುಭ ಸಂಬಂಧವಿದ್ದರೆ ತಾಮಸ ಸಾಧನಗಳಿಂದ, ನಿಂದ್ಯ ಕ್ರಿಯೆಯಿಂದ ಯಶಸ್ಸುಗಳಿಸುವ ಪ್ರವೃತ್ತಿ ಇರುವದು. ರಾಹು ಪ್ರಜಾಪತಿಗಳು ಇಬ್ಬರೂ ಮಾರಕ ಗ್ರಹಗಳೇ. ಯುತಿ, ಪ್ರತಿಯುತಿಗಳು ಅಶುಭ ಫಲವನ್ನೇ ಕೊಡುವವು. ೧. ೩, ೫, ೭, ೯, ೧೦ ರಲ್ಲಿ ಯೋಗವಾಗುವದು ನೆಟ್ಟಗಲ್ಲ. ತೀವ್ರ ನಕ್ಷತ್ರದಲ್ಲಿ ಜನ್ಮತಃ ಆಗುವದು ಅದಕ್ಕಿಂತ ಕೆಡಕು.

ಹರ್ಶಲನ ರಾಶಿಗತ ಫಲ:— ಆಯಾ ರಾಶಿಯಲ್ಲಿ ಹರ್ಶಲನ ಫಲಗಳು ಹೆಚ್ಚು–ಕಡಿಮೆ ಪ್ರಮಾಣವನ್ನು ಪಡೆಯುವವು ಎಂದು ಕಂಡು ಬಂದಿರುವದು. ಪ್ರಜಾಪತಿಗೆ ಜಲರಾಶಿಗಳು ಅಪ್ರಿಯವಾಗಿರುವವು. ಅಗ್ನಿರಾಶಿಗಳೂ ಅವನಿಗಷ್ಟು ಒಳ್ಳೆಯವಲ್ಲ. ವಾಯು ರಾಶಿಗಳು ಪ್ರಜಾಪತಿಗೆ

ಅತ್ಯಂತ ಪ್ರಿಯವಿದ್ದು ಇಲ್ಲಿ ಅವನು ಬಹಳಷ್ಟು ಶುಭ ಫಲವನ್ನುಂಟು ಮಾಡುವನು. ಅಗ್ನಿರಾಶಿಯಲ್ಲಿ ಕ್ರೌರ್ಯ, ದುಷ್ಟತನ, ಸ್ವೈಷ್ಟುರ್ಯ, ಪ್ರಬಲ ಮನೋಭಾವನೆ, ವಿಕಾರಗಳ ತೀವ್ರತೆ, ಅಸ್ಥೈರ್ಯ ಕಲಹ, ಅಪಘಾತ, ಕ್ರಾಂತಿಗಳನ್ನು (ಪೀಡಿತನಿದ್ದಾಗ) ಮಾಡಬಹುದು. ಅಗ್ನಿ–ವಾಯುಗಳ ಮಿಲನ ಸಂಹಾರದ ತವರ್ಮನೆ, (ಪವನಹುತವಹರಂತೆ ಕೂಡಿದರ್ ಲವ-ಕುಶರು) ವಾಯು ಸ್ಫೋಟಕ ಅಗ್ನಿರಾಶಿ ಕೂಡಿದಲ್ಲಿ ವಿಲಕ್ಷಣ ಕ್ರಾಂತಿಯೆಂದು ತಿಳಿಯಲು ಅಡ್ಡಿಯಿಲ್ಲ. ಅಗ್ನಿರಾಶಿಯಲ್ಲಿ ಕ್ರೂರ ನಕ್ಷತ್ರ ಪ್ರಜಾಪತಿಗೆ ಭಯಂಕರ. ಯಾವನ ಲಗ್ನದಲ್ಲಿ ಹರ್ಶಲನು ಮಂಗಳ ಶನಿಯಿಂದ ಪೀಡಿತರಿದ್ದರೆ ಅಥವಾ ಪ್ರಜಾಪತಿ ಕ್ರೂರ ನಕ್ಷತ್ರದಲ್ಲಿ ೬, ೭, ೮, ೧೨ ಸ್ಥಾನದಲ್ಲಿದ್ದರೆ ಇಂಥವರು ವಾಘ್ ಗ್ಯಾಸ ಯಂತ್ರಗಳಿಂದ ಆಲಿಪ್ತರಿರುವದು ನೆಟ್ಟಗೆ. ಅಪಘಾತವಾಗುವ ಸಂಭವವಿರುವದು. ಅಗ್ನಿರಾಶಿಯಲ್ಲಿ ಪ್ರಜಾಪತಿ ಮಂಗಳನಿಂದ ಶುಭದೃಷ್ಟನಿದ್ದರೆ ಸರ್ಜರೀ, ರಸಾಯನ, ಯುದ್ಧಕಲೆ, ಯಾಂತ್ರಿಕ ಕಾರಖಾನೆಗಳಲ್ಲಿ ಉತ್ಕರ್ಷವಾಗುವದು. ಅಗ್ನಿರಾಶಿಯಲ್ಲಿಯ ಪ್ರಜಾಪತಿಯೊಡನೆ ಯಾವ ಯಾವ ಗ್ರಹದ ಶುಭಯೋಗವಾಗುವದೋ ಆಗ್ರಹದ ಅಧಿಕಾರದಲ್ಲಿರುವ ವಿದ್ಯೆ ಸದೈವ ಜಾಗೃತವಾಗಿರುವದು. ಆ ವಿದ್ಯೆಯ ವ್ಯಾಸಂಗ ಮಾಡಲಿಕ್ಕೆ ಸ್ಥಾನ ಬಲವೂ ಆವಶ್ಯಕವಾಗಿರುವದು.

ಮೇಷದ ಪ್ರಜಾಪತಿ, ಮಸ್ತಕದ ಮೇಲೆ ವಿಶೇಷ ಪರಿಣಾಮವನ್ನು ಮಾಡುವನು. ಶುಭ ಸ್ಥಿತಿಯಲ್ಲಿದ್ದರೆ ಬುದ್ಧಿಕುಶಾಗ್ರವಿರುವದು. ಕಾರ್ಯಗಳಲ್ಲಿ ಉತ್ಸಾಹ ತೀವ್ರತೆ ಕಂಡು ಬರುವದು. ಇದೇ ಪ್ರಜಾಪತಿ ತೃತೀಯದಲ್ಲಿ ಪೀಡಿತನಿದ್ದರೆ ಅಥವಾ ತೃತೀಯೇಶನೊಡನೆ ಅವನ ಅಶುಭಯೋಗವಿದ್ದರೆ ಉತಾವಳಿತನದಿಂದ ಹಾನಿಯಾಗುವದು. ಮಜ್ಜಾತಂತುವಿನ ಮೇಲೆ ಪರಿಣಾಮವಾಗುವದು. ಬುದ್ಧಿಯ ದುರುಪಯೋಗವಾಗುವದು. ಇದೇ ಪ್ರಜಾಪತಿ ಮಂಗಳನಿಂದ ದೂಷಿತನಾಗಿ ೩, ೬, ೮, ೧೨ ರಲ್ಲಿದ್ದರೆ ಅಧಃಪಾತವನ್ನು ಸೂಚಿಸುವನು. ಮಂಗಳನ ಸ್ವಭಾವದಂತೆ ಅಗ್ನಿ, ಆಘಾತ ಸ್ವರೂಪವಾಗಿರುವವು. ಮೇಷ ರಾಶಿಯ ಸ್ವಭಾವ ಜಹಾಲ, ಇದರ ಧರ್ಮ ಹಟ ಅಭಿಮಾನ. ಈ ರಾಶಿ ಪ್ರಜಾಪತಿಗೆ ಅನುಕೂಲವಲ್ಲ. ದಂಭ-ದುರಭಿಮಾನ ಶುಷ್ಕ ಡೌಲುಗಳು ತೋರುವವು.

ಮೇಷಕ್ಕಿಂತ ಸಿಂಹದ ಪ್ರಜಾಪತಿಯ ಫಲಗಳು ತೀವ್ರವಾಗಿರುವವು. ಶುಭ ಸ್ಥಿತಿಯಲ್ಲಿರುವ ಪ್ರಜಾಪತಿಯ ಫಲಗಳು ಆಯುಷ್ಯದ ಪ್ರಗತಿಗೆ ಒಳ್ಳೇ ಸಹಾಯಕವಾಗುವವು. ಇವರಲ್ಲಿ ಕರ್ತೃತ್ವ ಶಕ್ತಿ ಇರುವದು. ಔದಾರ್ಯ ಸಾಹಸ ಸ್ವಾತಂತ್ರ್ಯ ಪ್ರೀತಿ ದೃಢನಿಶ್ಚಯ ಆತ್ಮವಿಶ್ವಾಸ ಕಾರ್ಯ ಪ್ರವರ್ತಕ ಸಾಮರ್ಥ್ಯ ಸಿಂಹಸ್ಥ ಪ್ರಜಾಪತಿಯ ಶುಭ ಧರ್ಮಗಳು. ಮೇಷದಲ್ಲಿ ಗವಿಷ್ಠತೆ ಅವಿಚಾರಗಳು ತೋರಿದರೆ ಸಿಂಹಸ್ಥ ಪ್ರಜಾಪತಿಯಲ್ಲಿ ಆತ್ಮ-ವಿಶ್ವಾಸ ವಿಚಾರ ಗಾಂಭೀರ್ಯಗಳು ತೋರುವವು. ಪ್ರತ್ಯಕ್ಷ ಕಾರ್ಯಮಾಡಿ ತೋರಿಸುವ ಶೈಲಿ ಇರುವದು. ಸಿಂಹಸ್ಥ ಅಶುಭ ಸಂಬಂಧಿತ ಪ್ರಜಾಪತಿ ಜಠರ ಸಂಬಂಧದ ರೋಗಗಳನ್ನು ಹುಟ್ಟಿಸುವನು. ಪಿತೃ ಸುಖವನ್ನು ಕೊಡಲಾರನು. ಸಿಂಹದ ಪ್ರಜಾಪತಿ ತೃತೀಯದಲ್ಲಿ ಇರುವದು ಒಳ್ಳೆಯದು. ತೃತೀಯೇಶನಿಂದ ಶುಭ ಸಂಬಂಧಿತನಾಗಿದ್ದರೆ ಅತ್ಯುತ್ತಮ. ಕರ್ತೃತ್ವಶಕ್ತಿ ಮುಂದಾಳುತನ ಪರಾಕ್ರಮ ಈ ಗುಣಗಳಿಗೆ ಪೋಷಕನಾಗುವನು. ಚತುರ್ಥದಲ್ಲಿ ಸಿಂಹದ ಪ್ರಜಾಪತಿ ದುಃಖಕ್ಕೆ ಕಾರಣವಾಗುವನು. ಇಂತಹ ವೇಳೆಯಲ್ಲಿ ಚಂದ್ರ ರವಿ ಚತುರ್ಥೇಶನಿಂದ ಪೀಡಿತನಿದ್ದರೆ ಜನ್ಮವಿರುವ ವರೆಗೆ ದುಃಖದ ಮಾಪುಗಳನ್ನು ಉಡಿಯಲ್ಲಿ ಹಾಕುತ್ತಿರುವನು. ಸಿಂಹರಾಶಿ ತೀವ್ರ. ರಾಶಿ ಚಕ್ರದಲ್ಲಿ ಬಲಿಷ್ಠ ರಾಶಿ ಇರುವದು. ದಶಮದಲ್ಲಿ ಮಂಗಳ ಶನಿಗಳಿಂದ ದೂಷಿತನಾದ ಪ್ರಜಾಪತಿ ಇರಬಾರದು. ರಾಜಕಾರಣಿಗಳಿಗೆ ಅಪಯಶಸ್ಸನ್ನು ಕೊಡುವನು.

ಧನುರಾಶಿಯ ಪ್ರಜಾಪತಿ ತೀವ್ರ ಜಹಾಲ ಮೇಷದಂತೆ. ಆದರೆ ಇವನಿಗೆ ಕ್ರೀಡಾಭಿರುಚಿ, ನೈಪುಣ್ಯ, ಉತ್ತಮ ಶಾರೀರಿಕ ಸಂಪತ್ತಿಯನ್ನು ದೊರಕಿಸುವ ಆಶೆ ಇರುವದು. ವ್ಯಾಯಾಮ ಮಾಡುವ ಹುರುಪು ನಾದವಿರುವದು. ಧನುವಿನಲ್ಲಿ ಶುಭ ಸಂಬಂಧಿತ ಪ್ರಜಾಪತಿ ಇಂತಹ ಶುಭಫಲಗಳನ್ನು ಕೊಡುವನು. ಈ ರಾಶಿಯಲ್ಲಿ ಅಶುಭ ಸಂಬಂಧಿತ ಪ್ರಜಾಪತಿ ವಿಶೇಷವಾಗಿ ಶನಿ ಮಂಗಳರಿಂದ ವಾಹನಗಳಿಂದ ಅಪಘಾತ, ಮೊಳಕಾಲಿಗೆ ವೇದನೆಯಾಗುವದು. ರಕ್ತ ಅಶುದ್ಧವಾಗಿರುವದು. ಧನುರ್ವಾತದ ವಿಕಾರವುಂಟಾಗುವದು. ೩, ೮ ಸ್ಥಾನದಲ್ಲಿ ಸ್ಪಷ್ಟ ಫಲಗಳು ಕಂಡು ಬರುವವು.

೩ರಲ್ಲಿ ಇಂತಹ ಪ್ರಜಾಪತಿ ಮಜ್ಜಾತಂತು ವಿಕಾರಗಳನ್ನು ಮಾಡುವನು. ಲಗ್ನದಲ್ಲಿ ಧನೂ ರಾಶಿಯು ಪ್ರಜಾಪತಿ ಶರೀರಯಷ್ಟಿ ಎತ್ತರ ಅವಯವಗಳು ದೀರ್ಘ ವಾಹನಗಳಿಗಿಂತ ನಡಿಗೆಯಿಂದ ಸಾಗುವದು ಪ್ರಿಯವಾಗಿರುವದು.

ಜಲರಾಶಿಗಳಲ್ಲಿ ಪ್ರಜಾಪತಿ ಅಶುಭ ಫಲಗಳನ್ನು ಉಂಟುಮಾಡುವನು. ಆದರೆ ಅಗ್ನಿರಾಶಿಗಿಂತ ಕಡಿಮೆ ತೀವ್ರವಾಗಿರುವವು. ನೀರು, ಗಾಳಿಗಳ ಸಂಯೋಗದಿಂದ ಬಿರುಗಾಳಿ ತುಫಾನಗಳು ಹುಟ್ಟುವವು. ಸ್ಥಿತ್ಯಂತರ ವಾರಂವಾರ ಆಗುವ ಏರಿಳಿತಗಳು ಇವುಗಳನ್ನು ಜಲರಾಶಿಗತ ಪ್ರಜಾಪತಿ ಮಾಡುತ್ತಿರುವನು.

ಕರ್ಕರಾಶಿ ಪ್ರಜಾಪತಿಗೆ ಪ್ರತಿಕೂಲವಾದದ್ದು, ಬಾಲ್ಯಾವಸ್ಥೆಯ ದಿನಗಳು ಕಷ್ಟಕರವಾಗಿರುವವು. ಮಾತೃಸುಖನ್ಯೂನತೆ ಮಾತೆಯ ಪ್ರಕೃತಿಯ ಬಗ್ಗೆ ಕಾಳಜಿ. ಮನಸ್ಸಿನ ಚಂಚಲವೃತ್ತಿ, ಕ್ಷಣದಲ್ಲಿ ಬದಲಾಗುವ ವಿಚಾರಗಳು, ತಕರಾರಿ ಸ್ವಭಾವ, ಹೃದಯ ಪುಪ್ಪುಸಗಳ ವಿಕಾರ. ಇಂತಹ ಅಶುಭಫಲಗಳು ಕಾಣಬರುವವು. ಚಂದ್ರನ ಅಶುಭಯೋಗವಿದ್ದಲ್ಲಿ ಫಲಗಳು ಸ್ಪಷ್ಟವಾಗಿರುವವು. ಕರ್ಕರಾಶಿ ಚಂಚಲ ಸಂಗತಿ ಪ್ರಿಯವಾಗಿರುವದು. ರವಿ ಚಂದ್ರನೊಡನೆ ಲಗ್ನೇಶನೊಡನೆ ಅಶುಭಯೋಗ ಮಾಡುತ್ತಿದ್ದರೆ ಮನುಷ್ಯನ ಮೇಲೆ ಸುತ್ತಲಿನ ಪರಿಸ್ಥಿತಿಯ ಪರಿಣಾಮವು ಬೇಗನೆ ಆಗುವದು. ಮನಸ್ಸಿನ ಚಿಂತೆ ವಿನಾಕಾರಣ ಇರುವದು. ಮನಸ್ಸಿನ ದೌರ್ಬಲ್ಯ ಕಾಣುವದು. ಒಕ್ಕಲಿಗರಿಗೆ ತೋಟಿಗರಿಗೆ ಚಂದ್ರ ರವಿ ಶುಕ್ರರಿಂದ ದೂಷಿತನಾದ ಹರ್ಶಲನು ಹಾನಿಯನ್ನುಂಟುಮಾಡುವನು.

ವೃಶ್ಚಿಕರಾಶಿ ಸಂಸರ್ಗಜನ್ಯ ರೋಗದ ಜನಕ. ಅದರ ಅಧಿಕಾರ ಗುಹ್ಯೇಂದ್ರಿಯ ಮೇಲೆ ಇರುವದು. ಈ ರಾಶಿ ಗೂಢ ಖುನಸಿ ಇರುವದು. ವೃಶ್ಚಿಕದ ಪ್ರಜಾಪತಿ ರವಿ ಚಂದ್ರ ಶನಿಗಳ ಅಶುಭ ಸಂಬಂಧದಲ್ಲಿದ್ದರೆ ಚೌರ್ಯ ಕಾಪಟ್ಯ. ಸ್ವಭಾವದ ಗೂಢತೆ ಅಂತರ್ಯಾಮಿ ಸೂತ್ರದ ಕಲ್ಪನೆ; ಇಂತಹ ಫಲಗಳುಂಟಾಗುವವು. ಸ್ಥಾನಬಲವುಳ್ಳ ಶುಭದೃಷ್ಟ ಪ್ರಜಾಪತಿ ಸರ್ಜರಿ ರಸಾಯನ ಶಾಸ್ತ್ರಗಳಲ್ಲಿ ಅಪ್ರತಿಮ ಪ್ರಾವೀಣ್ಯವನ್ನು ಕೊಡುವನು. ಅಶುಭದೃಷ್ಟ ಪ್ರಜಾಪತಿ ಮೂತ್ರೇಂದ್ರಿಯ ಗುಹ್ಯೇಂದ್ರಿಯ ರೋಗಗಳನ್ನುಂಟು

ಮಾಡಬಹುದು. ಸಂಗ್ರಹಣೀ ಕಾಲರಾ ಮೂಲವ್ಯಾಧಿಗಳನ್ನುಂಟುಮಾಡ ಬಹುದು.

ಮೀನಸ್ಥ ಪ್ರಜಾಪತಿ ಅಶುಭ ಸಂಬಂಧಿತನಾಗಿದ್ದರೆ ಜಲಾಪಘಾತ. ಈ ರಾಶಿ ಅನುಕರಣ ಪ್ರಿಯವಾಗಿದೆ. ಈ ರಾಶಿಯಲ್ಲಿಯ ಪ್ರಜಾಪತಿ ಅನು ಕರಣ ಪ್ರಾವೀಣ್ಯವನ್ನು ಕೊಡುವನು. ಪೀಡಿತ ಪ್ರಜಾಪತಿ ಆಲಸ್ಯ, ಅಸ್ಥೈರ್ಯ ಗಳನ್ನುಂಟುಮಾಡುವನು. ಪಾದಗಳಿಗೆ ವೇದನೆಯಾಗುವ ಸಂಭವವಿರು ವದು. ಸ್ಥಾನಬಲವಿದ್ದು ಗುರು ಚಂದ್ರ ಶುಕ್ರ ರವಿಗಳಿಂದ ಶುಭದೃಷ್ಟನಾಗಿ ದ್ದರೆ ಮನಸ್ಸು ಕೋಮಲವಾಗಿರುವದು. ಭಕ್ತಿರಸಕ್ಕೆ ಈ ಯೋಗವು ಉತ್ತಮವಾಗಿರುವದು. ನಾದಲುಬ್ಧತಾ. ಒಂದೇ ಲಹರ ತಂದ್ರೀ ಇವು ಶುಭ ಪರಿಣಾಮಗಳು. ಮೂಕಪ್ರಾಣಿಗಳ ಮೇಲೆ ಪ್ರೇಮವಿರುವದು. ದೀರ್ಘಪ್ರಯತ್ನಕ್ಕೆ ಈ ರಾಶಿ ನಿರುಪಯೋಗಿ ಆಗಿರುವದು. ಪ್ರಜಾಪತಿ ಇಲ್ಲಿ ಪೀಡಿತನಿದ್ದರೆ ಅನುಕರಣ, ಶೀಘ್ರಸಂಸ್ಕಾರ, ಆಲಸ್ಯ, ವಿಕಾರವಶತೆಗಳು ಕಂಡು ಬರುವವು. ಈ ರಾಶಿಯಲ್ಲಿ ಮಂಗಳ ಪ್ರಜಾಪತಿಗಳ ಯುತಿ ಪ್ರತಿ ಯುತಿಗಳು ವಿದ್ಯುತ್ ಶಕ್ತಿಯಿಂದ ನೋವುಂಟಾಗುವ ಸಂಭವವಿರುವದು. ಮೀನಸ್ಥಪ್ರಜಾಪತಿ ಶುಕ್ರನ ಸಂಬಂಧವಿರುವಲ್ಲಿ ಅದ್ಭುತ ಕಥಾನಕಗಳನ್ನು ರಚಿಸುವರು. ಅದ್ಭುತ ಕಾರ್ಯಗಳ ಕಡೆಗೆ ಪ್ರವೃತ್ತಿ. ಅಶುಭ ಸಂಬಂಧವು ವಿಪರೀತ ಅನುಭವವನ್ನು ಕೊಡುವದು. ಶುಕ್ರ ಪ್ರಜಾಪತಿಗಳ ಅಶುಭ ಸಂಬಂಧದಲ್ಲಿ ವರುಣನೂ ಕೂಡಿಕೊಂಡಲ್ಲಿ ಮದ್ಯಪ್ರಾಶನದಂಥ ವ್ಯಸನಗಳು ಅಂಟಿಕೊಳ್ಳುವವು. ಮೀನದ ಪ್ರಜಾಪತಿ ಶನಿ ಮಂಗಳರಿಂದ ಪೀಡಿತನಾಗಿ ದ್ದರೆ ಪಾದಗಳಲ್ಲಿ ವ್ಯಂಗ, ಕಾಲುಗಳಲ್ಲಿ ಧಕ್ಕೆ, ನಡೆಯುವ ಪದ್ಧತಿ ಹಾಸ್ಯಾ- ಸ್ಪದವಾಗಿರುವದು.

ಭೂಮಿ ರಾಶಿಗಳು ಹರ್ಶಲನಿಗೆ ಅಷ್ಟು ಪ್ರಿಯವಲ್ಲ; ಅಪ್ರಿಯವೂ ಅಲ್ಲ. ಒಬ್ಬನೇ ಪ್ರಜಾಪತಿ ಇದ್ದರೆ ಉದಾಸೀನನಾಗಿರುವನು. ಫಲಗಳು ಸ್ವತಂತ್ರ ತೀವ್ರವಾಗಿರುವವು. ಭೂಕಂಪ, ಭೂಗತ ಬಿರುಗಾಳಿಯಿಂದ ಧೂಳಿಯ ವರ್ತುಲವುಂಟಾಗುವದು, ಇದರಲ್ಲಿ ಹರ್ಶಲನ ಸಂಬಂಧವು ಕೆಲವುಟ್ಟಿಗೆ ಇರುವದು. ಚಿಮಣಿ ಎಣ್ಣೆ, ಪೆಟ್ರೋಲಿಯಂ, ಕಲ್ಲಿದ್ದಲಿ

ಖನಿಜೋದಕ ಇವುಗಳ ಸಂಬಂಧ ಹರ್ಶಲನಿಗಿರುವದು. ವ್ಯಕ್ತಿಯ ಕುಂಡಲಿ ಯಲ್ಲಿ ಪೃಥ್ವೀರಾಶಿಯಲ್ಲಿ ಪ್ರಜಾಪತಿ ಇದ್ದು, ಗುರು ಶುಕ್ರ ಅಥವಾ ಧನಾಧಿ ಪರ ಶುಭ ಸಂಬಂಧವಿರುವಲ್ಲಿ ಆಕಸ್ಮಿಕ ದ್ರವ್ಯ ಲಾಭವಾಗುವ ಸಂಭವವಿರು ವದು. ಈ ಪ್ರಜಾಪತಿ ಚಂದ್ರ ಶುಕ್ರನಿಂದ ಚತುರ್ಥೇಶನಿಂದ ಶುಭದೃಷ್ಟ ನಾಗಿದ್ದರೆ ಒಕ್ಕಲಿಗರಿಗೂ ತೋಟಿಗರಿಗೂ ಲಾಭದಾಯಕವಾಗುವದು. ಅದರಲ್ಲಿ ವೃಷಭದ ಪ್ರಜಾಪತಿಯ ವಿಚಾರವನ್ನು ಮೊದಲು ಮಾಡಬೇಕು. ಕನ್ಯಾರಾಶಿ ಹಸ್ತಕೌಶಲ್ಯ. ನಕ್ಷೆಯ ಕಾರ್ಯಗಳಲ್ಲಿ ಪ್ರಸಿದ್ಧವಾಗಿರುವದು. ಈ ರಾಶಿ ಬುಧ ಶುಕ್ರರಿಂದ ಶುಭ ಸಂಬಂಧಿತ ಪ್ರಜಾಪತಿ ಈ ಕಲೆಗಳಲ್ಲಿ ಉತ್ಕರ್ಷವನ್ನುಂಟುಮಾಡುವನು. ಹೆಣಿಯುವದು ಮೊದಲಾದ ಕಲೆಗಳಲ್ಲಿ ಪ್ರಾವೀಣ್ಯ ಕೊಡುವನು. (ಹಸ್ತ ಕಲಾ ಕುಶಲ ಕಾರ್ಯಗಳಲ್ಲಿ) ಪ್ರಜಾಪತಿಗೆ ಪೃಥ್ವಿರಾಶಿಗಳಲ್ಲಿ ಮಕರರಾಶಿ ಮಹತ್ವದ್ದಲ್ಲ. ಅವನು ಅಲ್ಲಿ ಇದ್ದು ಇಲ್ಲ ದಂತೆ; ಪೀಡಿತನಿದ್ದರೆ ಬಹಳ ತ್ರಾಸ ಕೊಡುವನು. ಅಂಧಶ್ರದ್ಧೆ ಕರ್ಮಠತನ ಏಕಕಲ್ಲೀ ಸ್ವಭಾವ; ಇವು ಅವನ ಫಲಗಳು.

ಎಲ್ಲ ರಾಶಿಗಳಲ್ಲಿ ಬೌದ್ಧಿಕ ರಾಶಿ (ಮಿಥುನ ತುಲಾ ಕುಂಭ) ಹರ್ಶಲ ನಿಗೆ ಅತ್ಯಂತ ಪ್ರಿಯವಾಗಿರುವವು. ಈ ವಾಯು ತತ್ವದ ರಾಶಿಗಳಲ್ಲಿ ಅವನು ಅತ್ಯಂತ ಮುದಿತನಿರುವನು. ಮಹತ್ವದ ಶುಭ ಫಲವನ್ನು ಕೊಡುವನು. ಕುಂಭರಾಶಿ ಪ್ರಜಾಪತಿಗೆ ಸ್ವಕ್ಷೇತ್ರವೆಂದು ತಿಳಿಯಲ್ಪಟ್ಟಿರುವದು. ಈ ರಾಶಿ ಯಲ್ಲಿ ಅವನು ಅಷ್ಟು ಬಲಿಷ್ಠನಿರುವನು. ವಾಯು ತತ್ವದ ರಾಶಿಗಳು ಬೌದ್ಧಿಕ ಸಾಮರ್ಥ್ಯದ್ಯೋತಕವಾಗಿವೆ. ಪ್ರಜಾಪತಿ ಸಂಬಂಧವು ತರ್ಕ ಶಕ್ತಿಯೊಡನಿರುವದು. ಕಲ್ಪನಾತರ್ಕ ಅನುಮಾನ ಈ ಗುಣಗಳು ಹರ್ಶಲ ನವು. ಬೌದ್ಧಿಕ ರಾಶಿಯಲ್ಲಿ ಹರ್ಶಲನಿದ್ದರೆ ಈ ಗುಣಗಳ ಪರಿಪೋಷಕ ವಾಗುವದು.

ಮಿಥುನ ರಾಶಿ ಪಾಠಾಂತರ ಪ್ರಿಯ ಸ್ಮರಣ ಶಕ್ತಿಯದ್ಯೋತಕವಾಗಿ ರುವದು. ಈ ರಾಶಿಯಲ್ಲಿರುವ ಪ್ರಜಾಪತಿ ಪಾಠಾಂತರ ಶಕ್ತಿಯನ್ನು ವಿಪುಲ ವಾಗಿ ಕೊಡುವನು. ಅವನು ಬುಧನಿಂದ ಗುರುವಿನಿಂದ ಶುಭ ದೃಷ್ಟನಾಗಿ ದ್ದರೆ ಅಸಾಮಾನ್ಯ ಸ್ಮರಣಶಕ್ತಿಯನ್ನು ಕೊಡುವನು. ತೃತೀಯಭಾವವಲ್ಲಿ

ಯೋಗ ಉಂಟಾದರೆ ಅತ್ಯುತ್ತಮ. ಮಿಥುನದ ಅಧಿಕಾರ ಶ್ವಾಸನಲಿಕೆಯ ಮೇಲಿರುವದು. ಇಲ್ಲಿಯ ಬಲಿಷ್ಠ ಹರ್ಶಲನು ಪ್ರಾಣಾಯಾಮ ಮಾಡುವ ಯೋಗಿಗಳಿಗೆ ಅತ್ಯುತ್ತಮವಾಗಿರುವದು. ಇಲ್ಲಿಯ ಹರ್ಶಲನು ಪಾಠಾಂತರ ಪ್ರಿಯನಾಗಿರುವದರಿಂದ ಇಡೀ ಗ್ರಂಥವನ್ನೇ ಮುಖೋದ್ಗತ ಮಾಡುವ ಸಾಮರ್ಥ್ಯವನ್ನು ಕೊಡುವನು. ಪಾಠಾಂತರ ಮಾಡಲಿಕ್ಕೆ ಬಹಳ ಕಾಲವೂ ಹಿಡಿಯುವದಿಲ್ಲ. ಮಿಥುನಸ್ಥ ಪ್ರಜಾಪತಿ ಶನಿ ಮಂಗಳ ಬುಧರ ಅಶುಭ ಸಂಬಂಧದಲ್ಲಿದ್ದರೆ ಶ್ವಾಸ ಕಫ ಪ್ರಧಾನ ರೋಗವಾಗುವ ಸಂಭವವಿರುವದು. ಬುದ್ಧಿ ಕುಶಾಗ್ರವಿದ್ದರೂ ದುರುಪಯೋಗವಾಗುವದು. ಮಿದುಳಿನ ಮೇಲೆ ಹೆಚ್ಚು ಶಕ್ತಿ ಬಿದ್ದು ತ್ರಾಸವಾಗುವ ಸಂಭವವಿರುವದು. ಆದರೂ ಇಲ್ಲಿಯ ಪ್ರಜಾಪತಿ ಶುಭ ಫಲವನ್ನು ಹೆಚ್ಚಾಗಿ ಕೊಡುವನು. ತುಲಾರಾಶಿ ಮನಸ್ಸಿನ ಸಮತೂಕವನ್ನು ಕಾಯ್ದುಕೊಳ್ಳುವ ರಾಶಿ. ಎರಡೂ ಬದಿಗಳ ಕಡೆಗೆ ನಿರೀಕ್ಷಣ ಮಾಡುವ ರಾಶಿಯಿರುವದು. ಸ್ವಲ್ಪಮಟ್ಟಿಗೆ ಚಂಚಲತೆಯೂ ಈ ರಾಶಿಯಲ್ಲಿರುವದು. ಯಾವದಾದರೊಂದು ಅನುಮಾನ ಮತವನ್ನು ಸಮತೋಲ ವೃತ್ತಿಯಿಂದ ಪ್ರಕಟಮಾಡುವಲ್ಲಿ ಇಲ್ಲಿಯ ಪ್ರಜಾಪತಿಯಲ್ಲಿ ಪಟುತ್ವವಿರುವದು. ಈ ಗುಣವು ನಿಬಂಧಕಾರರಿಗೂ ನ್ಯಾಯಾಧೀಶರಿಗೂ ಉಚ್ಚ ಅಧಿಕಾರಿಗಳಿಗೂ ಅತ್ಯಾವಶ್ಯಕವಾಗಿರುವದು. ಆರಂಭದಲ್ಲಿ ಚಮತ್ಕಾರಿಕವಾದ ಅನುಮಾನಗಳನ್ನು ನಿಜವಾಗಿ ವಿಲಕ್ಷಣ ರೀತಿಯಿಂದ ಮಾಡುವಲ್ಲಿ ಇಲ್ಲಿಯ ಪ್ರಜಾಪತಿಯುಬೇಕು. ಇಂತಹ ಮನುಷ್ಯರ ಮೈತ್ರಿ ವ್ಯವಹಾರದಲ್ಲಿ ಉಪಯುಕ್ತ ಹಿತಾವಹವಾಗಿರುವದು. ತುಲಾರಾಶಿ ಶಾಸ್ತ್ರೀಯವಾಗಿದ್ದರೂ ವಿದ್ಯೆಗಿಂತ ಲಲಿತಕಲೆಯ ಕಡೆಗೆ ಆದರ ಲಕ್ಷ್ಯವಿರುವದು. ಇಲ್ಲಿ ಪ್ರಜಾಪತಿ ಅಶುಭ ಸಂಬಂಧಿತನಿದ್ದರೆ ಮೂತ್ರಾಶಯ ಮೇಹರೋಗಗಳನ್ನು ಉತ್ಪಾದಿಸುವನು. ಚಂದ್ರ ಶುಕ್ರರ ಅಶುಭಯೋಗ ಇವನೊಡನಿದ್ದರೆ ವ್ಯಭಿಚಾರ ಪ್ರವೃತ್ತಿಯುಂಟಾಗಬಹುದು. ರವಿಪ್ರಜಾಪತಿ ಯುತಿ ತುಲೆಯಲ್ಲಿ ಪಂಚಮ ಸಪ್ತಮದಲ್ಲಿ ಉಂಟಾದರೆ ವ್ಯಭಿಚಾರ ವರ್ತನ ಸಂಭವವು ವಿಶೇಷವಾಗಿರುವದು.

ಕುಂಭಸ್ಥ ಪ್ರಜಾಪತಿ ಕಠಿನ ಗೂಢ ವಿಷಯಗಳಲ್ಲಿ ಬುದ್ಧಿ ಚೆನ್ನಾಗಿ ಪ್ರಚಾಲಿತವಾಗುವದು. ವೇದಾಂತ ಮೊದಲಾದ ಗೂಢ ವಿಷಯಗಳು

ಪ್ರಿಯವಾಗುವವು. ಅವುಗಳಲ್ಲಿ ನೈಪುಣ್ಯವುಂಟಾಗುವದು. ಕಲ್ಪನಾ-ನಾವೀನ್ಯ, ಗೂಢ ಸ್ಥಿರವಿಚಾರ, ಆಳವಾದ ನಿರೀಕ್ಷಣ, ಇಂತಹ ಪರಿಣಾಮಗಳು ಕಂಡು ಬರುವವು. ಬೌದ್ಧಿಕ ಸಾಮರ್ಥ್ಯದಲ್ಲಿ ಎಲ್ಲರಿಗಿಂತ ಮುಂದೆ ಬರುವಲ್ಲಿ ಸಂದೇಹವಿಲ್ಲ. ಪ್ರಜಾಪತಿಗೆ ಶನಿಯ ಶುಭಯೋಗವುಂಟಾದರೆ ಗೂಢ ವಿದ್ಯೆಯಲ್ಲಿ ಲೋಕೋತ್ತರ ಯಶಸ್ಸು ಸಿಕ್ಕುವದು. ರಾಶಿ ಚಕ್ರದಲ್ಲಿ ಕುಂಭವೊಂದೇ ಪ್ರಜಾಪತಿಗೆ ಅತ್ಯಂತ ಪ್ರಿಯವಾದ ರಾಶಿ. ಕುಂಭಸ್ಥ ಎಲ್ಲ ವರ್ಗದವರನ್ನೂ ಮುಂದೆ ತರುವನು. ಆದರೆ ಅವನಿಗೆ ಸ್ಥಾನಬಲ ಶುಭ ಯೋಗದ ಅನುಕೂಲತೆ ಬೇಕು. ಬ್ಯಾರಿಷ್ಟರರಿಗೆ ಶನಿ ಹರ್ಶಲ ಶುಭಯೋಗ ಬೇಕು. ಲೇಖಕರಿಗೆ ವಕ್ತಾ ಜನರಿಗೆ ಬುಧನ ಶುಭಯೋಗ ಬೇಕು. ಗಣಿತಜ್ಞರು, ರಸಾಯನ ಶಾಸ್ತ್ರಜ್ಞರಿಗೆ ವೈದ್ಯರು ಡಾಕ್ಟರರಿಗೆ ಮಂಗಳನ ಶುಭಯೋಗ ಬೇಕು.

ಹರ್ಶಲನ ಸ್ಥಾನಗತ ಫಲ

ಲಗ್ನದಲ್ಲಿ:— ಲಗ್ನಸ್ಥ ಪ್ರಜಾಪತಿಗೆ ಮಹತ್ವವಿದೆ. ಅವನು ಅಲ್ಲಿ ವಾಯು ರಾಶಿಯಲ್ಲಿದ್ದರೆ ಮನುಷ್ಯನ ಬುದ್ಧಿ ತೀವ್ರವಾಗಿರುವದು. ರವಿ ಚಂದ್ರ ಬುಧರಿಂದ ಶುಭದೃಷ್ಟನಾಗಿದ್ದರೆ ಅದ್ಭುತ ಕಲ್ಪನಾಶಕ್ತಿ ಕಂಡು ಬರುವದು. ಲಗ್ನಸ್ಥ ಪ್ರಜಾಪತಿ ಶನಿ ಮಂಗಳರ ಅಶುಭದೃಷ್ಟಿಯಲ್ಲಿ ಇರಬಾರದು. ಸಂಕಟಗಳು ಬಹಳ ಬರುವವು. ಮಸ್ತಕಕ್ಕೆ ತ್ರಾಸವಾಗುವದು. ಇವರು ಹಟ ತಮ್ಮದೇ ನಿಜವೆನ್ನುವ ದುರಾಗ್ರಹ ಲಹರೀ ಸ್ವಾತಂತ್ರ್ಯ ಪ್ರಿಯರಿರುವರು. ಪ್ರಜಾಪತಿ ಇಲ್ಲಿ ಶುಭ ಸ್ಥಿತಿಯಲ್ಲಿ ಇರುವದು ನೆಟ್ಟಗೆ. ಇಲ್ಲವಾದರೆ ಜನ್ಮವಿರುವವರೆಗೆ ಸಂಕಟ ಪರಂಪರೆಗಳನ್ನು ಅನುಭವಿಸಬೇಕಾಗುವದು. ಇಲ್ಲಿಯ ಶುಭದೃಷ್ಟ ಹರ್ಶಲನು ಬಲಿಷ್ಠ ಶರೀರ ಯಷ್ಟಿಯನ್ನು ಕೊಡುವನು. ಸ್ನಾಯುಗಳು ಬಲಿಷ್ಟವಾಗಿರುವವು. ಲಗ್ನದಲ್ಲಿ ಹರ್ಶಲನಿರುವವರ ಆಯುಷ್ಯವು ಕ್ರಾಂತಿ ಕಾರಕವಾಗಿರುವದು. ಇವನ ಅಶುಭ ಫಲವೆಂದರೆ ರೀತಿ ಸಂಪ್ರದಾಯಗಳು ಇಲ್ಲದಿರುವದು. ಕ್ಷಣಕ್ಷಣಗಳಲ್ಲಿ ಆಚಾರ-ವಿಚಾರಗಳನ್ನು ಬದಲಿಸುವದು. ಆತ್ಮಪ್ರೌಢಿ, ವಿಕ್ಷಿಪ್ತತೆ, ನಿರ್ಲಜ್ಜತೆ ಕಾಣಬರುವವು. ಅಸ್ಥಿರ ರಾಶಿಯಲ್ಲಿ ಹರ್ಶಲನಿದ್ದರೆ ಇಂಥವರ ಮೇಲೆ ಭರವಸೆಯನ್ನಿಡುವದು ಒಳ್ಳೆಯದಲ್ಲ. ವೃಶ್ಚಿಕಸ್ಥ ಹರ್ಶಲನಿದ್ದವರ ಸ್ನೇಹವನ್ನು ಮಾಡಲಾಗದು.

ಧನಭಾವದಲ್ಲಿ:— ದುಡ್ಡಿನ ಬಗ್ಗೆ ಕೊಡಕೊಳ್ಳುವಲ್ಲಿ, ಉತ್ಪನ್ನದಲ್ಲಿ ಅನೇಕ ಸ್ಥಿತ್ಯಂತರಗಳನ್ನುಂಟುಮಾಡುವನು. ಕುಟುಂಬದವರಿಂದ ಸುಖ ಸಿಗುವದನ್ನು ದುಸ್ತರ ಮಾಡುವನು. ಧನಾಧಿಪತಿಯಿಂದ ಪೀಡಿತನಿದ್ದರೆ ಇದರ ಸ್ಪಷ್ಟ ಅನುಭವವು ಬರುವದು. ದ್ವಿತೀಯಸ್ಥಾನದಲ್ಲಿ ಹರ್ಶಲನು ಅಗ್ನಿರಾಶಿಯಲ್ಲಿದ್ದು, ದ್ವಿತೀಯೇಶನಿಂದ ಪೀಡಿತನಿದ್ದರೆ ಉಷ್ಣತೆಯಿಂದ ಧಕ್ಕೆಯಿಂದ ಕಣ್ಣಿಗೆ ಅಪಾಯ ಸಂಭವಿಸುವ ಸಂಭವವಿರುವದು. ಜಲರಾಶಿಯಲ್ಲಿ ಕಣ್ಣಲ್ಲಿ ನೀರು ಬರುವದು, ಪ್ರಕಾಶವು ಸಹನವಾಗದಿರುವದು, ಮುಖದಲ್ಲಿ ಬುರುಗು ಬರುವದು, ಇತ್ಯಾದಿ ವಿಕಾರಗಳಾಗುವ ಸಂಭವವಿರುವದು. ಮಂಗಳನಿಂದ ಪೀಡಿತನಿದ್ದರೆ ಅಪರೇಶನ್ ಮಾಡುವ ಪ್ರಸಂಗವೂ ಬರಬಹುದು. ದ್ವಿತೀಯಸ್ಥ ಬಲವಾನ್ ರಾಶಿಯ ಪ್ರಜಾಪತಿ ಸಪ್ತಮೇಶನ ಶುಭ ಸಂಬಂಧದಲ್ಲಿದ್ದರೆ ವಿವಾಹವಾದ ಬಳಿಕ ಶ್ವಶುರ ಗ್ರಹದಿಂದ ಧನಪ್ರಾಪ್ತಿಯಾಗುವದು. ವಿವಾಹದ ನಂತರ ಉತ್ಕರ್ಷವೂ ಆಗುವದು. ಆದರೆ ಅದೇ ಪ್ರಜಾಪತಿ ಸಪ್ತಮ, ನವಮ, ದಶಮ ಇದರ ಅಶುಭ ಸಂಬಂಧದಲ್ಲಿದ್ದರೆ ಧನಸಂಚಯದಲ್ಲಿ ಅಪಯಶ. ತೆಗ್ಗಿನಲ್ಲಿ ಬೀಳುವ ಪರಿಸ್ಥಿತಿಯುಂಟಾಗುವದು. ದ್ವಿತೀಯಸ್ಥಾನಗತಿ ಮಂಗಳ ಪ್ರಜಾಪತಿ ಪ್ರತಿಯೋಗ ಕಣ್ಣಿಗೆ ಅಪಾಯಕರ. ಪ್ರಜಾಪತಿ ಮಿಥುನದಲ್ಲಿದ್ದು, ಬುಧನಿಂದ ಯುಕ್ತ ಶುಭದೃಷ್ಟನಾಗಿದ್ದರೆ ವಕ್ತೃತ್ವಕಲೆಯಲ್ಲಿ ಅಪ್ರತಿಮ ಯಶಸ್ಸನ್ನು ಕೊಡುವನು. ದ್ವಿತೀಯದಲ್ಲಿ ರವಿ ಪ್ರಜಾಪತಿ ಯುತಿ ಪಿತ್ರಾರ್ಜಿತ ಆಸ್ತಿಯಲ್ಲಿ ಗೊಂದಲವನ್ನು ಉಂಟುಮಾಡುವದು. ೨ರಲ್ಲಿಯ ಹರ್ಶಲನು ಧನಾಧಿಪತಿ ರವಿ ಚಂದ್ರ ಗುರು ಭಾಗ್ಯೇಶರ ಅಶುಭ ಸಂಬಂಧದಲ್ಲಿದ್ದರೆ ದುಡ್ಡಿನ ಕೊರತೆ ಸಾಲದ ಭಾರ ಉಧಳಪಟ್ಟಿ; ಇಂತಹ ತ್ರಾಸಗಳುಂಟಾಗುವವು. ಇಂತಹರು ದುಡ್ಡಿನ ವ್ಯವಹಾರದಲ್ಲಿ ಬಹಳ ಕಾಳಜಿ ತಕ್ಕೊಳ್ಳಬೇಕು.

ತೃತೀಯದಲ್ಲಿ:— ಅಗ್ನಿರಾಶಿಯಲ್ಲಿದ್ದು ಮಂಗಳನಿಂದ ಪೀಡಿತನಿದ್ದರೆ ಪ್ರವಾಸಗಳಿಂದ ಅಪಘಾತಗಳಾಗುವ ಸಂಭವವುಂಟು. ಚಂದ್ರನಿಂದ ಪೀಡಿತನಿದ್ದರೆ ಬುದ್ಧಿಯ ದುರುಪಯೋಗವಾಗುವದು. ಮಿದುಳಿಗೆ ತ್ರಾಸ

ವಾಗುವದು. ಮನಸ್ಸಿಗೆ ಶಾಂತಿ ಇರುವದಿಲ್ಲ. ಪ್ರಜಾಪತಿ ಬೌದ್ಧಿಕ ರಾಶಿಯಲ್ಲಿದ್ದು ಬುಧ ಗುರುವಿನಿಂದ ಶುಭದೃಷ್ಟನಿದ್ದರೆ ವಾಙ್ಮಯ ಸೇವೆ, ಗ್ರಂಥ ಲೇಖನ ವ್ಯವಸಾಯ ವಾಚನ ಇವುಗಳಲ್ಲಿ ಪ್ರಗತಿಯನ್ನುಂಟುಮಾಡುವನು. ತೃತೀಯಸ್ಥ ಚರರಾಶಿಯ ಪ್ರಜಾಪತಿಗೆ ಚಂದ್ರನ ಯೋಗ ಗಂಟುಬಿದ್ದರೆ ಒಂದೇ ಸ್ಥಾನದಲ್ಲಿ ದೀರ್ಘಕಾಲ ಇರುವದಿಲ್ಲ. ತೃತೀಯಸ್ಥ ಪೀಡಿತ ಪ್ರಜಾಪತಿ ಭ್ರಾತೃಕಲಹ, ಭ್ರಾತೃಭಗಿನೀ ಸುಖದಲ್ಲಿ ನ್ಯೂನತೆ, ನೆರೆಯವರಿಂದ ಹಾನಿ, ಮಿದುಳು, ಕರ್ಣಗಳಿಗೆ ತ್ರಾಸ, ಪ್ರವಾಸದಿಂದ ಹಾನಿ ಇತ್ಯಾದಿ ಫಲಗಳನ್ನುಂಟುಮಾಡುವನು. ಬುದ್ಧಿ ಕೇಂದ್ರದ ಕಡೆಗೆ ಈ ಸ್ಥಾನದ ಸಂಬಂಧವಿರುವದರಿಂದ ಇತರ ಗ್ರಹಗಳ ಯೋಗದಿಂದ ಬುದ್ಧಿಯ ಪರಿಪಾಕವುಂಟಾಗುವದು. ಶುಕ್ರನ ಶುಭ ಸಂಬಂಧವು ಕಾವ್ಯ ಸಾಹಿತ್ಯ, ಶಾಸ್ತ್ರಗಳಲ್ಲಿ ಪ್ರಾವೀಣ್ಯ ಕೊಡುವದು. ರಾಶಿಬಲವಿದ್ದರೆ ಅತ್ಯುತ್ತಮ.

ಚತುರ್ಥಸ್ಥ ಪ್ರಜಾಪತಿ:— ಒಳ್ಳೆಯವನಲ್ಲ. ಜಲಾಗ್ನಿರಾಶಿಗಳಲ್ಲಿ ೪ರಲ್ಲಿ ಹರ್ಶಲನು ತಾಯಿಗೆ ಕಷ್ಟಪ್ರದನಾಗುವನು. ಜಾತನಿಗೆ ಚಿಂತೆ ಹೃದ್ರೋಗಗಳುಂಟಾಗಬಹುದು. ತಂದೆ–ತಾಯಿಗಳೊಡನೆ ಮತೈಕ್ಯವಾಗುವದಿಲ್ಲ. ಚತುರ್ಥದಲ್ಲಿ ಕುಂಭಸ್ಥ ಪ್ರಜಾಪತಿ ಇದ್ದರೆ ತಾಯಿ ಬುದ್ಧಿವಮತಿಯಾಗಿರುವಳು. ಇದೇ ಫಲವನ್ನು ಮಿಥುನ ತುಲೆಗಳ ಪ್ರಜಾಪತಿಯು ಕೊಡುವನು. ಅಗ್ನಿರಾಶಿಯಲ್ಲಿ ಪ್ರಜಾಪತಿ ಮಂಗಳನಿಂದ ಅಶುಭದೃಷ್ಟನಾಗಿದ್ದರೆ ಅಥವಾ ಚಂದ್ರನೊಡನೆ ಅವನ ಅಶುಭಯೋಗವಿದ್ದರೆ ತಾಯಿಯ ಪ್ರಕೃತಿ ಚೆನ್ನಾಗಿರುವದಿಲ್ಲ. ಪ್ರದರ ಹಿಸ್ಟೀರಿಯಾ ಫಿಟ್ಸರೋಗಗಳುಂಟಾಗುವ ಸಂಭವವುಂಟು. ಚತುರ್ಥದಲ್ಲಿ ಜಲಪೃಥ್ವೀರಾಶಿಯಲ್ಲಿ ಹರ್ಶಲನು ಚಂದ್ರ ಶುಕ್ರನಿಂದ ಶುಭದೃಷ್ಟನಾಗಿದ್ದರೆ ಜಮೀನದಾರರಿಗೆ, ಒಕ್ಕಲಿಗರಿಗೆ ಲಾಭದಾಯಕ. ತೋಟಿಗರಾಗಿ ತಮ್ಮ ಹೊಲದಲ್ಲಿ ನೀರಾವರಿ ಯೋಜನೆಯನ್ನು ಮಾಡಿಕೊಳ್ಳಬಹುದು. ಪ್ರಜಾಪತಿ ಮಂಗಳನ ಶುಭದೃಷ್ಟಿಯಲ್ಲಿದ್ದರೆ ಖನಿಜ ಕಾರ್ಯಕರ್ತರಿಗೆ ಕಾರಖಾನೆಯವರಿಗೆ ಲಾಭದಾಯಕ. ಪೀಡಿತನಿದ್ದರೆ ಇಳಿಕೆಯ ವಯಸ್ಸಿನಲ್ಲಿ ತ್ರಾಸವಾಗುವದು.

ಪಂಚಮದಲ್ಲಿ:— ಬೌದ್ಧಿಕ ರಾಶಿಯಲ್ಲಿಯ ಪ್ರಜಾಪತಿ, ಬುದ್ಧಿ

ವಿದ್ಯಾ, ಸಂಪಾದನೆಗೆ ಅನುಕೂಲವಾಗಿರುವನು. ಸಂತತಿಯಲ್ಲಿಯೂ ಬುದ್ಧಿ ಮತ್ತೆ ತೋರುವದು. ಗೂಢ ಶಾಸ್ತ್ರ, ಮಂತ್ರ-ತಂತ್ರ ವಿದ್ಯೆ ಅವರಿಗೆ ಅವಗತವಾಗುವದು. ಆದರೆ ಮಂಗಳ ಶನಿ ರಾಹುವಿನಿಂದ ಪೀಡಿತನಿದ್ದರೆ ವಿದ್ಯೆ ವ್ಯೆಮೇಲೆ ಬರುವದು. ಪೈಶಾಚಿಕ ಸಿದ್ಧವಿದ್ಯೆ ಪೂರ್ಣ ಸಾಧ್ಯವಾಗಲಿಕ್ಕೆ ಶನಿ ರಾಹು ಶುಕ್ರರ ಸಹಾಯಬೇಕು. ಪಂಚಮಸ್ಥ ಈ ಪಾಪಗ್ರಹಗಳಿಂದ ಪೀಡಿತನಿದ್ದರೆ ವಿದ್ಯೆಯ ದುರುಪಯೋಗ. ನಿಂದ್ಯ ಕರ್ಮದಲ್ಲಿ ಪ್ರವೃತ್ತಿಯುಂಟಾಗುವದು. ಅದರಂತೆ ಸಂತತಿ ಸುಖದಲ್ಲಿ ವಿಚಿತ್ರ ಅನುಭವ ಬರುವದು. ಇಂಥವರು ಸಟ್ಟಾ ಲಾಟರೀ ವ್ಯವಹಾರದಲ್ಲಿ ಬೀಳಬಾರದು. ಮನೋರಂಜಕ ಕಲೆ ನಾಟ್ಯ ಪ್ರಾವೀಣ್ಯ, ವ್ಯವಭಿಚಾರವೃತ್ತಿ ಇವುಗಳಿಂದ ಪೀಡಿತ ಹರ್ಶಲನಿಂದ ಹಾನಿಯಾಗುವದು. ಪಂಚಮದಲ್ಲಿ ಅನುರಾಧಾ, ರೋಹಿಣೀ ಚಿತ್ರಾದಲ್ಲಿ ಹರ್ಶಲನಿದ್ದರೆ ವ್ಯಭಿಚಾರ ಪ್ರವೃತ್ತಿಯನ್ನುಂಟುಮಾಡುವದು. ಶಕ್ಯವಾಗಿರುವದೋ ಹೇಗೆ ಇಂತಹ ಸಂಗತಿಗಳನ್ನು ಅನುಭವದಿಂದ ನಿರ್ಣಯಿಸಬೇಕು. ಕೇವಲ ಪಂಚಮಸ್ಥ ಹರ್ಶಲನಿಂದ ಇಂತಹ ಸಂಗತಿಗಳನ್ನು ನಿರ್ಣಯಿಸಬಾರದು. ಮಂಗಳ ಶುಕ್ರ ಶನಿಗಳ ಸಂಬಂಧ ಇಂತಹ ದುರ್ಗುಣಗಳಿಗೆ ಬೇಕಾಗುವದು. ಇಲ್ಲಿ ಮಂಗಳನ ರಾಶಿಯಲ್ಲಿ ಹರ್ಶಲನಿದ್ದರೆ ಸಂತತಿ ಸುಖಕ್ಕೆ ವಿಘಾತಕವಾಗುವನು.

ಷಷ್ಠದಲ್ಲಿ:— ೬ ರಲ್ಲಿ ಒಬ್ಬನೇ ಹರ್ಶಲ ರೋಗಗಳ ಬಗ್ಗೆ ವಿಚಿತ್ರ ಅನುಭವವನ್ನು ಕೊಡಲಾರನು. ಷಷ್ಠೇಶ, ೬ ರಲ್ಲಿ ಇರುವ ಪ್ರಜಾಪತಿಯ ರಾಶಿಯನ್ನು ವಿಚಾರಿಸಬೇಕು. ಇಲ್ಲಿಯ ಪ್ರಜಾಪತಿ ರವಿ ಚಂದ್ರ ಶನಿಯಿಂದ ಪೀಡಿತನಿದ್ದರೆ ಒಂದು ಕಾಯಂ ರೋಗವು ಬೆನ್ನಟ್ಟುವದು. ಅಥವಾ ಪ್ರಕೃತಿ ಸ್ವಾಸ್ಥ್ಯ ಸಿಗಲಾರದು. ಇಲ್ಲಿಯ ಪ್ರಜಾಪತಿ ಜಠರ ಪಚನೇಂದ್ರಿಯ ಮೇಲೆ ಅಧಿಕಾರ ನಡೆಯಿಸುವನು. ಅವನು ಜಲರಾಶಿಯಲ್ಲಿ ಚಂದ್ರನಿಂದ ಪೀಡಿತನಿದ್ದರೆ ಊಟ-ಉಡಿಗೆಗಳಲ್ಲಿ ಹೆಚ್ಚು ಕಾಳಜಿ ತಕ್ಕೊಳ್ಳಬೇಕು. ಅಪಚನ ವಿಕಾರದಿಂದ ತ್ರಾಸವಾಗುವ ಸಂಭವವುಂಟು. ಮೇದ ಉದರರೋಗ ಅತಿಸಾರ ಹೊರಕಡೆಗೆ ಇಂತಹ ಬೇನೆಗಳು ಕಂಡು ಬರುವವು. ಇಂಥವರು ಹಗುರ ಆಹಾರವನ್ನು ಸೇವಿಸಬೇಕು. ೬ ರಲ್ಲಿ ಅಗ್ನಿರಾಶಿಯಲ್ಲಿ ಮಂಗಳ

ನಿಂದ ಪೀಡಿತ ಪ್ರಜಾಪತಿ ಅಪಘಾತ ಸಂಭವವೂ ಉಂಟು. ಶತ್ರುಗಳ ಬಗ್ಗೆ ೬ ರಲ್ಲಿ ಹರ್ಶಲನು ವಿಚಿತ್ರ ಅನುಭವಗಳನ್ನು ಕೊಡುವನು. ಆದರೆ ಶತ್ರುವಿನ ಹಾನಿಯನ್ನೇ ಮಾಡುವ ಕಡೆಗೆ ಅವನ ಪ್ರಕೃತಿ ಇರುವದು. ೬ ರಲ್ಲಿ ಪ್ರಜಾಪತಿ ಗುಪ್ತ ಶತ್ರುಗಳನ್ನು ಉಂಟುಮಾಡುವನು. ಕೆಲವು ಸಾರೆ ತಿಳಿಯದೆ ಹಾನಿ ಮಾಡಲು ಪ್ರಯತ್ನಿಸುವರು. ಇಂಥವರು ದಕ್ಷತೆಯಿಂದ ದೂರದರ್ಶಿಗಳಾರಿರಬೇಕು. ಇದು ದಶಮದ △ ವಿರುವದರಿಂದ ಇಲ್ಲಿಯ ಗ್ರಹಗಳು ನೌಕರಿಯಲ್ಲಿ ಧಂದೆಯಲ್ಲಿ ಸ್ಪಷ್ಟ ಪರಿಣಾಮವನ್ನು ಬೀರುವವು. ಶುಭದೃಷ್ಟನಿದ್ದರೆ ಒಳ್ಳೆಯದು. ಡಾಕ್ಟರರಿಗೂ ಸರ್ಜರೀ ಜನರಿಗೂ ಇಲ್ಲಿಯ ಮಂಗಳನು ಬಹಳೇ ಬಲವನ್ನು ಕೊಡುವನು. ಇದರಂತೆ ೬ ರ ಹರ್ಶಲನ ವಿಚಾರವನ್ನೂ ಮಾಡಬೇಕು. ದಶಮದಲ್ಲಿ ಮೇಷದ ಉಚ್ಚ ರವಿ ಇದ್ದು, ೬ ರಲ್ಲಿ ಜಹಾಲ ರಾಶಿಯಲ್ಲಿಯ ಪ್ರಜಾಪತಿ ರವಿಯೊಡನೆ △ ಮಾಡುತ್ತಿದ್ದರೆ ದಶಮಸ್ಥಾನದ ಫಲಕ್ಕೆ ಪೋಷಕವೂ ಪ್ರೋತ್ಸಾಹಕರವೂ ಆಗುವದು. ೬ ರಲ್ಲಿ ಹರ್ಶಲನು ಬುಧನಿಂದ ಪೀಡಿತನಿದ್ದರೆ ಮಜ್ಜಾ-ತಂತು ವಿಕಾರವಾಗುವ ಸಂಭವವುಂಟು. ೬ ರಲ್ಲಿ ಬಲವಾನ್ ಹರ್ಶಲನಿದ್ದರೆ ಶತ್ರುಗಳಿಗೆ ಸದೈವ ಹಾನಿಯನ್ನುಂಟುಮಾಡುವನು.

ಸಪ್ತಮದಲ್ಲಿ:— ಸಪ್ತಮದಲ್ಲಿ ಹರ್ಶಲನು ಒಳ್ಳೆಯವನಲ್ಲ. ಅನೇಕ ದುಷ್ಪರಿಣಾಮಗಳನ್ನು ಮಾಡಬಹುದು. ತ್ರಾಸ ಕೊಡುವನು. ಕೋರ್ಟು ಕಚೇರಿ ಕೆಲಸಗಳಲ್ಲಿ ತ್ರಾಸ ಕೊಡುವನು. ಪ್ರತಿಸ್ಪರ್ಧಿಗಳಿಂದ ತೊಂದರೆಗಳು; ವೈವಾಹಿಕ ಜೀವನದಲ್ಲಿ ತ್ರಾಸ. ಸ್ತ್ರೀಯರ ಕುಂಡಲಿಯಲ್ಲಿ ರವಿ ಪುರುಷರ ಕುಂಡಲಿಯಲ್ಲಿ ಶುಕ್ರ ಚಂದ್ರ ಸಪ್ತಮೇಶರಿಂದ ಪೀಡಿತನಿದ್ದರೆ ಅಶುಭ ಸಂಬಂಧಿತನಿದ್ದರೆ ವೈವಾಹಿಕ ಜೀವನದಲ್ಲಿ ಕಟು ಅನುಭವಗಳು ಬರುವವು. ಅಗ್ನಿರಾಶಿಯಲ್ಲಿದ್ದರೆ ವಿಶೇಷ, ಆಕಸ್ಮಿಕ ರೀತಿಯಿಂದ ವಿವಾಹವಾಗುವದು. ಒಮ್ಮೆಲೆ ಒಡಕುಂಟಾಗುವದು. ಪತ್ನಿಗೆ ರೋಗವಾಗುವದು. ಹೆಂಡತಿ ಜಗಳಾಡಿ ಸ್ವತಂತ್ರವಾಗಿರುವದು. ವಿಚಿತ್ರ ಸ್ವಭಾವ ಇಂತಹ ಅನುಭವಗಳು ಬರುವವು. ದಾವೆಯ ವಿಷಯದಲ್ಲಿ ಬಲಿಷ್ಠ ಪ್ರತಿಸ್ಪರ್ಧಿ ಗಂಟುಬಿದ್ದು ಹಾನಿ ಮಾಡುವನು. ಸಪ್ತಮಸ್ಥ ಪ್ರಜಾಪತಿಯು

ದೃಷ್ಟಿ ಲಗ್ನದ ಮೇಲೆ ಇರುವದರಿಂದ ಜಾತನ ಮೇಲೆ ಅವನ ಸ್ವಭಾವದ ಮೇಲೂ ಪರಿಣಾಮವಾಗುವದು. ಸಪ್ತಮಸ್ಥ ಅಗ್ನಿರಾಶಿಯಲ್ಲಿದ್ದ ಮಂಗಳನಿಂದ ಪೀಡಿತ ಪ್ರಜಾಪತಿ ಪತ್ನಿಯ ಪ್ರಕೃತಿ ಉಷ್ಣತೆಯಿಂದ ಕೆಡುವದು. ಇಂತಹ ದೋಷಗಳು ಇರುವಲ್ಲಿ ಕುಜದೋಷವೆಂದು ಹೇಳಬಹುದು. ಚಂದ್ರನ ಅಷ್ಟಮೇಶನ ಅಶುಭ ಸಂಬಂಧವಿದ್ದರೆ ಆಕೆಗೆ ಉಷ್ಣತೆಯಿಂದ ರಕ್ತಸ್ರಾವ ವಿಕಾರವೂ ಆಗುವದು. ಪುರುಷರಿಗೆ ಮೂತ್ರಾಶಯದ ರೋಗವಾಗುವದು. ಇದೇ ಪ್ರಜಾಪತಿ ಶನಿ ರಾಹುಗಳ ಅಶುಭ ಸಂಬಂಧವಿದ್ದಲ್ಲಿ ಅನುರಾಧಾದಂತಹ ನಕ್ಷತ್ರದಲ್ಲಿ ಇರುವಲ್ಲಿ, ಸಪ್ತಮೇಶನ ಅಶುಭ ದೃಷ್ಟಿ ಇದ್ದರೆ ಗುರುವಿನ ಶುಭದೃಷ್ಟಿ ಇಲ್ಲದಿದ್ದರೆ ವರ್ತನ ಗರ್ಹ್ಯಮಾರ್ಗದ ಕಡೆಗೆ ಇರುವದು. ಸ್ವಯಂ ಗರ್ಹ್ಯಮಾರ್ಗಾನುಗಾಮಿ ಆಗುವನು. ಸಪ್ತಮದಲ್ಲಿ ಚರರಾಶಿಯಲ್ಲಿ ಪ್ರಜಾಪತಿ ಇದ್ದರೆ ಸಂಚಾರದ ಶೀಲವಿರುವದು. (ಚರನ್ ವೈ ಮಧುವಿಂದತಿ) ಇಲ್ಲಿ ಶನಿ ಶುಭ ಸಂಬಂಧದಲ್ಲಿದ್ದರೆ ಕೋರ್ಟಿನಲ್ಲಿ ಅಪ್ರತಿಮ ಯಶಸ್ಸು ಸಿಕ್ಕುವದು. ಸಮಯ ಸೂಚಕತೆ ಗುಣವೂ ಕಂಡು ಬರುವದು. ಶನಿ ಹಿಂದೆ, ಶುಕ್ರ ಮುಂದೆ ಇರುವಾಗ ಪ್ರಜಾಪತಿ ವ್ಯಭಿಚಾರ ಪ್ರವೃತ್ತಿ ಕಂಡು ಬರುವದು.

ಅಷ್ಟಮದಲ್ಲಿ:— ೮ ರಲ್ಲಿ ಅಶುಭ ದೃಷ್ಟ ಪ್ರಜಾಪತಿ ಇದ್ದರೆ ಮರಣ ಸ್ಥಿತಿ ಅನಿಯಮಿತ ಚಮತ್ಕಾರಿಕವಾಗುವದು. ಯಾವ ಗ್ರಹನಿಂದ ಅಶುಭ ದೃಷ್ಟನಿರುವನೋ ಆ ಗ್ರಹದ್ಯೋತಕಫಲಗಳು ಮೃತ್ಯು ಅವಸ್ಥೆಯಲ್ಲಿ ಕಂಡು ಬರುವವು. ವೃಶ್ಚಿಕದಲ್ಲಿ, ಅಷ್ಟಮದಲ್ಲಿ ಪೀಡಿತ ಪ್ರಜಾಪತಿ ಇದ್ದರೆ ಶೋಚನೀಯ ಪ್ರಕಾರದಿಂದ ಮೃತ್ಯು ಸಂಭವಿಸುವದು. (ಅಶುಭ ಮರಣಂ) ಇಲ್ಲಿ ಮಂಗಳನಿಂದ ಪೀಡಿತ ಪ್ರಜಾಪತಿ ಇದ್ದರೆ ಆತ್ಮಘಾತದಿಂದ ಅಪಘಾತದಿಂದ ಮೃತ್ಯು ಸಂಭವ. ಗುರುವಿನ ದೃಷ್ಟಿ ಇರುವಲ್ಲಿ ತಪ್ಪುವದು. ಪರಂತು ಅಷ್ಟಮದಲ್ಲಿ ಬಲವಾನ್ ಗ್ರಹವು ವಾರಸಾಯಿ, ಗುಪ್ತ ಧನವನ್ನು ಕೊಡುವದು. ಪ್ರಜಾಪತಿ ಅಷ್ಟಮೇಶ, ಗುರು, ಶುಕ್ರನಿಂದ ಶುಭ ಸಂಬಂಧಿತನಿದ್ದರೆ ಭೂಮಿಗತ ದ್ರವ್ಯದ ಲಾಭವೂ ಆಗುವದು. ಇದರಂತೆ ಅಷ್ಟಮದ △ ರಾಶಿಯಲ್ಲಿ ಬಲವಾನ್ ಹರ್ಶಲನಿದ್ದರೆ ಇಂತಹ ಸಂಗತಿಗಳಿಂದ ಲಾಭವಾಗುವದು. ಅಷ್ಟಮಸ್ಥ ಹರ್ಶಲನು ಪೀಡಿತನಿದ್ದರೆ ಅಶುಭ ಮರಣವನ್ನು ಸೂಚಿಸುವನು.

ನವಮದಲ್ಲಿ:— ಬೌದ್ಧಿಕ ರಾಶಿಯಲ್ಲಿ ಹರ್ಶಲನಿರುವದು ಬಹಳ ಮಹತ್ವದ್ದು. ಮನುಷ್ಯನ ಶೀಲ ಆತ್ಮಿಕ ಸಂಸ್ಕೃತಿಯನ್ನು ಈ ಭಾವವು ತಿಳಿಸುವದು. ಇಲ್ಲಿಯ ಹರ್ಶಲ ಗೂಢ ವಿದ್ಯೆಯಲ್ಲಿ, ಶಾಸ್ತ್ರದಲ್ಲಿ ಪ್ರಯತ್ನಿಸಲಿಕ್ಕೆ ಹಚ್ಚುವನು. ಅಶುಭ ಸಂಬಂಧಿತ ಪ್ರಜಾಪತಿ ತಾಮಸೀ ವೃತ್ತಿಯನ್ನುಂಟುಮಾಡುವನು. ಬುದ್ಧಿಯ ಉಪಯೋಗ ನಿಂದ್ಯ ಕರ್ಮದಲ್ಲಿ ಆಗುವದು. ಲಹರೀಪಣಾ, ವಿವಾಹ ನಂತರದ ಆಪ್ತ ವರ್ಗದವರಿಂದ ತ್ರಾಸ. ದೇವತಾಕ್ಷೋಭ; ಧರ್ಮಭ್ರಷ್ಟತೆ, ನಾಸ್ತಿಕ್ಯ, ಜಾರಣ-ಮಾರಣ ಕ್ರಿಯೆಗಳಿಂದ ಆಪತ್ತಿ; ಇಂತಹ ಅಶುಭ ಫಲಗಳುಂಟಾಗುವವು. ಬಲವಾನ್ ಪ್ರಜಾಪತಿ, ಬಲವಾನ್ ಶುಭ ಗ್ರಹಗಳ ಸಂಬಂಧದಲ್ಲಿದ್ದರೆ ಸಿದ್ಧ ಸಾಧನ ಯೋಗ ಆಧ್ಯಾತ್ಮಿಕ ಉನ್ನತಿ ಇವುಗಳ ಕಡೆಗೆ ಪ್ರವೃತ್ತಿ ಇರುವದು. ಇತರ ಗ್ರಹದ ಸಂಬಂಧವಿದ್ದಂತೆ, ದಿಕ್ಕು ತೋರುವದು. ಸಿಂಹದಂತಹ ಸಾಮರ್ಥ್ಯಶಾಲಿ ರಾಶಿಯಲ್ಲಿ ಹರ್ಶಲನಿದ್ದು, ರವಿಯ ಶುಭಯೋಗದಲ್ಲಿದ್ದರೆ ಆತ್ಮೋನ್ನತಿ ಬಹು ಬೇಗನೆ ಆಗುವದು. ಹಟಯೋಗ ಕರ್ಮಯೋಗಗಳಿಗೆ ಬಲವನ್ನು ಕೊಡುವನು. ಕರ್ಕ ಮೀನಗಳ ನವಮಸ್ಥ ಹರ್ಶಲ ಚಂದ್ರನಿಂದ ಪೀಡಿತನಿದ್ದರೆ ಮನಸ್ಸಿಗೆ ಭೀತಿ, ಭಯಂಕರ ಸ್ವಪ್ನಗಳು ಬೀಳುವವು. ಇಂಥವರು ಸ್ವಪ್ನದಲ್ಲಿ ಅಳುವದು, ಬಡಬಡಿಸುವದನ್ನು ಮಾಡುತ್ತಾರೆ.

ದಶಮದಲ್ಲಿ:— ದಶಮಸ್ಥ ಹರ್ಶಲನು ಅನೇಕ ಕ್ರಾಂತಿಗಳನ್ನು ಮಾಡಿಸುವನು. ಇವರು ಸ್ವಸ್ಥ ಕೂಡುವದಿಲ್ಲ. ದಶಮಸ್ಥ ಕುಂಭ ರಾಶಿಯಲ್ಲಿ ಹರ್ಶಲನು ಶುಭ ಸಂಬಂಧಿತನಾಗಿದ್ದರೆ ರಾಜಕಾರಣ, ರಾಜಸನ್ಮಾನ, ರಾಜಸೇವೆ ಅಧಿಕಾರಗಳು ಪ್ರಾಪ್ತವಾಗುವವು. ಇಲ್ಲಿ ಸಿಂಹದ ಪ್ರಜಾಪತಿ ಪ್ರಯತ್ನ ಶೀಲನಿರುವನು. ಅವನು ರವಿಯಿಂದ ಶುಭ ದೃಷ್ಟನಾಗಿದ್ದರೆ ಉತ್ತಮ ಯಶಸ್ಸು ದೊರಕುವದು. ರಾಜ್ಯಶಕಟವನ್ನು ತೂಗಿಸುವವರ ಕುಂಡಲಿಯಲ್ಲಿ ಈ ಯೋಗವಿರುವದು. ಉತ್ತಮ ದೃಶ್ಯ ಜಗತ್ತಿನಲ್ಲಿ

ವ್ಯವಹಾರ ಮಾಡುವವರಿಗೆ ದಶಮಸ್ಥ ಹರ್ಶಲನ ಮಹತ್ವ ವಿಪುಲವಾಗಿರುವದು. ೨೮ ರಿಂದ ೩೬ ವಯಸ್ಸಿನ ಕಾಲ ಮಹತ್ವದ್ದು. ಹರ್ಶಲನು ಇಲ್ಲಿ ಚಂದ್ರನಿಂದ ಪೀಡಿತನಿರಬಾರದು. ಇದ್ದಲ್ಲಿ ಸುಖ ವಿಘಾತಕ. ದಶಮಸ್ಥ ಹರ್ಶಲನು ಚಂದ್ರ ರವಿಯಿಂದ ಪೀಡಿತನಿದ್ದರೆ ಪಿತೃಸುಖ ನ್ಯೂನತೆಯನ್ನುಂಟುಮಾಡುವನು. ಚಮತ್ಕಾರಿಕ ಅನುಭವವನ್ನು ಕೊಡುವನು. ರವಿ ಮಂಗಳರಿಂದ ಪೀಡಿತನಿದ್ದರೆ ತಂದೆಗೆ ಅಪಘಾತದ ಸಂಭವ. ಶನಿಯಿಂದ ಪೀಡಿತನಿದ್ದರೆ ತಂದೆಗೆ ಸಂಕಟಗಳು ತನ್ನ ಮೇಲೆ ರಾಜಕೀಯ ಆಪತ್ತುಗಳು ಬರುವ ಸಂಭವ. ಇಲ್ಲಿ ಅಗ್ನಿರಾಶಿಯಲ್ಲಿ ಶುಭದೃಷ್ಟ ಹರ್ಶಲನು ಚೆನ್ನಾಗಿ ಆಳಿಕೆಯ ಸಾಮರ್ಥ್ಯವನ್ನು ಕೊಡುವನು. ಇವರಲ್ಲಿ ಕಾರ್ಯದಕ್ಷತೆ ಇರುವದು. ಅವರ ಆಳಿಕೆಗೆ ಒಳಗಾಗಿ ನಡೆದವರಿಗೆ ಅವರು ಕಲ್ಯಾಣಕಾರಿ ಆಗುವರು.* ದ್ವಿಸ್ವಭಾವಿ ರಾಶಿಯಲ್ಲಿ ಹರ್ಶಲನು ಒಂದಲ್ಲ ನಾಲ್ಕು ಧಂದೆಗಳನ್ನು ಮಾಡಲು ಹಚ್ಚುವನು. ಎಲ್ಲವೂ ಚಿಂದಿಗಳ ಕೌದಿ. ೧೮ ಧಾನ್ಯಗಳ ಕೋಡಬಳಿ. ದಶಮಸ್ಥ ಹರ್ಶಲನು ಶುಭದೃಷ್ಟನಿದ್ದರೆ ಮಹತ್ವವನ್ನು ಮುಟ್ಟಿಸುವದು. ಪೀಡಿತನಿದ್ದರೆ ಗರ್ತದಲ್ಲಿ ಕೆಡವಲು ಹಿಂದೆ ಮುಂದೆ ನೋಡುವದಿಲ್ಲ. ದಶಮದಲ್ಲಿ ಗೋಚರೀ ಹರ್ಶಲನು ಸಂಚರಿಸುವಾಗ ಇಂತಹ ಶುಭಾಶುಭ ಸಂಗತಿಗಳು ಬೇಗ ಅನುಭವಕ್ಕೆ ಬರುವವು.

ಏಕಾದಶದಲ್ಲಿ:— ೧೧ ರಲ್ಲಿ ಹರ್ಶಲನು, ಸ್ವಕಷ್ಟಾರ್ಜಿತ ಪ್ರಾಪ್ತಿಯನ್ನುಂಟುಮಾಡುವನು. ಪಂಚಮದ ಮೇಲೂ ಇಲ್ಲಿಯ ಹರ್ಶಲನ ಪರಿಣಾಮವಾಗುವ ಸಂಭವವುಂಟು. ೩, ೫, ೭, ೧೧ ರ ಸ್ಥಾನಾಧಿಪತಿಯಿಂದ ಅವನು ಅಶುಭ ಸಂಬಂಧಿತನಿರಬಾರದು. ಯಾವ ಭಾವೇಶನಿಂದ ಅವನ ಶುಭ ಸಂಬಂಧವಾಗುವದೋ ಅವನ ಗುಣಧರ್ಮಾನುಸಾರ ಲಾಭಗಳಾಗುವವು. ಇಲ್ಲಿಯ ಪೀಡಿತ ಹರ್ಶಲನು ಸಂತತಿ ಸುಖದಲ್ಲಿ ನ್ಯೂನತೆಯನ್ನುಂಟು ಮಾಡುವನು.

ದ್ವಾದಶದಲ್ಲಿ:— ೧೨ ರಲ್ಲಿ ಅಶುಭದೃಷ್ಟ ಹರ್ಶಲನು ಹಾನಿಕಾರಕ. ಮಂಗಳ ಶನಿಗಳಿಂದ ಅಲ್ಲಿ ಅವನು ಪೀಡಿತನಿರಬಾರದು. ಚೌದ್ಧಿಕ ರಾಶಿಯಲ್ಲಿ ಇಲ್ಲಿ ಹರ್ಶಲನು, ಗುರು ಬುಧರಿಂದ ಶುಭದೃಷ್ಟನಾಗಿದ್ದರೆ ಗೂಢ

ವಿದ್ಯೆಯಲ್ಲಿ ಪ್ರಗತಿಕಾರಕನಾಗುವನು. ಪೀಡಿತ ಹರ್ಶಲನಿಂದ ಅತಿಶಯ
ಖರ್ಚು ರಾಜದಂಡ ಭಯ; ಮುಂತಾವುಗಳು ಉಂಟಾಗಬಹುದು. ಜ
ರಾಶಿಯಲ್ಲಿ ಹರ್ಶಲನು ಪೀಡಿತನಿದ್ದರೆ ಜಲಪ್ರವಾಸದಿಂದ ತೊಂದರೆಗಳ
ಸಂಭವಿಸುವವು.

ಹರ್ಶಲ ನೇಪಚ್ಯುನ ಶುಭಯೋಗ:— ಗುಪ್ತವಿದ್ಯೆ, ಗೂ
ಶಾಸ್ತ್ರಗಳ ಕಡೆಗೆ ಪ್ರವೃತ್ತಿಯನ್ನುಂಟುಮಾಡುವನು. ಇದರಲ್ಲಿ ಅಗ್ರೇಸರ
ವನ್ನು ಪಡೆಯುವನು. ದಶಮಸ್ಥ ಹರ್ಶಲನೊಡನೆ ವರುಣನ ಶುಭಯೋ
ವಾದಲ್ಲಿ ರಾಜಕೀಯ ಮುಂದಾಳು ಆಗುವನು. ಸಾರ್ವಜನಿಕ ಮಾ
ಸನ್ಮಾನಗಳು ಸಿಗುವವು. ಇಂಥವರ ಇಚ್ಛಾಶಕ್ತಿ ಪ್ರಬಲವಾಗಿರುವದ
ಯಾವದೊಂದು ಕಾರ್ಯದ ವ್ಯವಸ್ಥಿತ ಮಂಡಲವನ್ನು ಮಾಡಿ ವಿಧಾಯ
ರೀತಿಯಿಂದ ಹೇಗೆ ಪರಿಪೂರ್ಣಗೊಳಿಸಬೇಕು ಎಂಬುವ ಜ್ಞಾನವು ಇವ
ಗಿರುವದರಿಂದ ಇವರು ತಮ್ಮ ಆಶೆ-ಆಕಾಂಕ್ಷೆಗಳಿಗೆ ಮೂರ್ತ ಸ್ವರೂ
ವನ್ನು ಕೊಡುತ್ತಾರೆ. ಶರೀರದಲ್ಲಿ ರೋಗವನ್ನು ನೆಟ್ಟಗೆ ಮಾಡಿಕೊಳ್ಳು
ಗುಣವಿರುವದು. ಸಾಕ್ಷಾತ್ಕಾರ ದೈವೀ ಸಾಮರ್ಥ್ಯ ಪಡೆಯುವವರ ಕುಂಡ
ಯಲ್ಲಿ ಈ ಯೋಗವು ಪ್ರಬಲವಾಗಿರುವದು. ದೈವೀ ಚಮತ್ಕಾರ ಭವಿಷ
ಸೂಚಕ ಸ್ವಪ್ನಗಳಿಗೆ ಈ ಯೋಗವು ಸಹಾಯಕವಾಗಿರುವದು. ಭೌತಿ
ಶಾಸ್ತ್ರದಲ್ಲಿ ಪ್ರಗತಿ ಸಾಧಿಸುವವರಿಗೂ ಈ ಯೋಗವು ಅನುಕೂಲವಾಗಿರ
ವದು. ಹೊಸ ಪ್ರದೇಶವನ್ನು ಶೋಧಿಸುವ ಅಭಿರುಚಿಯಿದ್ದವರಿಗೆ ಇದ
ಬೇಕು. ಸೃಷ್ಟಿಯ ಅಂತರಂಗದಲ್ಲಿರುವ ಗುಪ್ತ ಸಾಮರ್ಥ್ಯದ ಅನುಭ
ವನ್ನು ಇವರು ಪಡೆಯಬಲ್ಲರು.

ಹರ್ಶಲ ನೇಪಚ್ಯುನ ಯುತಿ; ಸಮಕ್ರಾಂತಿ:— ರಾಶಿ ಬಲವ
ಯೋಗ ಬಲವೂ ಇರುವಲ್ಲಿ ಶುಭಫಲವನ್ನು ಮೇಲಿನಂತೆ ಕೊಡಬಹುದ
ಇಲ್ಲವಾದರೆ ಇಲ್ಲ. ತಾರತಮ್ಯದಿಂದ ಭಾವ, ಯೋಗ, ರಾಶಿಗಳನ್ನು ನೋ
ಊಹಿಸಬೇಕು.

ಪಣಫರದಲ್ಲಿ ಈ ಯೋಗವು ಶುಭ ಸಂಬಂಧವಿಲ್ಲದಿದ್ದರೆ ಅಶುಭ ಫ
ವನ್ನೇ ಕೊಡುವದು. ಒಟ್ಟಿನಲ್ಲಿ ವಿಚಿತ್ರ ಫಲ ದರ್ಶಕವಾಗಿದೆ.

ಹರ್ಶಲ ನೇಪಚ್ಯೂನ ಅಶುಭಯೋಗ:— ಉದ್ಯೋಗ ವ್ಯವಸಾಯಗಳಲ್ಲಿ ಇಲ್ಲದ ಗೊಂದಲಗಳುಂಟಾಗುವವು. ವಿಶ್ವಾಸಘಾತ ಅಪಮಾನ ಸಾಮಾಜಿಕ ಶ್ರೇಣಿಯಲ್ಲಿ ನ್ಯೂನತೆಗಳುಂಟಾಗುವವು. ಪ್ರವಾಸಾಭಿರುಚಿ ಇರುವದು. ಆದರೆ ಅದರಿಂದ ಸಂಕಟಗಳೂ ವಿಪತ್ತುಗಳೂ ಉಂಟಾಗುವವು. ಯಾಂತ್ರಿಕ ಪ್ರಯೋಗ ಭೌತಿಕೇತರ ವಿದ್ಯೆಯ ಪ್ರಯೋಗಗಳು ತಪ್ಪುವವು. ಯಾವ ಕಾರಣವಿಲ್ಲದೆ ತಮ್ಮ ಮೇಲೆ ಭಾವೀ ಸಂಕಟಗಳು ಬರುವವು ಎಂಬ ಭಾವನೆಯುಂಟಾಗುವದು. ಆಯುಷ್ಯವಿರುವ ವರೆಗೆ ಸಮಾಧಾನ ಶಾಂತಿಗಳು ಸಿಗುವದು ದುರ್ಲಭವಾಗುವದು.

ಇವೆರಡೂ ಗ್ರಹಗಳು ದೀರ್ಘಕಾಲ ಒಂದು ರಾಶಿಯಲ್ಲಿ ಇರುವದರಿಂದ ಫಲ ವಿಚಾರವನ್ನು ಸೂಕ್ಷ್ಮ ರೀತಿಯಿಂದ ಮಾಡಬೇಕು. ಫಲಾಫಲಗಳ ತೀವ್ರತೆ, ಸೌಮ್ಯತೆ ರಾಶಿ ಭಾವ ಯೋಗಗಳನ್ನು ಅವಲಂಬಿಸಿರುವದು.

ವರುಣ (ನೇಪಚ್ಯೂನ)

೧೮೪೬ ರಲ್ಲಿ ಪಶ್ಚಿಮದ ಗಣಕರು ಈ ಗ್ರಹವನ್ನು ಶೋಧಿಸಿದರು. ಈ ಗ್ರಹವು ಸೂರ್ಯನಿಂದ ೨೭೯ ಕೋಟಿ ಮೈಲು ಅಂತರದಲ್ಲಿರುವದು. ಪೃಥ್ವಿಯ ನಾಲ್ಕುಪಟ್ಟು ಇದರ ವ್ಯಾಸವಿರುವದು. ಇದಕ್ಕೆ ಸೂರ್ಯನ ಸುತ್ತು ತಿರುಗಲಿಕ್ಕೆ ೧೬೫ ವರುಷಗಳು ಬೇಕು. ಅಸಾಮಾನ್ಯತೆ ಆಕಸ್ಮಿಕತಾ ವಿಚಿತ್ರತಾ ಲಹರಿಪಣಾ ಇವು ಪ್ರಜಾಪತಿಯ ಗುಣಗಳು. ಕುಂಭರಾಶಿ ಅವನ ಸ್ವಗೃಹ. ವರುಣನು ಜಲದೇವತೆಯಾದ್ದರಿಂದ ಮೀನ ರಾಶಿಯನ್ನು ಅವನ ಸ್ವಗೃಹವೆಂದು ತಿಳಿಯುವರು. ಧನುವಿಗೆ ಗುರು ಮಕರಕ್ಕೆ ಶನಿ ಕುಂಭಕ್ಕೆ ಹರ್ಶಲ ಮೀನಕ್ಕೆ ವರುಣನು ಅಧಿಪತಿಗಳು. ಇದು ಆಧುನಿಕರ ಊಹೆ. ಪ್ರಜಾಪತಿಯ ಗುಣಗಳು ಶನಿಯ ಕಡೆಗೆ ಒಲಿದರೆ ವರುಣನ ಗುಣಗಳು ಗುರು ಚಂದ್ರರ ಕಡೆಗೆ ಒಲಿಯುವವು. ಪ್ರಜಾಪತಿಯನ್ನು ಖಲ ಗ್ರಹವೆಂದು ಎಣಿಸುವರು. ಆದರೆ ವರುಣನನ್ನು ಶುಭ ಗ್ರಹದ ಸಾಲಿನಲ್ಲಿ ಹಾಕಲಿಕ್ಕೆ ಅಡ್ಡಿಯಿಲ್ಲ. ಅನಿಷ್ಟ ಫಲವನ್ನು ಪಾಪಗ್ರಹಗಳು ಕೊಡುವಂತೆ ದುರ್ಬಲ ಪೀಡಿತ ಶುಭಗ್ರಹಗಳೂ ಅನಿಷ್ಟ ಫಲವನ್ನು ಕೊಡುವವು. ಆದರೆ ಅವುಗಳಲ್ಲಿ ಸೂಕ್ಷ್ಮ ತಾರತಮ್ಯವಿರುವದು. ವರುಣನು ಪ್ರಜಾಪತಿಗಿಂತ ಗೂಢವಾಗಿರುವನು. ಆತ್ಮ ಸಂಸ್ಕೃತಿ ಶೀಲಗಳನ್ನು ಪರೀಕ್ಷಿಸುವಾಗ ರವಿಯ ಕಡೆಗೆ ಲಕ್ಷ್ಯಕೊಡುವಂತೆ ವರುಣನ ಕಡೆಗೂ ಲಕ್ಷ್ಯಕೊಡಬೇಕು. ಆತ್ಮಸಂಸ್ಕೃತಿಯನ್ನು ವಿಚಾರಿಸುವಾಗ ವರುಣನು ಉದಿತ ಗೋಲಾರ್ಧದಲ್ಲಿರುವನೋ ಅನುದಿತ ಗೋಲಾರ್ಧದಲ್ಲಿರುವನೋ ಎಂಬದನ್ನು ವಿಚಾರಿಸಬೇಕು. ಭಾವಗಳಲ್ಲಿ ೪, ೬, ೮, ೧೨ ತಮೋಗುಣ ಪ್ರಧಾನವಾದವುಗಳು. ೩, ೭, ೧೦, ೧೧ ಭಾವಗಳು ರಜೋಗುಣ ಪ್ರಧಾನವಾದವುಗಳು. ೧, ೫, ೯ ಇವು ಸತ್ವ ಪ್ರಧಾನ ಭಾವಗಳು ಎಂದು ತಿಳಿದು ವರುಣನ ಗುಣಗಳನ್ನು ತೂಗಿ ನೋಡಬೇಕು. ೪ನೇ ಮನೆ ಮೋಕ್ಷ,

ಲಯ ಎಂದು ವಿದ್ವಾಂಸರು ವಿಚಾರಿಸಬೇಕು. ಅನುಭವ ಕಲ್ಪನೆಗಳಿಂದ ವರುಣನಿಗೆ ದೃಶ್ಯ ಸ್ವರೂಪವನ್ನು ಕೊಡಬೇಕು.

ಪ್ರಜಾಪತಿ ಜಡಜಗತ್ತಿಗೆ ವಿಶೇಷ ಸಂಬಂಧಪಟ್ಟವನು. ಭೌತಿಕವಾದವು ಅವನಿಗೆ ಪ್ರಿಯ. ವರುಣನು ಆಧ್ಯಾತ್ಮಿಕ ಜಗತ್ತಿಗೆ ಸಂಬಂಧಪಟ್ಟವನು. ಅವನಿಗೆ ಅದು ಪ್ರಿಯ. ಇಬ್ಬರಲ್ಲಿಯೂ ಜೀವನಶಕ್ತಿ ವಿಪುಲವಾಗಿರುವದು. ಹರ್ಶಲನ ಜೀವನಶಕ್ತಿ ಕ್ರಾಂತಿಕಾರಕ, ಒಮ್ಮೆಲೆ ವಾತಾವರುಣವು ಕ್ಷುಬ್ಧವಾಗಿ ಪರಿವರ್ತನ ಹೊಂದುವದು. ವರುಣನ ಜೀವನಶಕ್ತಿ ಗೂಢ; ಅಜ್ಞಾತ ಪ್ರಗತಿಗೆ ಅನುಸರಿಸಿ ಉತ್ಕ್ರಾಂತಿ ಮಾರ್ಗದಿಂದ ಸಾಗುವದು ಶಾಂತಿಯಿಂದ ಪ್ರಕ್ಷುಬ್ಧತೆ ಉಂಟಾಗದೆ ತಿಳುವಳಿಕೆಯಿಂದ ಮೆಲ್ಲ ಮೆಲ್ಲನೆ ಪರಿವರ್ತನ ಕಾರಕ ವರುಣ.

ಕ್ರಾಂತಿ, ಉತ್ಕ್ರಾಂತಿ ಕಾರ್ಯಗಳಲ್ಲಿ ಪ್ರಜಾಪತಿ ವರುಣರ ಜೀವನ ಶಕ್ತಿ ಖರ್ಚಾಗುವದು. ವಿಚಾರ ಮಾಡಲಾಗಿ, ವರುಣನ ಸಾಮರ್ಥ್ಯ ಪ್ರಜಾಪತಿಗಿಂತ ಹೆಚ್ಚಿನದು. ಭೌತಿಕ ಸಾಮರ್ಥ್ಯಕ್ಕಿಂತ ಆಧ್ಯಾತ್ಮಿಕ ಸಾಮರ್ಥ್ಯ ಯಾವಾಗಲೂ ಹೆಚ್ಚಿನದು. ಇಬ್ಬರಲ್ಲಿಯೂ ಶೀಘ್ರ ಸಂಸ್ಕಾರವಿರುವದು. ಪ್ರಜಾಪತಿಯ ಶೀಘ್ರ ಸಂಸ್ಕಾರ ಉತಾವಳಿ ಅವಿಚಾರಗಳಿಂದ ಕೂಡಿರುವದು. ವರುಣನ ಶೀಘ್ರ ಸಂಸ್ಕಾರ ಕಾಲ ನಿರೀಕ್ಷಣೆ ದೂರದರ್ಶಿತ್ವದಿಂದ ಕೂಡಿರುವದು. ಹರ್ಶಲನ ಸಾಧನಗಳು ತಾಮಸ ರಾಜಸಗಳಿಂದ ಕೂಡಿದ್ದರೆ ವರುಣನವು ಶಕ್ಯವಾದಷ್ಟು ಸಾತ್ವಿಕತೆಯಿಂದ ಕೂಡಿರುವವು. ಇನ್ನೊಂದು ಮಹತ್ವದ ಭೇದವೆಂದರೆ ಹರ್ಶಲನು ಏಕಕಲ್ಲಿ (ಹಟ) ಕಠೋರ ನಿರ್ದಯ ಮನಸ್ಸಿನವನು; ವರುಣನು ಪ್ರೇಮಿ ಕೋಮಲ ಹೃದಯದವನು. ತಾನೊಬ್ಬನೇ ಉಳಿಯದೆ ಸಮಾಜದಲ್ಲಿ ಹೊಂದಿಕೊಂಡು ಹೋಗುದವನು. ಹರ್ಶಲನು ಪೀಡಿತನಿದ್ದಾಗ ಶನಿಯಂತೆ ಏಟುಗಳನ್ನು ಕೊಡಲು ಸ್ವಲ್ಪವೂ ದಯಾದಾಕ್ಷಿಣ್ಯಗಳನ್ನು ತೋರುವದಿಲ್ಲ. ಆದರೆ ವರುಣನು ಪೀಡಿತನಿದ್ದಾಗ ಕೆಲವಮ್ಟಿಗಾದರೂ ದಯಾದಾಕ್ಷಿಣ್ಯಗಳನ್ನು ತೋರುವನು. ಪ್ರಜಾಪತಿ ಪುಲ್ಲಿಂಗನೆಂದೂ ವರುಣನಿಗೆ ಸ್ತ್ರೀಲಿಂಗರೆಂದೂ ಸದ್ಯಕ್ಕೆ ಕರೆಯಲು ಅಡ್ಡಿಯಿಲ್ಲ. ಪೀಡಿತರಿದ್ದಾಗ ಇಬ್ಬರಿಗೂ ಮಾದಕ ಪದಾರ್ಥಗಳಲ್ಲಿ ಅಭಿರುಚಿ

ಇರುವದು. ಸೆರೆ, ಬ್ರ್ಯಾಂಡಿಗಳಲ್ಲಿ ಪ್ರಜಾಪತಿಯ ಅಭಿರುಚಿ ಇದ್ದರೆ ವರುಣನಿಗೆ ಗಾಂಜಿ, ತಂಬಾಕುಗಳಲ್ಲಿ ಅಭಿರುಚಿ.

ವರುಣನಿಗೆ ಕರ್ಕ ಮೀನ ರಾಶಿಗಳಲ್ಲಿ ಬಲವಿರುವದು. ವೃಶ್ಚಿಕ ರಾಶಿಯಲ್ಲಿ ಅವನ ಅಶುಭ ಫಲಗಳೇ ಹೆಚ್ಚು. ಕರ್ಕದಲ್ಲಿ ವರುಣನು ಶನಿ ಮಂಗಳರಿಂದ ಪೀಡಿತನಿದ್ದರೆ ಅತ್ಯಂತ ಘಾತಕ ಫಲವನ್ನು ಕೊಡುವನು. ವರುಣನಿಗೆ ಬೌದ್ಧಿಕ ರಾಶಿಗಳು ಅತ್ಯಂತ ಪ್ರಿಯವಾಗಿರುವವು. (ಮಿಥುನ ತುಲಾ ಕುಂಭ) ಇಲ್ಲಿ ಅವನು ಅಪ್ರತಿಮ ಫಲವನ್ನು ಕೊಡುವನು. ವರುಣನು ಪ್ರಜಾಪಕ್ಷಪಾತಿ ಎಂದು ಹೇಳುವರು. ವರುಣನು ತುಲಾ ರಾಶಿಯಲ್ಲಿ—ಹಿಂದುಸ್ಥಾನದ ರಾಶಿ ಮಕರವೆಂದು ತಿಳಿದರೆ, ದಶಮದಲ್ಲಿ ತುಲೆಯಲ್ಲಿ ಸಂಚರಿಸುವಾಗ ೧೯೪೭ ರಲ್ಲಿ ಹಿಂದುಸ್ತಾನಕ್ಕೆ ಸ್ವಾತಂತ್ರ್ಯ ಸಿಕ್ಕಿತು. ಈಗ ಅವನು (೧೯೬೩) ವೃಶ್ಚಿಕದಲ್ಲಿರುವನು. ಧನುವಿಗೆ ತೆರಳಿದ ಬಳಿಕ ಧರ್ಮರಾಜ್ಯವೂ ಸ್ಥಾಪಿತವಾಗಬಹುದು. ಒಟ್ಟಿನ ಮೇಲಿಂದ ವರುಣನಿಗೆ ಕರ್ಕ ಮೀನ ಮಿಥುನ ತುಲಾ ಕುಂಭ ೫ ರಾಶಿಗಳು ಅತ್ಯಂತ ಪ್ರಿಯ. ಧನುಸಿಂಹ ಸಾಧಾರಣ ಪ್ರಿಯ. ವರುಣನಿಗೆ ಮೇಷ ವೃಷಭ ಕನ್ಯಾ ವೃಶ್ಚಿಕ ಮಕರಗಳು ಮಹತ್ವವಲ್ಲ. ಮಕರವು ಅಪ್ರಿಯವಾದದ್ದೆಂದು ಬಗೆಯಲು ಅಡ್ಡಿಯಿಲ್ಲ. ಜನ್ಮತಃ ವರುಣನು ದ್ವಿಸ್ವಭಾವಿ ರಾಶಿಯಲ್ಲಿದ್ದು ಬುಧನಿಂದಾಗಲಿ ತೃತೀಯೇಶನಿಂದಾಗಲಿ ಪೀಡಿತನಿದ್ದರೆ ಮಜ್ಜಾತಂತುಗಳ ವಿಕಾರವಾಗುವ ಸಂಭವವಿರುವದು. ಸ್ಥಿರ ರಾಶಿಯಲ್ಲಿ ೬ ರ, ೮ ರ ಅಧಿಪತಿಗಳಿಂದ ಇಲ್ಲವೆ ಮತ್ತೊಂದು ಬಲಿಷ್ಠ ಗ್ರಹದಿಂದ ಪೀಡಿತನಿದ್ದರೆ ಅಪಚನ ಮಲೋತ್ಸರ್ಗ ರೋಗಗಳು ಉತ್ಪನ್ನವಾಗುವ ಸಂಭವವಿರುವದು. ಚರರಾಶಿಯಲ್ಲಿ ಮಂಗಳನಿಂದ ಪೀಡಿತನಿದ್ದರೆ ರಕ್ತಾಭಿಸರಣ, ರುಧಿರಾಽಸ್ವಚ್ಛತೆಯ ರೋಗಗಳು ಉತ್ಪನ್ನವಾಗುವವು. ಇಂತಹ ಪರಿಸ್ಥಿತಿಯಲ್ಲಿ ಚಂದ್ರ ಬುಧರ ಅಶುಭ ಯೋಗಗಳು ಕೂಡಿದರೆ ತೀವ್ರತೆ ಕಂಡು ಬರುವದು.

ವರುಣನೊಡನೆ ಇತರ ಗ್ರಹಗಳ ಸಂಬಂಧ:— ವರುಣನ ಪ್ರಕೃತಿಯಲ್ಲಿ ಚಂದ್ರ ಗುರುಗಳ ಸಾಮ್ಯ ಬಹಳಷ್ಟು ತೋರುವದು. ಚಂದ್ರ ಗುರುಗಳೊಡನೆ ಅವನ ಹೆಚ್ಚಿನ ಸಲಿಗೆ ಇರುವದು. ಬುಧ ರವಿ ಶುಕ್ರರೊಡನೆ

ಅವನ ಶತ್ರುತ್ವವಿಲ್ಲ, ಮೈತ್ರಿಯೂ ಇಲ್ಲ. ಸಾಧಾರಣವಾಗಿ ವರುಣನು ಇವರೊಡನೆ ತಟಸ್ಥ ನೀತಿಯನ್ನು ಅನುಸರಿಸುವನು. ಪ್ರಸಂಗಾನುಸಾರ ಇವರೊಡನೆ ಗೆಳೆತನವನ್ನು ಮಾಡುವನು. ವರುಣನೊಡನೆ ಬುಧ ರವಿ ಶುಕ್ರರ ಶತ್ರುತ್ವ ಮಾತ್ರವಿಲ್ಲ. ಕೆಲವರು ಶುಕ್ರನೊಡನೆ ವರುಣನ ಮೈತ್ರಿಯೆಂದು ಹೇಳುವರು. ರಾಹು-ಶನಿ ಮಂಗಳರೊಡನೆ ಮಾತ್ರ ಅವನಿಗೆ ಕೂಡಿ ಬರುವದಿಲ್ಲ. ಅವರು ವರುಣನಿಗೆ ಶತ್ರುಗಳೆಂದು ತಿಳಿಯಬಹುದು. ಚಂದ್ರ ಗುರುಗಳೊಡನೆ ವರುಣನ ಶುಭಯೋಗವಿದ್ದಾಗ, ಅತ್ಯುತ್ತಮ ಫಲವನ್ನು ವರುಣನು ಕೊಡುವನು. ಅಷ್ಟೊಂದು ಶುಭಫಲ ಇತರ ಗ್ರಹಗಳೊಡನೆ ಶುಭಯೋಗವಿದ್ದಾಗ ಕಂಡು ಬರುವದಿಲ್ಲ.

ರವಿ ಉಷ್ಣಪ್ರಕೃತಿಯ ಸ್ವಯಂ ಪ್ರಕಾಶಿತ ಆತ್ಮಕಾರಕ ಗ್ರಹವಿರುವನು. ಅವನೊಡನೆ ಮಾಡುವ ವರುಣನ ಯೋಗದಿಂದ ಮಾನವನ ಆತ್ಮಸಂಸ್ಕೃತಿಯು ತಿಳಿದುಬರುವದು. ವೇದಾಂತಿಗಳಿಗೆ, ಆಧ್ಯಾತ್ಮಿಕರಿಗೆ, ಯೋಗಿಗಳಿಗೆ ರವಿನೇಪಚ್ಯೂನರ ಶುಭಯೋಗದ ಅವಶ್ಯಕತೆ ಹೆಚ್ಚಾಗಿರುವದು. ಅಂತಹ ಸಂಬಂಧವು ಇವರೀರ್ವರಲ್ಲಿ ಇಲ್ಲದಿದ್ದರೆ ಕನಿಷ್ಠ ಈ ಜನ್ಮದಲ್ಲಿ ಅವನಿಗೆ ಆತ್ಮೋನ್ನತಿಯ ಮಾರ್ಗದಲ್ಲಿ ಅಡ್ಡಿಗಳಿರುವವೆಂದು ಭಾವಿಸಬೇಕು. ರವಿ ಪ್ರತ್ಯಕ್ಷ ಆತ್ಮದ ಬೀಜ. ವರುಣನು ಪ್ರತ್ಯಕ್ಷ ವಿಕಾಸ ಮಾಡುವ ಶಕ್ತಿ ಹೀಗೆ ಇವೆರಡು ಗ್ರಹಗಳ ಸಂಬಂಧವಿರುವದು. ಮಾನವನ ಆತ್ಮಸಂಸ್ಕೃತಿಯ ಛಟಿಯನ್ನು ಇವೆರಡೂ ಗ್ರಹಗಳ ಸಂಬಂಧದಿಂದ ಊಹಿಸಬಹುದು. ರವಿ ನೇಪಚ್ಯೂನ ಯುತಿ ಪ್ರತಿಯುತಿಗಳು ಹಟಯೋಗಿಗಳಿಗೆ ಸಾಧಕವಾಗಿವೆ. ಕುಂಭ ರಾಶಿಯ ಸಂಬಂಧವು ಫಲಪ್ರದವಾಗುವದು. ಇತರ ಗ್ರಹಗಳಿಂದ ದೂಷಿತವಾಗದಿದ್ದರೆ ನೌಕರಿ, ಧಂಧಾ ರಾಜಸನ್ಮಾನಗಳಿಗೆ ಅನುಕೂಲವಾದದ್ದು. ರ △ ನೇ ಯೋಗವು ಯುತಿ, ಪ್ರತಿಯುತಿಗಿಂತ ಮಹತ್ವದ್ದು. ತ್ರಿದೀಶ ಯೋಗವೂ ಕೆಲಮಟ್ಟಿಗೆ ಶುಭ ಫಲವನ್ನು ಕೊಡುವದು. ಮೇಷದರವಿ ಸಿಂಹದ ವರುಣ ಧನುವಿನ ಗುರು. ಹೀಗೆ △ ಯೋಗವಾದರೆ ಯಾವದರ ಕೊರತೆಯೂ ಬೀಳಲಾರದು. ಸ್ಥಾನಬಲವೂ ಬೇಕು. ರವಿ ನೇ. ಶುಭ ಯೋಗವು ಆಧ್ಯಾತ್ಮವಿದ್ಯೆಯನ್ನು ಕೊಡುವದು. ಸ್ವಭಾವ ಕಠೋರ ಉದಾರ ನಿಷ್ಕಪಟಿ ಇರುವದು. ನಿಸ್ಪೃಹತೆಯೂ ಇರು

ವದು. ರಾಜಕೃಪೆಗೂ ಕಾರಣವಾಗುವದು. ರವಿ ನೇಪಚ್ಯೂನ ಅಶುಭ ಯೋಗವು ಆತ್ಮಸಂಸ್ಕೃತಿಗೆ ಬಾಧಕವಾಗಿರುವದು.

ಚಂದ್ರನು ಮನಃಕಾರಕ ವರುಣನ ಸಮಾನ ಧರ್ಮದವನೆಂದು ಇವರಿಬ್ಬರ ಮೈತ್ರಿ ಗಾಢವಾಗಿರುವದು. ಚಂದ್ರ ನೇಪಚ್ಯೂನ ಯುತಿ ಶುಭ ಫಲವನ್ನು ಕೊಡುವದು. ಪ್ರತಿಯುತಿ ಹಾಗಲ್ಲ. ಯುತಿ ಮಾನಸಿಕ ವಿಚಾರ ಶಕ್ತಿಯ ಸ್ಥಿತ್ಯಂತರವನ್ನು ಮಾಡುವದು. ಕರ್ಕ ಮೀನದಲ್ಲಿ ಅತ್ಯುತ್ತಮ. ಇವರು ಸಂಸ್ಕಾರ ಪ್ರಿಯರು. ಈ ಯುತಿ ಇತರ ಗ್ರಹದಿಂದ ಪೀಡಿತವಿದ್ದರೆ ಮನಸ್ಸು ಚಂಚಲ ವಿಕಾರಿ ಆಗುವದು. ಕರ್ಕಮೀನಗಳಲ್ಲಿ ಶುಕ್ರನ ಶುಭ ಯೋಗದಲ್ಲಿರುವ ಯುತಿ ಉತ್ತಮ ಕವಿಗಳನ್ನು ಹುಟ್ಟಿಸಬಹುದು. ಸ್ಫೂರ್ತಿಯ ಶಕ್ತಿಯಿಂದ ಅಪ್ರತಿಮ ಕಾರ್ಯವನ್ನು ಮಾಡಬಲ್ಲರು. ಯುತಿ ಸ್ಫೂರ್ತಿದಾಯಕ. ಚಂದ್ರ ನೇಪಚ್ಯೂನ ಶುಭಯೋಗವು ಕಲ್ಪನಾಚಾತುರ್ಯ, ಗಾಯನ-ವಾದನಗಳಲ್ಲಿ ಅಭಿರುಚಿ ಜಲವಾದ್ಯದ ಪ್ರೀತಿಯನ್ನು ಕೊಡುವದು. ಮುಂದಿನ ರೂಪರೇಷೆಗಳನ್ನು ಕೊಡುವ ಸೂಚಕ ಸ್ವಪ್ನಗಳು ಬೀಳುವವು. ಇವರ ಶುಭಯೋಗ ಕವಿ ಕಾದಂಬರೀಕಾರ, ನಟರಿಗೆ ಪೋಷಕವಾಗಿರುವದು. ಜಲಪ್ರವಾಸ, ಜಲವಿಹಾರ ಪ್ರೇಮಕ್ಕೆ ಪೋಷಕ. ಅಶುಭ ಯೋಗವು ನೈರಾಶ್ಯ, ನೈತಿಕ ಗಾತ್ರಗಳ ಶೈಥಿಲ್ಯ ಮಾನಸಿಕ ಅಸ್ಥೈರ್ಯ, ಮಾತೃ ಸುಖನ್ಯೂನತೆಗಳನ್ನು ಉಂಟು ಮಾಡುವದು. ನೇ. ಚಂ ಯುತಿ ೧, ೩, ೯ ರಲ್ಲುಂಟಾದರೆ ಮಾನವನು, ಸ್ವಪ್ನ ಸೃಷ್ಟಿಯಲ್ಲಿ ವಿಹರಿಸುವನು. ನಿದ್ರಾರೋಗ ಸ್ವಪ್ನದಲ್ಲಿ ಯಾವದಾದರೊಂದು ಕೆಲಸ ಮಾಡುವದು, ಇಂತಹ ಜನರ ಸ್ವಪ್ನ ಸೃಷ್ಟಿಯಲ್ಲಿಯ ವಿಚಾರಗಳು ಅಸಾಮಾನ್ಯ ಚಮತ್ಕಾರಿಕವಾಗಿರುವವು. ಮೆಸ್ಮೇರೀಝಂ ಹಿಪ್ನಾಟೀಝಂ ಪ್ರಯೋಗ ಮಾಡುವವರಿಗೆ, ಮಾಡಿಸಿಕೊಳ್ಳುವವರಿಗೆ ಇಂಥ ಯೋಗವಿರುವದು ಅನುಕೂಲ.

ನೇಪಚ್ಯೂನನಿಗೂ ಮಂಗಳನಿಗೂ ಘಟಿತಾರ್ಥವು ಕೂಡಿ ಬರುವದಿಲ್ಲ. ಅಶುಭಯೋಗಗಳು ದುಷ್ಟ ಫಲವನ್ನು ಕೊಡುವವು. ಯುತಿ ಪ್ರತಿಯುತಿಗಳು ಶುಭಪರಿಣಾಮಕ್ಕಿಂತ ಅಶುಭ ಫಲವನ್ನು ಕೊಡುವವು. ಮಾದಕ ರಾಸಾಯನಿಕ ದ್ರವ್ಯಗಳಿಂದ ತ್ರಾಸ, ಅಪಘಾತ, ಅನಿಯಮಿತತನ, ಘಾಯವುಂಟಾಗುವದು, ಯಾವದಾದರೊಂದು ಸಂಗತಿಯು ಅತಿರೇಕವಾಗುವದು,

ಇತ್ಯಾದಿ ಪರಿಣಾಮಗಳುಂಟಾಗುವವು. ಇವರು ಖುನಸಿ, ತಾಪಟ, ಹಟ ಇರುವರು. ಮಾನಸಿಕ ತ್ರಾಸ ಮಾಡಿಕೊಳ್ಳುವರು. ಜಲರಾಶಿಯಲ್ಲಿಯು ಯುತಿ ಪ್ರತಿಯುತಿಯಿಂದ ವಿದ್ಯುತ್ತಿನ ಭಯ. ಎರಡು ಗ್ರಹಗಳಲ್ಲಿಯ △ ಯೋಗವು ಅತ್ಯುತ್ತಮ ಫಲಕಾರಿಯಾಗುವದು. ಉತ್ತಮ ಜೀವನ ಶಕ್ತಿಯನ್ನು ಕೊಡುವದು. ಇವರು ಸುಮ್ಮನೆ ಕುಳಿತುಕೊಳ್ಳಲಾರರು. ಪ್ರಾಗತಿಕ ತತ್ವಕ್ಕನುಸರಿಸಿ ಮುಂದೆ ಹೆಜ್ಜೆಯನ್ನು ಇಡುವಲ್ಲಿ ಚತುರರಿರುವರು. ವೃಶ್ಚಿಕ ರಾಶಿಯಲ್ಲಿರುವ ಮಂಗಳ ನೇಪಚ್ಯೂನ ಯುತಿ ಅನಿಷ್ಟ ಫಲವನ್ನು ಕೊಡುವದು. ೧, ೩, ೭, ೮, ೯, ೧೨ ರಲ್ಲಿ ಮತ್ತಿಷ್ಟು ಅನಿಷ್ಟ. ಸಿಡಿಲು ವಿದ್ಯುಚ್ಛಕ್ತಿಗಳ ಸಂಬಂಧವು ಈ ಗ್ರಹಗಳಿಗೆ ಇರುವದರಿಂದ ಜಲಾಗ್ನಿರಾಶಿಗಳ ಸಂಬಂಧವು ಬರುವದು.

ಬುಧನಿಗೂ ವರುಣನಿಗೂ ಮೈತ್ರಿ ಇರುವದು. ಶುಭಯೋಗವು ಮಾನಸಿಕ ಬೌದ್ಧಿಕ ಸಾಮರ್ಥ್ಯವನ್ನು ಬಳೆಯಿಸುವದು. ಕವಿತ್ವಶಕ್ತಿ ತಂತುವಾದ್ಯ ಪ್ರಿಯತೆ, ವಿದ್ಯಾವ್ಯಾಸಂಗ, ವಾಚನಾಭಿರುಚಿ, ಲೇಖನ ವ್ಯವಸಾಯ ಇವುಗಳನ್ನು ಕೊಡುವದು. ಅಶುಭಯೋಗವಿದ್ದರೆ ಅಸ್ಥಿರತೆ ಮಜ್ಜಾತಂತುಗಳ ವಿಕಾರ, ಮಾನಸಿಕ ದೌರ್ಬಲ್ಯ, ಢೋಂಗಿ ಕೃತ್ರಿಮತೆಗಳ ದ್ಯೋತಕವಾಗಿರುವದು. ನೇಪಚ್ಯೂನ ಬುಧಯುತಿ ಶುಭಫಲವನ್ನು ಕೊಡುವದು. ಆದರೆ ಅದಕ್ಕೆ ರಾಶಿಬಲಬೇಕು. ಈ ಯೋಗವು ಜನ-ಸಮೂಹದ ವಿರುದ್ಧ ವರ್ತನೆಗೆ ಪ್ರೇರಕ.

ಮಿಥುನದಲ್ಲಿ ಬು. ನೇ ಯುತಿ: ೧, ೯, ೫ ರಲ್ಲಿ ಉಂಟಾದರೆ ಇವರು ಲೇಖನ ವ್ಯವಸಾಯ, ಬುದ್ಧಿ ಸಾಮರ್ಥ್ಯದಿಂದ ಜಗತ್ತಿನಲ್ಲಿ ಮುಂದೆ ಬರುವರು. ಕರ್ಕದಲ್ಲಿ ೨ ರಲ್ಲಿ ಬುಧ ನೇಪಚ್ಯೂನ ಯುತಿಯುಂಟಾದರೆ ವಾಚಳತೆಯನ್ನು ಕೊಡುವದು. ಗೊಳ್ಳು ಮಾತುಗಳನ್ನಾಡುವರು; ಪ್ರಮಾಣದಲ್ಲಿ ಇತಿಮಿತಿ ಇರುವದಿಲ್ಲ. ಹರ್ಶಲ ನೇಪಚ್ಯೂನ ಬುಧರ ಶುಭಯೋಗ ಮುದ್ರಣ ಯಂತ್ರದ ವ್ಯವಸಾಯಕ್ಕೆ ಪೋಷಕ. ತೀವ್ರನಕ್ಷತ್ರದಲ್ಲಿ ಬುಧ ನೇಪಚ್ಯೂನ ಅಶುಭಯೋಗ ಮಿದುಳಿಗೆ ತ್ರಾಸದಾಯಕ ತಲೆ ತಿರುಗುವದು, ಭ್ರಮವುಂಟಾಗುವದು.

ಗುರು ನೇಪಚ್ಯೂನರಲ್ಲಿ: — ಸಮತ್ವವನ್ನು ಹಿಡಿಯಲು ಅಡ್ಡಿ

ಯಿಲ್ಲ. ಗು. ನೇ. ಯುತಿ ಮಹತ್ವದ್ದು, ಸ್ಥಾನಪರತ್ವದಿಂದ ಅದು ಸ್ಪಷ್ಟ ಫಲವನ್ನು ಕೊಡುವದು. ಗುರು ೧೨ ವರುಷಕ್ಕೊಮ್ಮೆ ಪುನಃ ನೇಪಚ್ಯೂನ ನೊಡನೆ ಯುತಿ ಮಾಡುವಾಗ ಇದರ ಫಲಗಳು ಕಾಣಬರುವವು. ಈ ಯುತಿ ಮೀನದಲ್ಲುಂಟಾದರೆ ಅಧಿಕಸ್ಯಾಧಿಕಂ ಫಲಂ ಇದರಂತೆ ೩, ೫, ೯, ೧೧ ರಲ್ಲಿ ಆಗುವದೂ ಉತ್ತಮ. ಪ್ರತಿಯುತಿ ಫಲವು ಅಷ್ಟು ತೀವ್ರವಿರುವದಿಲ್ಲ. ರಾಶಿ ಪರತ್ವದಿಂದ ಅಶುಭ ಫಲವನ್ನು ಕೊಡುವವು. ತ್ರಿರೇಕಾದಶ ಯೋಗವು ಉತ್ತಮ ಫಲವನ್ನು ಕೊಡುವದು. ಈ ಯೋಗವು ಭಾಗ್ಯ ಕೀರ್ತಿ ಆತ್ಮ ಸಂಸ್ಕೃತಿಯನ್ನುಂಟುಮಾಡುವದು. ಇದು ಶ್ರೇಷ್ಠ ಯೋಗ. ಕರ್ಕದಲ್ಲಿ ಗು. ನೇ. ಯುತಿ ೫, ೯ ರಲ್ಲುಂಟಾದರೆ ದೈವೀ ಸಾಮರ್ಥ್ಯದ್ಯೋತಕವು. ಮಾನಸಿಕ ಶಕ್ತಿಯ ವಿಕಾಸಕ. ಗುರು ನೇಪಚ್ಯೂನ ಅಶುಭಯೋಗವು ಸಾಂಪತ್ತಿಕ ಅಡಚಣಿಯನ್ನು ತರುವದು. ಧರ್ಮ ಪ್ರವೃತ್ತಿಯ ಹ್ರಾಸವು; ಅಪಯಶಸ್ಸನ್ನು ಕೊಡುವುದು. ಈ ಎರಡು ಗ್ರಹಗಳ ಶುಭಯೋಗದಲ್ಲಿರುವ ತೀವ್ರತೆ ಅಶುಭಯೋಗದಲ್ಲಿ ಇರುವದಿಲ್ಲ.

ಶುಕ್ರ ನೇಪಚ್ಯೂನರಲ್ಲಿ:— ಸಮಾನತೆ ಇರುವದು. ಕೆಲವರು ವೈತ್ರಿಯನ್ನೇ ಹೇಳುವರು. ಶುಭಯೋಗದಲ್ಲಿ ತೀವ್ರತೆ ಇರುವದು. ಅಶುಭ ಯೋಗದಲ್ಲಿ ತೀವ್ರತೆ ಕಂಡು ಬರುವದಿಲ್ಲ. ಶುಕ್ರನೇಪಚ್ಯೂನಯುತಿ ಪ್ರತಿ ಯುತಿಗಳು ಶುಭ ಫಲಕ್ಕಿಂತ ಅಶುಭ ಫಲವನ್ನೇ ಹೆಚ್ಚಾಗಿ ಕೊಡುವವು. ರಾಶಿಬಲದಿಂದ ತಾರತಮ್ಯ ಉಂಟಾಗಬಹುದು. ನೇಪಚ್ಯೂನನು ಕರ್ಕ ಮೀನ ತುಲೆಗಳಲ್ಲಿ ಹೆಚ್ಚು ಬಲಿಷ್ಠನಿರುವನು. ಈ ಎರಡು ಗ್ರಹಗಳಲ್ಲಿ ಅಶುಭಯೋಗವಿದ್ದರೆ ವಿಷಯ ವಾಸನೆಯು ತೀವ್ರವಾಗಿರುವದು. ಅದರಿಂದ ಅನಾಚಾರದ ಸಂಭವವೂ ಉಂಟು. ಅಮಲಿನ ಪದಾರ್ಥಗಳ ಸೇವನೆ, ಪತ್ನೀಸುಖದಲ್ಲಿ ನ್ಯೂನ್ಯತೆ, ಲಲಿತಾಭಿ ರುಚಿಯಿಂದ ಹಾನಿ, ಪೈಶಾಚಿಕ ಸಾಧನೆಗಳಿಂಮುಂಟಾಗುವ ದುಷ್ಪರಿಣಾಮಗಳು, ತೋರಿಬರುವವು. ಇವೆರಡು ಗ್ರಹಗಳಲ್ಲಿ ಶುಭಯೋಗವಿದ್ದರೆ ತಂತ್ರಕಾರ, ಕಾದಂಬರೀಕಾರ, ಗಾಯಕ, ವಾದ್ಯ ಪ್ರವೀಣರು, ಸೃಷ್ಟಿ ಸೌಂದರ್ಯದ ಮಾರ್ಮಿಕ ಪರೀಕ್ಷಕರು ಹುಟ್ಟುವರು. ಟಾಪಟೀಪ, ಸ್ವಚ್ಛತೆ, ನಟನೈಪುಣ್ಯ, ಸೌಂದರ್ಯದ

ಕಲ್ಪನೆ, ಶೃಂಗಾರ ಪ್ರೀತಿ ಇಂತಹ ಗುಣಗಳು ಕಂಡು ಬರುವವು. ಸಪ್ತಮೇಶನು ನೇಪಚ್ಯೂನನೊಡನೆ ಶುಭಯೋಗ ಮಾಡುತ್ತಿದ್ದರೆ ಪತ್ನಿಯು ಸದ್ಗುಣಿಯಾಗಿರುವಳು.

ನೇಪಚ್ಯೂನ ಶನಿಗಳಲ್ಲಿ:– ಮೈತ್ರಿಯಿಲ್ಲ. ಶತ್ರುತ್ವವೇ ಕಂಡು ಬರುವದು. ಒಬ್ಬನ ಭಾವನೆಗಳು ಅತಿಶಯ ಉತ್ತುಂಗವಾದರೆ ಇನ್ನೊಬ್ಬನ ಭಾವನೆಗಳು ಅತ್ಯಂತ ನೀಚವಾಗಿರುವವು. ಒಬ್ಬನ ಹೃದಯದಲ್ಲಿ ಪ್ರೇಮದ ಜ್ಯೋತಿಯಿದ್ದರೆ, ಇನ್ನೊಬ್ಬನ ಹೃದಯದಲ್ಲಿ ಕ್ರೂರತೆ ಇರುವದು. ಅಶುಭ ಯೋಗಗಳಲ್ಲಿ ಫಲದ ತೀವ್ರತೆ ಕಂಡು ಬರುವದು. ಅದು ಕ್ರೂರ ನಕ್ಷತ್ರದಲ್ಲಿದ್ದರೆ ಮಾನವನ ಜೀವಿತವು ಸಂಕಟಮಯವಾಗಿರುವದು. ಯುತಿ ಪ್ರತಿಯುತಿಗಳು ಅನಿಷ್ಟ ಫಲವನ್ನೇ ಹೆಚ್ಚಾಗಿ ಕೊಡುವವು. ಈ ಎರಡು ಗ್ರಹಗಳಲ್ಲಿ ಶುಭಯೋಗವಿದ್ದರೆ ಕಠೋರತೆ, ಕಾರ್ಯಾಸಕ್ತಿ, (ಒಂದು ಕಾರ್ಯಕ್ಕೆ ಅಂಟಕೊಳ್ಳುವದು) ಕಾರ್ಯವನ್ನು ಕೊನೆ ಮುಟ್ಟಿಸುವ ಹವ್ಯಾಸ, ತನ್ನದೇ ಖರೆಮಾಡಿ ತೋರಿಸುವ ಉತ್ಸಾಹ, ಮನಸ್ಸಿನ ಲಯ ಏಕತಾನತೆಗಳು ಕಂಡು ಬರುವವು.

ಅಶುಭಯೋಗವಿದ್ದರೆ ಅವಿಶ್ವಾಸದಿಂದ ಉಂಟಾಗುವ ಹಾನಿ, ತುರಂಗವಾಸ, ದಾಸ್ಯದ ಕಟು ಅನುಭವ, ಅಪಮಾನದ ಪ್ರಸಂಗಗಳು, ದೈವೀಕೋಪ ಮುಂತಾದ ಫಲಗಳುಂಟಾಗುವವು. ಅಶುಭಯೋಗವು (ಶನಿ–ನೇಪಚ್ಯೂನ) ದೀರ್ಘಕಾಲಿಕ ರೋಗಕ್ಕೂ ಕಾರಣವಾಗಬಹುದು. ಕರ್ಕ ಮಕರಗಳಲ್ಲಿಯ ಪ್ರತಿ ಯೋಗವು ಆಯುಷ್ಯವು ಕ್ರಾಂತಿ ತತ್ವಕ್ಕಾಗಿ ಇರುವದೆಂದು ಭಾವಿಸಬೇಕು.

ರಾಹುವಿನ ಫಲಗಳನ್ನು (ನೇಪಚ್ಯೂನನ ಕೂಡ) ಶನಿಯಂತೆ ಗ್ರಹಿಸಬೇಕು. ೬, ೮, ೧೨ ರಲ್ಲಿ ಆದರೆ ಮೃತ್ಯು ಅಶುಭವಾಗಿರುವದು. ವಿಶ್ವಾಸಘಾತದಿಂದ ಮರಣವು ಒದಗುವದು. ಸರ್ಪಾದಿ ಪ್ರಾಣಿಗಳ ದಂಶಭಯವೂ ಇರುವದು. ರಾಹು ನೇಪಚ್ಯುನ; ಹರ್ಶಲ ನೇಪಚ್ಯೂನ ಶುಭಯೋಗಗಳು ಮಾಂತ್ರಿಕರಿಗೂ, ಗಾರುಡಿಗರಿಗೂ ಅನುಕೂಲವಾಗಿರುವವು.

ವರುಣನ ಭಾವಗತ ಫಲ

ಭಾವ ಫಲವನ್ನು ನೋಡುವಾಗ ವರುಣನು ಜಲರಾಶಿಯಲ್ಲಿ ಅಥವಾ ವಾಯು ರಾಶಿಯಲ್ಲಿದ್ದು ಭಾವೇಶನೊಡನೆ ಶುಭಯೋಗಮಾಡುತ್ತಿದ್ದರೆ ಶುಭ ಫಲವನ್ನು ಉತ್ಪನ್ನಮಾಡುವನು. ವಿಶೇಷತಃ ಭಾವೇಶರು ಬುಧ ಗುರು ಚಂದ್ರರಿದ್ದರೆ ಉತ್ತಮ. ಭಾವದೃಷ್ಟಿಯಿಂದ ವರುಣನಿಗೆ ೧, ೩, ೫, ೯ ೧೧ ಸ್ಥಾನಗಳು ಉತ್ತಮವಾದವು. ೪, ೧೨, ೮, ೨, ೬ ಈ ಸ್ಥಾನಗಳು ಭದ್ರವಾದವುಗಳಲ್ಲ. ೧೦ ನೆಯ ಸ್ಥಾನವು ದಶಮೇಶನೊಡನೆ ಅಥವಾ ರವಿ ಚಂದ್ರರೊಡನೆ ಶುಭಯೋಗ ಮಾಡುತ್ತಿದ್ದರೆ ಒಳ್ಳೆಯದು.

ಲಗ್ನದಲ್ಲಿ:— ಲಗ್ನದಲ್ಲಿ ವರುಣವಿರುವವರ ಕಾಂತಿಯು ಬೆಕ್ಕಿನ ಕಣ್ಣಿನದಿರುವದು. ಮುದ್ರೆಯಲ್ಲಿ ಗಾಂಭೀರ್ಯವಿರುವದು. ಉಡುಪು ತೊಡವುಗಳ ಬಗೆಗೆ ಕಾಳಜಿ ತಕ್ಕೊಳ್ಳುವರು. ಅಚ್ಚುಕಟ್ಟುತನವಿರುವದು. ಜಲಪ್ರವಾಸದ ಅಭಿರುಚಿಯಿರುವದು. ಶೀಘ್ರ ಸಂಸಾರ ಪಡೆವವರಿರುವರು. ಚಂದ್ರ ವರುಣರ ಯುತಿ ಈ ಫಲವನ್ನು ಕೊಡುವುದು. ಜಲರಾಶಿಯಲ್ಲಿ ಉತ್ಕಟವಾಗಿರುವದು. ಲಗ್ನದಲ್ಲಿ ಅಥವಾ ತೃತೀಯದಲ್ಲಿ ವರುಣನಿದ್ದವರು ನಿದ್ರೆಯಲ್ಲಿ ಬಡಬಡಿಸುವ ಸ್ವಭಾವದವರಿರುವರು. ಈ ಗ್ರಹವು ದೈವೀ ಸಾಮರ್ಥ್ಯದ್ದು. ಲಗ್ನದಲ್ಲಿದ್ದು ಬುಧ, ಗುರು, ರವಿಗಳ ಶುಭ ಸಂಬಂಧವಿದ್ದರೆ ಯೋಗ, ಆಧ್ಯಾತ್ಮಯೋಗ, ವೇದಾಂತ, ಗೂಢ ಶಾಸ್ತ್ರಗಳಲ್ಲಿ ಪ್ರಗತಿಯನ್ನುಂಟುಮಾಡುವದು. ಲಗ್ನಸ್ಥ ವರುಣನಿದ್ದವರು ನಾದಲುಬ್ಧರು, ಏಕತಾನತೆಯುಳ್ಳವರಿರುವರು. ಮನಸ್ಸಿನ ಲಯವನ್ನು ಬೇಗ ಸಾಧಿಸುವರು. ಚಂದ್ರನ ಯುತಿಯಲ್ಲಿಯೂ ಈ ಗುಣವು ಕಾಣಬರುವದು. ಲಗ್ನದಲ್ಲಿರುವ ವರುಣನು ಲಗ್ನೇಶನೊಡನೆ, ಚಂದ್ರ ರವಿಗಳೊಡನೆ ಅಶುಭ ಸಂಬಂಧದಲ್ಲಿದ್ದರೆ ಅಸ್ಥಿರತೆ, ಚಾಂಚಲ್ಯ, ಉದಾಸೀನ ಭಾವ ನೈರಾಶ್ಯವಾದಗಳು ಕಂಡು ಬರುವವು.

ಈ ವರುಣನೊಡನೆ ೮, ೧೨ ರ ಅಧಿಪತಿಗಳ ಸಂಬಂಧವಿರಬಾರದು.

ದ್ವಿತೀಯದಲ್ಲಿ:— ದ್ವಿತೀಯಸ್ಥ ವರುಣನು ಅಶುಭ ಫಲವನ್ನೇ

ಹೆಚ್ಚಾಗಿ ಕೊಡುವನು. ಸಾಂಪತ್ತಿಕ ಅಡಚಣಿ, ಕೌಟುಂಬಿಕ ತೊಂದರೆಗಳು, ಮನೆತನದಲ್ಲಿ ಸ್ಥಿತ್ಯಂತರಗಳು— ಪೀಡಿತನಿದ್ದಲ್ಲಿ— ಕಂಡು ಬರುವವು. ಇಲ್ಲಿ ನೇಪಚ್ಯೂನ ಬುಧ ಯೋಗವಿದ್ದರೆ ವಕ್ತೃತ್ವವನ್ನು ಕೊಡುವುದು. ಇಲ್ಲಿಯ ವರುಣನು ದ್ವಿತೀಯಾಧಿಪತಿಯಿಂದ ಪೀಡಿತನಿದ್ದರೆ ನೇತ್ರ, ಕಂಠ, ವಾಣಿಯಲ್ಲಿ ವ್ಯಂಗವು ತೋರುವದು. ಸ್ತ್ರೀಯ ಮೃತ್ಯು ಅಕಸ್ಮಾತ್ ಆಗುವದು. ಇಂತಹ ಸಂದರ್ಭದಲ್ಲಿ ವರುಣನು ತೀವ್ರ ನಕ್ಷತ್ರದಲ್ಲಿರುವನು. ಭಾಗೀದಾರನ ಪ್ರತಿಸ್ಪರ್ಧಿಯ ಮೃತ್ಯು, ಕಷ್ಟ ದಾರಿದ್ರ್ಯ ಈ ಫಲಗಳು ಉತ್ಪನ್ನವಾಗುವವು. ದ್ವಿತೀಯೇಶನಿಂದ ಗುರುವಿನಿಂದ ಶುಭ ಸಂಬಂಧವಿರುವಲ್ಲಿ ಅರ್ಥಪ್ರಾಪ್ತಿ ಚೆನ್ನಾಗಿರುವದು. ಅಷ್ಟಮೇಶನ ಅಶುಭ ಸಂಬಂಧವಿರುವಲ್ಲಿ ಆಯುಷ್ಯದ ಕೆಲಭಾಗವನ್ನು ಕತ್ತರಿಸುವನು.

ತೃತೀಯದಲ್ಲಿ:— ಮೂರರಲ್ಲಿ ವರುಣನು ಪ್ರಾಯಶಃ ಶುಭ ಫಲವನ್ನು ಕೊಡುವನು. ಜಲ, ಬೌದ್ಧಿಕ ರಾಶಿಯಲ್ಲಿದ್ದು ೧, ೩, ೫, ೯ ರಲ್ಲಿ ಶುಭ ಸಂಬಂಧಿತನಾಗಿದ್ದರೆ ಜೀವನವು ಪ್ರಗತಿಪರವಾಗುವದು. ತೃತಿಯೇಶನಿಂದ ಶುಭ ಸಂಬಂಧಿತನಾಗಿದ್ದರೆ ಕಲ್ಪನಾ ಚಾತುರ್ಯ, ಬುದ್ಧಿ ಪ್ರಕರ್ಷಕದಿಂದ ಲಾಭ ಸೂಚಕನು.

ಚತುರ್ಥದಲ್ಲಿ:— ಚತುರ್ಥದಲ್ಲಿ ಪೀಡಿತ ವರುಣನಿದ್ದರೆ ವಾತ್ಸಲ್ಯ ಸುಖಕ್ಕೆ ನ್ಯೂನತೆ. ಕೊನೆಯ ಆಯುಷ್ಯವನ್ನು ಏಕಾಂತದಲ್ಲಿ ಚಿಂತೆಯಲ್ಲಿ ಕಳೆಯುವರು.

ಪಂಚಮದಲ್ಲಿ:— ಪಂಚಮದಲ್ಲಿ ವರುಣನು ವಿಶೇಷವಾಗಿ ಶುಭ ಫಲವನ್ನು ಕೊಡುವನು. ಇವರು ಮಂತ್ರ ತಂತ್ರ ವಿದ್ಯೆಯಲ್ಲಿ ಪ್ರಗತಿಯನ್ನು ಸಾಧಿಸುವರು. ಪಂಚಮದಲ್ಲಿಯ ವರುಣನು ಶುಭ ಸಂಬಂಧಿತನಿದ್ದರೆ ಪ್ರೇಮ ವಿವಾಹವಾಗುವ ಸಂಭವವಿರುವದು. ಅಶುಭಯೋಗದಲ್ಲಿದ್ದರೆ ಪೀಡಿತನಿದ್ದರೆ ವಿವಾಹದಲ್ಲಿ ನಿರಾಶೆಯಾಗುವ ಸಂಭವವಿರುವದು.

ಷಷ್ಠದಲ್ಲಿ:— ೬ ರಲ್ಲಿಯ ವರುಣನು ಶುಭಕಾರಿಯಲ್ಲ. "**ಆಲಸ್ಯಂ ಹಿ ಮನುಷ್ಯಾಣಾಂ ಶರೀರಸ್ಥೋ ಮಹಾರಿಪುಃ** ಎಂಬ ಅನುಭವವು

ಬರುವದು. ಅಶುಭ ಸಂಬಂಧಿತ ವರುಣನು ವ್ಯಸನಾಸಕ್ತರನ್ನಾಗಿ ಮಾಡುವನು. ಷಷ್ಠ ಸ್ಥಾನವು, ರೋಗದ ಸ್ಥಾನವು. ಅಲ್ಲಿ ಪೀಡಿತ ವರುಣನಿದ್ದರೆ ಪರೀಕ್ಷೆಗೆ ನಿಲುಕದಂತಹ ಅಸಾಧ್ಯ ರೋಗಗಳನ್ನು ಹುಟ್ಟಿಸಬಹುದು.

ಸಪ್ತಮದಲ್ಲಿ:— ಸಪ್ತಮದಲ್ಲಿಯ ವರುಣನು ಸಂಸಾರ ಸುಖವನ್ನು ಕೊಡಲಾರನು. ದ್ವಿಭಾರ್ಯಾಯೋಗವೆಂದು ಹೇಳಬಹುದು. ಸಪ್ತಮ ಭಾವವು ವರುಣ ಯುತಿಯಲ್ಲಿದ್ದರೆ ಹೆಂಡತಿ ಅಥವಾ ಗಂಡನ ಕಣ್ಣು ಬೆಕ್ಕಿನ ಕಣ್ಣಿನ ಹಾಗೆ ಇರಬಹುದು. ಸಪ್ತಮದಲ್ಲಿಯ ವರುಣನು ಕಾಮುಕತೆಯನ್ನು ಹೆಚ್ಚಿಸುವನು.

ಅಷ್ಟಮದಲ್ಲಿ:— ಅಷ್ಟಮದಲ್ಲಿ ವರುಣನು ಮರಣದ ಬಗೆಗೆ ವೈಚಿತ್ರ್ಯವನ್ನು ತೋರುವನು. ಸ್ಮಶಾನದ ವರೆಗೆ ಒಯ್ದು ಜೀವ ತಿರುಗಿದವರ ಕುಂಡಲಿಯಲ್ಲಿ ಅಷ್ಟಮದ ವರುಣನಿರಬಹುದು. ಮೂರ್ಛೆ ಮೊದಲಾದ ರೋಗಗಳಿಂದ ಮರಣವುಂಟಾಗುವದು. ಅಶುಭ ಸಂಬಂಧಿತ ವರುಣನು ಆತ್ಮಹತ್ಯೆಯ ವಿಚಾರವನ್ನು ಹುಟ್ಟಿಸುವನು.

ಅಷ್ಟಮದಲ್ಲಿಯ ವರುಣನು ಅಷ್ಟಮೇಶ, ದ್ವಿತೀಯೇಶ, ಚತುರ್ಥೇಶ, ದಶಮೇಶರ ಶುಭ ದೃಷ್ಟಿಯಲ್ಲಿದ್ದರೆ ವಾರಸಾನಾತಿಯಿಂದ ಧನ, ಭೂಮಿಗತ ಧನವನ್ನು ಕೊಡುವನು.

ನವಮದಲ್ಲಿ:— ನವಮದಲ್ಲಿಯ ವರುಣನು ಆಧ್ಯಾತ್ಮಿಕ ವಿಷಯದಲ್ಲಿ ಪ್ರಗತಿಯನ್ನುಂಟುಮಾಡುವನು. ದೂರ ಪ್ರವಾಸ ತೋರಿಸುವನು. ಇಲ್ಲಿ ಜಲರಾಶಿಯ ವರುಣನು ಶುಭ ಸಂಬಂಧಿತನಾಗಿದ್ದರೆ ಜಲಪ್ರವಾಸವು ಜರಗುವದು. ಇವರು ಒಳ್ಳೇ ವಾಗ್ಮಿಗಳಾಗುವರು. ಭವಿಷ್ಯ ಸೂಚಕ, ವಿಚಿತ್ರ ಸ್ವಪ್ನಗಳು ಬೀಳುವವು. ನವಮಸ್ಥಾನದಲ್ಲಿಯ ವರುಣನು ಹೆಂಡತಿ ಅಥವಾ ಗಂಡನ ಬಂಧು–ಬಾಂಧವರ ವಿಚಿತ್ರ ಸ್ವಭಾವವನ್ನು ತೋರುವನು. ಇಲ್ಲಿಯ ವರುಣನು ಶುಕ್ರನ ಶುಭಯೋಗದಲ್ಲಿದ್ದರೆ ಗಾಯನ–ವಾದನ ಕಲೆಯಲ್ಲಿ ಅಭಿರುಚಿಯಿರುವದು.

ದಶಮದಲ್ಲಿ :— ದಶಮದಲ್ಲಿಯ ವರುಣನು ಉದ್ಯೋಗದಲ್ಲಿಯ ಏಳಿತಗಳ ಸೂಚಕನಾಗಿರುವನು. ವಯಸ್ಸಿನ ೩೭ ರಿಂದ ೪೮ ರಲ್ಲಿ

ಮಹತ್ವದ ಏರಿಳಿತಗಳಾಗುವವು. ಕೆಲಸಲ ವಿಚಿತ್ರ ಹಾಗು ಕ್ಷುಲ್ಲಕ ನೌಕರಿ ಮಾಡುವ ಸಂದರ್ಭಗಳೊದಗಬಹುದು. ದಶಮದ ವರುಣನು ಶುಭ ಸಂಬಂಧಿತನಾಗಿದ್ದರೆ ನೌಕರಿಯಲ್ಲಿ ಬೇಗ ಬೇಗ ಬಡತಿಗಳಾಗುವವು. ಈ ವರುಣನು ಯಾವ ಗ್ರಹದ ಶುಭ ಸಂಬಂಧದಲ್ಲಿರುವನೋ ಆ ಗ್ರಹದ ಕಾರಕತ್ವದ ನೌಕರಿಯನ್ನು ಮಾಡಿದಲ್ಲಿ ಉನ್ನತಿಯಾಗುವದು.

ರವಿಯ ಶುಭಯೋಗದಲ್ಲಿದ್ದರೆ ಬಂಗಾರ ವ್ಯಾಪಾರ, ಸಟ್ಟಾವ್ಯವಹಾರ, ಸರಕಾರಿ ನೌಕರಿ ಮಾಡಬಹುದು. ಶುಕ್ರನ ಶುಭ ಸಂಬಂಧದಲ್ಲಿದ್ದರೆ ಗಾಯನವಾದನ, ಚಿತ್ರಕಲಾ, ಬಟ್ಟೆಯ ವ್ಯಾಪಾರ, ನಾಟಕ ಸಿನೇಮಾಗಳಲ್ಲಿ ನೌಕರಿ ಮಾಡಬಹುದು. ಇಲ್ಲವೆ ಅವುಗಳ ನಿರ್ಮಾತಾ ಆಗಬಹುದು.

ಆಯಾಗ್ರಹಗಳ ಕಾರಕತ್ವವನ್ನು ನೋಡಿ ನಿರ್ಣಯಿಸಬೇಕು. ಅಶುಭ ಸಂಬಂಧಿತ ವರುಣನು ಅವನತಿಯನ್ನು ತರುವನು.

ಏಕಾದಶದಲ್ಲಿ :— ೧೧ ರಲ್ಲಿಯ ವರುಣನು ಹಿರಿಯ ಅಣ್ಣನಿಗೆ ಕೆಡಕು ತೋರಿಸುವನು. ಮಿತ್ರ ವರ್ಗದವರಿಂದ ತ್ರಾಸವಾಗುವದು. ಲಾಭದ ವರುಣನು ಲಾಭದಲ್ಲಿ ಏರಿಳಿತಗಳನ್ನು ತೋರಿಸುವನು.

ದ್ವಾದಶದಲ್ಲಿ :— ೧೨ ರಲ್ಲಿಯ ವರುಣನು ಗುಪ್ತ ಶತ್ರುಗಳನ್ನು ತೋರಿಸುವನು. ಹರ್ಶಲನ ಅಶುಭಯೋಗದಲ್ಲಿದ್ದರೆ ಆಕಸ್ಮಿಕ ಸಂಕಟಗಳು ಉದ್ಭವಿಸುವವು. ಶನಿ ಮಂಗಳರಿಂದ ಪೀಡಿತನಿದ್ದರೆ ಕಾರಾಗ್ರಹವಾಸದ ಸಂಭವವಿರುವದು.

ಮಾನವನ ಶ್ರೇಣಿ

ಮನುಷ್ಯನು ಯಾವ ದರ್ಜೆಗೆ (ಶ್ರೇಣಿಗೆ) ಮುಟ್ಟಬಹುದು ? ಅವನ ಲೌಕಿಕ ಉನ್ನತಿ ಎಂತು ? ಎಂಬುದನ್ನು ವಿಚಾರಿಸುವಾಗ ರವಿ ಚಂದ್ರರ ಬಲವನ್ನೂ, ದಶಮಾಂಶಕ್ಕುಂಟಾಗುವ ಗ್ರಹಗಳ ದೃಷ್ಟಿಯೋಗಗಳನ್ನೂ ಪರೀಕ್ಷಿಸಬೇಕು.

ರವಿ ಚಂದ್ರರು ಪುರುಷ ರಾಶಿಯಲ್ಲಿದ್ದು ಶುಭಯೋಗದಲ್ಲಿರಬೇಕು. ಮುಖ್ಯವಾಗಿ ಹರ್ಶಲ ಗುರು ಮಂಗಳ ನೇಪಚ್ಯೂನರ ಶುಭಯೋಗವಿರಬೇಕು. ರವಿ ಚಂದ್ರರ ಪರಸ್ಪರ ಶುಭಯೋಗವೂ ಒಳ್ಳೆಯದು. ಹಗಲಿನಲ್ಲಿ ರವಿ, ರಾತ್ರಿಯಲ್ಲಿ ಚಂದ್ರ ಕೇಂದ್ರದಲ್ಲಿರಬೇಕು. ಶುಭ ತಾರೆಗಳ ಸಾನ್ನಿಧ್ಯವಿದ್ದಷ್ಟು ಒಳ್ಳೆಯದು. ಸೂರ್ಯನು ಪೂರ್ವಭಾಗದಲ್ಲಿ, ಚಂದ್ರನು ಪಶ್ಚಿಮಭಾಗದಲ್ಲಿದ್ದು ಶುಭ ತಾರೆಗಳು ದಶಮಾಂಶಕ್ಕೆ ಸಂಬಂಧಪಟ್ಟಿರಬೇಕು. ಹೀಗಿದ್ದರೆ ಮಾನವನು ದೊಡ್ಡ ಮನುಷ್ಯನಾಗುವನು. ಶಕ್ತಿಶಾಲಿ ಅಧಿಕಾರಿಯಾಗುವನು.

ರವಿಯು ಪುರುಷ ರಾಶಿಯಲ್ಲಿ, ಚಂದ್ರನು ಸ್ತ್ರೀ ರಾಶಿಯಲ್ಲಿದ್ದು ರವಿಯಾಗಲಿ, ಚಂದ್ರನಾಗಲಿ ದಶಮದಲ್ಲಿದ್ದು ಬೃಹದ್ಗೋಲಗಳ ಶುಭಯೋಗವಿದ್ದರೆ ಗವ್ಹರ್ನರ, ಮಂತ್ರಿ, ಮುಖ್ಯ ಮಂತ್ರಿ ಮುಂತಾದ ಶ್ರೇಣಿಯನ್ನು ಪಡೆಯುವನು. ಅಗ್ನಿರಾಶಿಗಳು ಅಧಿಕಾರವನ್ನು ಕೊಡುವವು. ವಾಯು ರಾಶಿಗಳಿಗೆ ವಿದ್ಯಾಧಿಕಾರ, ಸಂಶೋಧನಾಧಿಕಾರವಿರುವದು. ಬೌದ್ಧಿಕ ಕ್ಷೇತ್ರವು ವಾಯು ರಾಶಿಗಳಿಗೆ ಸಂಬಂಧಿಸಿದೆ. ರವಿ ಚಂದ್ರರು ಕೇಂದ್ರದಲ್ಲಿದ್ದು, ಉಳಿದ ಗ್ರಹಗಳು ಕೇಂದ್ರದಲ್ಲಿರದೆ ಅವರೊಡನೆ ಶುಭಯೋಗ ಮಾಡುತ್ತಿದ್ದರೆ, ದಶಮಾಂಶದೊಡನೆ ಶುಭಯೋಗ ಮಾಡಿರದಿದ್ದರೂ ಸಹಿತ ಮರ್ಯಾದಿತ ಮುಖ್ಯತೆಯನ್ನು ಪಡೆಯುವನು. ಮ್ಯಾಜಿಸ್ಟ್ರೇಟ, ಕಮಾಂಡರ ಇನ್ ಚೀಫ್, ಮಠಾಧಿಕಾರಿ ಇತ್ಯಾದಿ ಹುದ್ದೆಗಳನ್ನು ಪಡೆಯಬಹುದು.

ರವಿ ಚಂದ್ರರು ಕೇಂದ್ರದಲ್ಲಿರದೆ ಮುಖ್ಯ ಗ್ರಹಗಳು ಕೇಂದ್ರದಲ್ಲಿದ್ದು ದಶಮಾಂಶದೊಡನೆ, ದಶಮಾಧಿಪನೊಡನೆ ಶುಭಯೋಗ ಮಾಡುತ್ತಿದ್ದರೆ ಮುನಸಿಪಾಲ್ಟಿ, ಸಮಾಜ ಕಾರ್ಯಗಳಲ್ಲಿ ಮುಖ್ಯತೆಯನ್ನು ಪಡೆಯುವನು. ಕೇಂದ್ರಚ್ಯುತವಾದ ಗ್ರಹಗಳು ಅಷ್ಟೊಂದು ಮುಖ್ಯತೆಯನ್ನು ಕೊಡಲಾರವು.

ರವಿ ಚಂದ್ರರು ಪುರುಷ ರಾಶಿಯಲ್ಲಿರದಿದ್ದರೆ, ಕೇಂದ್ರದಲ್ಲಿ ಇರದಿದ್ದರೆ, ರವಿ ಚಂದ್ರರೊಡನೆ ಯಾರ ಶುಭಯೋಗವೂ ಇರದಿದ್ದರೆ, ಯಾವ ಶುಭ ಗ್ರಹದ ಸಂಬಂಧವೂ ರವಿ ಚಂದ್ರರೊಡನೆ ಅಥವಾ ದಶಮದೊಡನೆ ಇರದಿದ್ದರೆ ಮಾನವನು ಅಪ್ರತಿಥನಾಗಿ ಮೂಲೆಯಲ್ಲಿರುವನು. ಸಂಬಂಧ ವೆಂದರೆ ಮುಖ್ಯವಾಗಿ ಮೂರು ವಿಧ. (**ಸಂಬಂಧತ್ರಯು ಗಾಃ ಬಲೇನ ಸಹಿತಾಃ**) (೧) ಸಹಾವಸ್ಥಾನ ಸಂಬಂಧ, (೨) ದೃಷ್ಟಿ ಸಂಬಂಧ. (೩) ಪರಿವರ್ತನ ಸಂಬಂಧ ಎಂದು ಕಾಲಿದಾಸನು ಕಾಲಾಮೃತದಲ್ಲಿ ಹೇಳಿರುವನು.

ಮಾನವನ ಪರಿಸ್ಥಿತಿಯನ್ನು ಲಕ್ಷ್ಯದಲ್ಲಿ ತಕ್ಕೊಳ್ಳಬೇಕು. ದೇಶ ಕಾಲ ಮಾನ ಪರಿಸ್ಥಿತಿಯನ್ನು ಪರೀಕ್ಷಿಸಬೇಕೆಂದು ಪರಾಶರ ಋಷಿಯೂ ಹೇಳಿರುವನು. ಮಾನವನು ಮೇಲಕ್ಕೆ ಏರಿ ಒಮ್ಮೆಲೆ ಕೆಳಕ್ಕೆ ಇಳಿಯಬಹುದು. ಆದರೂ ಅವನ ಮೂಲ ಕುಂಡಲಿಯ ಬಲವು ಚೆನ್ನಾಗಿ ಇದ್ದರೆ ಇಂತಹ ಸ್ಥಿತಿ ಒದಗಲಾರದು. ಶುಭ ಗ್ರಹಗಳ ಬಲವು ಮುಖ್ಯವಾದುದು. ಶುಭಗ್ರಹಗಳಿಂದ ಉಚ್ಚ ದರ್ಜೆ ಸಿಗುವದಲ್ಲದೆ, ಭದ್ರವಾಗಿ ಉಳಿಯುವದು. ಶುಭ ಗ್ರಹಗಳಿರುವ ರಾಶಿಯು ಮತ್ತು ಲಗ್ನಾಧಿಪನ ರಾಶಿಯ ಒಡೆಯರು ಪಾಪಗ್ರಹಗಳಿರುವಾಗ ಪಡೆದ ಗೌರವವು ಪರಾಧೀನ ಗೌರವ; ಕಂಟಕ ಮಯವಾಗಿರುವದು.

ಜಗದಲ್ಲಿ ಮಾನವನು ಮುಂದೆ ಬರಬೇಕಾದರೆ ಮುಖ್ಯ ಲಕ್ಷಣ ಗುರು ೧೦ ರಲ್ಲಿರಬೇಕು. ರವಿ ಚಂದ್ರರಲ್ಲಿ ತ್ರಿರೇಕಾದಶ; ತ್ರಿಕೋಣ (△) ಯೋಗಗಳಿರಬೇಕು. ಚಂದ್ರ ಗುರು ತ್ರಿಕೋಣವು, (△) ರವಿ ೧೦ ರಲ್ಲಿ ಧನಸಹಮ ಬಿಂದುವಿನೊಡನೆ, ಅವರ ಶುಭಯೋಗವಿರಬೇಕು. ೩–೪

ಗ್ರಹಗಳು ಒಂದೇ ರಾಶಿಯಲ್ಲಿ ಸಾರ್ವಜನಿಕ ಕೀರ್ತಿಯನ್ನು ಕೊಡುವವು. ೨–೩ ಗ್ರಹಗಳು ಉದಿತವಾಗುತ್ತಿರಲಿ ಅಥವಾ ದಶಮವನ್ನು ಮುಟ್ಟುತ್ತಿರಲಿ ಶ್ರೇಣಿಯನ್ನು ಎತ್ತರಿಸುವವು. ಗುರು–ಚಂದ್ರ, ಬುಧ–ಶುಕ್ರ ಮಂಗಳನೂ ಕೂಡ ಉದಿತ ಗೋಲಾರ್ಧದಲ್ಲಿ ತಮಗೆ ಬಲವನ್ನು ಕೊಡುವ ರಾಶಿಯಲ್ಲಿದ್ದರೆ; ರವಿ ಮಂಗಳ, ಗುರು ಶುಕ್ರರು ದ್ವಾದಶಭಾವದ ಆರಂಭದಲ್ಲಿದ್ದು ದಶಮದೊಡನೆ ತ್ರಿರೇಕಾದಶ ಯೋಗ ಮಾಡುತ್ತಿದ್ದರೆ; ಚಂದ್ರನು ಲಗ್ನದಲ್ಲಿದ್ದು ರವಿ ಶುಕ್ರ ಗುರುಗಳೊಡನೆ ತ್ರಿರೇಕಾದಶ, ತ್ರಿಕೋಣ (△) ಯೋಗ ಮಾಡುತ್ತಿದ್ದರೆ, ಅವು ಸ್ಥಿರ ತಾರೆಗಳೊಡನಿದ್ದರೆ; ರವಿ ಚಂದ್ರ ಗುರುಗಳು ಕರ್ಕ ಮೀನ ರಾಶಿಗಳಲ್ಲಿ ಅಂಶಾತ್ಮಕ ತ್ರಿಕೋಣ (△) ಯೋಗ ಮಾಡುತ್ತಿದ್ದರೆ; ಗುರು ೧೦ ರಲ್ಲಿದ್ದು ರವಿ ಚಂದ್ರ ಮಂಗಳರೊಡನೆ ಶುಭಯೋಗಿಯಾಗಿದ್ದರೆ, ಇವರುಗಳು ಉದಯ ಹೊಂದುವ ಗ್ರಹಗಳಾಗಿದ್ದರೆ, ರಾಜಮರ್ಯಾದೆ ಗೌರವಗಳು ದೊರೆಯುವವು.

ಲಗ್ನಾಧಿಪತಿಯು ರವಿಯೊಡನೆ ಶುಭಯೋಗಿಯಾಗಿ ಪೂರ್ವಭಾಗದಲ್ಲಿರಬೇಕು. ದಶಮಾಧಿಪತಿಯ ತ್ರಿಕೋಣ (△) ದಲ್ಲಿದ್ದರೂ ಒಳ್ಳೆಯದು. ಶನಿ ದಶಮದಲ್ಲಿ ಶಾಶ್ವತ ಗೌರವವನ್ನು ಕೊಡಲಾರನು. ದುರ್ಬಲ ಶನಿ ಪೀಡಿತನಿದ್ದರೆ ಏರಿ ಇಳಿಯುವನು. ದಶಮಸ್ಥ ಶನಿ ಮಾನವನನ್ನು ಏರಿಸಿ ಪುನಃ ಇಳಿಸಬಹುದು. ನೇಪೋಲಿಯನ್ ಬೋನಾಪಾರ್ಟ, ಹಿಟ್ಲರ ಇವರ ಕುಂಡಲಿಗಳು ಇದಕ್ಕೆ ಉದಾಹರಣೆಗಳು. ಶನಿ ದಶಮದೊಡನೆ, ರವಿ ಗುರುಗಳೊಡನೆ ಅಶುಭಯೋಗಮಾಡುತ್ತಿದ್ದರೆ ಗೌರವ ಶಾಶ್ವತವಲ್ಲ. ಗುರು ಮಾನ ಗೌರವ ಶ್ರೇಣಿಗಳನ್ನು ಕೊಡುವದರಲ್ಲಿ ಅಗ್ರಗಣ್ಯನು. ಗುರುವೋರ್ವನೇ ದಶಮದಲ್ಲಿ ಪೀಡಿತನಾಗಿರದಿದ್ದರೆ ಖ್ಯಾತಿ ಸಂಪತ್ತಿಗಳನ್ನು ಕೊಡುವನು. ಮಂಗಳನ ಅಧಿಕಾರವು ಸೈನ್ಯದಲ್ಲಿ ಹಿಂಸೆಯಲ್ಲಿ ಇರುವದು. ಯುದ್ಧದಲ್ಲಿ ವಿಜಯವನ್ನು ಪಡೆದು ಅಧಿಕಾರವನ್ನು ಗಳಿಸುವನು. ಶತ್ರುಗಳನ್ನು ಗೆಲ್ಲುವನು. ದಶಮದ ಮಂಗಳನು ಯುದ್ಧ ಪ್ರಿಯನು. ಉತ್ತಮ ಡಾಕ್ಟರ, ರಾಸಾಯನಿಕನಾಗಬಹುದು. " **ದಶಮೇಂಗಾರಕಶ್ಚೈವ ಸುಪುತ್ರಃ ಕುಲದೀಪಕಃ** " ಎಂದಿರುವದು. ಮಂಗಳನ ಬಲವನ್ನು ಪರೀ

ಕ್ತಿಸಿ ಹೇಳಬೇಕು. ಶುಕ್ರನಿಗೆ ದಶಮಭಾವದ ಸಂಬಂಧ ಬಂದರೆ ಶುಭ ಫಲಂ ಪ್ರಮದಾಕೃತಂ ಸ್ಯಾತ್. ಸಾಹಿತ್ಯ ಸಂಗೀತ ಕಲೆಗಳಿಂದ ಮಾನ ಗೌರವಗಳು ಸಿಗುವವು. ಅವನು ದಶಮದಲ್ಲಿ ಶನಿಯ ಅಶುಭ ಸಂಬಂಧವು ಬಾರದಿದ್ದರೆ ಗೌರವ ಕೊಡುವನು. ಮಂಗಳನ ಅಶುಭ ಸಂಬಂಧ, ಇತರ ಗ್ರಹಗಳ ಶುಭ ಸಂಬಂಧವಿಲ್ಲದಾಗ ಅವನ ಶೀಲವನ್ನು ಕೆಡಿಸುವುದು. ಬಲಿಷ್ಠ ಶುಕ್ರನು ಸ್ನೇಹ ಭಕ್ತಿಗಳಿಂದ ಗೌರವ ಕೊಡುವನು.

ಬುಧನು ಗೌರವವನ್ನು ಕೊಡುವನು. ಬೌದ್ಧಿಕ ಕಾರ್ಯಗಳಿಂದ ಮಾನ ಸಿಗುವದು. ಸೆಕ್ರೆಟರಿ ಏಟದಲ್ಲಿ ಅಕೌಂಟಂಟ ಜನರಲ್‌ನಾಗಬಹುದು. ಬಲವಿಲ್ಲದ ಬುಧನು ಪೋಷ್ಟಮನ್ ಶಾಲಾಮಾಸ್ತರರನ್ನು ಮಾಡುವನು. ಬಲಿಷ್ಠ ಬುಧನು ಪೋಷ್ಟ ಮಾಸ್ತರ ಜನರಲ್‌ನನ್ನಾಗಿ ಮಾಡಬಹುದು. ರೇಲ್ವೆ ಸಂಪರ್ಕ ಖಾತೆಯಲ್ಲಿ ಬುಧನ ಸಂಬಂಧವಿರುವದು. ವ್ಯಾಪಾರ ಉದ್ಯಮದಲ್ಲಿಯೂ ಬಲವಿದ್ದಂತೆ ಅವನ ಸಂಬಂಧವಿರುವದು. ಹರ್ಷಲನ ಶುಭ ಸಂಬಂಧವು ಗೌರವ ಮರ್ಯಾದೆಗಳನ್ನು ಸಾರ್ವಜನಿಕ ಸಂಸ್ಥೆ, ಫ್ಯಾಕ್ಟರಿ, ನಗರ, ಗವ್ಹರ್ಮೆಂಟ, ಸಾಯನ್ಸ, ಇಂಜನಿಯರಿಂಗ ಇತ್ಯಾದಿಗಳಲ್ಲಿ ಕೊಡುವುದು.

" ದಶಮಸ್ಥೇ ರವಿತನಯೋ ವ್ರಂದಪುರಗ್ರಾಮ ನೇತಾರಂ. "

ಸಾರಾವಲಿ.

ದರ್ಜೆ ಅಥವಾ ಶ್ರೇಣಿ ಯಾವಾಗ ಪ್ರಾಪ್ತವಾಗುದು ? ಅಥವಾ ಮನುಷ್ಯನು ಯಾವಾಗ ಶ್ರೇಣಿಯಿಂದ ಇಳಿಯುವನು ? ಎಂಬುದಕ್ಕೆ ವರಾಹಮಿಹಿರಾಚಾರ್ಯರ ಸೂತ್ರವನ್ನು ನೆನಪಿನಲ್ಲಿಡಬೇಕು.

" ಕರ್ಮಲಗ್ನಯುತ ಪಾಕದಶಾಯಾಂ, ರಾಜ್ಯಲಬ್ಧಿರಥವಾ
ಪ್ರಬಲಸ್ಯ ।
ಶತ್ರು ನೀಚಗ್ರಹಯಾತ ದಶಾಯಾಂ ಛಿದ್ರ ಸಂಶ್ರಯದಶಾ
ಪರಿಕಲ್ಪ್ಯಾ ॥ "

ಕರ್ಮ; ೧೦. ಲಗ್ನ (೧).

ಕಾಲನಿರ್ಣಯವನ್ನು ದಶಾ ಪದ್ಧತಿಯಿಂದಲೂ ಮಾಡಬಹುದು. ಈ ಸುಂದರ ಛಂದಸ್ಸಿನ ಪದ್ಯ ವಾಚಕರ ನೆನಪಿನಲ್ಲಿ ಸಹಜವಾಗಿ ಉಳಿಯಬಹುದು. ಯಾವ ಗ್ರಹವೇ ಆಗಲಿ ೧೦ ರಲ್ಲಿ ಉಚ್ಚ, ಸ್ವಕ್ಷೇತ್ರದಲ್ಲಿದ್ದರೆ ಇತರ ಗ್ರಹಗಳ ಶುಭದೃಷ್ಟಿಯಲ್ಲಿದ್ದರೆ ಕೀರ್ತಿ ಮರ್ಯಾದೆ ದೊರಕುವವು. ವಿಶೇಷವಾಗಿ ಗುರು ಶುಕ್ರ ರವಿ ಚಂದ್ರ ಬುಧರು ಅಲ್ಲಿರುವುದು ಒಳ್ಳೆಯದು. ರವಿ ಚಂದ್ರರ ಸಮಸಪ್ತಕವು ವರಿಷ ರೊಡನೆ ತೊಂದರೆಗಳ ಸೂಚಕವಾಗಿದೆ. ಪ್ರತಿ ಏಳು ವರುಷಕ್ಕೊಮ್ಮೆ ತೊಂದರೆ ತರುವದು.

ಧನಯೋಗ

ಧನಭಾವವೆಂದರೆ ಎರಡನೆಯ ಮನೆ. ಧನ ಆಸ್ತಿ-ಪಾಸ್ತಿಗಳನ್ನು ಈ ಭಾವವು ಸೂಚಿಸುವದು. ೨ ನೆಯ ಮನೆ ಅನುಮಾನದಿಂದ ಬರುವ ಧನ, ಸಟ್ಟಾ ಲಾಟರಿಗಳಿಂದ ೮ ನೆಯ ಮನೆ ವಾರಸಾನಾತೆಯಿಂದ ಮೃತ್ಯು ಪತ್ರದ್ವಾರಾ ಬರುವ ಧನ, ಸಾರ್ವಜನಿಕ ಕಾರ್ಯಗಳಿಂದ, ಪಾಲುಗಾರ ನಿಂದ ಬರುವ ಧನಸ್ಥಾನ ಸೂಚಕವಾಗಿದೆ. ೧೧ ನೆಯ ಮನೆಯು ತನ್ನ ಕಾರ್ಯಗಳಿಂದ, ಉದ್ಯೋಗದಿಂದ ಬರುವ ಧನವನ್ನು ತೋರಿಸುವದು. ಈ ಭಾವಗಳ ಅಧಿಪತಿಗಳೂ ಬಲಾಬಲ ತಾರತಮ್ಯದಿಂದ ಲಾಭ ಹಾನಿಗಳನ್ನು ಸೂಚಿಸುವರು.

ಧನಭಾವದಲ್ಲಿದ್ದ ಗ್ರಹಗಳನ್ನು ನೋಡಬೇಕು. ಅದರ ಅಧಿಪತಿ, ಅಲ್ಲಿರುವ ರಾಶಿ, ಇಲ್ಲಿ ದೃಷ್ಟಿಯಿಟ್ಟಿರುವ ರಾಶಿ ಗ್ರಹಗಳನ್ನು ಅವುಗಳ ರಾಶಿ ಯನ್ನೂ ಪರಿಗಣಿಸಬೇಕು. ಶುಭದೃಷ್ಟಿಯಿಟ್ಟಿರುವ ಗ್ರಹಗಳು ಆ ಗ್ರಹ ಕಾರಕ ವಸ್ತುಗಳಿಂದ, ಆ ಮನುಷ್ಯರಿಂದ ಧನವನ್ನು ಒದಗಿಸುವವು. ಗ್ರಹ ಸೂಚಿತ ಉದ್ಯೋಗದಿಂದಲೂ ಧನವು ದೊರಕುವದು. ಅಶುಭ ದೃಷ್ಟಿಗಳು ಇದರಂತೆ ಹಾನಿಯನ್ನುಂಟುಮಾಡುವವು. ಧನಭಾವದಲ್ಲಿ ಯಾವ ಗ್ರಹ ವಿದ್ದರೂ ಶುಭದೃಷ್ಟವಾಗಿದ್ದರೆ ಲಾಭದಾಯಕದಾಗುವದು. ಗ್ರಹವು ದುರ್ಬಲವಾಗಿದ್ದರೆ, ಆದರೆ ಶುಭದೃಷ್ಟವಾಗಿದ್ದರೆ ಧನವು ಶಾಶ್ವತವಾಗುಳಿ-ಯಲಾರದು. ೧೧, ೨, ೮ ಭಾವಗಳ ವಿಚಾರವನ್ನೂ ಈ ರೀತಿಯಿಂದ ಮಾಡಬೇಕು.

ವಿಶೇಷವಾಗಿ ರವಿ ಚಂದ್ರ ಗುರು ಶುಕ್ರರ ಅವಸ್ಥೆಯನ್ನು ನೋಡಿರಿ. ಇವರು ಸ್ವಾಭಾವಿಕ ಧನ ಸೂಚಕರು. ಸ್ತ್ರೀಯರ ಕುಂಡಲಿಯಲ್ಲಿ ರವಿ ಮುಖ್ಯ. ಪುರುಷರ ಕುಂಡಲಿಯಲ್ಲಿ ಚಂದ್ರ ಮುಖ್ಯ. ಈ ಗ್ರಹಗಳು ಪೀಡಿತವಾಗಿದ್ದರೆ ಬಡತನವು ಬೆನ್ನಟ್ಟುವದು. ಶುಭದೃಷ್ಟಿ ಸಂಪತ್ತಿದಾಯ ಕವು. " ಲಭೇತವಾ ಪ್ರಾರ್ಥಯಿತಾ ನವಾ ಶ್ರಿಯಂ, ಶ್ರಿಯಾದುರಾಪಃ

ಕಥಮೀಪ್ಸಿತೋ ಭವೇತ್" ಎಂಬ ಕಾಲಿದಾಸ ಕವಿಯ ಮಾತು ಅನು ಭವಕ್ಕೆ ಬರುವದು. ರವಿ ಚಂದ್ರರು ಶುಭಯೋಗದಲ್ಲಿದ್ದರೆ (△ ಧನಕ್ಕೆ ಅನುಗ್ರಾಹಕವಾಗುವದು. ರವಿ ಚಂದ್ರರ ಅಶುಭ ದೃಷ್ಟಿಯ ಸಾಂಪತ್ತಿಕ ಸ್ಥಿತಿಯು ಅನಿಶ್ಚಿತವಾಗಿರುವದನ್ನು ತೋರಿಸುವದು: ಏರಿಳಿ ಗಳನ್ನು ಪಡೆಯುವದು. ಇದರಂತೆ ಧನಸಹಮ ಬಿಂದುವಿನ ಸ್ಥಿತಿಯನೂ ವಿಚಾರಿಸಿರಿ. (ರವಿಯಿಂದ ಚಂದ್ರನು ಎಷ್ಟು ದೂರ ಇರುವನೋ ಅಷ್ಟೆ ದೂರ ಲಗ್ನಾಂಶದಿಂದ ಧನಸಹಮ ಬಿಂದು ಇರುವದು.) ಧನಯೋಗ ದಾರಿದ್ರ್ಯಯೋಗಗಳನ್ನು ಸರಿಯಾಗಿ ತೂಗಿ ನೋಡಿರಿ. ಬಳಿಕ ಜಾತ ಸಾಂಪತ್ತಿಕ ಸ್ಥಿತಿಯನ್ನು ನಿರ್ಧರಿಸಿರಿ.

ರಾಶಿಗಳು ವಸ್ತುಗಳ ಸಂಬಂಧವನ್ನು ಸೂಚಿಸುವವು. ಅಲ್ಲಿರುವ ಶುಭಾಶುಭದೃಷ್ಟಿಗಳು ಲಾಭ ಹಾನಿಯನ್ನು ಸೂಚಿಸುವವು.

ಮೇಷ:—ಸ್ವಪ್ರಯತ್ನದಿಂದ ಧನು ಕೌಟಿಲ್ಯವು ಅಡಕವಾಗಿರುವದು ಇಲ್ಲಿ ಶನಿಯು ಅಶುಭ ದೃಷ್ಟಿಯಲ್ಲಿದ್ದರೆ ಕಕ್ಕಾ, ಕಕ್ಕಿ ಅಬಚಿ ಇವರಿಂದ ಧನ ಹಾನಿ. ಶುಭದೃಷ್ಟನಿದ್ದರೆ ಇವರಿಂದ ಲಾಭ. ಗುರುವಿನಿಂದ ಶುಭದೃಷ್ಟ ನಾಗಿದ್ದರೆ ಸ್ಪರ್ಧೆಯಿಂದಲೂ ಧನವು ಸಿಗುವದು. ಮಂಗಳನು ಖಾಸಗಿ ಉದ್ಯಮಗಳಿಂದ ಧನಸೂಚಕನು. ಅಶುಭ ದೃಷ್ಟನಾಗಿದ್ದರೆ ಮದುವೆ ಯಿಂದ ಹಾನಿ ಸೂಚಕ. ಶುಕ್ರನು ಕೆಳತರಗತಿಯ ಜನರ ಸಾವಿನಿಂದ ಅಥವಾ ತಾಯಿಯ ಬಳಗದವರಿಂದ ಧನವನ್ನು ಕೊಡುವನು.

ವೃಷಭ:— ಇದು ಆರ್ಥಿಕ ರಾಶಿಯು. ಠೇವು ಇಡಲು ಆತುರತೆ ಇರುವದು. ವಿವೇಕಿ ಮದುವೆಯಿಂದ ಧನಲಾಭ. ಶನಿ ಇದ್ದರೆ ಉದ್ಯೋಗ ದಿಂದ, ಠೇವಿನಿಂದ ಬರಬರುತ್ತ ಸಾಂಪತ್ತಿಕ ಸ್ಥಿತಿ ಸುಧಾರಿಸುವದು. ಗುರು ನ್ಯಾಸದಿಂದ, ಸಟ್ಟಾದಿ ವ್ಯಾಪಾರ, ಸ್ತ್ರೀಯರಿಂದ ಧನಕೊಡುವನು. ಮಂಗ ಳನು ಶ್ರಮ ಸಾತತ್ಯದಿಂದ ಕೊಡುವನು. ಶುಕ್ರ ಉದ್ಯೋಗದಿಂದ, ಚಂದ್ರ ತಂದೆಯಾಯಿಗಳಿಂದ, ವಾರಸಾನಾತೆಯಿಂದ, ಕಂಪನಿ, ವ್ಯಾಪಾರಾದಿ ಗಳಿಂದ, ಹರ್ಶಲ ಪಾಲುಗಾರಿಕೆಯಿಂದ ಧನಕೊಡುವರು.

ಮಿಥುನ:— ಏರಿಳಿತಗಳು, ಧನಾಗಮ ಎರಡು ದಾರಿಗಳಿಂದ. ಉತ್ತರ ವಯಸ್ಸಿನಲ್ಲಿ ಉಳಿಕೆಯುಂಟಾಗುವದು. ಶನಿ ಸಂಶಯಿತ ದಾರಿಯಿಂದ ಧನ ಕೊಡುವನು. ಮಂಗಳ ಬುದ್ಧಿ ಚಾತುರ್ಯದಿಂದ, ಶುಕ್ರ ಬಾಂಧವರಿಂದ, ಸಟ್ಟಾ ಲಾಟರಿಗಳಿಂದ, ಮಿತ್ರರು, ಉಪದೇಶ ಗುಪ್ತ ಪದ್ಧತಿಗಳಿಂದ ಧನ ಕೊಡುವರು. ನೇಪಚ್ಯೂನನು ಶಾಸ್ತ್ರಜ್ಞರಿಂದ ಧನವನ್ನು ಕೊಡಿಸುವನು.

ಕರ್ಕ: – ಮಿತವ್ಯಯದಿಂದ ಧನದ ಉಳಿತಾಯವಾಗುವದು. ಜಲ ಪ್ರವಾಸಗಳಿಂದ ಧನ ಬರುವುದು. ಶನಿ ಗೂಢವಿದ್ಯೆಯಿಂದ ದುಡ್ಡು ಕೊಡಿಸಿದರೆ, ಗುರು ಜಿಂದಗಿ ಕೊಡಿಸುವನು. ಬುದ್ಧಿಯಿಂದ ಧನಾರ್ಜನೆಯಾಗುವದು. ಮಂಗಳನು ಸೇವಕರಿಂದ, ಏಜನ್ಸಿಯಿಂದ, ಪ್ರವಾಸ ಸಾರ್ವಜನಿಕ ಕಾರ್ಯಗಳಿಂದ, ಶುಕ್ರನು ಸಾರ್ವಜನಿಕ ಕಾರ್ಯಗಳ ಪೂರ್ಣತೆಯಿಂದ, ಚಂದ್ರ ಆಸ್ತಿಯಿಂದ ಸಮುದ್ರ ವ್ಯಾಪಾರದಿಂದ, ಜಲವ್ಯವಹಾರದಿಂದ ಧನವನ್ನು ಕೊಡಿಸುವರು.

ಸಿಂಹ:— ಸಟ್ಟಾ ವ್ಯಾಪಾರದಿಂದ ಸಾರ್ವಜನಿಕ ಕಾರ್ಯಗಳಿಂದ ಧನಾಗಮ. ಶನಿ ಮನೆತನ, ಪರದೇಶ ವ್ಯವಹಾರಗಳಿಂದ, ಗುರು ಮದುವೆ, ಖನಿ ವ್ಯವಹಾರದಿಂದ, ಮಂಗಳ ಸರಕಾರ ಸಾರ್ವಜನಿಕ ಕಾರ್ಯಗಳಿಂದ ಧನವನ್ನು ಕೊಡುವರು. ಶುಕ್ರನು ವಾರಸಾನಾತೆಯಿಂದ ಧನ ಕೊಡಿಸುವನು. ರವಿ ಧನದ ಕೊರತೆ ಸೂಚಿಸುವನು. ಆಯುಷ್ಯದ ಕೊನೆಯ ಭಾಗದಲ್ಲಿ ಧನ ಪ್ರಾಪ್ತಿಯಾಗುವದು.

ಕನ್ಯಾ:— ಪರದೇಶ ವ್ಯವಹಾರ, ಆರೋಗ್ಯಖಾತೆ, ಸೇವಾ ಧರ್ಮ ಇವುಗಳಿಂದ ಧನಾಗಮನ ಸೂಚಕವಾಗಿದೆ. ಶನಿಯು ಅಲ್ಲಿದ್ದರೆ ಧಾರ್ಮಿಕ ಜನರಿಂದ, ಗುರು ಠೇವು ಇಡುವದರಿಂದ, ಸೇಕಂಡ ಹ್ಯಾಂಡ ವಸ್ತುಗಳ ವ್ಯವಹಾರದಿಂದ ದುಡ್ಡು ಬರುವದು. ತಂದೆ–ತಾಯಿಗಳಿಗಿಂತ ಸ್ಥಿತಿವಂತನಿರುವನು. ಮಂಗಳನು ಸಟ್ಟಾ ಲಾಟರಿ ಠೇವುಗಳಿಂದ ಹಣವನ್ನು ಕೊಡುವನು. ಶುಕ್ರನು ಸಟ್ಟಾ ವ್ಯವಹಾರದಿಂದ, ಹರ್ಶಲನು ಸಂಸ್ಥಾನ ಹಾಗು

ಸಾರ್ವಜನಿಕ ಕಾರ್ಯಗಳಿಂದ ಗಳಿಕೆಯನ್ನು ಸೂಚಿಸುವರು. ರವಿಯು ಮಧ್ಯಮ ವಯಸ್ಸಿನಲ್ಲಿ ಧನಾರ್ಜನೆಯನ್ನು ಸೂಚಿಸುವನು.

ತುಲಾ:— ಪಾಲುಗಾರಿಕೆಯ ವ್ಯವಹಾರದಿಂದ ಧನಾಗಮನವು. ಶನಿಯು ಶ್ರಮ ಉದ್ಯೋಗಗಳಿಂದ, ಗುರು ಸಂಸ್ಥಾನಗಳಿಂದ ಪಾಲುಗಾರಿಕೆ ಹೆಂಡತಿ, ಕೆಳತರಗತಿಯ ಜನರು ವ್ಯಾಪಾರ, ಶಾಸ್ತ್ರ ಏಜಂಟಗಿರಿಯಿಂದ ಹಣ ಕೊಡಿಸುವನು. ಮಂಗಳನಿದ್ದರೆ ಕೆಳತರಗತಿಯ ಜನರಿಂದ ಧನಹಾನಿಯನ್ನು ಸೂಚಿಸುವದು. ಶುಕ್ರನು ಪೀಡಿತನಿದ್ದರೆ ಮದುವೆಯಿಂದ ಹಾನಿಯು.

ವೃಶ್ಚಿಕ:— ಪರರ ಸಾವಿನಿಂದ ಮದುವೆಯಿಂದ ಹಾನಿ. ಶನಿಯು ಪಬ್ಲಿಕ್ ಕಂಪನಿಯಿಂದ ಧನವನ್ನು ಕೊಡಿಸುವನು.

ಧನು:— ಸರ್ವೀಸದಿಂದ ಎರಡನೆಯವರ ಸೇವೆಯಿಂದ ಧನಪ್ರಾಪ್ತಿಯಾಗುವದು.

ಮಕರ:— ಸಾಹಸದಿಂದ ಸಾರ್ವಜನಿಕ ಮಾನ್ಯತೆಯಿಂದ ದುಡ್ಡು ಬರುವದು. ಅರ್ಥಾರ್ಜನ ಶಕ್ತಿಯು ನೆಟ್ಟಗಿರುವದು.

ಕುಂಭ:— ಧನವನ್ನು ಸಂಚಯಿಸಲು ಒಳ್ಳೆಯ ಆತುರತೆ ಇದ್ದರೂ ಒಮ್ಮೆಲೇ ಹಾನಿಯಾಗುವ ಸಂಭವವಿರುವದು.

ಮೀನ:— ಮಿತ್ರರಿಂದ ಲಾಭ. ಶನಿ ಧನವನ್ನು ಅಲ್ಲಗಳೆಯುವನು. ಗುರು ಕಂಪನಿಗಳ ಸಂಬಂಧದಿಂದ ಖನಿಯಿಂದ ದ್ರವ್ಯ ಕೊಡುವನು. ನೇಪಚ್ಯೂನನು ದಾನ ಸಂಸ್ಥೆಗಳಿಂದ ಧನಕಾರಕನು.

ಒಟ್ಟಿನಲ್ಲಿ ಚರರಾಶಿಗಳು ಒಳ್ಳೇ ಅರ್ಥಾರ್ಜನ ಶಕ್ತಿಯನ್ನು ಕೊಡುವವು. ಅದರಂತೆ ಖರ್ಚೂ ಹೆಚ್ಚು. ಸಾಹಸದಿಂದ ಸಾರ್ವಜನಿಕ ಮಾನ್ಯತೆಯಿಂದ ಧನವನ್ನು ಗಳಿಸಿ ಕೊಡುವವು. ಸ್ಥಿರರಾಶಿಗಳು ಧನವನ್ನು ಸಂಚಯಿಸಲು ಆತುರವಾಗಿರುವವು. ಒಮ್ಮೆಲೆ ಹಾನಿಯನ್ನುಂಟುಮಾಡುವವು. ಇವು ಸರಕಾರ ಕಾರ್ಯಗಳಿಗೆ ಒಳ್ಳೆಯವು. ದ್ವಿಸ್ವಭಾವಿ ರಾಶಿಗಳು ಸರ್ವೀಸದಿಂದ ಎರಡನೆಯವರ ಸೇವೆಯಿಂದ ಧನವನ್ನು ಕೊಡುವವು.

ಧನಯೋಗದ ಸೂತ್ರಗಳು:— ಅಷ್ಟಮಾಧಿಪನು ಧನದಲ್ಲಿದ್ದು ಶುಭದೃಷ್ಟಿಯಲ್ಲಿದ್ದರೆ ವರದಕ್ಷಿಣೆಯಿಂದ ವಾರಸಾನಾತೆಯಿಂದ ಧನಪ್ರಾಪ್ತಿಯಾಗುವದು. ಬಲಿಷ್ಠ ಗುರು ಲಗ್ನದಲ್ಲಿದ್ದರೆ; ಶುಭದೃಷ್ಟ ಚಂದ್ರನು ಧನಭಾವದಲ್ಲಿದ್ದರೆ ದುಡ್ಡು ಸಾಕಷ್ಟು ಬರುವದು. ಧನಸಹಮ ಬಿಂದು ಬಲಿಷ್ಠವಿದ್ದು ಅದರ ಅಧಿಪತಿ ೮ ರಲ್ಲಿದ್ದು ಲಗ್ನಾಧಿಪತಿಯ ಶುಭಯೋಗದಲ್ಲಿದ್ದರೆ ವೃತ್ಯುಪತ್ರದ್ವಾರಾ ಧನಪ್ರಾಪ್ತಿಯಾಗುವದು. ರಾಹು ಚಂದ್ರ ಗುರು ಶುಕ್ರರು ನಾಲ್ಕು ದಿನ ಬಾಳುವ ಸಂಪತ್ತಿಯನ್ನು ಕೊಡುವರು. ಗುರು ಶುಕ್ರರು ಧನಭಾವಾರಂಭದ ಬಿಂದುವಿನೊಡನೆ ಶುಭಯೋಗ ಮಾಡುತ್ತಿದ್ದರೆ ತಾಳುವ ಬಾಳುವ ಧನವನ್ನು ಕೊಡುವರು. ಧನಸಹಮ ಬಿಂದುವಿನ ಅಧಿಪತಿ ಶನಿಯಾಗಿದ್ದು ಅವನು ಗುರುವಿನ ಶುಭಯೋಗದಲ್ಲಿದ್ದರೆ ವಾರಸಾನಾತಿಯಿಂದ ಧನಪ್ರಾಪ್ತಿಯಾಗುವದು. ದೃಷ್ಟಿ ಕೇಂದ್ರದಲ್ಲಿದ್ದು ಗುರು ಮಿಥುನ ಧನು ಮೀನಗಳಲ್ಲಿ ೭ ರಲ್ಲಿದ್ದರೆ, ಶುಭದೃಕ್‌ಪಾತದಲ್ಲಿದ್ದರೆ ಜಾತನು ದತ್ತಕ ಹೋಗಿ, ದತ್ತಕ ತಾಯಿ-ತಂದೆಗಳಿಂದ ವಂಶಪಾರಂಪರ್ಯದ ಧನವು ಸಿಗುವದು.

ಚಂದ್ರನು ವೃಷಭದಲ್ಲಿದ್ದು ಗುರುವಿನ ಕೇಂದ್ರ ಪ್ರತಿ ಯೋಗದಿಂದ ಆಗಲಿ ರವಿಯೊಡನೆ ತ್ರಿಕೋಣ ಯೋಗ ಮಾಡುತ್ತಿದ್ದರೆ ವಿಪುಲ ಧನವು ಸಿಗುವದು. ಶುಕ್ರನಾಗಲಿ, ಗುರುವಾಗಲಿ ೭ ರಲ್ಲಿದ್ದು ರಾಹುವಿನಿಂದ ಅಥವಾ ಬುಧನಿಂದ ಕೂಡಿದ್ದರೆ ಹೆಂಡತಿಯಿಂದ ಧನ ಸಿಗುವದು. ಕೇತು ಧನಭಾವದಲ್ಲಿ ಬಡತನ, ಚೌರ್ಯಸೂಚಕನು. ಬಹುಸಂಖ್ಯಾಕ ಗ್ರಹಗಳು ವಕ್ರಿಯಾಗಿ ಅನುದಿತ ಗೋಲಾರ್ಧದಲ್ಲಿದ್ದರೆ ಸಂಪತ್ತಿಯ ಹ್ರಾಸವನ್ನು ಸೂಚಿಸುವವು. ಮಂಗಳ ಶನಿಗಳು ೪ ರಲ್ಲಿ ಚರರಾಶಿಯಲ್ಲಿ ಗುರುವಿನ ಶುಭ ದೃಷ್ಟಿ ವ್ಯತಿರಿಕ್ತವಾಗಿ ಇದ್ದರೆ ಜೀವನದುದ್ದಕ್ಕೂ ಬಡತನದ ಕೂಡ ಹೋರಾಟ ನಡೆಯಿಸಬೇಕಾಗುವದು.

ಗ್ರಹಗಳು:— ರವಿ ತಂದೆಯಿಂದ, ವರಿಷ್ಠರಿಂದ, ಉದ್ಯೋಗದಿಂದ ಧನವನ್ನು ಒದಗಿಸುವನು. ಆದರೆ ಇವರು ಖರ್ಚಿಕರಿರುವರು. ಚಂದ್ರನು ತಾಯಿಯಿಂದ, ಸ್ತ್ರೀಯರಿಂದ, ಸಾರ್ವಜನಿಕ ಸೇವೆಯಿಂದ ಸಪತ್ತು ಕೊಡು

ವನು. ಚಂದ್ರನು ದಶಮ ಬಿಂದುವಿನ ಸಮೀಪದಲ್ಲಿದ್ದು ಬಲಿಷ್ಠನಾಗಿದ್ದರೆ ಫ್ಯಾಕ್ಟರಿಗಳಿಂದ ಧನವನ್ನು ಕೊಡುವನು. ಮಿತವ್ಯಯಿ ಆಗಿರುವನು. ಆದರೆ ಚಂದ್ರನ ಧನ ಅಸ್ಥಿರ. ಗುರುವಿನ ಅಶುಭದೃಷ್ಟಿ ಇದ್ದರೆ ಆತ್ಯಂತಿಕ ಔದಾರ್ಯದಿಂದ ಧನ ಕಳಕೊಳ್ಳುವನು. ಶನಿಯಿಂದ ಪೀಡಿತನಿದ್ದರೆ ಸಾಂಪತ್ತಿಕ ದರ್ಜೆ ಕೆಳಗಿಳಿಯುವದು. ಶನಿ ಚಂದ್ರಯುತಿ ಕೇಂದ್ರದಲ್ಲಿದ್ದರೆ ಬಡತನಕ್ಕೆ ಕಾರಣವಾಗುವದು. ಶನಿ ಧನಾಧಿಪತಿ ಇದ್ದು ಲಗ್ನಾಧಿಪತಿಯೊಡನೆ ಪರಿವರ್ತನ ಯೋಗಮಾಡುತ್ತಿದ್ದರೆ ಅಥವಾ ಲಗ್ನದಲ್ಲಿದ್ದು ಧನಾಧಿಪತಿಯೊಡನೆ ಪರಿವರ್ತನವಿದ್ದರೆ ಶುಭಯೋಗದಲ್ಲಿದ್ದರೆ ಉತ್ತಮ ಸಂಪತ್ತಿಯನ್ನು ಕೊಡುವನು.

ಬುಧನು ವ್ಯಾಪಾರದಿಂದ, ಲೇಖನದಿಂದ, ಏಜನ್ಸಿಯಿಂದ, ಪ್ರವಾಸ, ಜಾಣತನದ ಕಾರ್ಯಗಳಿಂದ ಧನವನ್ನು ಕೊಡುವನು. ಪೀಡಿತನಿದ್ದರೆ ಇವುಗಳಿಂದ, ಚೌರ್ಯದಿಂದ ಹಾನಿ. ಶುಕ್ರನ ಶುಭ ದೃಷ್ಟಿಯಲ್ಲಿದ್ದರೆ ಸಾಹಿತ್ಯ ಶಾಸ್ತ್ರ ಚಿತ್ರಕಲೆಗಳಿಂದ ಧನಾಗಮ. ಕಾದಂಬರೀ ಲೇಖಕರು ಪಾರಿತೋಷಿಕವನ್ನು ಪಡೆಯಬಹುದು. ಮಂಗಳನ ಶುಭದೃಷ್ಟಿಯು ಉದ್ಯೋಗ ಚಾತುರ್ಯಗಳಿಂದ ಧನವನ್ನು ಕೊಡುವದು. ಗುರು ನ್ಯಾಯ ನಿರ್ಣಯದಿಂದ, ಶನಿ ರಾಯಭಾರಿಯಾಗುವದರಿಂದ, ಪರರಾಷ್ಟ್ರದೂತನಾಗುವದರಿಂದ ಹರ್ಷಲ ಶೋಧ, ಸಟ್ಟಾದಿಗಳಿಂದ ಧನವನ್ನು ಕೊಡುವರು. ಶುಕ್ರನು ಮಿತ್ರರಿಂದ, ವಿಲಾಸದಿಂದ ಸ್ತ್ರೀಯರಿಂದ ಉದಾತ್ತ ಹಸ್ತದಿಂದ ಖರ್ಚು ಮಾಡುವದರಿಂದ ಸುಂದರ ವಸ್ತುಗಳ ಕ್ರಯವಿಕ್ರಯದಿಂದ ಧನ ಸೂಚಕನಾಗಿರುವನು.

ರವಿಚಂದ್ರ ಧನಸಹಮ ಬಿಂದುಗಳು ಕೇಂದ್ರದಲ್ಲಿರುವದು ಒಳ್ಳೇ ಲಕ್ಷಣವು. ಶುಭ ತಾರೆಗಳು ಇವುಗಳ ಯುತಿಯಲ್ಲಿರುವುದು ಮತ್ತಿಷ್ಟು ಒಳ್ಳೆಯದು. ಗ್ರಹಗಳು ಉದಿತ ಗೋಲಾರ್ಧದಲ್ಲಿರಬೇಕು. ಶುಭಗ್ರಹಗಳು ಕೇಂದ್ರದಲ್ಲಿ ಅಥವಾ ೧೦, ೧೧, ೧ ರಲ್ಲಿರುವದು ಬಹಳ ಒಳ್ಳೆಯದು. ರಾಹು ಶುಭಗ್ರಹವೆಂದು ಸಾಯನ ವಾದಿಗಳ ಮತ.

ಗುರು-ಶುಕ್ರರು ಧನಕಾರಕರು. ಅವರು ಬಲಿಷ್ಠರಿರಬೇಕು. ಕಾಲಿ

ದಾಸನು ಕಾಲಾಮೃತದಲ್ಲಿ ಹೇಳುತ್ತಾನೆ. ಒಂದು ಉಚ್ಚ ಗ್ರಹವು ಧನಭಾವದಲ್ಲಿದ್ದು ಮತ್ತೊಂದು ಶುಭಗ್ರಹದ ದೃಷ್ಟಿ ಅದರ ಮೇಲಿದ್ದರೆ ಕೋಟ್ಯಧೀಶರಾಗುವರು. ಸ್ವಕ್ಷೇತ್ರದ ಗ್ರಹಗಳಿದ್ದರೂ ಅಡ್ಡಿಯಿಲ್ಲ. ತಾರತಮ್ಯದಿಂದ ಅರ್ಥಮಾಡಬೇಕು. ವರಾಹಮಿಹಿರರು ಚಂದ್ರ ಲಗ್ನದಿಂದ ೬-೭-೮ ರಲ್ಲಿ ಶುಭ ಗ್ರಹಗಳಿದ್ದರೆ ಅಧಿಯೋಗವೆಂದು ಹೇಳುವರು. ಇದೂ ಉತ್ತಮ ಧನ ಯೋಗವು. ೩, ೬, ೧೦, ೧೧ ರಲ್ಲಿ ಶುಭಗ್ರಹಗಳಿದ್ದರೆ ವಸುಮತೀ ಯೋಗವೆಂದು ಹೇಳಿರುವರು. ಇದೂ ಉತ್ತಮ ಧನಯೋಗವು.

ಜೈಮಿನಿ ಋಷಿ ಹೇಳುತ್ತಾನೆ. ಪಾದಲಗ್ನದಿಂದ ಸಪ್ತಮದಲ್ಲಿ ಗುರು ಶುಕ್ರ ನಿಶಾಕರರಿದ್ದರೆ ಶ್ರೀಮಂತನಾಗುವನು ಎಂದು. ಸಪ್ತಮದಲ್ಲಿ ಉಚ್ಚ ಗ್ರಹವಿರಬೇಕು. ಅದು ಪಾಪಗ್ರಹವಿದ್ದರೂ ಶ್ರೀಮಂತನಾಗುವನು. ಇವೆಲ್ಲ ನಿಯಮಗಳನ್ನು ವಾಚಕರು ಪ್ರತ್ಯಕ್ಷ ಪರಿಶೀಲಿಸಿ ನೋಡಬೇಕು. ಪಾದ ಲಗ್ನವೆಂದರೆ ಲಗ್ನಾಧಿಪತಿ ಲಗ್ನದಿಂದ ಎಷ್ಟು ದೂರ ಇರುವನೋ ಅವನಿಂದ ಅಷ್ಟು ದೂರ ಪಾದಲಗ್ನವಿರುವದು. ಧನಯೋಗವನ್ನು ವಿಚಾರಿಸುವಾಗ ವರಾಹಮಿಹಿರರ ಈ ಪದ್ಯವನ್ನು ವಿಚಾರಿಸಬಹುದು.

"ಲಗ್ನಾದತೀವ ವಸುಮಾನ್ ವಸುಮಾನ್ ಶಶಾಂಕಾತ್ ।
ಸೌಮ್ಯ ಗೃಹೈರುಪಚಯೋಪ ಗತೈಃ ಸಮಸ್ತೈಃ ॥
ದ್ವಾಭ್ಯಾಂ ಸಮೋಲ್ಪ ವಸುಮಾಂಶ್ಚ ತದೂನತಾಯಾ ।
ಮನ್ಯೇಷ್ವ ಸತ್ಸ್ವಪಿ ಫಲೇಷ್ವಿದಮುತ್ಕಟೇನ ॥"

ಲಗ್ನದಿಂದ ೩, ೬, ೧೦, ೧೧ ರಲ್ಲಿ ಶುಭ ಗ್ರಹಗಳಿದ್ದರೆ ಉತ್ತಮ ಧನ ಯೋಗವು. ಚಂದ್ರನಿಂದ ಈ ಸ್ಥಾನಗಳಲ್ಲಿ ಶುಭ ಗ್ರಹಗಳಿದ್ದರೂ ಅಡ್ಡಿಯಿಲ್ಲ. ಉಳಿದ ಯೋಗಗಳು ಇಲ್ಲದಿದ್ದರೂ ಇದು ಉತ್ಕಟ ಧನಯೋಗವು. ಉಳಿದ ಗ್ರಹಗಳಿಗಿಂತ ಧನಸಹಮ ಬಿಂದುವನ್ನು ಆಳುವ ಗ್ರಹವು ಮುಖ್ಯವಾದದ್ದು, ಇದು ಕಾಯಂ ಸಂಪತ್ತನ್ನು ಕೊಡುವದು.

ಮಿತ್ರರು

ಮಿತ್ರರಿಗಾಗಿ ಮುಖ್ಯವಾಗಿ ಏಕಾದಶಭಾವವನ್ನು ನೋಡಬೇಕು. ಅಲ್ಲಿ ಗುರು ಶುಕ್ರರಿದ್ದರೆ ಸಜ್ಜನರ ಮೈತ್ರಿಯುಂಟಾಗುವದು. ಶುಕ್ರನು ಸ್ತ್ರೀರಾಶಿಯಲ್ಲಿದ್ದರೆ ಸ್ತ್ರೀ ಮೈತ್ರಿಯನ್ನು ಸೂಚಿಸುವನು. ಬಲಿಷ್ಠ ಬುಧನು ವಿದ್ವಾಂಸರ, ವ್ಯಾಪಾರಿಗಳ ಸ್ನೇಹವನ್ನು ಸೂಚಿಸುವನು. ಗ್ರಹಗಳ ಗುಣ ಧರ್ಮದಂತೆ ಮಿತ್ರರು ಸಿಗುವರು. ನಿಮ್ಮ ಕುಂಡಲಿಯಲ್ಲಿ ರವಿ ಚಂದ್ರ ಧನಸಹಮ ಬಿಂದುಗಳ ಬಲವನ್ನು ನೋಡಿರಿ. ಇವರೆಲ್ಲ ಒಂದೇ ರಾಶಿಯಲ್ಲಿದ್ದರೆ ಅಥವಾ ಅವುಗಳಲ್ಲಿ ಪರಸ್ಪರ ಪರಿವರ್ತನವಿದ್ದರೆ, ಎರಡೂ ಲಗ್ನದಲ್ಲಿದ್ದರೆ ಕಾಯಂ ಮೈತ್ರಿಯುಂಟಾಗುವದು. ಇವುಗಳು ತಿನೆಯವನ ಕುಂಡಲಿಯಲ್ಲಿರುವ ಗ್ರಹಗಳೊಡನೆ ಶುಭಯೋಗದಲ್ಲಿರಬೇಕು. ಸ್ನೇಹ ಪರಿಚಯಗಳುಂಟಾಗುವವು. ಶುಭ ಗ್ರಹಗಳು ೧, ೫, ೭, ೯, ೧೧ ರಲ್ಲಿದ್ದರೆ ಅನೇಕರ ಮೈತ್ರಿಯುಂಟಾಗುವದು. ಒಬ್ಬನ ರವಿ ಇನ್ನೊಬ್ಬನ ಚಂದ್ರನೊಡನೆ ಶುಭ ಯೋಗಿ ಆಗಿದ್ದರೆ ಪರಸ್ಪರ ಮೈತ್ರಿಯುಂಟಾಗವದು.

ಬಿಲ್ಡಿಂಗು ಒಕ್ಕಲುತನ ಮೊದಲಾದ ಉದ್ಯೋಗಗಳಲ್ಲಿ ಇಬ್ಬರಲ್ಲಿ ಕರಾರು ಅಥವಾ ಮೈತ್ರಿಯುಂಟಾದಾಗ ಒಬ್ಬನ ಶನಿ ಇನ್ನೊಬ್ಬರ ಸಂಚಾರ ಸಂಬಂಧ ಬರುವದು. (ಗೋಚರಿಯಿಂದ). ಗುರು ಮಂಗಳರ ಸಂಬಂಧವು ಈರ್ವರ ಕುಂಡಲಿಯಲ್ಲಿ ಬಂದಾಗ ಗೌರವ, ಮಾನ ಅಥವಾ ಇಬ್ಬರೂ ಕೂಡಿ ಇನ್ನೊಬ್ಬರ ಕೂಡ ಸ್ಪರ್ಧಿಸುವ ಅಥವಾ ಕಲಹ ಮಾಡುವ ಸಂಬಂಧ ವಿರುವದು. ಗುರು ಬುಧರ ಸಂಬಂಧದಿಂದ ಶಾಸ್ತ್ರ ಶೋಧ ಕವಿತ್ವ ತತ್ತ್ವ ಜ್ಞಾನಗಳ ಸಂಬಂಧವು ಬರುವದು. ಸಾರ್ವಜನಿಕ ಲೇಖಕರಲ್ಲಿ ಗುರು ಬುಧ ಶುಕ್ರರ ಸಂಬಂಧಬೇಕು. ಒಬ್ಬನ ಮಂಗಳನ ಸಂಬಂಧ ಇನ್ನೊಬ್ಬನ ಶುಕ್ರನೊಡನೆ ಬಂದರೆ ಅದು ವಿಷಯ ಸುಖಕ್ಕಾಗಿ ಎಂದು ತಿಳಿಯಬೇಕು. ಶುಕ್ರ ಬುಧರ ಸಂಬಂಧವು ಶಾಸ್ತ್ರ ಕಲೆಗಳ ಬಗೆಗೆ ಮೈತ್ರಿಯನ್ನು ಸೂಚಿಸುವದು. ಸಾಹಿತ್ಯ ಮೈತ್ರಿ, ಶಾಲೆಯ ವಿದ್ಯಾರ್ಥಿಗಳ ಮೈತ್ರಿಯಲ್ಲಿ ಇಂತಹ

ಸಂಬಂಧವು ತೋರಿಬರುವದು. ರವಿಯ ಸಂಬಂಧವು ಇನ್ನೊಬ್ಬನ ಕುಂಡಲಿಯಲ್ಲಿ ಬಂದರೆ ಅದು ಗೌರವ ಪ್ರಾಮಾಣಿಕತೆಯನ್ನು ತೋರುವದು. ಗುರುವಿನ ಸಂಬಂಧ ಜ್ಞಾನಸಾಧನೆ ಧನಾದಿಗಳ ಸಂಬಂಧ ಸೂಚಕವಾಗಿದೆ. ಚಂದ್ರನ ಸಂಬಂಧವು ಮಾನಸಿಕ ಅವಸ್ಥಾಸೂಚಕವು. ಒಬ್ಬನ ಕುಂಡಲಿಯಲ್ಲಿಯ ಶುಕ್ರನ ಸಂಬಂಧವು ಇನ್ನೊಬ್ಬನ ಚಂದ್ರನ ಸಂಬಂಧ ಬಂದರೆ ಬಾಳುವ ಪ್ರೇಮವಿರುವದು. ರವಿ ಗುರುಗಳ ಸಂಬಂಧವು ಕಲ್ಯಾಣಕಾರಿ. ಗುರು ಇದ್ದವನು ರವಿಯಿದ್ದವನ ಕಲ್ಯಾಣವನ್ನು ಮಾಡುವನು. ಒಬ್ಬನ ಪಾಪಗ್ರಹಗಳು ಇನ್ನೊಬ್ಬನ ರವಿ ಚಂದ್ರ ಲಗ್ನಾಂಶಗಳಲ್ಲಿದ್ದರೆ ಅವನಿಂದ ಇವನ ಅಕಲ್ಯಾಣವಾಗುವದು. ಒಬ್ಬನ ಕುಂಡಲಿಯಲ್ಲಿ ರವಿ ಚಂದ್ರ ಬುಧರು ಇನ್ನೊಬ್ಬನ ಕುಂಡಲಿಯ ಪಾಪಗ್ರಹಗಳಿಂದ ಪೀಡಿತನಾದರೆ ಅವನಿಂದ ಇವನ ಅಹಿತವಾಗುವದು. ಒಬ್ಬನ ಗ್ರಹಗಳಿಗೂ ಇನ್ನೊಬ್ಬನ ಗ್ರಹಗಳಿಗೂ ಕೇಂದ್ರ ಪ್ರತಿಯೋಗಗಳಿರುವಲ್ಲಿ ಶತ್ರುತ್ವವುಂಟಾಗುಪದು. ಒಬ್ಬನ ಮಂಗಳ ಇನ್ನೊಬ್ಬನ ಬುಧನಲ್ಲಿ ಅಶುಭಯೋಗದಲ್ಲಿ ಉದ್ಯಮದಿಂದ ಶತ್ರುತ್ವವುಂಟಾಗುವದು. ಮಂಗಳನಿಂದ ಪೀಡಿತ ಬುಧನಿದ್ದ ಜಾತಕನು ಅವನಿಂದ ನಿಂದೆಯನ್ನು ಶಾಪಾಕ್ಷರಗಳನ್ನೂ ಹೊಂದುವನು.

ಸೂರ್ಯ ಚಂದ್ರ ಧನಸಹಮ ಬಿಂದುಗಳಲ್ಲಿ ಮತ್ತೊಬ್ಬನ ಗುರು ಶುಕ್ರರಿದ್ದರೆ ಆತ್ಯಂತಿಕ ಸಹಾನುಭೂತಿಯ ಸ್ನೇಹವುಂಟಾಗುವದು. ಒಬ್ಬನ ಗುರು ಶುಕ್ರರು ಇನ್ನೊಬ್ಬನ ಲಗ್ನದಲ್ಲಿದ್ದರೂ ಶುಭ ಸ್ನೇಹವಾಗುವದು. ಒಬ್ಬನ ಧನಸಹಮ ಬಿಂದುವಿನ ಮೇಲೆ ಇನ್ನೊಬ್ಬನ ರವಿ ಚಂದ್ರರಿರಬೇಕು. ಗುರು ಶುಕ್ರ ಧನಸಹಮ ಬಿಂದುಗಳು ಇನ್ನೊಬ್ಬನ ಏಕಾದಶದಲ್ಲಿರಬೇಕು. ಅವರು ಬಲಿಷ್ಠರಿರಬೇಕು. ಪೀಡಿತ ಬುಧ ಕೇತು ಏಕಾದಶದಲ್ಲಿದ್ದರೆ ಕಪಟೀ ಸ್ನೇಹಿತರು ಸಿಗುವರು. ರವಿ ಚಂದ್ರರು, ಚಂದ್ರ ಬುಧರು, ರವಿ ಬುಧರು ಒಬ್ಬರೊಬ್ಬರ ಕುಂಡಲಿಯಲ್ಲಿ ಏಕಾದಶದಲ್ಲಿದ್ದರೆ ಸ್ಥಿರವಾದ ಸತ್ವಯುತವಾದ ವೈತ್ರಿ ಇರುವದಿಲ್ಲ. ತಾತ್ಕಾಲಿಕ ಮಿತ್ರತ್ವ, ಪರಿಚಯವು ಪರಿಳಿತದ್ದಾಗುವದು. ಒಬ್ಬನ ಪಾಪಗ್ರಹಗಳು ಇನ್ನೊಬ್ಬನ ಶುಭ ಗ್ರಹಗಳ ಮೇಲಿದ್ದರೆ ಮಿತ್ರತ್ವವು ಭಿನ್ನ-ವಿಚ್ಛಿನ್ನವಾಗುವದು. ಲಗ್ನಾಧಿಪತಿ ಶುಭಗ್ರಹವಾಗಿದ್ದರೆ

ಅವನಲ್ಲಿ ಪ್ರೇಮವು ಹೆಚ್ಚಾಗಿರುವದು. ಒಬ್ಬನ ಉದಿತ ಲಗ್ನವು ಇನ್ನೊಬ್ಬನ ೬, ೮, ೧೨ ರಲ್ಲಿದ್ದರೆ ಸ್ಥಿರವಾದ ವೈತ್ರಿ ಉಂಟಾಗಲಾರದು.

೧೨ರ ಅಧಿಪತಿ ವಕ್ರಿಯಾಗಿ ೬ ರಲ್ಲಿ ದುರ್ಬಲನಾಗಿದ್ದರೆ ಜಾತನು ಶತ್ರುಗಳನ್ನು ಗೆಲ್ಲುವನು. ಶನಿ ಮಂಗಳರು ಬಲಿಷ್ಠರಾಗಿ ೧೨ ರಲ್ಲಿದ್ದರೆ ಶತ್ರುಗಳು ಮೊದಲು ಸಾಯುವರು. ಮಿಥುನ ಧನು ಕುಂಭ ಲಗ್ನ ಉದಿತವಿದ್ದವರು ತಮ್ಮ ಶತ್ರುಗಳನ್ನು ತಾವೇ ನಿರ್ಮಿಸಿಕೊಳ್ಳುವರು. ಶನಿ ಲಗ್ನದಲ್ಲಿ ಅಥವಾ ಲಗ್ನಾಧಿಪತಿ ಇನ್ನೊಬ್ಬನ ಸಪ್ತಮದಲ್ಲಿದ್ದರೆ ಅತಿಶಯ ದ್ವೇಷ ಉಂಟಾಗುವದು. ಎರಡನೆಯವನು ಕೇಡನ್ನು ಹೊಂದುವನು. ಇನ್ನೊಬ್ಬನ ರವಿ ಚಂದ್ರರಲ್ಲಿ ಒಬ್ಬನ ಪಾಪಗ್ರಹಗಳಿದ್ದರೆ ದ್ವೇಷವು ಹೆಚ್ಚುವದು. ರವಿ ಚಂದ್ರರು ಇನ್ನೊಬ್ಬನ ಪಾಪಗ್ರಹಗಳಿಂದ ಪೀಡಿತವಾಗಿದ್ದರೆ ರವಿ ಚಂದ್ರರಿದ್ದವರಿಗೇನೇ ಕೇಡು. ಗ್ರಹ ಬಲವನ್ನು ಸೂಕ್ಷ್ಮವಾಗಿ ವಿಚಾರಿಸಿ ನಿರ್ಣಯಿಸಿರಿ. ಲಗ್ನಾಧಿಪನು ೧೨ ರಲ್ಲಿದ್ದರೆ ಅವರು ಏಕಾಂತ ಪ್ರಿಯರಿರುವರು. ಲಗ್ನಾಧಿಪತಿ ೧೧ ರ ಅಧಿಪತಿಗಳಲ್ಲಿ ಶುಭದೃಷ್ಟಿಯಿದ್ದರೆ ಅನೇಕ ಮಿತ್ರರು ಇರುವರು. ೧೧ ರಲ್ಲಿದ್ದ ಗ್ರಹಗಳು ಲಗ್ನಾಂಶದೊಡನೆ ಶುಭಯೋಗವಾಡುತ್ತಿದ್ದರೆ ವಿಶ್ವಾಸಿ ಮಿತ್ರರು ಇರುವರು. ರಾಹು ಬಲಿಷ್ಠನಾಗಿ ೧೧ ರಲ್ಲಿದ್ದರೆ ಸನ್ಮಿತ್ರರು ಸಿಗುವರು. ರವಿ ಚಂದ್ರ ಧನಸಮ ಬಿಂದುಗಳಲ್ಲಿ ೧೧ ರಲ್ಲಿ ಸನ್ಮಿತ್ರರನ್ನು ಒದಗಿಸುವರು. ಪೀಡಿತರಿದ್ದರೆ ಅವರು ಕಪಟ ನಾಟಕ ಸೂತ್ರಧಾರರು. ೧೧ ರಲ್ಲಿ ಚರರಾಶಿಯಿದ್ದು ಆದರ ಅಧಿಪತಿ ಚರರಾಶಿಯಲ್ಲಿದ್ದರೆ ಮಿತ್ರರು ಮಹತ್ವಾಕಾಂಕ್ಷಿಗಳು ಹದವಾದಿಗಳು ಇರುವರು. ಸ್ಥಿರ ರಾಶಿಯು ವಿಶ್ವಾಸಿ ಮಿತ್ರರನ್ನು ಕೊಡುವುದು. ದ್ವಿಸ್ವಭಾವಿ ರಾಶಿ ಚಂಚಲ ಮಿತ್ರರನ್ನು ಒದಗಿಸುವದು. ಏಕಾದಶಾಧಿಪತಿ ಸ್ಥಿರ ರಾಶಿಯಲ್ಲಿದ್ದು ಅವನೊಡನೆ ಲಗ್ನಾಧಿಪತಿಯ ಶುಭಯೋಗವಿದ್ದರೆ ನಿಷ್ಠೆಯುಳ್ಳ ಮಿತ್ರರಿರುವರು. ಚಂದ್ರನು ೧೧ ರ ಅಧಿಪನೊಡನೆ ಶುಭಯೋಗಿಯಾಗಿದ್ದರೂ ಇಂತಹ ಮಿತ್ರರು ಸಿಗುವರು.

ದಶಮಾಧಿಪತಿ ವಕ್ರಿಯಾಗಿ ಲಗ್ನಾಧಿಪನಿಂದ ಅಗಲುತ್ತಿದ್ದರೆ ಮಿತ್ರರು. ಅವರು ಯಾರೇ ಇರಲಿ— ಶ್ರೀಮಂತರಿರಲಿ, ಬಡವರಿರಲಿ. ಅವರು ಜಾತ

ನನ್ನು ಸೇರಲಾರರು. ಅವರಿಗೆ ಇವನಲ್ಲಿ ರುಚಿಯಿರುವದಿಲ್ಲ. ೧೧, ೧೨ ರಲ್ಲಿ ಒಂದೇ ರಾಶಿ ಉದಿತವಾಗುತ್ತಿದ್ದರೆ (ಹೀಗೆ ಉತ್ತರಕ್ಕೆ ಹೋದಂತೆ ಆಗುವ ಸಂಭವವಿರುವದು) ಮಿತ್ರರಲ್ಲಿ ಶತ್ರುತ್ವವುಂಟಾಗುವ ಪ್ರವೃತ್ತಿ ಇರುವದು.

ಲಗ್ನಾಧಿಪತಿ ೧೨ರಲ್ಲಿ ಪೀಡಿತನಿದ್ದರೆ ಅನೇಕ ಗುಪ್ತಶತ್ರುಗಳಿರುವರು. ಅಲ್ಲಿದ್ದ ಪೀಡಿತ ಗ್ರಹಗಳು ಇದನ್ನೇ ಸೂಚಿಸುವವು. ಧನಾಧಿಪತಿ ಪಾಪ ಗ್ರಹವಿದ್ದು, ೧೨ ರಲ್ಲಿದ್ದು, ಲಗ್ನಾಧಿಪತಿಯು ಅಶುಭಯೋಗದಲ್ಲಿದ್ದರೆ ಜಾತನು ತನಗೆ ತಾನೇ ಶತ್ರುವಾಗುವನು.

೧೨ ರ ಅಧಿಪತಿ ೭ ರಲ್ಲಿ ಸಪ್ತಮಾಧಿಪತಿಯ ಯುತಿಯಲ್ಲಿ ಪಾಪಗ್ರಹ ವಿದ್ದರೆ ಪತಿ-ಪತ್ನಿ ಅವರೇ ಮುಖ್ಯ ಶತ್ರುಗಳು. ದ್ವಾದಶಾಧಿಪತಿ ಅಸ್ತನಾಗಿ ದ್ದರೆ, ರಾಶಿ ದುರ್ಬಲನಾಗಿದ್ದರೆ ಅಪೋಕ್ಲಿಮದಲ್ಲಿದ್ದರೆ ಶನಿ ಮಂಗಳ ಕೇತು ಗಳಿಂದ ಪೀಡಿತನಿದ್ದರೆ ಶತ್ರುಗಳು ಕೆಲವರಿದ್ದರೂ ಅವರು ದುರ್ಬಲರಿರು ವರು. ಲಗ್ನಾಧಿಪನಾಗಲಿ, ರವಿ ಚಂದ್ರರಾಗಲಿ ಮಂಗಳನ (ಸ್ವಕ್ಷೇತ್ರ ವಾಸಿ ಅಥವಾ ಉಚ್ಚ) ಪರಿವರ್ತನ ಯೋಗದಲ್ಲಿದ್ದರೆ ಜಾತನು ತನ್ನ ಶತ್ರು ಗಳನ್ನು ಸೋಲಿಸಲು ಸಮರ್ಥನಾಗಿರುವನು. ೧೨ರ ಅಧಿಪತಿ ದುರ್ಬಲ ನಾಗಿ ೧೦ ರಲ್ಲಿದ್ದರೆ ೧೦ರ ಅಧಿಪತಿ ೧೨ರಲ್ಲಿದ್ದರೆ ಮಂಗಳ ಶುಕ್ರರು ೭ ರಲ್ಲಿ ಅಥವಾ ೪ ರಲ್ಲಿದ್ದರೆ, ೧೨ ರ ಅಧಿಪತಿ ಲಗ್ನಾಧಿಪತಿಯ ರಾಶಿಯಲ್ಲಿದ್ದು ಅವನ ದೃಷ್ಟಿಯಲ್ಲಿದ್ದರೆ, ೧೨ರ ಅಧಿಪತಿ ಪಾಪಗ್ರಹಗಳಿಂದ ಪೀಡಿತನಾಗಿ ದ್ದರೆ— ವಿಶೇಷವಾಗಿ ೬ ರಲ್ಲಿದ್ದರೆ; ಗುರು ಶುಕ್ರರು ೧೨ ರಲ್ಲಿದ್ದರೆ ಜಾತನು ಶತ್ರುಗಳನ್ನು ಸೋಲಿಸುವನು. ಗುರು ಶುಕ್ರರು ೧೨ ರಲ್ಲಿ ಶತ್ರುಗಳನ್ನು ಶಾಂತವಾಗಿರಿಸಬಹುದು.

ಉದ್ಯೋಗ (ನೌಕರಿ)

ದಶಮ ಭಾವವು ಕರ್ಮಸ್ಥಾನವು. ಇದು ಜಾತನ ಕರ್ಮಸೂಚಕವು. ಇದು ಅವನ ಯಜಮಾನರನ್ನು ಸೂಚಿಸುವದು. ಕೀರ್ತಿ ಗೌರವ ಅಧಿಕಾರ ಗಳ ಸೂಚಕ ಸ್ಥಾನವದು. ೬ ನೆಯ ಭಾವವು ಸರ್ವೀಸ, ಕೆಳತರಗತಿಯ ನೌಕರರು, ನೌಕರಿ ಸೂಚಕ ಸ್ಥಾನವಾಗಿದೆ. ಇದು ಅಪರಿಹಾರ್ಯವಾಗಿ ಮಾಡಬೇಕಾದ ಸೇವಾ ಧರ್ಮ ಸೂಚಕವು; ರುಚಿಯಿಂದಲ್ಲ. ಉದ್ಯಮದ ಸ್ವರೂಪವನ್ನು ತಿಳಿಯಲು ಕೆಳಗಿನ ಸೂಚನೆಗಳು ಗಮನಾರ್ಹವಾಗಿವೆ. ೧೦-೬ ರಲ್ಲಿ ಇದ್ದ ರಾಶಿಗಳು ಅಲ್ಲಿದ್ದ ಗ್ರಹಗಳು ಅವುಗಳ ಅಧಿಪತಿಗಳು ಇವುಗಳ ವಿಚಾರ ಮಾಡಬೇಕು.

ಸೂರ್ಯನಿರುವ ಭಾವ ರಾಶಿ, ಅವನು ಹೊಂದುವ ದೃಷ್ಟಿಯೋಗ, ಅವನಿಗಿಂತ ಮೊದಲು ಉದಯ ಹೊಂದುವ ಗ್ರಹಗಳು, ಚಂದ್ರನೊಡನೆ ಬಲಿಷ್ಠ ಯೋಗ ಮಾಡುವ ಗ್ರಹ ಕುಂಡಲಿಯಲ್ಲಿ ಪ್ರಮುಖ ಗ್ರಹ ಇತ್ಯಾದಿ ಗಳನ್ನು ಪರೀಕ್ಷಿಸಬೇಕು.

೬, ೮, ೧೨ರ ಅಧಿಪತಿ ಬಲಿಷ್ಠರಿದ್ದು ರವಿ ಚಂದ್ರ ಗುರು ಶನಿ ಹರ್ಷಲರೊಡನೆ ಶುಭಯೋಗ ಮಾಡುತ್ತಿದ್ದರೆ, ಸಾಮಾನ್ಯ ಕುಲದಲ್ಲಿ ಹುಟ್ಟಿ ದರೂ ಮುಂದೆ ಬರುವರು. ಇದು ವಿಪರೀತ ರಾಜಯೋಗವಿದ್ದಂತೆ.

ನಿರ್ದಿಷ್ಟ ಉದ್ಯೋಗದ ಸ್ವರೂಪವನ್ನು ವಿವರಿಸಿ ಹೇಳುವದು ಕಷ್ಟ ಸಾಧ್ಯ. ಯಾಕಂದರೆ ಉದ್ಯೋಗ ಕ್ಷೇತ್ರ ವ್ಯಾಪಕವಿರುವದು. ಅನೇಕರು ಇಂದು ಒಂದಕ್ಕಿಂತ ಹೆಚ್ಚು ಉದ್ಯೋಗದಲ್ಲಿ ತೊಡಗಿರುವರು. ದ್ವಿಸ್ವಭಾವಿ ರಾಶಿಗಳು ಬಲಿಷ್ಠ ಗ್ರಹಗಳಿಂದ ವ್ಯಾಪ್ತವಾಗಿದ್ದರೆ, ಸೂಚಕ ಗ್ರಹಗಳು ಅನೇಕ ದೃಷ್ಟಿಗಳಿಂದ ಕೂಡಿದ್ದರೆ ಅನೇಕ ಉದ್ಯೋಗಗಳ ಸಂಭವವಿರು ವದು. ಆದರೆ ಮುಖ್ಯವಾಗಿ ೧೦-೬ ಭಾವಗಳನ್ನು ರವಿ ಚಂದ್ರ ಲಗ್ನ ಬುಧರನ್ನು ವಿಚಾರಿಸಿದರೆ ಉದ್ಯಮದ ಸ್ವರೂಪವು ತಿಳಿಯುವದು. ಬಲಿಷ್ಠ ಗ್ರಹ; ಬಲಿಷ್ಠ ದೃಷ್ಟಿ ಉದ್ಯಮದ ಮಾರ್ಗದರ್ಶಕವಾಗುವವು. ಶುಭಾ ಶುಭ ದೃಷ್ಟಿಗಳು ಉದ್ಯೋಗದ ಪ್ರಕೃತಿಗಿಂತ ಅದರಲ್ಲಿಯ ಸೌಕರ್ಯ ದೌಷ್ಕರ್ಯಗಳನ್ನು ಸೂಚಿಸುವವು. ಕಾರ್ಯದಲ್ಲಿಯ ಯಶಸ್ಸು ಬಲಗ್ರಹ,

ಮತ್ತು ಶುಭದೃಷ್ಟಿಯನ್ನು ಅವಲಂಬಿಸಿರುವದು. ಅಶುಭ ದೃಷ್ಟಿ, ದುರ್ಬಲ ಗ್ರಹವು ಕಾರ್ಯವನ್ನು ಯಶಸ್ವಿಯಾಗಿ ಜರುಗಿಸಲಾರವು. ಯಶಸ್ಸಿನ ಕೊರತೆಯನ್ನು ಅಶುಭ ದೃಷ್ಟಿಯಿಂದ ನೋಡುವ ಗ್ರಹದ ಸ್ವರೂಪದಿಂದ ಊಹಿಸಬಹುದು. ಶನಿಯ ದೃಷ್ಟಿ ಆಲಸ್ಯವನ್ನೂ, ಅನಿಷ್ಟವನ್ನೂ ಸೂಚಿಸುವದು. ಮಂಗಳನ ಅಶುಭ ದೃಷ್ಟಿ ಅಹಂಕಾರ. ಹಟಗಳಿಂದ ನ್ಯೂನತೆಯನ್ನು ಸೂಚಿಸುವದು. ನಿಷ್ಕಾಳಜಿ, ಋಣ ಇವು ಮಂಗಳನ ಪೀಡೆಗಳು. ಶುಕ್ರನ ಅಶುಭ ದೃಷ್ಟಿ ವಿಲಾಸ ಪ್ರವೃತ್ತಿ, ಸ್ತ್ರೀಯರಿಂದ ಉಂಟಾಗಬಹುದಾದ ತೊಂದರೆಗಳನ್ನು ಸೂಚಿಸುವದು. ಉದ್ಯೋಗವನ್ನು ಆರಿಸುವಾಗ ಬಲಿಷ್ಠ ಗ್ರಹದ ಕಡೆಗೆ ದೃಷ್ಟಿ ಇರಲಿ.

ದಶಮಾಧಿಪತಿ ಅಥವಾ ರವಿ ಯಾವ ರಾಶಿಯಲ್ಲಿರುವನೋ ಆ ರಾಶಿಯ ಪರಿಣಾಮವೂ ಉದ್ಯೋಗದ ಮೇಲೆ ಉಂಟಾಗುವದು. ದಶಮಸ್ಥಿತ ರಾಶಿಯನ್ನು ಪರಿಗಣಿಸಬೇಕು.

ಮೇಷ:— ಪಶು ವ್ಯವಹಾರ, ಕುರಿ ಕುದುರೆಗಳನ್ನು ಮೇಯಿಸುವವರ ಮೇಲೆ ಇದರ ಪರಿಣಾಮವಿರುವದು. ಪಶುಪಾಲನ, ರಥಕಾರ, ಮೋಟಾರ ಡ್ರೈವ್ಹರ, ದನದ ಡಾಕ್ಟರನಾಗಬಹುದು. ಬಲಿಷ್ಠ ಮೇಷ ರಾಶಿಯು ಮಾನಾರ್ಹಸ್ಥಾನವನ್ನು ಕೊಡುವುದು. ದುರ್ಬಲ ಮೇಷರಾಶಿ ಕುರಿ ಕಾಯಲಿಕ್ಕೆ ಹಚ್ಚುವದು.

ವೃಷಭ:— ಉದ್ಯಮ ಸೂಚಕ ಗ್ರಹವು ವೃಷಭದಲ್ಲಿದ್ದರೆ ಒಕ್ಕಲುತನ ಮಾಡುವದು ಶ್ರೇಯಸ್ಕರ. ತೋಟಿಗನಾಗಬಹುದು. ಧಾನ್ಯ ವ್ಯವಹಾರ ಮಾಡಬಹುದು. ಸಾಬಾಣ ವಡಿ ವ್ಯವಹಾರ ಮಾಡಬಹುದು.

ಮಿಥುನ:— ಈ ರಾಶಿಯಿದ್ದರೆ ಕಾರಕೂನರು, ಲೇಖಕರು, ಬೇಲೀಫ, ಸರ್ವೇಯರ, ಪೇಂಟರ, ಎಸ್ಟ್ರಾನಾಮರ, ಜ್ಯೋತಿಷಿ, ಭೂಮಿತಿಜ್ಞ, ಪ್ರವಾಸಿ, ಶಾಲಾಧ್ಯಾಪಕನಾಗಬಹುದು.

ಕರ್ಕ:— ಕರ್ಕರಾಶಿಯ ಸಂಬಂಧವು ಸಮುದ್ರ, ಜಲಾಶಯ,

ರಸಪದಾರ್ಥಗಳು ಆರಿಷ್ಟ, ಆಸವ, ಮಧ್ಯ ಇವುಗಳೊಡನೆ ಬರುವದು. ರ
ಕಾರಣದಿಂದಲೂ ಮುಂದೆ ಬರಬಹುದು. (ರಾಜಾನೌ ರವಿ ಶೀತಗೌ

ಸಿಂಹ:— ಕುದುರೆಯ ಆಟಗಳು, (ರೇಸಕೋರ್ಸ) ಕೋಚಮನ
ಪತ್ತಾರ, ವಾಚಮೇಕರ, ಕಾಜಿನ ಉದ್ಯೋಗ, ಬೇಟೆಗಾರ ಅಗ್ನಿ
ಸಂಬಂಧದ ವ್ಯವಹಾರಗಳ ಸೂಚಕವಾಗಿದೆ ಸಿಂಹವು.

ಕನ್ಯಾ:— ಒಳ್ಳೇ ಸೆಕ್ರೆಟರಿ ಆಗಬಹುದು. ಶಾಲಾ ಮಾಸ್ತ
ಅಕೌಂಟಿಂಟ, ಸ್ಟೇಶನರ, ಪ್ರಿಂಟರ ಉತ್ತಮ ರಾಜಕಾರಣಿಯಾಗಬಹುದ
ಉತ್ತಮ ಜೋತಿಷಿಯೂ ಆಗಬಹುದು. ಅವನು ಯಾವ ಕೆಲಸ ಮಾ
ದರೂ ಕೌಶಲ್ಯ ತೋರುವದು. ಈ ರಾಶಿಯಲ್ಲಿ ಅಥವಾ ೬ನೆಯ ಭಾವದ
ಗುರು ಶುಕ್ರರಿದ್ದು ರವಿ ಚಂದ್ರರೊಡನೆ ಅಥವಾ ೧೦ ರಲ್ಲಿದ್ದ ಗ್ರಹದೊಡ
ಶುಭಯೋಗ ಮಾಡುತ್ತಿದ್ದರೆ ನೀಚಭಂಗ ರಾಜಯೋಗವಿದ್ದಂತೆ.

ತುಲಾ:— ಉತ್ತಮ ಕವಿಯಾಗಬಹುದು. ವಕ್ತಾ, ಗಾಯಕ, ನಾ
ಬಟ್ಟಿಯ ವ್ಯವಹಾರಿ, ಮದ್ಯ ವಿಕ್ರೇತಾ ಆಗಬಹುದು.

ವೃಶ್ಚಿಕ:— ಉತ್ತಮ ಸರ್ಜನನಾಗಬಹುದು. ಡಾಕ್ಟರ, ರಸಾಯ
ವ್ಯವಹಾರಗಳು ಕಾಣುವವು. ದುರ್ಬಲನಿದ್ದರೆ ನೀರು ಹೊರುವವನಾ
ಬಹುದು.

ಧನು:— ಧರ್ಮಶಾಸ್ತ್ರ, ಪದಾರ್ಥವಿಜ್ಞಾನ, ಶಾಸ್ತ್ರಪ್ರಿಯ, ದ
ಗಳನ್ನು ಮಾರುವವ ಅಥವಾ ಕೊಳ್ಳುವವ, ಅಡುಗೆಯವ, ಕಟುಕ ಆ
ಬಹುದು.

ಮಕರ:— ಒಕ್ಕಲಿಗ, ಉಣ್ಣೆಯ ವ್ಯಾಪಾರಿ ಸತುವಿನ ವ್ಯಾಪಾ
ಆಗಬಹುದು.

ಕುಂಭ:— ಹಡಗು ಕಟ್ಟುವ ಬಡಿಗನಾಗಬಹುದು. ಜಲಗ್ರಹದ
ದೃಷ್ಟಿಯಲ್ಲಿದ್ದರೆ ಉತ್ತಮ ಅಂಬಿಗನಾಗಬಹುದು. ನೌಕಾಪತಿ, ಹಡಗಿನ
ಪೇಂಟರ, ವ್ಯಾಪಾರಿ, ಜಲೋದ್ವಾಹಿಯಾಗುವನು.

ಮೀನ:— ವಿದೂಷಕ, ಗಾಯಕ, ಮೀನುಗಾರನಾಗಬಹುದು.

ಗ್ರಹಗಳ ಉದ್ಯೋಗಗಳು

ರವಿ:— ರಾಜ, ಸರದಾರ, ಘನವಂತ, ರಾಜಸಭಾ ಸದಸ್ಯ, ಮ್ಯಾನೇಜರ, ಸರಕಾರೀ ಕಾರ್ಯಕಾರಿ, ಪತ್ರಾರ, ರತ್ನ ವ್ಯಾಪಾರಿ, ಇವರ ಕಾರಕನಾಗಿರುವನು. ಆತನು ದಶಮದಲ್ಲಿದ್ದರೆ ಅಧಿಕಾರ ಕೊಡುವನು. ಮಧ್ಯಮ ವಯಸ್ಸಿನಲ್ಲಿ ಯಶಸ್ಸು ಸಿಗುವದಲ್ಲದೆ ವರಿಷ್ಠರಿಂದ ಸಹಾಯವು ದೊರಕುವದು.

ಚಂದ್ರ:— ಅಂಬಿಗ, ಪ್ರವಾಸಿ, ಮೀನಗಾರ, ಸೇವಕ, ನರ್ಸ, ಜಾಹೀರಾತುಗಾರ, ಅಗಸಗಿತ್ತಿ, ಸೂಲಗಿತ್ತಿ (ಮಿಡ್‌ವಾಯಿಫ್) ಇವರ ಕಾರಕತ್ವವು ಚಂದ್ರನ ಕಡೆಗಿರುವದು. ಚಂದ್ರನು ಜಲ ಸಂಬಂಧದ ಉದ್ಯೋಗಗಳನ್ನು ಸೂಚಿಸುವನು. ಚಂದ್ರನು ಚಂಚಲನು. ಆದುದರಿಂದ ಪರಿವರ್ತಿತವಾಗುವ ಉದ್ಯೋಗಗಳನ್ನು ಸೂಚಿಸುವನು. ಅವನು ಕರ್ಕ ಮೀನ ವೃಶ್ಚಿಕದಲ್ಲಿದ್ದರೆ ಅವನ ಬಲವಿದ್ದಂತೆ ನೀರಾವರಿ ಖಾತೆ, ಜಲ ಸಂಬಂಧ ಬರುವ ಉದ್ಯಮಗಳನ್ನು ಕೈಕೊಳ್ಳಬಹುದು. ಎಕ್ಸೈಜ ಇನಸ್ಪೆಕ್ಟರನಾಗಬಹುದು.

ಮಂಗಳ:— ಸೋಲ್ಜರ, ಸರ್ಜನ್, ಡಾಕ್ಟರ, ಕಬ್ಬಿಣ ಉಕ್ಕು ವ್ಯಾಪಾರಿ, ನಾವಲಿಗ, ಅಡಿಗೆಯವ, ಚಳವಳಿಗಾರ, ತಾರ್ಕಿಕ— ಇವರನ್ನು ಮಾಡುವವನು ಮಂಗಳನು.

ಬುಧ:— ಸಾಹಿತ್ಯದ ಉದ್ಯೋಗ, ಗ್ರಂಥಕಾರ, ಗ್ರಂಥ ಪ್ರಕಾಶಕ, ಶಾಸ್ತ್ರಕ್ಕೆ ಸಂಬಂಧಪಟ್ಟ ಕಲೆಗಳು, ಕಾಯಿದೆಯ ಅಭ್ಯಾಸಿ. ಪ್ರವಾಸಿ, ಸಂದೇಶವಾಹಕ, ಕಾಗದ ವ್ಯಾಪಾರಿ, ಹಗುರಾದ, ಚುರುಕಾದ ಉದ್ಯೋಗಗಳು ಅವನಿಗೆ ಸೇರುವವು. ಶಿಕ್ಷಕ, ಸೆಕ್ರೆಟರಿ, ಕ್ಲಾರ್ಕ, ಬುಕ್ ಸೇಲರ, ಲೆಕ್ಕಿಗನೂ ಆಗಬಹುದು.

ಶುಕ್ರ:— ಕಲೆಗಳು, ಡ್ರೆಸ್ ಹಾಗು ಅದರ ಅಲಂಕಾರಗಳು, ಆಭರಣಗಳು, ಸ್ತ್ರೀ ಪ್ರಿಯ ಅಲಂಕಾರಗಳು, ಗಾಯನ, ಸಂಗೀತ, ಡಾಕ್ಟರಕಿ (ರಸ ಪದಾರ್ಥಗಳ ಸಂಬಂಧ ಬರುವ) ಕವಿ, ಭಕ್ತಿ ಮಾರ್ಗಾನುಗಾಮಿ, ಇತ್ಯಾದಿ

ಶುಕ್ರನ ಉದ್ಯೋಗಗಳಾಗಿವೆ. ಶುಕ್ರ ಮಂಗಳ ಯೋಗವು ಬಣ್ಣಗಾರ, ಸುಗಂಧ ಪದಾರ್ಥಗಳ ಕ್ರಯ-ವಿಕ್ರಯ, ನಾಟಿಗ, ಧಾತುಗಾರರನ್ನು ಮಾಡುವದು. ಬುಧ ಶುಕ್ರ ಯೋಗವು ಗಾಯಕ, ಗಾಯನ ಮಾಸ್ತರರನ್ನು ಮಾಡುವದು. ಚಂದ್ರ ಶುಕ್ರ ಯೋಗವು ಸಾಮುದ್ರಿಕ, ಕಾರ್ಯಕಾರಿ, ಉದ್ಯೋಗಗಳಿಗೆ ಪೋಷಕವಾಗಿದೆ.

ಶುಕ್ರ ಗುರು ಬುಧರ ಸಂಬಂಧವು ಕಲಾ ಬಲ್ಲವರು, ಗಾಯಕರು, ವರ್ಣ ವ್ಯವಸಾಯಿಗಳು, ರತ್ನ ವ್ಯಾಪಾರಿಗಳು ಇವರನ್ನು ಹುಟ್ಟಿಸುವದು.

ಗುರು ಬುಧರ ಸಂಬಂಧವು ಕಾಯಿದೆ, ಕ್ಲಾರ್ಕ ಉಣ್ಣೆ ವ್ಯಾಪಾರಿಗಳನ್ನು ಸೂಚಿಸುವದು. ಗುರು ಬುಧ ಸಂಬಂಧವು ಗ್ರಂಥಕಾರರಲ್ಲಿಯೂ ಇರುವದು. ಬುಧ ಶುಕ್ರ ಸಂಬಂಧವು ಸಂಗೀತ ನಾಟಕ ಸಾಹಿತ್ಯದೊಡನಿರುವದು. ಇವರು ಜ್ಯೋತಿಷಿಗಳೂ ಆಗಬಹುದು.

ಶನಿ ಶುಕ್ರ ಬುಧರ ಯುತಿಯು ಆಭರಣ, ಸ್ತ್ರೀಯರ ಉಡುಪು ತೊಡಪುಗಳಿಗೆ ಬರುವದು. ಗುರು ಬುಧ ಶುಕ್ರರ ಸಂಬಂಧವು ಮ್ಯಾಜಿಸ್ಟ್ರೇಟರನ್ನು, ಜಜ್ಜರನ್ನು, ಪ್ರಾಧ್ಯಾಪಕರನ್ನು ಮಾಡುವದು.

ಮಂಗಳ ಬುಧರ ಶುಭ ಸಂಬಂಧವು ಶಿಲ್ಪಜ್ಞರು, ಸರ್ಜನರು ಇಂಜಿನಿಯರ, ಕಬ್ಬಿಣ ವ್ಯವಸಾಯಗಾರರೊಡನಿರುವದು.

ಶನಿ ಸೂರ್ಯ ಚಂದ್ರರೊಡನೆ ಅಶುಭಯೋಗ ಮಾಡುತ್ತಿದ್ದರೆ ಅಪ್ರಾಮಾಣಿಕತೆ ತಲೆದೋರುವದು. ಗುರು ಮಂಗಳ ಬುಧರೊಡನೆ ಯುತಿ ಮಾಡುತ್ತಿದ್ದರೆ ಉದ್ಯೋಗದಲ್ಲಿ ಪ್ರಾಮಾಣಿಕತೆ ಇರುವದು. ಅಂಥವರು ಪರದೇಶದ ವ್ಯಾಪಾರದಲ್ಲಿ ತೊಡಗಬಹುದು. ಮಂಗಳ ಶುಕ್ರ ಯುತಿಯು ಸುಗಂಧ ದ್ರವ್ಯಗಳ ವ್ಯಾಪಾರ, ಔಷಧಗಳು, ಬಣ್ಣಗಳ ವ್ಯವಹಾರ ಕಲಾ ನಾಟಕಗಳ ಸಂಬಂಧ ತರಬಹುದು. ಶನಿ ಶುಕ್ರ ಮಂಗಳರ ಸಂಬಂಧವು ಧಾರ್ಮಿಕ ಸೇವಾ ಕಾರ್ಯ, ಸ್ಮಶಾನ ಯಾತ್ರಿಗಳ ಸಂಬಂಧ ತರುವದು. ಗುರು ಶುಕ್ರ ಮಂಗಳರ ಶುಭ ಸಂಬಂಧವಿದ್ದಾಗ ಪವಿತ್ರ ಆಫೀಸರರ ಸ್ಥಾನವನ್ನು ಅಲಂಕರಿಸಬಹುದು. ಶುಕ್ರನ ಉದ್ಯಮವು ಸುಗಂಧ ದ್ರವ್ಯ, ಹೂ.

ಹಣ್ಣು, ಮಧ್ಯ ಬಣ್ಣ ಆಸವಾರಿಷ್ಟಗಳೊಡನಿರುವದು. ಶುಕ್ರ ಬುಧರು ದಶಮದಲ್ಲಿ, ಮಂಗಳ ಬುಧ ಶುಭಯೋಗ ಶಾಸ್ತ್ರ ಕಲೆಗಳಲ್ಲಿ ಪ್ರಾವೀಣ್ಯ ಕೊಡುವದು. ರವಿ ಗುರು ೧೦ ರಲ್ಲಿದ್ದರೆ ಮುಖ್ಯ ಗೌರವ ಕೊಡುವರು. ಅವರು ಶನಿ ಮಂಗಳರ ಅಶುಭಯೋಗದಲ್ಲಿರಬಾರದು.

ಮೇಷ ಸಿಂಹ ಧನುಗಳು ಉದಿತವಿದ್ದು ಲಗ್ನಾಧಿಪನು ದಶಮದಲ್ಲಿದ್ದರೆ ಜಾತನು ತನ್ನ ಶ್ರೇಣಿಯನ್ನು ಎತ್ತರಿಸಿಕೊಳ್ಳುವನು.

ಗೃಹಸುಖ

ಚತುರ್ಥವು ಗೃಹಸುಖದ ಭಾವವು. ಅಲ್ಲಿ ಶುಭಗ್ರಹವಿದ್ದರೆ ಸುಖ ಸಿಗುವದು. ತಂದೆ–ತಾಯಿಗಳಿಗಾಗಿ ೧೦–೪ ನೆಯ ಭಾವಗಳನ್ನು ನೋಡಬೇಕೆಂದು ಪಶ್ಚಿಮದ ಜ್ಯೋತಿರ್ವಿದರ ಮತವಿರುವದು. ಪಿತೃಭಾವಕ್ಕಾಗಿ ನಮ್ಮವರು ನವಮಭಾವವನ್ನು ನೋಡುವರು. ರವಿ ಶನಿ ಸಾಮಾನ್ಯವಾಗಿ ಪಿತೃಕಾರಕರು; ಚಂದ್ರ ಶುಕ್ರರು ಮಾತೃಕಾರಕರೆಂದು ರಾಬ್ಸನ್ನರ ಅಭಿಪ್ರಾಯವು. ಮತಭೇದವಿದ್ದರೆ ಅವರವರ ಪದ್ಧತಿಯಂತೆ ಹೋಗಿ ಸತ್ಯ ಶೋಧನೆ ಮಾಡಬೇಕು. ಜೈಮಿನಿ ಋಷಿ ಹೇಳುತ್ತಾನೆ. "**ರವಿ ಶುಕ್ರಯೋಃ ಪ್ರಾಣೀಜನಕಃ**" ರವಿ ಶುಕ್ರರಲ್ಲಿ ಬಲಿಷ್ಠನಾದವನು (ರಾಶಿಯನ್ನುಳಿದು ಹೆಚ್ಚಿನ ಅಂಶದಲ್ಲಿರುವವನು) ಪಿತೃಕಾರಕನು. "**ಚಂದ್ರಾರಯೋಃ ಜನನೀ**" ಚಂದ್ರ ಮಂಗಳರಲ್ಲಿ ಬಲಿಷ್ಠನಾದವನು ಮಾತೃಕಾರಕನು. ಹಗಲಿನಲ್ಲಿ ಜನ್ಮವಿದ್ದರೆ ರವಿ ಶುಕ್ರರು ಪಿತೃಕಾರಕರೆಂದು ಹೇಳುತ್ತಾರೆ. ಇದು ಜೈಮಿನಿ ಮತಕ್ಕೆ ಕೂಡುವದು. ಚಂದ್ರ ಶನಿಗಳು ರಾತ್ರಿಯಲ್ಲಿ ಮಾತೃಕಾರಕರೆಂದು ಹೇಳುವರು. ಇವರ ಸ್ಥಿತಿಗಳನ್ನು ಮಾತಾಪಿತೃ ಸೌಖ್ಯಕ್ಕಾಗಿ ವಿಚಾರಿಸುವದು ವಾಡಿಕೆಯಾಗಿದೆ. ಇವು ಶುಭ ದೃಷ್ಟವಾಗಿದ್ದರೆ ಅಥವಾ ಶುಭಗ್ರಹದ ಸಾಮೀಪ್ಯದಲ್ಲಿ ೩೦ ಅಂಶದ ಒಳಗೆ ಇದ್ದರೆ ತಂದೆ ತಾಯಿಗಳ ಸುಖವು ಹೆಚ್ಚಾಗಿ ಸಿಗುವದು. ಅವರೂ ದೀರ್ಘ ಜೀವನ ಪಡೆಯುವರು. ಸೂಚಕ ಗ್ರಹಗಳು ದುರ್ಬಲವಾಗಿದ್ದರೆ ಗುರು ಶುಕ್ರರ ಸಹಕಾರ ಅವಕ್ಕಿಲ್ಲದಿದ್ದರೆ ತಂದೆ–ತಾಯಿಗಳು ದೈನ್ಯಾವಸ್ಥೆಯಲ್ಲಿರುವರು.

ರವಿ ಶನಿ ಅಶುಭಯೋಗದಲ್ಲಿದ್ದು; ಅವರಿಬ್ಬರೂ ರಾಶಿ ದುರ್ಬಲರಿದ್ದು ಆಪೋಕ್ಲಿಮದಲ್ಲಿದ್ದರೆ; ಮಂಗಳನು ದಶಮಭಾವ ಸಮೀಪದಲ್ಲಿದ್ದರೆ, ಅವರಿಗಿಂತ ಮೊದಲು ಉದಯ ಹೊಂದುತ್ತಿದ್ದರೆ ತಂದೆಯು ಕೊರತೆಯಲ್ಲಿರುವನು. ಅಶುಭಯೋಗಗಳು ಕೇಂದ್ರದಲ್ಲಿ ಉಂಟಾದರೆ ಪಿತೃಸೌಖ್ಯ ನ್ಯೂನತೆ

ಕಂಡು ಬರುವದು. ಮಂಗಳನು ರವಿಗಿಂತ ಮೇಲ್ಭಾಗದಲ್ಲಿದ್ದರೆ ತಂದೆಗೆ ಆಕಸ್ಮಿಕ ಮರಣ ಸಂಭವಿಸುವದು; ಅಥವಾ ಕಣ್ಣಿಗೆ, ಮುಖಕ್ಕೆ ಅಪಾಯ ಸಂಭವವಿರುವದು. ಶನಿ ಮೇಲೆ ಇದ್ದರೆ ನೋವುವುಂಟಾಗುವದು. ತಂದೆ-ತಾಯಿಗಳ ಸೂಚಕ ಗ್ರಹಗಳು ಪರಸ್ಪರ ಅಶುಭಯೋಗದಲ್ಲಿದ್ದು ಪಾಪಗ್ರಹಗಳಿಂದ ಪೀಡಿತವಾಗಿದ್ದರೆ ತಂದೆ ತಾಯಿಗಳಲ್ಲಿ ತೊಂದರೆಗಳು; ಇಲ್ಲವೆ ಅಗಲುವಿಕೆ ಉಂಟಾಗುವವು. ತಂದೆ-ತಾಯಿಗಳ ದೈವವನ್ನು ಅವರ ಸಾಂಪತ್ತಿಕ ಸ್ಥಿತಿಯನ್ನೂ ಅವರೊಡನೆ ಮಾಡುವ ಶುಭಾಶುಭಯೋಗಗಳಿಂದ ನಿರ್ಣಯಿಸಬಹುದು.

ಸೋದರ ಸೋದರಿಯರು:— ೩ನೆಯ ಭಾವವು ತಮ್ಮಂದಿರನ್ನು ತಂಗಿಯರನ್ನೂ ಸೂಚಿಸುವದು. ಅಣ್ಣ-ಅಕ್ಕಂದಿರನ್ನು ೧೧ ನೆಯ ಭಾವವು ಸೂಚಿಸುವದೆಂದು ಹೇಳುತ್ತಾರೆ. ೯ನೆಯ ಭಾವವು ಅವನಿಗಿಂತ ಹಿರಿಯರು; ೫ನೆಯ ಭಾವವು ೨ನೆಯ ಸೋದರ, ೭ನೆಯ ಭಾವವು ೩ನೆಯ ಸೋದರ (ಕಿರಿಯರು) ಸೂಚಿಸುವದು. ಭಾವ ಭಾವಾಧಿಪತಿಗಳಿಂದ ಆಯಾ. ಸೋದರ-ಸೋದರಿಯರ ಸ್ಥಿತಿಗಳನ್ನು ಊಹಿಸಬಹುದು. ಟಾಲೇಮಿ ಮತದಂತೆ ೧೦, ೧೧; ಚಂದ್ರ ಶುಕ್ರರನ್ನೂ ವಿಚಾರಿಸಬೇಕು. ಮಂಗಳನು ಭಾತೃಕಾರಕ. ಅವನ ಪರಿಸ್ಥಿತಿಯನ್ನು ವಿಚಾರಿಸಬೇಕು. ಸೂಚಕ ಗ್ರಹಗಳು ಪಾಪಗ್ರಹಗಳ ಪೀಡೆಯಲ್ಲಿದ್ದರೆ ಭಾರ್ತೃ ಸೌಖ್ಯವಿರುವದಿಲ್ಲ. ೭ನೆಯ ಮನೆಯನ್ನು ತಾಯಿಯ ಬಂಧುಗಳ ಬಳಗದ ಬಗ್ಗೆಯೂ: ೧೨ನೆಯ ಮನೆಯನ್ನು ತಂದೆಯ ಬಂಧುಗಳ ಬಗ್ಗೆಯೂ ವಿಚಾರಿಸಬೇಕು. ಗುರುವಿನ ಅಧಿಕಾರ ಕಕ್ಕಂದಿರ ಮೇಲೆ, ಹರ್ಶಲನ ಅಧಿಕಾರ ಮುತ್ತಜ್ಜರ ಮೇಲೆ ಇರುವದೆಂದು ಹೇಳುವರು.

ನಾಲ್ಕನೆಯ ಮನೆ ಗೃಹಸುಖ ಗೃಹವಾಸಸ್ಥಳವನ್ನು ತೋರಿಸುವದು. ಈ ಮನೆ ಪೀಡಿತವಿದ್ದರೆ ಪರಿವರ್ತನ ಅಸುಖಗಳ ಸೂಚಕವು. ಚತುರ್ಥದಲ್ಲಿರುವ ರಾಶಿ ಸೂಚಕ ದಿಕ್ಕಿಗೆ ಮನೆ ಇರಬೇಕು. ಚರರಾಶಿಗಳು ಕೇಂದ್ರಗಳು ಕ್ರಾಸರೋಡಿನಲ್ಲಿ ಅಥವಾ ಮುಖ್ಯ ರಸ್ತೆಯಲ್ಲಿ ಅಥವಾ ಎತ್ತರದಲ್ಲಿ ಇರುವ ಮನೆಯನ್ನು ಸೂಚಿಸುವವು. ಸ್ಥಿರರಾಶಿಗಳು ರಸ್ತೆಯ ಮಧ್ಯದಲ್ಲಿ

ಸ್ವಲ್ಪ ಕೆಳಭಾಗದಲ್ಲಿ ಮನೆಯನ್ನು ಸೂಚಿಸುವವು. ದ್ವಿಸ್ವಭಾವಿ ರಾಶಿಗಳು ರಸ್ತೆಯ ಕೊನೆಯ ಸಮೀಪದಲ್ಲಿ ಸಪಾಟ ಭೂಮಿಯಲ್ಲಿರುವವು.

ಗೃಹಸುಖದಲ್ಲಿ ಗ್ರಹಗಳ ಪರಿಣಾಮ

ಮೇಷ:— ಮೇಷದಲ್ಲಿ ಶನಿ ಇದ್ದರೆ ಬೇಗ ತೊಂದರೆಗಳು ಹುಟ್ಟುವವು. ಕಕ್ಕಾ ಕಕ್ಕಿ ಅಬಚಿಯರ ಸಾವು ಉಂಟಾಗಬಹುದು. ಶುಕ್ರನಿದ್ದರೆ ತಂದೆ-ತಾಯಿಗಳ ಪ್ರೇಮಕ್ಕೆ ಪಾತ್ರರಾಗುವರು. ಚಂದ್ರನಿಂದ ತಾಯಿಯ ಪ್ರೇಮ ಲಭ್ಯವಾಗುವದು.

ವೃಷಭ:— ವೃಷಭದಲ್ಲಿ ಶನಿ ಸೋದರರಿಗೆ ತೊಂದರೆಯನ್ನುಂಟು ಮಾಡುವನು. ಶನಿ ೮, ೧೨ ರಲ್ಲಿದ್ದರೆ ತಂದೆಗೆ ತೊಂದರೆಗಳುದ್ಭವಿಸಬಹುದು. ರವಿಯು ತಂದೆಗೆ ಭಾಗ್ಯಕಾರಕನಾಗುವನು. ಶುಕ್ರನಿದ್ದರೆ ಗೃಹಸೌಖ್ಯವು ಚೆನ್ನಾಗಿರುವದು. ಚಂದ್ರನು ಬಂಧು ಬಾಂಧವರ ಪ್ರೇಮಕ್ಕೆ ಕಾರಣನಾಗುವನು. ಸೋದರರಿಗಿಂತ ಸೋದರಿಯರ ಪ್ರೀತಿ ಹೆಚ್ಚು. ತಾಯಿಗೆ ಬೆಂಬಲ ಕೊಡುವರು.

ಮಿಥುನ:— ಮಿಥುನದಲ್ಲಿ ಗುರು ಇದ್ದರೆ ಹಿರಿಯ ಅಣ್ಣನು ಮನೆಗೆ ಮುಖ್ಯನಾಗಿರುವನು. ಮಂಗಳನಿದ್ದರೆ ಮನೆತನದಲ್ಲಿ ತೊಂದರೆಗಳೇಳಬಹುದು. ರವಿಯಿದ್ದರೆ ಜಾಣನು, ಮನೆತನದ ಮುಂದಾಳು ಆಗಬಹುದು. ಸೋದರ ಸೋದರಿಯರ ಸಂಖ್ಯೆ ಹೆಚ್ಚಿಗಿರುವದು. ಬಂಧುಗಳ ಸಹಾಯ ದೊರಕುವದು. ಚಂದ್ರನಿದ್ದರೆ ಮೇಲಿಂದ ಮೇಲೆ ವಾಸಸ್ಥಳದ ಬದಲಾವಣೆಯಾಗಬಹುದು. ಕೆಲವು ಸಾರೆ ಮಲತಾಯಿ ಅಥವಾ ಬಂಧುಗಳು ಜಾತನನ್ನು ಮಾನಸಿಕ ಶಾರೀರಿಕ ಲಕ್ಷಣಗಳಿಂದ ಹೋಲುವರು.

ಕರ್ಕ:— ಮನೆಯ ಮೇಲೆ, ತಾಯಿಯ ಮೇಲೆ ಆಕರ್ಷಣೆ ಹೆಚ್ಚು. ನೇಪಚ್ಯೂನನಿದ್ದರೆ ತಾಯಿಯ ಸಹವಾಸ ಹೆಚ್ಚು. ಹರ್ಶಲನಿದ್ದರೆ ಮನೆಯಲ್ಲಿ ತೊಂದರೆಗಳು. ಶನಿಯಿಂದಲೂ ಅದೇ ಹಣೇ ಬರಹ. ತಂದೆ

ತಾಯಿಗಳಿಗೆ ತೊಂದರೆ, ಮಂಗಳನಿದ್ದರೆ ಗೃಹಕಲಹ. ರವಿ ಇದ್ದರೆ ಮನೆತನದಲ್ಲಿ ಆಸಕ್ತಿ, ತಾಯಿಯಲ್ಲಿ ಆಸಕ್ತಿ. ಶುಕ್ರನಿದ್ದರೆ ಮನೆಯ ಪ್ರೇಮ. ಚಂದ್ರನಿದ್ದರೆ ಮನೆಯ ಬಗ್ಗೆ ಪ್ರೇಮವಿರುವದು. ಜಲಸಾಮೀಪ್ಯದಲ್ಲಿ ವಾಸವಾಗುವದು.

ಸಿಂಹ:— ಹರ್ಶಲನಿದ್ದರೆ ತಂದೆಯಿಂದ ತೊಂದರೆಗಳಾಗುವವು. ಗುರು ಇದ್ದರೆ ಮನೆತನದ ಕಾರ್ಯದಲ್ಲಿ ಯಶಸ್ಸು ಸಿಗುವದು. ರವಿ ಇದ್ದರೆ ತಂದೆ ಭಾಗ್ಯಶಾಲಿಯಾಗುವನು. ಶುಕ್ರನಿದ್ದರೆ ಜೀವನದ ಅಂತ್ಯದಲ್ಲಿ ಮನೆತನದಲ್ಲಿ ಗುಪ್ತ ವ್ಯವಸ್ಥೆ. ಚಂದ್ರನಿದ್ದರೆ ತಂದೆಗೆ ಹಿತವಲ್ಲ.

ಕನ್ಯಾ: — ಮಂಗಳನಿದ್ದರೆ ಅನೇಕ ಬಡ ಬಂಧುಗಳಿರುವರು. ರವಿ ಇದ್ದರೆ ತಂದೆಗೆ ಹಿತವಲ್ಲ. ಶುಕ್ರನಿದ್ದರೆ ಬಂಧುಗಳ ಬಗೆಗೆ ಆತುರತೆ ಇರುವದು. ಚಂದ್ರನಿದ್ದರೆ ತಾಯಿಗೆ ಒಳ್ಳೆಯದಲ್ಲ. ಶುಕ್ರನು ಪೀಡಿತನಿದ್ದರೆ ಸಾಂಸಾರಿಕ ಸುಖದಲ್ಲಿ ನ್ಯೂನತೆ ಕಾಣುವದು.

ತುಲಾ:— ಶನಿ ಪೀಡಿತನಿದ್ದರೆ ಉತ್ತರ ವಯಸ್ಸಿನಲ್ಲಿ ಮನೆತನದಲ್ಲಿ ತೊಂದರೆಗಳು ತೋರುವವು. ಗುರು ಇದ್ದರೆ ಉತ್ತರಾರ್ಧದಲ್ಲಿ ಸುಖಮಯ ಗೃಹಸೌಖ್ಯವು ದೊರಕುವದು. ಮಂಗಳನು ಪೀಡಿತನಿದ್ದರೆ ಅನೇಕ ಮರಣಗಳ ಸಂಭವ. ಚಂದ್ರನು ಮಾತೃಸುಖಕ್ಕೆ ಕಾರಣನಾಗುವನು.

ವೃಶ್ಚಿಕ:— ಶನಿ ಬಡತನ ಮತ್ಸರದ ಬಂಧುಗಳ ದ್ಯೋತಕನಾಗುವನು. ರವಿ ಇದ್ದರೆ ತಂದೆಯ ವಿಯೋಗವಾಗುವದು. ಚಂದ್ರನಿದ್ದರೆ ತಾಯಿಗೂ ಅವಳ ಬಂಧುಗಳಿಗೂ ಸುಖವಿರುವದಿಲ್ಲ.

ಮೃತ್ಯುಯೋಗ

ಮೃತ್ಯುಯೋಗವು ಮನುಷ್ಯನಿಗೆ ತಿಳಿಯುವದೇ? ಇದೊಂದು ಜಟಿಲವಾದ ಸಮಸ್ಯೆ. ಜ್ಯೋತಿಶ್ಶಾಸ್ತ್ರಜ್ಞರು ಇದನ್ನು ಬಿಡಿಸಲು ಯತ್ನಿಸಿದ್ದಾರೆ ನಿಜ. ಆದರೂ ಅದು ಇನ್ನೂ ಜಟಿಲ ಸಮಸ್ಯೆಯಾಗಿಯೇ ಉಳಿದಿದೆ. ಮಾನವನಿಗೆ ಅದರ ಗುಟ್ಟು ಪೂರ್ಣವಾಗಿ ತಿಳಿಯಬಾರದೆಂದು ಈಶ್ವರನ ಸಂಕೇತವೂ ಇರಬಹುದು.

'ಜೈಮಿನಿ ಸೂತ್ರಗಳು' ಎಂಬ ಗ್ರಂಥದ ೨ನೆಯ ಅಧ್ಯಾಯದಲ್ಲಿ ಮಾರಕ ಗ್ರಹಗಳನ್ನು ಗೊತ್ತುಪಡಿಸುವ ಸೂತ್ರಗಳಿರುವವು. ಇದಕ್ಕಾಗಿ ಬ್ರಹ್ಮ, ರುದ್ರ, ಮಹೇಶ್ವರ ಗ್ರಹಗಳನ್ನು ಬೇರೆಯಾಗಿ ಗೊತ್ತುಪಡಿಸಬೇಕಾಗುವದು. "**ಬ್ರಹ್ಮಣೋ ಯಾವನ್ಮಹೇಶ್ವರರ್ಷ ಪರ್ಯಂತ ಮಾಯುಃ**" ಎಂದೆನ್ನುವನು.

ಬ್ರಹ್ಮನಿಂದ ಮಹೇಶ್ವರರಿರುವ ರಾಶಿಯವರೆಗೆ ಮಾನವನ ಆಯುಷ್ಯವಿರುವದು. ಬ್ರಹ್ಮ ರುದ್ರ ಮಹೇಶ್ವರ ಗ್ರಹಗಳನ್ನು ಗೊತ್ತುಪಡಿಸುವ ರೀತಿ ನೀತಿಗಳು ಸುಸೂತ್ರವಾಗಿರುವದಿಲ್ಲ. ೩ನೆಯ ಅಧ್ಯಾಯದಲ್ಲಿಯೂ ಕೆಲವು ಸೂತ್ರಗಳಿರುವವು. ಮೊದಲು ಜಾತನು ಅಲ್ಪಾಯುವೋ, ಮಧ್ಯಮಾಯುವೋ, ದೀರ್ಘಾಯುವೋ ನಿರ್ಣಯಿಸಬೇಕಾಗುವದು. ಅಂತೂ ಗೊಂಡಾರಣ್ಯದಲ್ಲಿ ಹೊಕ್ಕಂತೆ. ಸ್ಕಾಲರರು ಒಂದೆರಡು ಉದಾಹರಣೆಗಳನ್ನು ತೋರಿಸಿ ಪಾರಾದರೆ ತೀರಲಿಲ್ಲ. ಇದಕ್ಕೆ ಇನ್ನೂ ಸಂಶೋಧನಾತ್ಮಕ ಅಭ್ಯಾಸಬೇಕೆಂದು ನಮಗೆ ತೋರುವದು.

ಇನ್ನು ಪರಾಶರ ಪದ್ಧತಿಗೆ ಶರಣು ಹೊಕ್ಕು ನೋಡಿರಿ. ಅಲ್ಲಿಯೂ ಮಾರಕ ಗ್ರಹಗಳ ಗೊಂದಲ. ದ್ವಿತಿಯಾಧಿಪ, ಸಪ್ತಮಾಧಿಪರು ಮಾರಕರಾಗುವರು. ಅಲ್ಲಿರುವ ಗ್ರಹಗಳು ಮಾರಕವಾಗುತ್ತವೆ. ಅವರಾಗದಿದ್ದರೆ

“ ಮಾರಕೈಃ ಸಹ ಸಂಬಂಧಾತ್ ನಿಹಂತಾ ಮಾರಕೃತ್ ಸರ್ವಾನತಿಕ್ರಮ್ಯ ವರ್ತತೇ ಪಾಪಕೃತ್ ಶನಿಃ. ” ಯಾರೂ ಆಗದಿದ್ದರೆ ಶನಿ ಈ ಚಾರ್ಜನ್ನು ತನ್ನ ಕಡೆಗೆ ತೆಗೆದುಕೊಳ್ಳುತ್ತಾನೆ.

ಪ್ರಸಂಗ ವಿಶೇಷದಲ್ಲಿ ೩, ೬, ೧೨ ರ ಅಧಿಪತಿಗಳು ಮಾರಕರಾಗಬಹುದು. ಇವರಲ್ಲಿ ಪ್ರಬಲ ಮಾರಕನಾರೆಂಬುದನ್ನು ಚಾಣಾಕ್ಷರಿಗೆ ಅನುಭವಿಕರಿಗೆ ಸಾಧ್ಯವಾಗಬಹುದು. ರಾಮಾನುಜಾಚಾರ್ಯರ ಭಾವಾರ್ಥ ರತ್ನಾಕರ, ಕಾಲಿದಾಸನ ಕಾಲಾಮೃತ, ಲಘುಪರಾಶರಿ, ಈ ಗ್ರಂಥಗಳನ್ನು ಓದಿ ನೋಡಿರಿ. ಯಾವ ಗ್ರಹವು ಮಾರಕವಾಗುವದೋ ತಿಳಿಯದೆ ವಾಚಕರು ಭ್ರಾಂತಿಗೊಳಗಾಗುವರು. ಇನ್ನು ಸಾರಾವಲಿಕಾರನು ಹೇಳುತ್ತಾನೆ. “ **ಯಸ್ಮಾದ್ ಭ್ರಾಂತಃ ಸಮಸ್ತಲೋಕೋಽಯಂ ಆಕುಲೀಕೃತ್ಯ ಕಥಯಾಮಿ:** ” ಎಂದು ಹೇಳುವನು. ಇವನ ನಿಯಮುಗಳಲ್ಲಿಯೂ ಭ್ರಾಂತಿಯು ನಿರಾಕರಿಸಲ್ಪಟ್ಟಿರುವದೇ ? ಇದು ವಿಚಾರಣೀಯ. ಇವೆಲ್ಲ ವಿಷಯಗಳ ಬಗೆಗೆ ವಾಚಕರು ಬಹುಸೂಕ್ಷ್ಮ ವಿಚಾರವನ್ನು ಮಾಡಬೇಕಾಗುವದು. ಇಲ್ಲವಾದರೆ ಕೇಳುವವರಿಗೆಲ್ಲ ದೀರ್ಘಾಯುಷ್ಯ ಹೇಳಬೇಕು. ಸತ್ತ ಬಳಿಕ ಅವರೇನು ನಿಮ್ಮನ್ನು ಕೇಳಲಿಕ್ಕೆ ಬರುವದಿಲ್ಲ— ಎಂದು ನೀಲಕಂಠ ದೀಕ್ಷಿತನ ಕಲಿ ವಿಡಂಬನದಲ್ಲಿ ಹೇಳಿದಂತೆ ಜ್ಯೋತಿಷಿಗಳು ವಿಡಂಬನೆಗೆ ಪಾತ್ರರಾಗುವರು.

ಇನ್ನು ಸಾಯನ ವಾದಿಗಳು ಹೇಳುವ ವಿಚಾರಗಳನ್ನಷ್ಟೇ ಇಲ್ಲಿ ಹೇಳುವೆವು. ಅವು ಮರಣದ ಗುಟ್ಟು ತಿಳಿದುಕೊಳ್ಳಲಿಕ್ಕೆ ಸಹಕಾರಿಯಾಗುವವು. ಅವು ಕೊನೆಯ ನಿರ್ಣಯವೆಂದು ಮಾತ್ರ ಯಾರೂ ತಿಳಿಯಬಾರದು.

ಎಂಟನೆಯ ಭಾವವು ಮೃತ್ಯು ಭಾವವು. ಇದು ಮರಣವನ್ನು ಆಳುವ ಸ್ಥಾನವು. ೮ ನೆಯದು ಕೊನೆಯ ಪರಿಣಾಮವನ್ನು ಸೂಚಿಸುವ ಭಾವವು. ಇದು ಕೇವಲ ಮುಪ್ಪಿನ ಕಾಲದ ಸ್ಥಿತಿಗತಿಯನ್ನು ತಿಳಿಸುವದೆಂದು ತಿಳಿಯಲಾಗದು. ಯಾವ ವಯಸ್ಸಿನಲ್ಲಿ ಮರಣವುಂಟಾದರೂ ಆ ಕಾಲದ ಸ್ಥಿತಿ ಸೂಚಕವಾಗಿದೆ. ಕೆಲವು ಸಾರೆ ಎಂಟನೆಯ ಭಾವಕ್ಕಿಂದಲೂ ಈ ಭಾವವೇ (೮) ಸ್ಪಷ್ಟ ಸ್ಥಿತಿಯನ್ನು ಸೂಚಿಸುವದು.

ನಾಲ್ಕನೆಯ ಭಾವದಲ್ಲಿಯ ಗ್ರಹಗಳು, ನಾಲ್ಕನೆ ಭಾವದ ಅಧಿಪತಿ, ಅವರೊಡನೆ ಉಂಟಾಗುವ ಶುಭಾಶುಭಯೋಗಗಳು ಮರಣ ಕಾಲದ ಪರಿಸ್ಥಿತಿ ದ್ಯೋತಕವಾಗಿವೆ.

ಮರಣ ವಿಷಯದಲ್ಲಿ ಮೊದಲು ಜೀವನ ಸಹಮು ಬಂದುವನ್ನು ನೋಡಿರಿ. ಅದು ಪೀಡಿತವಾಗದೆ ಮರಣವು ಬರಲಾರದು. ರವಿ ಚಂದ್ರರನ್ನೂ ಲಗ್ನಾಂಶವನ್ನೂ ಪೀಡಿಸುವ ಗ್ರಹಗಳನ್ನು ನೋಡಿರಿ. ಸೂಚಕ ಗ್ರಹಗಳು ಬಹಳಷ್ಟು ಪೀಡಿತವಾಗಿರದಿದ್ದರೆ, ಸ್ವಾಭಾವಿಕ ಮರಣವೆಂದು ಭಾವಿಸಿರಿ. ಬಹಳಷ್ಟು ಪೀಡಿತವಾಗಿದ್ದರೆ ಅಸ್ವಾಭಾವಿಕ ಮರಣವಾಗುವದು. ಜೈಮಿನಿ ಋಷಿ ಇವುಗಳಿಗೆ ಶುಭ ಮರಣ, ದುರ್ಮರಣವೆಂದು ಕರೆಯುವನು. “ **ಅನಾಯಾಸೇನ ಮರಣಂ ವಿನಾದೈನ್ಯೇನ ಜೀವನಂ** “ ಇವು ಪುಣ್ಯವಂತರಿಗೆ ಬರುವವೆಂದು ವ್ಯಾಸ ಮಹರ್ಷಿ ಹೇಳಿರುವನು. ಶರಣರು ಮರಣವನ್ನು ಮಹಾನವಮಿಯೆಂದು ತಿಳಿಯುವರು. ಇದು ನಮ್ಮ ಜನರ ತಿಳುವಳಿಕೆ.

ಅಶುಭಯೋಗಗಳ ಗುಂಪು ಮರಣವನ್ನು ತರುವದು. ಇಂಥ ಯೋಗ ಸಮುಚ್ಚಯದಲ್ಲಿ ಗುರು ಶುಕ್ರರ ದೃಷ್ಟಿ ಇದ್ದರೆ ಅದು ಸಂಜೀವನಿ ಮಂತ್ರದಂತೆ ಸಾಯುವವರನ್ನು ಬದುಕಿಸುವದು. ಇದು ಅಸ್ವಾಭಾವಿಕ ಮರಣವನ್ನು ಸ್ವಾಭಾವಿಕಕ್ಕೂ ತಿರುಗಿಸಬಹುದು. ಸ್ವಾಭಾವಿಕ ಮರಣವನ್ನು ೭ ರಲ್ಲಿರುವ ಗ್ರಹ, ೮ ರಲ್ಲಿರುವ ಗ್ರಹ, ಅವುಗಳ ಅಧಿಪರು, ಶುಭಾಶುಭಯೋಗಗಳಿಂದ ಅಲ್ಲಿರುವ ರಾಶಿಗಳಿಂದ ನಿರ್ಣಯಿಸಬಹುದು. ಮರಣ ಕಾಲೀನ ರೋಗವನ್ನು ಊಹಿಸಬಹುದು.

ಶನಿ ಹರ್ಶಲ ಮಂಗಳರು ಮಾರಕ ಗ್ರಹಗಳೆಂದು ಸಾಯನ ವಾದಿಗಳು ತಿಳಿಯುತ್ತಾರೆ.

ರವಿ ಚಂದ್ರ ಲಗ್ನಾಂಶಗಳು ಈ ಗ್ರಹಗಳಿಂದ ಬಲವತ್ತರವಾಗಿ ಪೀಡಿಸಲ್ಪಟ್ಟಿದ್ದರೆ ಅಶುಭ ಮರಣವುಂಟಾಗುವದು. ಮೇಷ, ವೃಷಭ, ಸಿಂಹ, ವೃಶ್ಚಿಕ, ಧನು ಮಕರಗಳು ಅಪಘಾತ ಸೂಚಕ ರಾಶಿಗಳು. ಇಲ್ಲಿರುವ

ಗ್ರಹಗಳು ಶುಭದೃಷ್ಟಿಯಲ್ಲಿ ಇಲ್ಲದಿದ್ದರೆ ಅಪಘಾತ ಸೂಚಕವಾಗುವವು. ಪಾಪಗ್ರಹಗಳು ದಶಮ ಬಿಂದುವಿನ ಸಮೀಪದಲ್ಲಿದ್ದರೆ, ಕೇಂದ್ರದಲ್ಲಿದ್ದರೆ, ಅಷ್ಟಮ ಚತುರ್ಥ ಭಾವವನ್ನು, ಭಾವಾಧಿಪತಿಗಳನ್ನು ಪೀಡಿಸುತ್ತಿದ್ದರೆ ಅಪಘಾತ ಭಯ. ಚರರಾಶಿಗಳೂ ಕೇಂದ್ರಗಳೂ ಅಷ್ಟಮ ಭಾವವೂ ಭಯವನ್ನು ಹೆಚ್ಚಿಸುವವು.

ಮರಣ ಕಾಲವನ್ನು ಪ್ರಾಥಮಿಕ ಪದ್ಧತಿಯ ಯೋಗಗಳಿಂದಾಗಲಿ, ದಿನವರ್ಷ ಪದ್ಧತಿಯ ಯೋಗಗಳಿಂದಾಗಲಿ ನಿರ್ಣಯಿಸಬಹುದು. ದಿನ ವರ್ಷ ಪದ್ಧತಿಯ ಯೋಗಗಳಿಗಿಂತ ಪ್ರಾಥಮಿಕ ಪದ್ಧತಿಯ ಯೋಗಗಳಲ್ಲಿ ಶಕ್ತಿ ಹೆಚ್ಚಿಗಿರುವದು. ಗನೆಯ,ತನೆಯ ಝೂಡಕೀಲರೂ, ಸ್ಟೈನೋಸ್ಟೈಟರೂ ಹೀಗೆ ಅಭಿಪ್ರಾಯ ಪಡುತ್ತಾರೆ. ಇಂತಹ ಪ್ರಸಂಗಗಳಲ್ಲಿಯೂ ಒಂದು ಸಣ್ಣ ಶುಭಗ್ರಹದ ದೃಷ್ಟಿಯೂ ಬದುಕಿಸಬಹುದಾದ್ದರಿಂದ ಮರಣ ಕಾಲವನ್ನು ನಿಶ್ಚಯಿಸುವದು ಕಷ್ಟ ಸಾಧ್ಯವಾಗಿರುವದು. ಅನೇಕ ಅಶುಭಯೋಗಗಳ ಸಮುಚ್ಚಯವು ಮರಣ ಕಾಲವನ್ನು ತರುವದು. ಮೊದಲನೇ ಯೋಗವು ಮರಣ ಕಾಲವನ್ನು ಸೂಚಿಸಿದರೆ, ಉಳಿದ ಯೋಗಗಳು ಮರಣ ಕಾಲೀನ ಪ್ರಕೃತಿಯನ್ನು ಸೂಚಿಸುವವು.

ಮೇಷ:— ಅಪ್ರತ್ಯಕ್ಷವಾಗಿ ಮರಣಕ್ಕೆ ಕಾರಣವಾಗುವದು. ಇಲ್ಲಿ ಶನಿ ಬುಧರು ಪೀಡಿತರಿದ್ದರೆ ಆತ್ಮಹತ್ಯೆಯ ಪ್ರವೃತ್ತಿ ಕಂಡು ಬರುವದು. ಗುರು ಇದ್ದರೆ ಅಂತ್ಯ ಕಾಲದಲ್ಲಿ ಮರ್ಯಾದೆ ಸಿಗುವದು. ಶೌರ್ಯದ ಮೃತ್ಯು ಸಂಭವ. ಚಂದ್ರನಿದ್ದರೆ ಜಲ ಭಯವು.

ವೃಷಭ:— ಸರ್ಜಿಕಲ್ ಅಪರೇಶನ್‌ದ ಭಯವು ಕೆಲವು ಸಲ ಇರುವದು. ಮಂಗಳನಿದ್ದರೆ ಶಿರಚ್ಛೇದ, ಕಂಠಚ್ಛೇದದ ಭಯವು.

ಮಿಥುನ:— ಶನಿ ಇದ್ದರೆ ವಿಚಿತ್ರ. ಸಾವು ಪ್ರಾಪ್ತವಾಗುವದು. ಮಾತ್ಸರ್ಯದ ಭೀತಿಯಿಂದ ಉಂಟಾಗುವ ಮರಣ. ಬಂಧುಗಳು ಕಾರಣರಾಗಬಹುದು. ಮಂಗಳನಿದ್ದರೆ ಬಂಧುಗಳ ಶತ್ರುತ್ವವು ಮರಣಕ್ಕೆ ಕಾರಣವಾಗುವದು.

ಕರ್ಕ:— ಮರಣ ಕಾಲದಲ್ಲಿ ಅಡಚಣಿಗಳುಂಟಾಗುವವು. ಹೊರಗೆ ಜಲಭೀತಿಯಿಂದ ಮರಣ. ಗುರು ಇದ್ದರೆ ಸ್ಮಾರಕ ಮರಣ; ಶಾಂತ ಮರಣ. ಹೊರಗಿನ ಮರ್ಯಾದೆಯು ಸಿಗುವದು.

ಸಿಂಹ:— ಶನಿ ಇದ್ದರೆ ಅತಿಶಯ ಶ್ರಮದಿಂದ ಇಲ್ಲವೆ ಹೃದಯ ವೇದನೆಯಿಂದ ಮರಣ ಸಂಭವ. ಗುರು ಇದ್ದರೆ ಮಾನವುಳ್ಳ ಮರಣ. ಮಂಗಳನಿದ್ದರೆ ಆಫೀಸಿನಲ್ಲಿ ಮರಣ ಇಲ್ಲವೆ ಶ್ರಮದಿಂದ ಮರಣ ಸಂಭವಿಸಬಹುದು. ಗಡಿಪಾರಿನ ಭಯವಿರುವದು. ಶುಕ್ರನಿದ್ದರೆ ಮಾನರಕ್ಷಣೆಗಾಗಿ ಮರಣ ಭಯವಿರುವದು.

ಕನ್ಯಾ:— ಶನಿ ಇದ್ದರೆ ಜಲದಲ್ಲಿ ಮುಳುಗುವದರಿಂದ ಅಥವಾ ಉಸಿರುಗಟ್ಟುವದರಿಂದ ಮರಣ ಸಂಭವವು. ಚಂದ್ರನು ಪೀಡಿತನಿದ್ದರೆ, ಮಂಗಳನಿದ್ದರೆ ಬಂಧುಗಳಿಂದ ಮರಣ ಭಯವು.

ತುಲಾ:— ಶನಿಯಿದ್ದರೆ ಜೀವನದ ಕೊನೆಗಾಲದಲ್ಲಿ ತೊಂದರೆಗಳುದ್ಭವಿಸುವವು. ಉಲ್ಲೇಖನಾರ್ಹ ಮರಣವು ಗುರು ಇದ್ದರೆ ಬರುವದು ಅಲ್ಲದೆ ಬಂಧುಗಳಲ್ಲಿ ಶಾಂತಿಯಿಂದ ಮರಣವಾಗುವದು.

ವೃಶ್ಚಿಕ:— ಹರ್ಶಲನಿದ್ದರೆ ಒಮ್ಮೆಲೆ ಆಕಸ್ಮಿಕ ಮರಣವು. ಶನಿಯಿಂದ ಒಮ್ಮೆಲೆ ಸಾವು. ಏಕಾಂತ ಗುಪ್ತ ಸಾವು. ಗುಪ್ತ ಶತ್ರುಗಳಿಂದ, ಪ್ರಾಣಿಗಳಿಂದ, ಜಲದಿಂದ ಮರಣ ಭಯವಿರುವದು. ಗುರು ಇದ್ದರೆ ಸಾಮಾಜಿಕ ಕಾರ್ಯಗಳಿಂದ, ರಾಜಕಾರಣದಿಂದ ಮರಣ. ಮಂಗಳನಿದ್ದರೆ ಅಪ್ರತ್ಯವಾಗಿ ತನ್ನ ಮರಣಕ್ಕೆ ತಾನೇ ಕಾರಣನಾಗುವನು. ಗುಪ್ತ ಶತ್ರುಗಳಿಂದ ಆಕಸ್ಮಿಕ ಮರಣ ಸಂಭವ. ಚಂದ್ರನು ಶನಿಯಿಂದ ಪೀಡಿತನಿದ್ದರೆ, ರವಿ ಇದ್ದರೆ ಬೇಗ ಒಮ್ಮೆಲೆ ಮರಣ ಸಂಭವಿಸುವದು. ಶುಕ್ರನಿದ್ದರೆ ವಿಷ ಭೀತಿಯಿರುವದು. (ಈ ಬಗೆಗೆ ಜೈಮಿನಿಯದೊಂದು ಸೂತ್ರವದೆ. 'ಸಗುಲಿಕೋ ವಿಷದೋ ವಿಷಹತೋ ವಾ.) ಆತ್ಮಕಾರಕ ಗ್ರಹವು ಗುಲಿಕನಿಂದ (ಶನಿಯ ಮಗ) ಕೂಡಿ ಇದ್ದರೆ ಅವನು ವಿಷಭಕ್ಷಣ ಮಾಡಿ ಸಾಯುವನು. ಇಲ್ಲವೆ ಮಂದಿಗೆ ವಿಷ ಹಾಕುವನು. ಆತ್ಮಹತ್ಯೆ, ಪ್ರೇಮ ವ್ಯವಹಾರಗಳಿಂದ ಅಥವಾ ಸ್ತ್ರೀಯರ ಕೈಯಿಂದ ಮರಣ ಸಂಭವವಿದೆ. ಬುಧನಿದ್ದರೆ ವಿಷದಂಶ

ಅಥವಾ ಶತ್ರು ಮರಣಕ್ಕೆ ಕಾರಣನಾಗುವನು. ಚಂದ್ರನಿದ್ದರೆ ಸಾಂಕ್ರಾಮಿಕ ರೋಗ, ಜಲಭಯ, ಅತ್ಯಾಚಾರ ಭಯ ಅಥವಾ ಶಿಶು ಜನನದಿಂದ ಮರಣ ಸಂಭವವು.

ಧನು:— ಶನಿಯಿದ್ದರೆ ಬಂಧುಗಳ ಮಧ್ಯದಲ್ಲಿ ಸುಖದ ಸಾವು ಬರುವದು. ಧಾರ್ಮಿಕ ವಿಚಾರಗಳು ಆ ಸಮಯದಲ್ಲಿ ಹುಟ್ಟಿಕೊಳ್ಳುವವು. ಮಂಗಳನಿದ್ದರೆ ಅಥವಾ ಚಂದ್ರನು ಕೇಂದ್ರದಲ್ಲಿದ್ದು ಅವನ ಅಶುಭಯೋಗದಲ್ಲಿ ಮಂಗಳನಿದ್ದರೆ ಕೊಲೆಗಡಕರ ಭಯವಿರುವದು. ಶುಕ್ರನಿದ್ದರೆ ಶಾಂತವಾದ ಮರಣ.

ಮಕರ:— ಶನಿಯಿದ್ದರೆ ಬಹುಕಾಲದ ರೋಗ, ಮಾನಸಿಕ ವ್ಯಥೆಯಿಂದ ಮರಣ. ಮಂಗಳನಿದ್ದರೆ ಜಲಭೀತಿ ಇರುವದು.

ಕುಂಭ: — ಶನಿ ಇದ್ದರೆ ಆರಂಭಕ್ಕಿಂತ ಕೊನೆಗಾಲವು ನೆಟ್ಟಗೆ. ಗುರು ಇದ್ದರೆ ಕೂಡಲೆ ಮೃತ್ಯು. ಮಂಗಳನಿದ್ದರೆ ವಿಚಿತ್ರ ಪ್ರದೇಶದಲ್ಲಿ, ವಿಚಿತ್ರ ಮರಣ. ಶುಕ್ರನಿದ್ದರೆ ಭಯದಿಂದ ಮರಣ ಸಂಭವ.

ಮೀನ:— ಏಕಾಂತ ಮರಣವು. ಶನಿ ಇದ್ದರೆ ದುಃಖದಿಂದ ಜಲಭಯದಿಂದ ಮರಣ. ಗುರು ಇದ್ದರೆ ಶಾಂತ ಹಾಗು ಧಾರ್ಮಿಕ ವಿಚಾರಗಳಿಂದ ಕೂಡಿದ ಮರಣವು. ಮಂಗಳನಿದ್ದರೆ ಹೊರಗೆ; ರವಿ ಇದ್ದರೆ ಅತ್ಯಾಚಾರದಿಂದ ಗುಪ್ತ ಶತ್ರುಗಳಿಂದ ಮರಣ ಸಂಭವಿಸುವುದು.

ಗ್ರಹಗಳ ವಿಚಾರ:— ೮ ರಲ್ಲಿ ರವಿ ಮರಣ ಕಾಲದಲ್ಲಿ ಮರ್ಯಾದೆಯನ್ನು ಶೂರ ಮರಣವನ್ನು, ಹೃದಯ ವೇದನೆಯಿಂದ ಮರಣವನ್ನು ಸೂಚಿಸುವನು.

೮ ರಲ್ಲಿ ಚಂದ್ರನಿದ್ದರೆ ಸಾರ್ವಜನಿಕ ಮರಣ ಸಂಭವವು. ಪರರ ಸಮಕ್ಷಮದಲ್ಲಿ, ದವಾಖಾನೆಯಲ್ಲಿ ಅಥವಾ ಜಲದಲ್ಲಿ ಸಾವು ಬರುವದು.

ಬುಧನಿದ್ದರೆ ಮಾನಸಿಕ ಭೀತಿ ನರಗಳ ದೌರ್ಬಲ್ಯದಿಂದ ಮರಣ ಸಂಭವವಿದೆ. ಮರಣ ಕಾಲದಲ್ಲಿ ಜಾಗೃತಿ ಇರುವದು.

ಶುಕ್ರನಿದ್ದರೆ ಶಾಂತ ಮರಣವು. ಪೀಡಿತನಿದ್ದರೆ ವಿಷಭೀತಿ ತೋರುವದು. ಸೊರಗುವ ರೋಗಗಳಿಂದ, ಮಧುಮೇಹದಿಂದ, ಮೂತ್ರ ವಿಕಾರಗಳಿಂದ ಮರಣ ಸಂಭವಿಸಬಹುದು.

ಮಂಗಳನಿದ್ದರೆ ಆಕಸ್ಮಿಕ ಮರಣ. ಜ್ವರ ಅಥವಾ ಆಪರೇಶನ್‌ದಿಂದ ಮರಣವುಂಟಾಗಬಹುದು. ಮಿಥುನ, ಕನ್ಯಾ, ಕುಂಭ ಅಥವಾ ಧನುವಿನ ಪೂರ್ವಾರ್ಧದಲ್ಲಿ ಮಂಗಳನಿದ್ದರೆ ಮಾನವರ ಕೈಯಿಂದ ಅಥವಾ ಯುದ್ಧದಲ್ಲಿ; ಶುಕ್ರನೂ ಕೂಡಿ ಇದ್ದರೆ ದರೋಡೆ ಚೋರರಿಂದ, ವೃಷಭದಲ್ಲಿ, ವೃಶ್ಚಿಕದಲ್ಲಿದ್ದರೆ, ಜೀವನ ಸಹಮ ಬಿಂದುವನ್ನು ಪೀಡಿಸುತ್ತಿದ್ದರೆ ಆಪರೇಶನ್‌ದಿಂದ, ಅಥವಾ ಮೈಲೀಬೇನೆಯಿಂದ; ರವಿ ಚಂದ್ರರ ಪ್ರತಿಯೋಗದಲ್ಲಿ ಒನೇ ಭಾವದಲ್ಲಿದ್ದರೆ ಅಗ್ನಿಭಯದಿಂದ ಮರಣವುಂಟಾಗುವದು.

೮ ರಲ್ಲಿ ಗುರು ಇದ್ದರೆ ಶಾಂತಿಯಿಂದ ಮರಣವಾಗುವದು. ಆತನು (ಗುರು) ಪೀಡಿತನಿದ್ದರೆ ಹೃದಯ ರಕ್ತ ವಿಕಾರಗಳಿಂದ ಮರಣ ಸಂಭವ.

೮ ರಲ್ಲಿ ಶನಿಯು ಇದ್ದರೆ ಮೆಲ್ಲಗೆ ಹಾಸುಗೆಯಲ್ಲಿ ದೀರ್ಘಕಾಲ ನರಳುತ್ತ ಸಾಯುವರು. ಉಸಿರುಗಟ್ಟುವದು, ಬೀಳುವದು, ಕ್ಷಯ ಇವು ಶನಿಯ ರೋಗಗಳು. ಜಲರಾಶಿಯಲ್ಲಿದ್ದರೆ ಜಲಭೀತಿಯಿರುವದು. ಶುಭದೃಷ್ಟಿ ನಿದ್ದರೆ ಮುಪ್ಪಿನಲ್ಲಿ ಸಾವು ಬರುವದು. ಗುರುವಿನಿಂದ ಪೀಡಿತನಾಗಿದ್ದರೆ ನ್ಯಾಯಾಧೀಶನ ನಿರ್ಣಯದಿಂದ ಮರಣ ಬರಬಹುದು. ಮೇಷ ಸಿಂಹ ಧನು ಮಕರಗಳಲ್ಲಿದ್ದರೆ ಪ್ರಾಣಿಗಳ ದಂಶದಿಂದ ಮರಣ ಸೂಚಕವಾಗುವದು. ಸೂರ್ಯ ಚಂದ್ರರು ಉದಯ ಹೊಂದುತ್ತಿದ್ದು, ಅವರ ಪ್ರತಿಯೋಗದಲ್ಲಿ ಶನಿ ಇದ್ದರೆ ವಿಷಭೀತಿಯಿರುವದು. ಶನಿ ದಶಮದಲ್ಲಿ ರವಿ ಮಂಗಳರ ಪೀಡೆಯಲ್ಲಿದ್ದರೆ,— ವಿಶೇಷವಾಗಿ ವಾಯು ರಾಶಿಯಿದ್ದರೆ— ಪತನ ಭಯವಿರುವದು. ಬುಧ ಶುಕ್ರರ ಯುತಿಯಲ್ಲಿದ್ದು ಜೀವನ ಸಹಮ ಬಿಂದುವನ್ನು ಪೀಡಿಸುತ್ತಿದ್ದರೆ ವಿಷಭೀತಿ, ಸ್ತ್ರೀಯರಿಂದ ಮರಣವಾಗುವ ಸಂಭವವಿರುವದು.

೮ ರಲ್ಲಿ ಹರ್ಷಲನಿದ್ದರೆ ಆಕಸ್ಮಿಕ ಮರಣವು. ಗುರುವಿನ ಶುಭ ದೃಷ್ಟಿಯಲ್ಲಿದ್ದರೆ ಇಂತಹ ಭೀತಿಯನ್ನು ನಿವಾರಿಸುವದು. ಇತರ ಗ್ರಹಗಳ ಪೀಡೆ

ಯಲ್ಲಿದ್ದರೆ ವಿದ್ಯುದ್ಭಯ, ಸ್ಫೋಟ ಭಯ, ಮಂತ್ರ ಭೀತಿ ಇರುವದು.

೮ ರಲ್ಲಿ ನೇಪಚ್ಯೂನಿದ್ದರೆ ಮೂರ್ಛೆಯಿಂದ ಮರಣ ಸಂಭವಿಸಬಹುದು. ಔಷಧ, ದವಾಖಾನೆ ಮೊದಲಾದವುಗಳಿಂದ ಮರಣ ಸೂಚಕವಾಗಿದೆ.

ಬುಧ ಹರ್ಶಲರು ಮಾನವನನ್ನು ಕ್ವಚಿತ್ತಾಗಿ ಕೊಲ್ಲುವವು. ಕೊಂದರೂ ಮರಣದ ಮಾದರಿಯನ್ನು ತೋರುವವು.

ಮರಣವನ್ನು ನಿರ್ಣಯಿಸುವಲ್ಲಿ ಮುಖ್ಯ ಸೂತ್ರಗಳು

ಸಪ್ತಮ ಭಾವದಲ್ಲಿ (ಆರಂಭ) ಸರಿಯಾಗಿ ಇರುವ ಗ್ರಹವು ತನ್ನ ರಾಶಿಯಲ್ಲಿದ್ದರೆ, ಅಂಶತಃ ಮರಣದ ಪ್ರಕೃತಿಯನ್ನು ಸೂಚಿಸುವದು. ಕೇಂದ್ರವನ್ನು ಪಾಪಗ್ರಹಗಳು ಪೀಡಿಸುತ್ತಿದ್ದರೆ ಸಾರ್ವಜನಿಕ ಮರಣವುಂಟಾಗುವದು. ಶನಿ ೧೨ ರಲ್ಲಿ ಶುಕ್ರ ೮ ರಲ್ಲಿದ್ದರೆ ಬೇಗ ಮರಣ ಸಂಭವ ಇಲ್ಲವೆ ಆತ್ಮಹತ್ಯೆ ಸೂಚಕವು. ೧೨ ರಲ್ಲಿ ಪಾಪಗ್ರಹ, ಇನ್ನೊಂದು ೬ ರಲ್ಲಿ, ಲಗ್ನಾಧಿಪತಿ ೮ ರಲ್ಲಿ ಇದ್ದು ಇವರಲ್ಲಿ ಒಬ್ಬನಿಂದ ಪೀಡಿತನಾಗಿರುವದು. ಕಾರಸ್ಥಾನದಿಂದ, ಗುಪ್ತ ಶತ್ರುಗಳಿಂದ ಮರಣ ಸೂಚಕವಾಗಿದೆ.

ಬುಧನು ಆರರಲ್ಲಿ ಪೀಡಿತನಿದ್ದರೆ ಕೆಲವುಟ್ಟಿಗೆ ಜೇಲಿನಲ್ಲಿ ಮರಣವನ್ನು ಸೂಚಿಸುವನು. ಧನುವು, ಪೃಥ್ವಿರಾಶಿಗಳೂ ಪೀಡಿತವಿದ್ದರೆ ಉಪವಾಸದ ಭೀತಿ, ಕಾರಾವಾಸದ ಭೀತಿ, ವಿಷಭೀತಿಗಳಿರುವವು. ಅಷ್ಟಮದ ಅಧಿಪತಿ ದುರ್ಬಲನಿದ್ದು ರಾಶಿಯಲ್ಲಿದ್ದ ಶನಿ ಮಂಗಳರಿಂದ ಪೀಡಿತನಿದ್ದರೆ ದಂಶ ಭೀತಿ, ವಿಷಭೀತಿಯಿಂದ ಮರಣ ಸಂಭವವು.

ಕಡಿತ – ಒದೆತಗಳಿಂದ ಮರಣ:— ಶನಿ ಲಗ್ನದಲ್ಲಿ ಚಂದ್ರನು ಸಪ್ತಮದಲ್ಲಿ ಮಂಗಳನ ಕೇಂದ್ರದಲ್ಲಿದ್ದರೆ ಕಡಿತ, ಪ್ರಾಣಿಗಳ ಒದೆತದಿಂದ ಮರಣ ಸಂಭವಿಸಬಹುದು. ಅದೇ ತೆರನಾಗಿ ಮಂಗಳನು ಚತುರ್ಥದಲ್ಲಿ ಮೇಷ, ಸಿಂಹ, ವೃಷಭ, ಧನು, ಮಕರ ಮೊದಲಾದ ಪಶುರಾಶಿಗಳಲ್ಲಿದ್ದರೆ ಮರಣ ಬರಬಹುದು.

ಚಂದ್ರ ಶನಿಯುತಿ, ಮಂಗಳನು ದಶಮದಲ್ಲಿ, ಪಶುರಾಶಿಯಲ್ಲಿ,

ಚಂದ್ರನು ಕೇಂದ್ರದಲ್ಲಿ ಗುರು ದುರ್ಬಲನಾಗಿದ್ದು ಪಶುರಾಶಿಯಲ್ಲಿದ್ದರೆ— ವಿಶೇಷತಃ ಸಿಂಹದಲ್ಲಿದ್ದರೆ – ಕಡಿತ ಒದೆತಗಳ ಭಯದಿಂದ ಮರಣ ಉಂಟಾಗುವದು.

ಜಲಾಪಘಾತದಿಂದ ಮರಣ:— ಸೂಚಕ ಗ್ರಹಗಳು ಜಲರಾಶಿಯಲ್ಲಿ ಪೀಡಿತರಿದ್ದರೆ; ಶನಿ ಕರ್ಕದಲ್ಲಿ ರವಿಯ ತರುವಾಯ ಉದಯ ಹೊಂದುತ್ತಿದ್ದರೆ, ರವಿ ಮಂಗಳ ಚಂದ್ರರನ್ನು ಪೀಡಿಸುತ್ತಿದ್ದರೆ ನೀರಿನಲ್ಲಿ ಮುಳುಗಿ ಸಾಯುವ ಸಂಭವವಿರುವದು. ಚತುರ್ಥಾಧಿಪತಿ ಸಪ್ತಮದಲ್ಲಿ ಜಲರಾಶಿಯಲ್ಲಿದ್ದು ಜಲರಾಶಿ ಚತುರ್ಥದಲ್ಲಿದ್ದರೆ ಜಲಭಯ ಉಂಟು.

ಅಗ್ನಿಯಿಂದ ಮರಣ:— ಸೂಚಕ ಗ್ರಹಗಳು ಅಗ್ನಿರಾಶಿಯಲ್ಲಿದ್ದರೆ ಅಗ್ನಿಭಯ. ವೃಶ್ಚಿಕದ ಮಂಗಳನು ರವಿ ಚಂದ್ರರನ್ನು ಪೀಡಿಸುತ್ತಿದ್ದರೆ ಅಗ್ನಿಭಯ. ಸಿಂಹ ಮೇಷಗಳಲ್ಲಿ ಮಂಗಳನಿದ್ದು, ಪೀಡಿಸುತ್ತಿದ್ದರೆ ಗುಂಡಿನ ಭಯವಿರುವದು. ಧನು ರಾಶಿಯಲ್ಲಿದ್ದರೆ ಸುಟ್ಟುಕೊಂಡು ಸಾಯಬಹುದು. ಚಂದ್ರ ಮಂಗಳರು ಅಷ್ಟಮದಲ್ಲಿ ಅಗ್ನಿರಾಶಿಯಲ್ಲಿದ್ದರೆ; ಚಂದ್ರನು ಸಪ್ತಮಾಧಿಪತಿ ಇದ್ದು ರವಿ ಮಂಗಳರು ಸಪ್ತಮದಲ್ಲಿದ್ದು ಪೀಡಿಸುತ್ತಿದ್ದರೆ ಅಗ್ನಿಭಯ. ರವಿ ಲಗ್ನಾಧಿಪನೊಡನೆ ಸಿಂಹದಲ್ಲಿದ್ದು ಅಷ್ಟಮದಲ್ಲಿ ಶುಭ ಗ್ರಹವಿಲ್ಲದಿದ್ದರೆ ಅಗ್ನಿ ಭಯವಿರುವದು.

ಪಾತ-ಭಯ:— ಸೂಚಕ ಗ್ರಹಗಳು ವಾಯು ರಾಶಿಯಲ್ಲಿ ಪೀಡಿತವಿದ್ದರೆ; ಶನಿ ಅಷ್ಟಮದ ಅಧಿಪತಿ ಇದ್ದು ಗುರು ಮಂಗಳರು ಸಪ್ತಮದಲ್ಲಿದ್ದು ಚತುರ್ಥಭಾವವನ್ನು ನೋಡದಿದ್ದರೆ; ಶನಿಯಾಗಲಿ, ಮಂಗಳನಾಗಲಿ ಏಳರಲ್ಲಿದ್ದು ಕೇತುವಿನೊಡನಿದ್ದರೆ; ಪಾತ ಭಯದಿಂದ ಮರಣವು. ಮಂಗಳನು ಕೃತ್ತಿಕಾ ನಕ್ಷತ್ರದಲ್ಲಿದ್ದು (ವೃಷಭ ೨೯) ಮಘಾ (ಸಿಂಹ ೨೯) ಅಥವಾ ಜೇಷ್ಠಾ (ಧನು ೯) ನಕ್ಷತ್ರಗಳಲ್ಲಿದ್ದರೆ, ರವಿ Coput Algol ದೊಡನಿದ್ದರೆ ನೇಣು ಮರಣಕ್ಕೆ ಕಾರಣವಾಗುವದು.

ಮೃತ್ಯು ಸೂತ್ರಗಳು

(೧) ಸಪ್ತಮದ ಭಾವಾರಂಭದಲ್ಲಿ ಅಂಶಾತ್ಮಕವಾಗಿ ಇರುವ ಗ್ರಹವು ಮರಣಕ್ಕೆ ಅಂಶತಃ ಕಾರಣವಾಗುವದು.

(೨) ಕೇಂದ್ರ ಬಿಂದುವನ್ನು ಪೀಡಿಸುವ ಗ್ರಹಗಳು ಸಾರ್ವಜನಿಕ ಮರಣವನ್ನು ಸೂಚಿಸುವವು.

(೩) ಶನಿ ೧೨ ರಲ್ಲಿ ಶುಕ್ರ ೮ ರಲ್ಲಿ ಇದ್ದರೆ ಬೇಗ ಮರಣ ಬರುವದು ಇಲ್ಲವೆ ಆತ್ಮಹತ್ಯ ಸೂಚಕವಾಗಬಹುದು.

(೪) ಒಂದು ಪಾಪಗ್ರಹ ೧೨ ರಲ್ಲಿ, ಇನ್ನೊಂದು ೬ ರಲ್ಲಿ ಲಗ್ನಾಧಿ ಪತಿ ೮ ರಲ್ಲಿ ಪೀಡಿತನಾಗಿದ್ದರೆ ಗುಪ್ತ ಶತ್ರುಗಳಿಂದ ಮರಣ ಇಲ್ಲವೆ ರಹಸ್ಯ ಮರಣ ಸಂಭವವಿದೆ.

(೫) ೬ ರಲ್ಲಿ ಬುಧನು ಪೀಡಿತನಿದ್ದರೆ ಸೆರೆಮನೆಯಲ್ಲಿ ಮರಣ ಭಯ ವಿರುವದು.

(೬) ಪೃಥ್ವಿ ರಾಶಿಯಲ್ಲಿ ಮರಣ ಸೂಚಕ ಗ್ರಹಗಳಿದ್ದರೆ ಸೆರೆಮನೆ ಯಲ್ಲಿ ಮರಣ ಭಯ ಇಲ್ಲವೆ ಉಪವಾಸದಿಂದ ಇಲ್ಲವೆ ವಿಷ ಪ್ರಯೋಗದಿಂದ ಸಾಯಬಹುದು.

(೭) ಅಷ್ಟಮಾಧಿಪತಿ ದುರ್ಬಲನಿದ್ದು ಶನಿ ಇಲ್ಲವೆ ಮಂಗಳನು ಜಲರಾಶಿಯಲ್ಲಿ ಅವರಿಂದ ಪೀಡಿತರಿದ್ದರೆ ವಿಷ ಭಯ ಇಲ್ಲವೆ ಕಡಿತ ಭಯ ವಿರುವದು.

(೮) ಸೂಚಕ ಗ್ರಹಗಳು ಅಗ್ನಿರಾಶಿಯಲ್ಲಿದ್ದರೆ ವೃಶ್ಚಿಕದ ಮಂಗಳ ನಿಂದ ರವಿ ಚಂದ್ರರು ಪೀಡಿತರಾಗಿದ್ದರೆ ದಾಹ ಭಯದಿಂದ ಮರಣವು.

(೯) ಮರಣ ಸೂಚಕ ಗ್ರಹಗಳು ಜಲರಾಶಿಯಲ್ಲಿ ಪೀಡಿತವಿದ್ದರೆ ಜಲದಲ್ಲಿ ಮುಳುಗಿ ಸಾಯುವ ಭಯವಿರುವದು.

ಬಾಲಾರಿಷ್ಟಯೋಗ

ಕುಂಡಲಿಯನ್ನು ಅಂಶಾತ್ಮಕವಾಗಿ ಹಾಕಿಕೊಂಡ ಮೇಲೆ ಮೊದಲು ವಿಚಾರಿಸುವ ವಿಷಯವೆಂದರೆ ಬಾಲಕರು ದೀರ್ಘಾಯುಷಿಗಳಾಗುವರೋ ಇಲ್ಲವೋ ಎಂಬುದು ಮುಖ್ಯವಾದ ವಿಷಯವು. ಬಾಲಾರಿಷ್ಟಯೋಗ ವಿದ್ದರೂ ಅದರಿಂದ ಪಾರಾಗಿ ಬದುಕುವನೋ ಇಲ್ಲವೋ ಎಂಬ ಸಂಗತಿಯನ್ನು ಪರಿಗಣಿಸಬೇಕಾದದ್ದು ಮುಖ್ಯ ಸಂಗತಿಯು. ರಾಜಯೋಗವಿದ್ದು ಬಾಲಾ ರಿಷ್ಟಯೋಗದಿಂದ ಪಾರಾಗುವ ಸಂಭವವಿರದಿದ್ದರೆ ಆ ರಾಜಯೋಗದ ಫಲವೇನು ?

ಕುಂಡಲಿಯಲ್ಲಿ ಮುಖ್ಯವಾಗಿ ವಿಚಾರಿಸತಕ್ಕ ಅಂಶಗಳೆಂದರೆ ರವಿ ಚಂದ್ರ ಲಗ್ನಾಂಶ ಇವು. ಇವು ಯಾವ ಗ್ರಹದ ಶುಭಾಶುಭಯೋಗಗಳಲ್ಲಿ ರುವವೆಂಬುದನ್ನು ಮೊದಲು ತಿಳಿದುಕೊಳ್ಳಬೇಕು. ಪಶ್ಚಿಮದ ವಿದ್ವಾಂಸ ದಲ್ಲಿ ಕೆಲವರು ಜೀವನದಾಯಕ ಬಿಂದುವನ್ನೂ ವಿಚಾರಿಸಬೇಕೆಂದು ಹೇಳು ವರು. (Giver of life) ಅದನ್ನು ಜೀವನ ಸಹಮ ಬಿಂದುವೆಂದು ತಾಜಕ ಪದ್ಧತಿಯಂತೆ ಕರೆಯುವಾ. ಈ ಜೀವನ ಸಹಮ ಬಿಂದುವು ಜಾತನು ಸುಮಾರು ಎಷ್ಟು ವರುಷ ಬದುಕುವನೆಂಬುದನ್ನು ಸೂಚಿಸುವ ದನ್ನು ಅವರು ಹೇಳುವರು. ಆಯುರ್ದಾಯವನ್ನು ನಿರ್ಣಯ ಮಾಡುವಾಗ ಜೀವನ ಬಿಂದು ಮುಖ್ಯವೆನ್ನುವರು.

ಜೀವನ ಸಹಮದ ಸ್ಥಾನ:— ಲಗ್ನಾಂಶದ ಕೆಳಗೆ ೨೫ ಅಂಶಗಳು. ಲಗ್ನದ ಮೇಲಿನ ೫ ಅಂಶಗಳು ಹನ್ನೊಂದನೇ ಭಾವದ ಉತ್ತರಾರ್ಧ. ೯–೧೦ ಭಾವಗಳು ಪೂರ್ಣವಾಗಿ ೭ನೆಯ ಭಾವದ ಮೇಲ್ಬದಿಯ ೨೫ ಅಂಶಗಳು. ಜೀವನ ಬಿಂದು ಇರುವ ಸ್ಥಾನಗಳು. ೮, ೧೨ ಭಾವಗಳು (೧, ೭ ಭಾವ ಗಳ ಸಂಬಂಧಪಟ್ಟ ಅಂಶಗಳನ್ನು ಉಳಿದು) ಜೀವನ ಬಿಂದುವಿನ ಸ್ಥಾನ ಗಳಾಗಲಾರವು.

ರವಿಯು ಈ ಸ್ಥಾನಗಳಲ್ಲಿದ್ದರೆ ಅವನೇ ಜೀವನದಾಯಕ ಬಿಂದುವಾಗುವನು. ಈ ಸ್ಥಾನದಲ್ಲಿ ಚಂದ್ರನಿದ್ದರೆ ಅವನೇ ಜೀವನ ಬಿಂದುವಾಗುವನು; ರವಿಯು ಆಗುವದಿಲ್ಲ. ಸೂರ್ಯ-ಚಂದ್ರರು ಈ ಸ್ಥಾನದಲ್ಲಿ ಇಲ್ಲದಿದ್ದರೆ ಲಗ್ನಾಂಶವು ಜೀವನ ಬಿಂದುವಾಗುವದು. ಇದು ಸಾಮಾನ್ಯವಾಗಿ ಒಪ್ಪಿದ ನಿಯಮವು. ಕೆಲವರು ಕುಂಡಲಿ ಚಲಿತವಾದಂತೆ ಜೀವನ ಬಿಂದುವೂ ಸ್ಥಾನಾಂತರವನ್ನು ಪಡೆಯುವದು. ಮತ್ತೊಂದು ಗ್ರಹವಾಗಲಿ, ಬಿಂದುವಾಗಲಿ, ಜೀವನ ಬಿಂದುವಿನ ಅಧಿಕಾರವನ್ನು ಪಡೆಯುವದು ಎಂದು ಹೇಳುವರು. ಇದು ಇನ್ನೂ ಸಂಶೋಧನೀಯ ವಿಷಯವೆಂದು ರಾಬಸನ್‌ರು ಬರೆಯುವರು.

ಆಯುರ್ದಾಯ ಪ್ರಮಾಣವು ಜೀವನ ಬಿಂದುವು ಸ್ವೀಕರಿಸುವ ಶುಭಾಶುಭ ದೃಷ್ಟಿಯನ್ನು ಅವಲಂಬಿಸಿರುವದೆಂದು ನುಡಿಯುವರು. ಈ ಬಿಂದು ಪೀಡಿತವಾಗದೆ, ಶುಭ ದೃಕ್ ಪಾತಗಳಿಂದ ಕೂಡಿದ್ದರೆ ದೀರ್ಘ ಜೀವನದ ಭವಿಷ್ಯವನ್ನು ಹೇಳಬಹುದು. ರವಿ ಚಂದ್ರ ಲಗ್ನಾಂಶಗಳು ಪೀಡಿತವಾಗಿದ್ದರೂ ಗುರು ಶುಕ್ರರಂತಹ ಒಂದೇ ಶುಭಗ್ರಹದ ಶುಭದೃಷ್ಟಿಯು ಬಾಲಾರಿಷ್ಟವನ್ನು ತಪ್ಪಿಸಬಹುದು. ರವಿ ಚಂದ್ರ ಲಗ್ನಾಂಶಗಳು ಚೈತನ್ಯದಾಯಕ ಬಿಂದುಗಳು. ಗುರು ಶುಕ್ರರ ಶುಭದೃಷ್ಟಿಯು ಎಂತಹ ಬಾಲಾರಿಷ್ಟಯೋಗವನ್ನೂ ತಪ್ಪಿಸುವದು. ಉಳಿದ ಗ್ರಹಗಳ ಶುಭದೃಷ್ಟಿಗಿಂತ ಗುರು ಶುಕ್ರರ ಶುಭದೃಷ್ಟಿಗೆ ಮಹತ್ವವಿರುವದು.

ಗುರು ಶುಕ್ರರು ೬, ೮, ೧೨ ರ ಅಧಿಪತಿಗಳಾಗಿದ್ದರೆ ಅವರು ರಾಶಿಯಿಂದಲೂ ದುರ್ಬಲರಾಗಿದ್ದರೆ, ಅವರ ಶುಭದೃಷ್ಟಿಗೂ ದುರ್ಬಲತೆ ಬರುವದು. ಲಗ್ನದಲ್ಲಿ ಉದಿತವಾದ ರಾಶಿಯನ್ನು ಗಣನೆಗೆ ತರಬೇಕು. ಮೇಷ, ಸಿಂಹ, ಧನು ರಾಶಿಗಳು ಆಯುಷ್ಯವನ್ನು ಹೆಚ್ಚಿಸುವವು. ತುಲಾ ರಾಶಿಯೂ ಇದರಂತೆ ಬಲವುಳ್ಳದ್ದೆಂದು ಅಭಿಪ್ರಾಯವಿರುವದು. ಇವು ಜಾಡ್ಯವನ್ನು ಹಿಂದೆ ನೂಕುವವು. ಪೀಡಿತ ಕುಂಡಲಿಯಲ್ಲಿಯೂ ಇವು ದೀರ್ಘ ಜೀವನವನ್ನು ಕೊಡಬಲ್ಲವು. ವೃಷಭ, ಮಿಥುನ, ಕನ್ಯಾ, ಕುಂಭಗಳು ಮಧ್ಯಮ ಬಲವುಳ್ಳವುಗಳು. ಸಾಮಾನ್ಯ ಸಂದರ್ಭಗಳಲ್ಲಿ ಸಾಮಾನ್ಯ ದೀರ್ಘ ಜೀವನ

ವನ್ನು ಒದಗಿಸುವವು. ವೃಷಭವು ಬಾಲ್ಯದಲ್ಲಿ ಅಶಕ್ತವಾಗಿದ್ದರೂ ಮುಂದೆ ಹೋದಂತೆ ಅದು ಬಲವುಳ್ಳದ್ದಾಗುವದು. ಈ ಗುಂಪಿನಲ್ಲಿ ಕುಂಭವು ಕೊಂಚ ಅಶಕ್ತ.

ಕರ್ಕ, ಮಕರ ಮೀನ ರಾಶಿಗಳು ಅಶಕ್ತ ರಾಶಿಗಳು. ಇವು ಬಹು ಪೀಡಿತವಾಗಿದ್ದರೆ ದೀರ್ಘ ಜೀವನ ಕಷ್ಟಸಾಧ್ಯವು. ಮಕರವು ಬಾಲ್ಯದಲ್ಲಿ ಬದುಕಿದರೆ ಮುಂದೆ ಅದು ದೀರ್ಘ ಜೀವನವನ್ನು ಕೊಡುವದು.

ಬಾಲರ ಅಥವಾ ಪ್ರೌಢರ ಆಯುಷ್ಯವನ್ನು ವಿಚಾರಿಸುವಾಗ ರವಿ ಚಂದ್ರರ ಸ್ಥಾನವನ್ನೂ ಲಗ್ನವನ್ನೂ ನೋಡಬೇಕು. ಇವು ಚೈತನ್ಯದಾಯಕ ರಾಶಿಯಲ್ಲಿ ಶುಭದೃಷ್ಟವಾಗಿದ್ದರೆ ದೀರ್ಘ ಜೀವನ. ಇವು ಅಶಕ್ತ ರಾಶಿಯಲ್ಲಿದ್ದು ಬಹುವಾಗಿ ಪೀಡಿತವಾಗಿದ್ದರೆ ೪, ೬, ೮, ೧೨ ರ ಅಧಿಪತಿಗಳಿಂದ ಪೀಡಿತವಾಗಿದ್ದರೆ, ಶುಭ ಗ್ರಹದ ಶುಭದೃಷ್ಟಿಯು ಸಹಾಯವು ಕೊಂಚವೂ ಇಲ್ಲದಿದ್ದರೆ ಬಾಲಾರಿಷ್ಟಯೋಗವೆಂದು ಹೇಳಬಹುದು. ಜೀವನ ಬಿಂದುವಿನ ಸ್ಪೆಶಲ್ ವಿಚಾರವನ್ನು ಮಾಡಬಹುದು.

ರವಿ ಚಂದ್ರರೂ ಲಗ್ನಾಂಶವೂ ಪಾಪಗ್ರಹಗಳಿಂದ ಪೀಡಿತವಾಗಿದ್ದು–ವಿಶೇಷವಾಗಿ ಕೇಂದ್ರದಲ್ಲಿರುವ ಪಾಪಗ್ರಹಗಳಿಂದ ಪೀಡಿತವಾಗಿದ್ದರೆ ಗುರು ಶುಕ್ರರಿಂದ ಯಾವ ಸಹಕಾರವೂ ಸಿಗದಿದ್ದರೆ, ಈ ಗ್ರಹಗಳು ರಾಶಿಯಿಂದ ದುರ್ಬಲವಾಗಿದ್ದರೆ, ಸಹಾಯದ ಪ್ರಯೋಜನವಾಗದಂತಿದ್ದರೆ ಬಾಲಾರಿಷ್ಟಯೋಗವನ್ನು ಹೇಳಬಹುದು.

ಶ್ರೀ ನವಾಥೆಯವರು ಸುಲಭ ಜಾತಕ ಭಾಗ ೫ ರಲ್ಲಿ ಇಂತಹ ಅನೇಕ ಉದಾಹರಣೆಗಳನ್ನು ವಿವರಿಸಿರುವರು. ಅಭ್ಯಾಸಿಗಳು ಆ ವಿಷಯವನ್ನು ಪರಿಶೀಲಿಸಬಹುದು.

ರವಿ ಚಂದ್ರರು ಪ್ರತಿಯೋಗದಲ್ಲಿದ್ದು ಇವರಿಬ್ಬರೂ ಪಾಪಗ್ರಹಗಳ ಕೇಂದ್ರದಲ್ಲಿದ್ದರೆ ಅಥವಾ ಪ್ರತಿಯೋಗದಲ್ಲಿದ್ದರೆ ಸದ್ಯೋರಿಷ್ಟಯೋಗವು. ಆದರೂ ರವಿ ಚಂದ್ರರು ಅಗಲುತ್ತಿದ್ದು ಗುರು ಶುಕ್ರರು ಬೆನ್ನಟ್ಟುತ್ತಿದ್ದರೆ ಕೆಲಕಾಲ ಬದುಕಬಹುದು.

ರವಿ ಮಂಗಳರ ಅಶುಭಯೋಗಕ್ಕಿಂತ ಮಂಗಳ ಚಂದ್ರರ ಅಶುಭ ಯೋಗವು ಹೆಚ್ಚು ಅನಿಷ್ಟವು. ಏಕಂದರೆ ಚಂದ್ರ ಮಂಗಳರ ಪ್ರಕೃತಿ ಭಿನ್ನ ವಾಗಿದೆ. ಇದರಂತೆ ಶನಿ ಚಂದ್ರ ಯುತಿ ಕ್ಷಮ್ಯವಾಗಬಹುದು. ರವಿ ಶನಿ ಯುತಿ ಕ್ಷಮ್ಯವಾದುದಲ್ಲ. ರವಿ ಶನಿಗಳ ಪ್ರಕೃತಿ ತೀರ ಭಿನ್ನವಾಗಿರುವದು. ೪ ರಲ್ಲಿ ರಾಹು ಪಾಪಗ್ರಹಗಳ ಯುತಿಯಲ್ಲಿದ್ದು ಅಥವಾ ರವಿ ಚಂದ್ರರು ಪಾಪಗ್ರಹಗಳ ಕರ್ತರೀಯೋಗ (ಮುತ್ತಿಗೆ) ದಲ್ಲಿದ್ದರೆ ಸದ್ಯೋರಿಷ್ಟ ಯೋಗವು.

ಜೀವನ ಸಹಮ ಬಿಂದುವು ಗುರು ಶುಕ್ರ ಯುತಿಯಲ್ಲಿದ್ದರೆ ಜೀವನ ರಕ್ಷಕ ಯೋಗವು. ಗುರು ಶುಕ್ರರು ೪, ೬, ೮, ೧೨ ರ ಅಧಿಪತಿಗಳಾಗಿದ್ದರೆ ಅವರ ಶುಭತ್ವದಲ್ಲಿ ಕೊಂಚ ನ್ಯೂನತೆಯುಂಟಾಗುವದು.

ದೀರ್ಘಾಯುಷ್ಯಕ್ಕೆ ವಿರೋಧಕರವಾದ ಸಂಗತಿಗಳೆಂದರೆ ಲಗ್ನದಲ್ಲಿ ಪಾಪಗ್ರಹವಿರುವದು, ಲಗ್ನಾಧಿಪತಿ ವಕ್ರೀಯಾಗಿರುವದು, ಅಸ್ತನಾಗಿರುವದು. ೮ ರಲ್ಲಿರುವದು; ರವಿ ಚಂದ್ರರು ೬, ೮, ೧೨ ರಲ್ಲಿರುವದು; ಈ ಭಾವದ ಅಧಿಪತಿಗಳಿಂದ ಪೀಡಿತವಾಗಿರುವದು, ರವಿ ಚಂದ್ರರು ಪ್ರತಿಯೋಗದಲ್ಲಿರುವದು, ಇದೇ ಕಾಲದಲ್ಲಿ ಗ್ರಹಣವಿರುವದು ಇತ್ಯಾದಿ.

ಬಾಲಕರ ಕುಂಡಲಿಯನ್ನು ಪರಿಶೀಲಿಸುವಾಗ ಮುಖ್ಯವಾಗಿ ಚಂದ್ರನು ಜೀವನ ಬಿಂದುವಾಗಿರಲಿ, ಬಿಡಲಿ ಅವನು ಪೀಡಿತನಾಗಿರುವನೋ ಹೇಗೆಂಬುದನ್ನು ನೋಡಬೇಕು. ಏಕೆಂದರೆ ಚಂದ್ರನ ಅಧಿಕಾರವು ನಾಲ್ಕು ವರ್ಷಗಳ ವರೆಗಿರುವದು. ಅತ್ಯಂತ ಪೀಡಿತ ಕುಂಡಲಿಯಲ್ಲಿ ಚಂದ್ರನು ಶುಭಗ್ರಹಗಳಿಂದ ಆಗಲಿ ಪಾಪಗ್ರಹಗಳೊಡನೆ ಯೋಗ ಮಾಡಲು ಹೋಗುತ್ತಿದ್ದರೆ ಹೆಚ್ಚು ಅನಿಷ್ಟವು. ಆದರೆ ಪಾಪಗ್ರಹಗಳಿಂದ ಆಗಲಿ ಶುಭಗ್ರಹಗಳೊಡನೆ ಯೋಗ ಮಾಡಲು ಹೋಗುತ್ತಿದ್ದರೆ ಜೀವನದ ಆಶೆ ಹೆಚ್ಚು.

ಆಯುರ್ದಾಯದ ನಿರ್ಣಯ ಮಾಡುವ ಪೂರ್ವದಲ್ಲಿ ಲಗ್ನವು ಶುದ್ಧ ವಾಗಿದೆಯೋ ಇಲ್ಲವೋ ಎಂಬುದನ್ನು ಮೊದಲು ಪರಿಶೀಲಿಸಬೇಕು. ಲಗ್ನ ಶುದ್ಧಿಯನ್ನು ಹೇಗೆ ಮಾಡಿಕೊಳ್ಳಬೇಕೆಂಬ ಬಗೆಗೆ ಮುಂದಿನ ಪ್ರಕರಣ ದಲ್ಲಿ ಸೋದಾಹರಣವಾಗಿ ವಿವರಿಸಿದೆ, ನೋಡಿಕೊಳ್ಳಬೇಕು.

ಲಗ್ನ ಶುದ್ಧಿಯ ಕ್ರಮಗಳು

ಮಗು ಹುಟ್ಟಿದ ಕೂಡಲೇ ಅವನ ಆಯುರ್ದಾಯವನ್ನು ವಿಚಾರಿಸ ಬೇಕಾಗುವದು. ಏಕೆಂದರೆ ಇತರ ರಾಜ ಯೋಗಾದಿಗಳಿದ್ದರೂ ಆಯುರ್ದಾಯವಿಲ್ಲದಿದ್ದರೆ ಯೋಗಗಳ ವೈಯರ್ಥವುಂಟಾಗುವದು. ಆದರೆ ಈ ಯೋಗಗಳನ್ನು ವಿಚಾರಿಸುವದಕ್ಕಿಂತ ಮೊದಲು ಲಗ್ನ ಶುದ್ಧಿಯನ್ನು ಮಾಡ ಬೇಕಾಗುವದು. ಭಾರತೀಯ ಜ್ಯೋತಿಷ ಗ್ರಂಥಗಳಲ್ಲಿ ಇಂತಹ ಕೆಲವು ನಿಯಮಗಳನ್ನು ಹೇಳಿರುವರು. ಈ ನಿಯಮಗಳನ್ನು ಒರೆಗಲ್ಲಿಗೆ ತಿಕ್ಕಿ ಇಂದಿನ ಜ್ಯೋತಿರ್ವಿದರು ನೋಡಿರುವರು. ಅಂತಹ ಕೆಲವು ನಿಯಮ ಗಳನ್ನು ಇಲ್ಲಿ ಹೇಳುವೆವು. ಅಭ್ಯಾಸಿಗಳು ಜಾತನ ಲಗ್ನ ಶುದ್ಧಿಯನ್ನು ಮಾಡುವದು ಪ್ರಾಥಮಿಕ ಕರ್ತವ್ಯವೆಂದರಿಯಬೇಕು. ಇಂದಿನ ಯುವಕ ರಲ್ಲಿ ಕಷ್ಟಪಟ್ಟು ಶಾಸ್ತ್ರವನ್ನು ಅಭ್ಯಾಸ ಮಾಡುವ ಪ್ರವೃತ್ತಿಯು ಕುಂಠಿತ ವಾಗಿದೆ. ಸುಲಭ ರೀತಿಗಳನ್ನು ಬೇಡುವರು. ಅವರಿಗಾಗಿ ಮಛಲೀ ಪಟ್ಟಣದ ಡಾ. ಸತ್ಯನಾರಾಯಣರಾಯರು ಇತ್ತಿತ್ತಲಾಗಿ "ನಾಡೀರೆಕ್ಟಿಫಿಕೇಶನ್ಸ With tables" ಎಂಬ ಚಿಕ್ಕ ಹೊತ್ತಿಗೆಯನ್ನು ಲಗ್ನ ಶುದ್ಧಿ ಗಾಗಿ ತಯಾರಿಸಿರುವರು. ಇದರಿಂದ ಲಗ್ನ ಶುದ್ಧಿಯನ್ನು ಬೇಗ ಮಾಡಿ ಕೊಳ್ಳಲಿಕ್ಕೆ ಬರುವದು. ಸೂರ್ಯ ಉದಯ, ಲಗ್ನ, ವಾರಗಳು ತಿಳಿದರೆ ಸಾಕು.

ಉದಾ:— ಹೆಣ್ಣು ಕೂಸು ಜನಿಸಿದ್ದು, ೧೭–೪–೧೯೬೦.

ವಾರ:– ರವಿವಾರ. ವೇಳೆ: 11-28 A. M.

ಅಕ್ಷಾಂಶ. ೧೮·೫೪. ರೇಖಾಂಶ ೭೭·೫೦.

ಪೂರ್ವಾಷಾಢಾ ನಕ್ಷತ್ರ. ಸೂರ್ಯ ಉದಯ. ೫ ತಾ. ೪೪ ಮಿ. ಸೂರ್ಯ ಉದಯದಿಂದ ೧೧–೧೨ಕ್ಕೆ ಲಿಂಗ, ವಾರ, ಲಗ್ನ, ನಕ್ಷತ್ರ ಎಲ್ಲವೂ ಕೂಡುವದು. ಸೂರ್ಯ ಉದಯವು ೫·೪೪ ಕಕ್ಕೆ ಇರುವದರಿಂದ ೧೧·೧೨

ರಲ್ಲಿ ೧೬. ಕೂಡಿಸುವದರಿಂದ ೧೧.೨೮ ಬರುವದು. ಈ ವೇಳೆಯು ಸರಿ ಯಾಗಿ ರಿಕಾರ್ಡ ಮಾಡಲ್ಪಟ್ಟಿದೆ ಎಂದು ತಿಳಿಯಬೇಕು.

ಮುಂದಿನ ರೀತಿಯಿಂದಲೂ ಪರೀಕ್ಷಿಸುವಾ:—

೧೧.೧೨. ೫ ತಾ. ೧೨ ಮಿ. = ೧೩ ಗಳಿಗೆ

೧೩ × ೨ = ೨೬

ನಿರಯನ ಮಿಥುನ ಲಗ್ನವದೆ. ದ್ವಿಸ್ವಭಾವಿ ರಾಶಿ ಆದ್ದರಿಂದ ಇದ ರಲ್ಲಿ ೭ ಕೂಡಿಸಬೇಕು. ೨೬ + ೭ = ೩೩. ಇದನ್ನು ೨೭ ರಿಂದ ಭಾಗಿಸ ಬೇಕು.

೨೭) ೩೩ (೧
೨೭
೦೬

ಅಶ್ವಿನಿಯಿಂದ ಅಥವಾ ಚಿತ್ರಾದಿಂದ ಎಣಿಸಬೇಕು. ಚಿತ್ರಾದಿಂದ ೬ ನೆಯ ನಕ್ಷತ್ರ ಪೂರ್ವಾಷಾಢಾ ಇರುವದು.

ಇನ್ನು ಬೆಂಗಳೂರಿನ ಪ್ರಖ್ಯಾತ ಜ್ಯೋತಿರ್ವಿದರಾದ ಶ್ರೀಮಾನ್ ಬಿ. ವ್ಹಿ. ರಾಮನ್ನರು "Hindu predlictive Astrology" ಯಲ್ಲಿ ಕೊಟ್ಟ ರೀತಿಯಂತೆ ಪರೀಕ್ಷಿಸುವಾ.

ಸೂರ್ಯ ಉದಯದಿಂದ ಘಟಿಕಾ ಪಳಗಳಿಗೆ ೬ ರಿಂದ ಗುಣಿಸಿ ಅದರಲ್ಲಿ ಸೌರ ದಿನವನ್ನು ಕೂಡಿಸಿ ೩೦ ರಿಂದ ಭಾಗಿಸಿ ಭಾಗಾಕಾರದಲ್ಲಿ ಬಂದ ಅಂಕಿ ಹಿಡಿದು ಸೂರ್ಯನಿರುವ ರಾಶಿಯಿಂದ ಎಣಿಸಬೇಕು. ಲಗ್ನ ಬರುವದು.

೧೩ × ೬ = ೭೮ + ೬ (ಸೌರ ದಿನಾಂಕ) = ೮೪ ÷ ೩೦. ಭಾಗಾಕಾರ ೨; ಶೇಷ ೨೪. ಸೂರ್ಯನು ಮೇಷದಲ್ಲಿರುವನು. ಅವನಿಂದ ೨ ರಾಶಿ ದಾಟಿ ೩ನೇ ರಾಶಿಯಲ್ಲಿ ಲಗ್ನ (ಮಿಥುನ) ವಿರುವದು.

ಇನ್ನೊಂದು ರೀತಿಯನ್ನು ಮದ್ರಾಸದ ರಾಜಗೋಪಾಲ ಅಯ್ಯರ, ಬಿ. ಎ. ಬಿ. ಎಲ್. ಎಂಬವರು "Directions in New Era Astrology" ಎಂಬ ಗ್ರಂಥದಲ್ಲಿ ವಿವರಿಸಿರುವರು.

ಸೂರ್ಯೋದಯದಿಂದ ಘಟೀ ಫಳಗಳನ್ನು ಎಣಿಸಿಕೊಳ್ಳಿರಿ. ಅದಕ್ಕೆ ೨ ರಿಂದ ಗುಣಿಸಿರಿ. ಲಗ್ನವು ಚರ ಸ್ಥಿರ ದ್ವಿಸ್ವಭಾವಿ ರಾಶಿಗಳಲ್ಲಿದ್ದರೆ ಕ್ರಮ ವಾಗಿ ೫, ೯, ೭ ಅಂಕವನ್ನು ಕೂಡಿಸಿರಿ. ಅದಕ್ಕೆ ೪ ರಿಂದ ಗುಣಿಸಿರಿ. ಬಂದ ಅಂಕಿಗೆ ೨೭ ರಿಂದ ಭಾಗಿಸಿರಿ. ಭಾಗಾಗಾರವನ್ನು ಬಿಟ್ಟು ಶೇಷ ತಕ್ಕೊಳ್ಳಿರಿ. ಉಳಿದ ಅಂಶಗಳನ್ನು ಅಶ್ವಿನಿಯಿಂದಾಗಲಿ, ಚಿತ್ರಾದಿಂದಾ ಗಲಿ ಎಣಿಸಿದಲ್ಲಿ ಅಷ್ಟನೇ ನಕ್ಷತ್ರವು ಜನ್ಮ ನಕ್ಷತ್ರವಿರುವದು.

ಉದಾ:— ೧೩–೩–೧೯೫೩. 5 P. M.
ಅಕ್ಷಾಂಶ ೧೬.೩೦. ರೇಖಾಂಶ ೭೫ ೨೧.

ಕೊಟ್ಟ ವೇಳೆ 5 P. M. ಇದನ್ನು ನಾಡೀರೆಕ್ಟಿಫಿಕೇಶನ್ಸ of tables ಗ್ರಂಥದಿಂದ ತೆಗೆದಿದ್ದರೆ ಲಗ್ನ ಸಿಂಹ, ಸ್ಥಿರ. ವಾರ ಸೋಮವಾರ, ನಕ್ಷತ್ರ ಉತ್ತರಾಷಾಢಾ ಸೂರ್ಯ ಉದಯದಿಂದ ೪.೪೫ P. M. ಬರುವದು. ಇದನ್ನು ೨ನೆಯ ರೀತಿಯಿಂದ ಪರೀಕ್ಷಿಸುವಾ:—

೪.೪೫ P. M. ಕ್ಕೆ ಆಗುವ ಗಳಿಗೆ ಪಳಗಳು. ೨೬ ಗಳಿಗೆ ೫೨॥ ಪಳ.

೨೬.೫೨॥ × ೨ = ೫೩.೪೫ ಸ್ಥಿರ ಲಗ್ನವದೆ.

ಆದ್ದರಿಂದ ೯ ಕೂಡಿಸಬೇಕು. ೫೩.೪೫ ೬೨.೪೫
೯ × ೪
೬೨.೪೫ ೨೪೮.೧೮೦

೨೭) ೨೫೧ (೯
೨೪೩
೦೦೮ ಚಿತ್ರಾದಿಂದ ಎಣಿಸಲು ಉತ್ತರಾಷಾಢಾ ನಕ್ಷತ್ರ ಬರುವದು.

೨ನೆಯ ಉದಾಹರಣೆ:— ಜನ್ಮ ದಿನಾಂಕ ೧೧–೧೦–೧೯೧೯

ಕೊಟ್ಟ ವೇಳೆ 4 P. M.
ಅಕ್ಷಾಂಶ ೧೬.೪೦ ರೇಖಾಂಶ ೭೫.೪೦.

ಇದನ್ನು ಸಾಡೇರೆಕ್ಟಿಫಿಕೇಶನ್‌ದಿಂದ ತಿದ್ದಲಾಗಿ ೩–೪೮ P. M. ಬರುವದು.

ಮೇಲಿನ ರೀತಿಯಿಂದ—

	ಗ. ಪಳ.	
೩ ಗಂಟೆಗೆ ಘಟಿಕಾ ಪಳಾ.	೨೨·೩೦	
೪೮ ಮಿನಿಟಗೆ	೨·೦೦	
	೨೪·೩೦	
	× ೨	
	೪೯· ೦	ಸ್ಥಿರಲಗ್ನವಡೆ. ಆದ್ದರಿಂದ
೯ ಕೂಡಿಸಬೇಕು.	+ ೯. ೦	
	೫೮· ೦	
	× ೪	
	೨೩೨· ೦	

೨೭)೨೩೨(೮
೨೧೬
———
೧೬ ಚಿತ್ರಾದಿಂದ ಎಣಿಸಲು ಭರಣೀ ನಕ್ಷತ್ರ ಬರುವದು.

ಇನ್ನೊಂದು ರೀತಿಯನ್ನು ವರಾಹಮಿಹಿರಾಚಾರ್ಯರು ಬೃಹಜ್ಜಾತಕದಲ್ಲಿ ಹೀಗೆ ಹೇಳಿರುವರು.

“ತತ್ಕಾಲ ಮಿಂದು ಸಹಿತೋ ದ್ವಿರಸಾಂಶ ಕೋ ಯ।
ರಸ್ತುತುಲ್ಯ ರಾಶಿ ಸಂಹಿತೆ ಪುರತಃ ಶಶಾಂಕೇ।
ಯಾವಾನುದೇತಿ ದಿನ ರಾತ್ರಿ ಸಮಾನ ಭಾಗ।
ಸ್ತಾವದ್ಯತೆ ದಿನನಿಶೋಃ ಪ್ರವದಂತಿ ಜನ್ಮ॥

ಚಂದ್ರನು ಜನ್ಮ ಕುಂಡಲಿಯಲ್ಲಿ, ಆಧಾನ ಕುಂಡಲಿಯಲ್ಲಿ (ಚಂದ್ರನು) ಯಾವ ದ್ವಾದಶಾಂಶದಲ್ಲಿರುವನೋ ಅಷ್ಟು ದೂರ ಇರುವನು.

ಉದಾ:— ಆಧಾನ ಕುಂಡಲಿಯಲ್ಲಿ ಚಂದ್ರನು ೮ ನೆಯ ದ್ವಾದಶಾಂಶದಲ್ಲಿದ್ದರೆ ಜನ್ಮ ಚಂದ್ರನು ಆ ದ್ವಾದಶಾಂಶ ರಾಶಿಯಿಂದ ೮ ನೆಯ ರಾಶಿಯಲ್ಲಿರುವನು. ಇದು ಉತ್ಪಲನ ವ್ಯಾಖ್ಯೆಯು. ಉಳಿದ ಟೀಕಾಕಾರರು ಮತ್ತೆರಡು ಅರ್ಥವನ್ನು ಮಾಡಿರುವರು. ಸಾರಾವಲಿ, ಸಮುದ್ರ ಜಾತಕಗಳನ್ನು ನೋಡಿರಿ.

ಚಂದ್ರನು ಆಧಾನ ಕುಂಡಲಿಯಲ್ಲಿ ಎಷ್ಟನೇ ದ್ವಾದಶಾಂಶದಲ್ಲಿರುವನೋ ಆ ದ್ವಾದಶಾಂಶ ರಾಶಿಯಿಂದ ಅಷ್ಟು ಸಂಖ್ಯಾ ರಾಶಿಯಲ್ಲಿ ಜನ್ಮ ಚಂದ್ರನಿರುವನು.

ಆಧಾನ ಚಂದ್ರನು ವೃಷಭ ರಾಶಿಯಲ್ಲಿರುವನೆಂದು ಕಲ್ಪಿಸಿರಿ. ಅವನು ದ್ವಾದಶಾಂಶದಲ್ಲಿ ಮೇಷದಲ್ಲಿದ್ದರೆ ವೃಷಭದಿಂದ ೧೨ ನೇ ದ್ವಾದಶಾಂಶದಲ್ಲಿ ಚಂದ್ರನಿದ್ದಂತಾಯಿತು. ಆಧಾನ ದ್ವಾದಶಾಂಶ ಮೇಷ. ಅಲ್ಲಿಂದ ಹನ್ನೆರಡನೇ ರಾಶಿ ಮೀನ. ಜನ್ಮ ಕುಂಡಲಿಯಲ್ಲಿ ಮೀನದಲ್ಲಿ ಚಂದ್ರನಿರುವದನ್ನು ಸಂಶೋಧಕರು ಕಂಡು ಹಿಡಿದಿರುವರು.

ಮಾನವನ ಆರೋಗ್ಯ

ಆರೋಗ್ಯ ಸಂಪತ್ತು ಎಲ್ಲಕ್ಕೂ ಹೆಚ್ಚಿನದು. ಮಾನವನ ಆಯುರ್ದಾಯದ ವಿಚಾರದಷ್ಟೇ ಆರೋಗ್ಯದ ವಿಚಾರವೂ ಅಗತ್ಯವಿದೆ. ಅನಾರೋಗ್ಯದಿಂದ ಬಳಲುವ ಮನುಷ್ಯನು ಅಲ್ಪಾಯುಷ್ಯವನ್ನೇ ಬಯಸುತ್ತಾನೆ. ಆಯುಷ್ಯವು ಮನುಷ್ಯನ ಕೈಯಲ್ಲಿ ಇರುವದಿಲ್ಲ; ಆದರೆ ಒಳ್ಳೆಯ ಆರೋಗ್ಯ ಸಂಪತ್ತನ್ನು ಪಡೆದುಕೊಳ್ಳುವುದು ಬಹಳಷ್ಟು ಮನುಷ್ಯನಿಗೆ ಸಾಧ್ಯವಿದೆ. ಕಾಲಿದಾಸನೂ ಕೂಡ "**ಶರೀರ ಮಾದ್ಯಂ ಖಲುಧರ್ಮ ಸಾಧನಂ**" ಎಂದು ಹೇಳಿರುವನು. ಈ ಆದ್ಯಧರ್ಮ ಸಾಧನೆಗೆ ಜ್ಯೋತಿಶ್ಯಾಸ್ತ್ರದ ದೃಷ್ಟಿಯಿಂದಲೂ ವಿಚಾರಿಸಬೇಕು.

ಆರೋಗ್ಯ ವಿಚಾರವನ್ನು ಮಾಡುವಾಗ ಲಗ್ನ, ರವಿ, ಚಂದ್ರ, ಆರನೇಯ ಭಾವಗಳನ್ನು ವಿಚಾರಿಸಬೇಕು. ಇವುಗಳಿಗೆ ಬಲಿಷ್ಠ ಅಶುಭಯೋಗವು ಯಾವ ರಾಶಿಯಿಂದ ಉಂಟಾಗುವದು ನೋಡಬೇಕು. ರವಿ ಚಂದ್ರರು ಸಾಮಾನ್ಯವಾಗಿ ಜೀವನದಾಯಕ ದಾತಾರರು. ರವಿಯ ಅಧಿಕಾರವು ಮೂಲ ಪ್ರವೃತ್ತಿಯ ಮೇಲಿರುವದು. ರವಿಯಾಗಲಿ, ಚಂದ್ರನಾಗಲಿ, ಲಗ್ನವಾಗಲಿ ಪಾಪಗ್ರಹಗಳಿಂದ ಪೀಡಿಸಲ್ಪಟ್ಟಿದ್ದರೆ ಅನಾರೋಗ್ಯವುಂಟಾಗುವದು. ದೃಷ್ಟಿಗಳ ಬಲದಿಂದ ಆರೋಗ್ಯ ಅನಾರೋಗ್ಯಗಳನ್ನು ನಿರ್ಣಯಿಸುವರು. ಗುರು ಶುಕ್ರರ ಶುಭದೃಷ್ಟಿ ಅನಾರೋಗ್ಯವಿದ್ದರೂ ಕಾಪಾಡುವದು. ರವಿ ಪುರುಷರ ಕುಂಡಲಿಯಲ್ಲಿ, ಚಂದ್ರ ಸ್ತ್ರೀಯರ ಕುಂಡಲಿಯಲ್ಲಿ ಪೀಡಿತನಿರಬಾರದು. ಲಗ್ನದಲ್ಲಿ ಉದಿತವಾದ ರಾಶಿ, ಷಷ್ಠದಲ್ಲಿ ಉದಿತವಾದ ರಾಶಿ ಪೀಡಿತವಾಗಿದ್ದರೆ ಆ ರಾಶಿ ಸೂಚಿತ ಅವಯವದಲ್ಲಿ ಅನಾರೋಗ್ಯವುಂಟಾಗುವದು.

ಲಗ್ನಾಧಿಪನಾಗಲಿ, ಲಗ್ನದಲ್ಲಿರುವ ರಾಶಿಯಾಗಲಿ, ೬-೧೨ ರಲ್ಲಿರುವ ಪಾಪಗ್ರಹದಿಂದ ಪೀಡಿತವಾಗಿದ್ದರೆ ಅನಾರೋಗ್ಯಕ್ಕೆ ಕಾರಣವಾಗುವದು.

ರವಿಯಾಗಲಿ, ಚಂದ್ರನಾಗಲಿ ೬-೭ ರಲ್ಲಿದ್ದು ಪೀಡಿತನಿದ್ದರೆ ಅನಾರೋಗ್ಯವು.

ರವಿ ಚಂದ್ರ ಯುತಿಯಲ್ಲಿ (ಅಮಾವಾಸ್ಯೆ) ಹುಟ್ಟಿದವರ ಪ್ರಕೃತಿ ಅಶಕ್ತವಾಗಿರುವದು. ಇವರು ಮಾನಸಿಕ ಸ್ವಾಸ್ಥ್ಯವನ್ನು ಕಾಯ್ದುಕೊಳ್ಳಬೇಕು. ಲಗ್ನಾಧಿಪತಿ ಷಷ್ಠಾಧಿಪನ ಅಶುಭಯೋಗ ಮಾಡಲು ಹೋಗುತ್ತಿದ್ದರೆ ಜಾತನು ತನ್ನ ಆರೋಗ್ಯವನ್ನು ಅಲಕ್ಷಿಸುವನು. ಲಗ್ನದಲ್ಲಿ ಉದಿತವಾದ ಪಾಪಗ್ರಹಗಳು ತೀವ್ರ ವೇದನೆಯನ್ನುಂಟುಮಾಡುವವು. ಸಪ್ತಮದಲ್ಲಿರುವ ಪಾಪಗ್ರಹಗಳು ದೀರ್ಘಕಾಲದ ರೋಗವನ್ನುಂಟುಮಾಡುವವು.

ಪೂರ್ವಭಾಗದಲ್ಲಿರುವ ಶುಭಗ್ರಹಗಳು, ಕೇಂದ್ರದಲ್ಲಿರುವ ಶುಭಗ್ರಹಗಳು ಚಂದ್ರನ ಶುಭ ಗೃಹದಲ್ಲಿದ್ದರೆ ರೋಗವನ್ನು ನೆಟ್ಟಗೆ ಮಾಡುವವು. ಗುರು ಔಷಧದಿಂದ ವಾಸಿ ಮಾಡುವನು. ಶುಕ್ರನಿಂದ ತನ್ನಿಂದ ತಾನೇ ರೋಗವು ವಾಸಿಯಾಗುವದು. ಪಶ್ಚಿಮ ಭಾಗದಲ್ಲಿದ್ದ ಶುಭ ಗ್ರಹಗಳಿಂದ ಪೂರ್ಣವಾಗಿ ವಾಸಿಯಾಗಲಾರವು.

ರವಿ ಚಂದ್ರರೊಡನೆ ಶುಭಗ್ರಹಗಳ ಶುಭದೃಷ್ಟಿ ಇಲ್ಲವಾದರೆ ಪಾಪಗ್ರಹಗಳು ಕೇಂದ್ರದಲ್ಲಿದ್ದರೆ ಪೂರ್ಣವಾಸಿಯಾಗುವದು ದುಸ್ತರ. ಪಾಪಗ್ರಹಗಳು ರವಿಯ ಹಿಂದೆ ಚಂದ್ರನ ಮುಂದೆ ಇದ್ದರೆ, ಬುಧನೂ ಅವರೊಡನಿದ್ದರೆ ಪರಿಣಾಮ ಹೆಚ್ಚಿಗೆ.

ಮೇಲಿಂದ ಮೇಲೆ ರೋಗವುಂಟಾಗಲಿಕ್ಕೆ ಶನಿಯ ಪೀಡೆ ಕಾರಣವಾಗಿರುವದು. ಬುಧನೂ ಕೂಡಿದ್ದರೆ ತನ್ನ ರೋಗದ ಬಗೆಗೆ ಮನೆಮನೆಗೆ ಮಾತಾಳಿ; ರೋಗದ ಬಗೆಗೆ ಯಾಚಕ. ರವಿಯೊಡನೆ ಮಂಗಳನು ಯಾವ ಯೋಗ ಮಾಡುತ್ತಿದ್ದರೂ ಚೈತನ್ಯ ಶಕ್ತಿ ಹೆಚ್ಚಾಗಿರುವದು. ಆದರೆ ಜ್ವರ ಭಯ. ಅಪಘಾತ ಭಯಗಳಿರುವವು. ಶನಿಗಿಂತ ಮಂಗಳನು ದಶಮ ಭಾವದ ಸಮೀಪಕ್ಕೆ ಇದ್ದರೆ ಅಶಕ್ತತೆ ಹೆಚ್ಚು. ಶನಿಯೇ ಮಧ್ಯಭಾವದ ಸಮೀಪಕ್ಕಿದ್ದರೆ ಮಂಗಳನಿಗೆ ಬಲಬರುವದು.

ಚಂದ್ರ ಶನಿ ಕೇಂದ್ರ, ಪ್ರತಿಯೋಗ ಕೇತುವಿನ ಕೂಡ ಇದ್ದರೆ ೧, ೭ ರಲ್ಲಿದ್ದರೆ ಇಡೀ ಜೀವನ ರೋಗದಿಂದ ಬಳಲಬೇಕಾಗುವದು.

ಮೇಷ, ಸಿಂಹ, ಧನು, ತುಲಾ ರಾಶಿಗಳು ಲಗ್ನದಲ್ಲಿದ್ದರೆ ಮನುಷ್ಯನಿಗೆ ಜೀವನ ಶಕ್ತಿಯನ್ನು ಕೊಡುವವು. ವೃಷಭ, ಮಿಥುನ, ವೃಶ್ಚಿಕ, ಕುಂಭ ಗಳು ಮಧ್ಯಮ ಜೀವನ ಶಕ್ತಿಯನ್ನು ಕೊಡುವವು ಕರ್ಕ, ಮಕರ, ಮೀನ ಗಳಲ್ಲಿ ಜೀವನ ಶಕ್ತಿಯ ಪ್ರಮಾಣವು ಕಡಿಮೆ. ಕುಂಡಲಿಯಲ್ಲಿ ರವಿ ಬಲಿಷ್ಠ ನಿದ್ದು ಪೀಡಿತನಿಲ್ಲದಿದ್ದರೆ ಶಾರೀರಿಕ ಶಕ್ತಿ ಚೆನ್ನಾಗಿರುವದು. ಇವರಿಗೆ ಆನುವಂಶಿಕ ರೋಗವಿರುವದಿಲ್ಲ. ರವಿ ನಿರ್ಬಲನಿದ್ದು ಪೀಡಿತನಿದ್ದರೆ ಆನುವಂಶಿಕ ರೋಗವಿರುವದು. ಸ್ಥಿರ ರಾಶಿಯಲ್ಲಿ ರವಿ ಪೀಡಿತನಿದ್ದರೆ ಹೃದಯ ವಿಕಾರ, ರಕ್ತಾಭಿಸರಣದ ತಕರಾರು, ಕಂಠ ವಿಕಾರಗಳು ಕಂಡು ಬರುವವು.

ದ್ವಿಸ್ವಭಾವ ರಾಶಿಯಲ್ಲಿ ಅಶುಭ ದೃಷ್ಟಿಯಿದ್ದರೆ ಅಂತ್ರರೋಗ, ಮಜ್ಜಾ ತಂತು ವಿಕಾರ ಪುಪ್ಪುಸ ವಿಕಾರಗಳ ಸಂಭವ.

ಚರರಾಶಿಯಲ್ಲಿ ಪೀಡಿತನಿದ್ದರೆ ಮಸ್ತಕ ವಿಕಾರ, ಮೂತ್ರ ಪಿಂಡ ವಿಕಾರ ತ್ವಗ್ರೋಗ. ಪೀಡಾಧಿಕ್ಯದಿಂದ ರೋಗದ ಸಂಭವವನ್ನು ನಿರ್ಣಯಿ ಸಬೇಕು.

ಶನಿಯಿಂದ ಇಂದ್ರಿಯಗಳ ಆಕುಂಚನ ಗುರುವಿನಿಂದ ಪುಷ್ಟಿ, ಅಭಿವೃದ್ಧಿ; ರಕ್ತ ಸಂಚಯದಿಂದ ರೋಗ ಬರುವ ಸಂಭವವುಂಟು. ಮಂಗಳ ನಿಂದ ದಾಹಜನ್ಯ ವಿಕಾರ, ಕ್ಷತ, ವ್ರಣ ಶಸ್ತ್ರ ಪ್ರಯೋಗದಿಂದ ಉಂಟಾಗುವ ರೋಗಗಳು. ಹರ್ಶಲನಿಂದ ಪಕ್ಷಘಾತ, ಅರ್ಧಾಂಗವಾಯು ಚಮತ್ಕಾರಿ ರೋಗಗಳು.

ನೇಪಚ್ಯೂನನಿಂದ ಹಿಸ್ಟರಿಯಾ, ಮಜ್ಜಾತಂತು ಕ್ಷೋಭ, ಕ್ಷೀಣತೆ ಯನ್ನುಂಟುಮಾಡುವ ರೋಗಗಳು.

ಶುಕ್ರನಿಂದ ನಾಸಿಕ, ಮೂತ್ರೇಂದ್ರಿಯ ಗುಹ್ಯೇಂದ್ರಿಯ, ವಿಷಯ ಸುಖದ ಅತಿರೇಕದಿಂದ ಉಂಟಾಗುವ ರೋಗಗಳು. ಬುಧನಿಂದ ಮಾನ ಸಿಕ ವಿಕಾರ, ಮಜ್ಜಾತಂತು ವಿಕಾರ, ಮೇಂದುವಿನ ವಿಕಾರ. ಚಂದ್ರನು ಶರೀರ ವ್ಯಾಪಾರವು ನೆಟ್ಟಗೆ ನಡೆಯದ್ದರಿಂದ ಉಂಟಾಗುವ ರೋಗಗಳನ್ನು ಸೂಚಿಸುವನು.

ರವಿ ಶನಿ ಯುತಿಯು ವಷ್ಠದಲ್ಲಿ ಅಥವಾ ಒಬ್ಬನು ೬ ರಲ್ಲಿ ಇನ್ನೊಬ್ಬನು ೧೨ ರಲ್ಲಿದ್ದು ಪ್ರತಿಯೋಗ ಮಾಡುತ್ತಿದ್ದರೆ ಅಥವಾ ಇವರಿಬ್ಬರಲ್ಲಿ ಕೇಂದ್ರ ವಾಗುತ್ತಿದ್ದರೆ ಶರೀರ ಪ್ರಕೃತಿ ಚೆನ್ನಾಗಿರುವದಿಲ್ಲ. ರವಿಯೊಡನೆ ಗುರು ಮಂಗಳ ಚಂದ್ರರ ಶುಭಯೋಗವಿದ್ದರೆ ಪ್ರಕೃತಿ ಚೆನ್ನಾಗಿರುವದು. ರವಿಯು ಲಗ್ನದಲ್ಲಿ ಇಲ್ಲವೆ ೬-೮ ರಲ್ಲಿ ಪೀಡಿತನಿದ್ದರೆ ಶರೀರ ಸ್ವಾಸ್ಥ್ಯದ ಕಡೆಗೆ ಹೆಚ್ಚು ಲಕ್ಷ್ಯಕೊಡಬೇಕು.

ರವಿ ಶನಿಯಿಂದ ಪೀಡಿತನಾಗಿ ೯, ೮, ೭, ೬, ೫, ೪ ರಲ್ಲಿದ್ದರೆ ದೀರ್ಘಕಾಲ ರೋಗವುಂಟಾಗುವದು. ಇಂಥವರು “ **ಶರೀರಮಾದ್ಯಂ ಖಲುಧರ್ಮ ಸಾಧನಂ** ” ಎಂಬುದನ್ನು ಲಕ್ಷಿಸಬೇಕು.

ರವಿ ಚಂದ್ರರು ಪರಸ್ಪರ ಅಶುಭಯೋಗದಲ್ಲಿದ್ದು ಪಾಪಗ್ರಹಗಳಿಂದ ಪೀಡಿತರಿದ್ದರೆ— ವಿಶೇಷವಾಗಿ ಕೇಂದ್ರದಲ್ಲಿ ಸ್ಥಿರರಾಶಿಯಲ್ಲಿ ಪೀಡಿತರಾಗಿ ದ್ದರೆ ದೃಷ್ಟಿಮಾಂದ್ಯ, ನೇತ್ರ ವಿಕಾರವುಂಟಾಗುವದು ಕಂಡು ಬಂದಿದೆ. ಈ ಯೋಗದಲ್ಲಿ ರವಿ ಶನಿಯಿಂದ, ಚಂದ್ರನು ಮಂಗಳನಿಂದ ಪೀಡಿತನಿರುವದು ಕಂಡು ಬಂದಿರುವದು.

ಕುಂಡಲಿಯಲ್ಲಿ ಲಗ್ನ, ಲಗ್ನಾಧಿಪತಿ, ರವಿ ಚಂದ್ರರು ನಿರ್ಬಲರಿದ್ದು ಪಾಪಗ್ರಹಗಳಿಂದ ಪೀಡಿತರಿದ್ದರೆ ದೀರ್ಘಜೀವನವಿರುವದಿಲ್ಲ. ಆದರೆ ಲಗ್ನ ರವಿ ಚಂದ್ರರು ಬಲಿಷ್ಠರಿದ್ದು, ಶುಭಯುಕ್ತ; ಶುಭದೃಷ್ಟರಿದ್ದರೆ ದೀರ್ಘಾಯುಷ್ಯವಿರುವದು. ಶನಿ ಮಂಗಳರಿಂದ ಬುಧನು ಪೀಡಿತನಿದ್ದು ಅಥವಾ ಚಂದ್ರನು ೧-೭ ರಲ್ಲಿದ್ದು ಮಂಗಳ ಶನಿಗಳಿಂದ ಪೀಡಿಸಲ್ಪಟ್ಟಿದ್ದರೆ ತಲೆ ಶೂಲಿ ಏಳುವದು. ಎರಡು ಗ್ರಹಗಳ ಪೀಡೆ ಇದ್ದಲ್ಲಿ Apoplexy ಸಂಭವ.

ಚಂದ್ರ ಶನಿ ಸಮಕ್ರಾಂತಿ, ಚಂದ್ರ ಮಂಗಳ ಸಮಕ್ರಾಂತಿ, ಶನಿ ಮಂಗಳರಿಂದ ಬುಧನೂ ಪೀಡಿತನಿದ್ದರೆ ಮಸ್ತಕ ವೇದನೆ ತೀವ್ರವಾಗಿ ರುವದು.

ರವಿಯ ಯುತಿಯಲ್ಲಿ, ಶನಿ ಬುಧರಿದ್ದು ೧-೭ ರಲ್ಲಿದ್ದರೆ ವಿಶೇಷವಾಗಿ ಬುಧನು ಸಪ್ತಮದಲ್ಲಿದ್ದರೆ ಚಂದ್ರನು ಇವರ ಕೇಂದ್ರ, ಸಮಕ್ರಾಂತಿ, ಪ್ರತಿ

ಯೋಗದಲ್ಲಿದ್ದರೆ ತೊದಲ್ನುಡಿಯಿರುವದು; ಮಾತನಾಡುವಲ್ಲಿ ತೊಂದರೆಗಳು ತೋರುವವು. ವಿಶೇಷವಾಗಿ ಬುಧನು ಕರ್ಕ ವೃಶ್ಚಿಕ ಮೀನದಲ್ಲಿದ್ದರೆ ಇದು ಹೆಚ್ಚಾಗಿ ಕಂಡು ಬರುವದು. ಮಂಗಳನು ಆವರೊಡನಿದ್ದರೆ ಬುಧನ ಯೋಗ ಸರಿದ ಬಳಿಕ ಸುಧಾರಿಸುವದು. ಬುಧನು ಶನಿಯ ಸಮಕ್ರಾಂತಿ ಯಲ್ಲಿದ್ದು ಅಥವಾ ಮಂಗಳ ಚಂದ್ರ ಕೇಂದ್ರವು ಲಗ್ನ ಸಪ್ತಮದಲ್ಲಿದ್ದರೆ ತಲೆಶೂಲಿಯಿರುವದು. ಎರಡೂ ಪಾಪಗ್ರಹಗಳ ಯೋಗವಿರುವಲ್ಲಿ Apoplexy ಇರುವದು. ಚಂದ್ರನು ಶನಿ ಅಥವಾ ಮಂಗಳರೊಡನೆ ಸಮಕ್ರಾಂತಿ ಯೋಗ ಮಾಡುವಲ್ಲಿ ತಲೆಶೂಲಿವುಂಟಾಗುವದು. ಇದರಂತೆ ಬುಧನು ಶನಿ ಮಂಗಳರಿಂದ ಪೀಡಿತನಾಗಿದ್ದರೆ ವಿಶೇಷವಾಗಿರುವದು.

ಶನಿ ಮಂಗಳಯುತಿ ಕೇಂದ್ರದಲ್ಲಿದ್ದು ರವಿ ಚಂದ್ರರಯುತಿ ಅಥವಾ ಪ್ರತಿಯೋಗವಿದ್ದರೆ; ರವಿ ಚಂದ್ರರು ಪಾಪ ಗ್ರಹದೊಡನೆ ಯೋಗ ಮಾಡು ವಾಗ ಸಂಧಿವಾತ ಅಥವಾ ಕುಂಟುತನವು ಪ್ರಾಪ್ತವಾಗುವದು. ಶನಿ ಮಂಗ ಳರ ಯುತಿಯಲ್ಲಿ ರವಿಯಾಗಲಿ, ಚಂದ್ರನಾಗಲಿ ಇದ್ದರೆ ಜನ್ಮದಿಂದ ನ್ಯೂನತೆ ಇರುವದು.

ಶನಿ ಮಂಗಳರು ದಶಮದಲ್ಲಿದ್ದು ರವಿ ಚಂದ್ರರ ಪ್ರತಿಯೋಗ, ಕೇಂದ್ರ ಯೋಗದಲ್ಲಿದ್ದರೆ ಉನ್ನತ ಸ್ಥಾನದಿಂದ ಪತನ ಭಯ, ದರೋಡೆ ಖೋರರ ಭಯ, ಚೋರಭಯ ಅಥವಾ ಹಡಗಿನಲ್ಲಿ ಭಂಗ ಭಯವಿರುವದು. ಚಂದ್ರ ಶನಿ, ಚಂದ್ರ ಮಂಗಳ ಸಮಕ್ರಾಂತಿ ಯೋಗವು ತಲೆಶೂಲೆಯನ್ನು ಹುಟ್ಟಿ ಸುವದು. ಬುಧನೂ ಶನಿ ಮಂಗಳರಿಂದ ಪೀಡಿತನಿದ್ದರೆ ಕಟು ತಲೆಶೂಲಿ.

ಶನಿಗಿಂತ ಮಂಗಳನು ಉನ್ನತನಾಗಿದ್ದರೆ (ದಶಮ ಭಾವದ ಸಮೀಪ ದಲ್ಲಿರುವದು) ಅಶಕ್ತತೆಯನ್ನುಂಟುಮಾಡುವನು. ಶನಿಯೇ ಉನ್ನತನಾಗಿ ದ್ದರೆ ಶಕ್ತಿಯನ್ನು ಕೊಡುವನು.

ಹಗಲಿನ ಕುಂಡಲಿಯಲ್ಲಿ ಶನಿ ಮಂಗಳರು ಸಪ್ತಮದಲ್ಲಿ ಅಥವಾ ಅಷ್ಟಮದಲ್ಲಿ; ಅಥವಾ ಮಂಗಳನು ಷಷ್ಠದಲ್ಲಿ ತುಲಾ ವೃಶ್ಚಿಕದಲ್ಲಿದ್ದು ಚಂದ್ರನನ್ನು ಪೀಡಿಸುತ್ತಿದ್ದರೆ **ಸ್ಫೋಟನ** ಭಯವಿರುವದು.

ಅಪಘಾತ ಯೋಗಗಳು— ಮಂಗಳ ಶನಿ ಹರ್ಶಲರ ಅಶು ಯೋಗಗಳು ಅಪಘಾತಕ್ಕೆ ಕಾರಣವಾಗುವವು. ಇವು ಉದಯ ಹೊಂದ ತ್ತಿರಲಿ ಅಥವಾ ಉದಯ ಹೊಂದುತ್ತಿರುವ ಗ್ರಹಗಳನ್ನು ಪೀಡಿಸುತ್ತಿರ ಅಪಘಾತಕ್ಕೆ ಕಾರಣವಾಗುವವು. ಅಪಘಾತಕ್ಕೆ ಕಾರಣವಾಗುವ ಅತಿ ಚಾರದ ರಾಶಿಗಳೆಂದರೆ ಮೇಷ ತುಲಾ ವೃಶ್ಚಿಕ ಮಕರ ಕುಂಭಗಳು. ಇ ಗಳಲ್ಲಿ ಮಿಥುನವನ್ನೂ ಕೂಡಿಸಬಹುದು. ತುಲೆಯ ಉತ್ತರಾರ್ಧದ ಪಾಪಗ್ರಹಗಳಿದ್ದರೆ ಅಥವಾ ಪೀಡಿತ ರವಿ ಚಂದ್ರರಿದ್ದರೆ ಅಪಘಾತಕ್ಕೆ ಕಾರಣ ರಾಗುವರು. ಚರರಾಶಿಗಳು ಕೇಂದ್ರದಲ್ಲಿರುವುದು, ಅಲ್ಲಿ ರವಿ ಚಂದ್ರ ಪೀಡಿತರಾಗಿರುವದು, ೪, ೫, ೬, ೧೦, ೧೧, ೧೨ ನೆಯ ಮನೆಗಳ ಪೀಡಿತ ಗ್ರಹಗಳಿಂದ ಕೂಡಿದಲ್ಲಿ ಅಪಘಾತಕ್ಕೆ ಕಾರಣವಾಗುವವು.

ಮಂಗಳನು ಅಶುಭಯೋಗಮಾಡುತ್ತಿದ್ದರೆ ಅಗ್ನಿ, ದಾಹ, ಕಡಿತ ಗುಂಡುಗಳ ಭಯವಿರುವದು. ಮಂಗಳನು ವೃಶ್ಚಿಕ, ಮೀನ ರಾಶಿಯಲ್ಲಿದ್ದ ದಂಶ ಭಯವಿರುವದು. ಮಂಗಳನು ದ್ವಾದಶದಲ್ಲಿ ಮಿಥುನ, ಸಿಂಹ, ತುಲ ದಲ್ಲಿದ್ದರೆ ಕುದುರೆ ಮೊದಲಾದ ದೊಡ್ಡ ಪ್ರಾಣಿಗಳಿಂದ ಭಯವಿರುವದು ಇವು ಅಪಘಾತದ ಪ್ರಕೃತಿಯನ್ನು ಸೂಚಿಸುವವು.

ಶನಿ ಅಶುಭಯೋಗ ಕರ್ತನಿದ್ದರೆ ಗುದಿಕೆ, ಜಜ್ಜುವದು, ಥಳಿಸ ವದು ಪಾತ ಇತ್ಯಾದಿಗಳ ಭಯವಿರುವದು. ಶನಿ ಧನುವಿನಲ್ಲಿದ್ದರೆ ಕುದು ಯಿಂದ ಬೀಳುವ ಭಯವಿರುವದು. ಆತನು ಕುಂಭದಲ್ಲಿದ್ದರೆ ಪಾವಟ ಗಳನ್ನು ಇಳಿಯುವಾಗ ಬೀಳುವ ಭಯವಿರುವದು. ಶನಿ ದಶಮದಲ್ಲಿದ್ದರೆ ರವಿ ಚಂದ್ರರನ್ನು ಪೀಡಿಸುತ್ತಿದ್ದರೆ; ಶನಿ ಲಗ್ನ ಇಲ್ಲವೆ ಅಷ್ಟಮದ ಅಧಿಪ ಯಾಗಿದ್ದರೆ ಹೆಚ್ಚಿನ ಪತನ ಭಯವಿರುವದು.

ಮಂಗಳ ಶನಿ ಯುತಿಯೂ ಅಪಘಾತ ಸೂಚಕವಿರುವದು. ದಿ ವರ್ಷಪದ್ಧತಿಯಿಂದಾಗಲಿ, ಪ್ರಾಥಮಿಕ ಯೋಗ ಪದ್ಧತಿಯಿಂದಾಗಲಿ ರ ಚಂದ್ರ ಲಗ್ನಾಂಶ ದಶಮಗಳು ಅಶುಭಯೋಗ ಮಾಡುವಾಗ ಅಪಘಾತಗಳ ಸಂಭವಿಸುವವು. ವೃಷಭ ಅಥವಾ ಚತುರ್ಥದಲ್ಲಿ ಯುತಿ ಆಗುವಾಗ ಕಟ್ಟ ಗಳಕುಸಿಯುವಿಕೆಯಿಂದ ಅಪಘಾತ ಸಂಭವಿಸುವದು.

ಹರ್ಶಲನು ಪೀಡಾಕಾರಕನಾಗಿದ್ದರೆ ಒಮ್ಮೆಲೆ ಅನಿರೀಕ್ಷಿತವಾಗಿ ಯಂತ್ರಗಳಿಂದ, ವಿದ್ಯುತ್ತಿನಿಂದ, ಸ್ಫೋಟದಿಂದ ಸಿಡಿಲಿನಿಂದ ಅಪಘಾತ ಭಯವಿರುವದು.

ಯಾವ ರಾಶಿಯಲ್ಲಿ ಪಾಪಗ್ರಹಗಳಿರುವವು, ಯಾವ ರಾಶಿಯಲ್ಲಿ ಪೀಡಿತ ರವಿ ಚಂದ್ರರಿರುವರು ನೋಡಿ, ಆ ರಾಶಿ ಸೂಚಕ ಅವಯವವು ಅಪಘಾತಕ್ಕೆ ಗುರಿಯಾಗುವದನ್ನು ಊಹಿಸಬಹುದು. ಸಾಮಾನ್ಯವಾಗಿ ಆ ರಾಶಿ ಸೂಚಕ ಅವಯವದಲ್ಲಿ ಮಶಕ ವ್ರಣದ ಚಿಹ್ನ ಪಚ್ಚೆಗಳಿರುವವು. ಅಪಘಾತದ ತೀವ್ರ ಪರಿಣಾಮವನ್ನು ಪೀಡಿಸುವ ಪಾಪಗ್ರಹಗಳ ಬಲ ಪ್ರಮಾಣದಿಂದ ನಿರ್ಧರಿಸಬೇಕು. ಮತ್ತು ಸಹಾಯ ಸಿಗುವ ಪ್ರಮಾಣವನ್ನು ವಿಚಾರಿಸಬೇಕು. ಗುರು ಶುಕ್ರರ ಶುಭದೃಷ್ಟಿಯು ಅದ್ಭುತ ರೀತಿಯಿಂದ, ಭಯಪ್ರದ ಸಂಕಟವನ್ನು ಅಪಘಾತವನ್ನು ತಪ್ಪಿಸಿ ಪಾರು ಮಾಡುವದು.

ರೋಗ ಯೋಗಗಳು

ಕ್ಷಯ:— ದ್ವಿಸ್ವಭಾವಿ ರಾಶಿಯಲ್ಲಿ ಅನೇಕ ಅಶುಭಗಳುಂಟಾದರೆ ಕ್ಷಯ ಬೇನೆಯುಂಟಾಗುವದು. ಶನಿಯಿಂದ ಮಂದ ಮಂದವಾಗಿ, ಮಂಗಳನಿಂದ ತೀವ್ರವಾಗಿ ಬೇನೆಯುಂಟಾಗುವದು. ಶನಿಯು ದಶಮದ ಸಮೀಪದಲ್ಲಿದ್ದು ರವಿಯ ಕೇಂದ್ರ, ಪ್ರತಿಯೋಗದಲ್ಲಿದ್ದರೆ— ವಿಶೇಷವಾಗಿ ದ್ವಿಸ್ವಭಾವ ರಾಶಿಯಲ್ಲಿ ಈ ಯೋಗವುಂಟಾದರೆ— ಕ್ಷಯ ಬರುವದು.

ಶನಿ ಕೇತುವಿನ ಯುತಿ ಇಲ್ಲವೆ ಕೇಂದ್ರದಲ್ಲಿದ್ದರೆ, ಇಲ್ಲವೆ ಚಂದ್ರನ ಕೇಂದ್ರವು ಅಪೋಕ್ಲೀಮದಲ್ಲಂಟಾದರೆ ಕ್ಷಯದ ಪೀಡೆಯಾಗುವದು. ರವಿ ಬುಧರು ಮೀನದಲ್ಲಿ ಪೀಡಿತರಿದ್ದು ಷಷ್ಠದಲ್ಲಿದ್ದರೆ ಕನ್ಯಾ ಲಗ್ನವು ಉದಿತವಿದ್ದರೆ ಕ್ಷಯದ ಭಯವಿರುವದು.

ಕ್ಯಾನ್ಸರ:— ಜ್ಯೋತಿರ್ವಿದರು ಇದಕ್ಕಾಗಿ ಪಕ್ಕಾನಿಯಮಗಳನ್ನು ಕಂಡು ಹಿಡಿದಿಲ್ಲವೆಂದು ಹೇಳುವರು. ಚಂದ್ರನು ಅತ್ಯಂತ ಪೀಡಿತನಿದ್ದು

ಗುರು ಶನಿ ಹರ್ಶಲರಿಂದ ಪೀಡೆ ಇದ್ದು, ಮೇಷ, ವೃಷಭ, ಕರ್ಕ, ತುಲಾ ರಾಶಿಗಳಿರುವಾಗ ಕ್ಯಾನ್ಸರ ಬೇನೆ ತೋರುವದು. ಶನಿ ಕರ್ಕದಲ್ಲಿದ್ದರೆ ಕ್ಯಾನ್ಸರದಿಂದ ತಂದೆ–ತಾಯಿಗಳಿಗೆ ವಿಶೇಷತ: ತಂದೆಗೆ ಕ್ಯಾನ್ಸರದ ಭಯವೆಂದು ಹೇಳುವರು.

ಮಲರೋಗ: – ಬುಧ ಚಂದ್ರರಲ್ಲಿ ಯಾವ ಯೋಗವಿರದೆ ಮೀನ ಮಕರಗಳು ೬, ೮, ೧೨ ರಲ್ಲಿದ್ದು ಲಗ್ನದೊಡನೆಯೂ ಯಾವ ಶುಭಯೋಗವಿಲ್ಲದಿದ್ದರೆ ಈ ರೋಗವುಂಟಾಗುವದು.

ರಾತ್ರಿ ಶನಿ, ಹಗಲು ಮಂಗಳ ಕೇಂದ್ರದಲ್ಲಿ ಬಲಿಷ್ಠನಿದ್ದು ಬುಧ ಚಂದ್ರರಿಬ್ಬರನ್ನೂ ಪೀಡಿಸುತ್ತಿದ್ದರೆ ಮಲರೋಗ ಬರುವದು.

ಹಗಲು ಶನಿ, ರಾತ್ರಿ ಮಂಗಳರ ರಾಶಿಯಲ್ಲಿ ಬುಧ ಚಂದ್ರರಿದ್ದರೆ ಬೇನೆ ಉಂಟಾಗುವದು. ಜಲರಾಶಿಯು ಲಗ್ನದಲ್ಲಿ ಉದಿತವಿದ್ದು ಅಲ್ಲಿ ಹರ್ಶಲನಿದ್ದರೆ ಮಿದುಳಿನಲ್ಲಿ ನೀರು ಸೋರುವದರಿಂದ ಮಲರೋಗವುಂಟಾಗುವದು. ಚಂದ್ರನು ಲಗ್ನದಲ್ಲಿ ಬುಧನ ಪ್ರತಿಯೋಗದಲ್ಲಿ ಶನಿಯ ಕೂಡ ಇದ್ದರೆ; ಶನಿ ಮಂಗಳರ ಪ್ರತಿಯೋಗ ಕೇಂದ್ರದಲ್ಲಿದ್ದರೆ, ರವಿ ಚಂದ್ರ ಯುತಿಯಿದ್ದು (ಅಮಾವಾಸ್ಯೆ) ಮಂಗಳನು ಚತುರ್ಥದಲ್ಲಿ ಶನಿಯ ಅಶುಭಯೋಗದಲ್ಲಿದ್ದರೆ; ರವಿ ಶುಕ್ರರು ಲಗ್ನದಲ್ಲಿ ಶನಿಯ ಪ್ರತಿಯೋಗದಲ್ಲಿದ್ದರೆ; ರವಿ ಚಂದ್ರರು ಬುಧ ಮಂಗಳರಿಂದ ಪೀಡಿತರಾಗಿದ್ದರೆ; ಪಾಪಗ್ರಹಗಳು ಕೇಂದ್ರದಲ್ಲಿದ್ದು ರವಿಗಿಂತ ಮುಂಚೆ, ಚಂದ್ರನಿಗಿಂತ ಹಿಂದಿನಿಂದ ಉದಯ ಹೊಂದುತ್ತಿದ್ದರೆ; ಮಿಥುನ ಧನೂ ರಾಶಿಗಳೂ ಈ ರೋಗಕ್ಕೆ ಕಾರಣವಾಗುವವು. ಅನೇಕ ಸಂದರ್ಭಗಳಲ್ಲಿ ಮಲರೋಗದಲ್ಲಿ ಲಗ್ನಾಂಶವು ಹೆಚ್ಚಿಗೆ ಪೀಡಿತವಾಗಿರುವದು.

ಸಂಧಿವಾತ:— ಕೆಳಗಿನ ಸಂದರ್ಭಗಳಲ್ಲಿ ಸಂಧಿವಾತವು ತಲೆದೋರುವದು—

ರವಿ ಚಂದ್ರರಿಬ್ಬರೂ ಜಲರಾಶಿಯಲ್ಲಿ ಪೀಡಿತರಿದ್ದರೆ— ರವಿ ಚಂದ್ರರು

ಯುತಿಯಲ್ಲಿ ಅಥವಾ ಪಾಪಗ್ರಹಗಳ ಪ್ರತಿಯೋಗದಲ್ಲಿ ಇದ್ದು ಪಾಪಗ್ರಹಗಳು ಮೇಷ ವೃಷಭ ಕರ್ಕ ವೃಶ್ಚಿಕ ಮಕರ ಕುಂಭ ಮೀನಗಳಲ್ಲಿದ್ದರೆ—

೧, ೬ ರಲ್ಲಿ ಪಾಪಗ್ರಹಗಳಿದ್ದರೆ—

ರಾತ್ರಿಯ ಕುಂಡಲಿಯಲ್ಲಿ ಮಂಗಳ ಶನಿ ಚಂದ್ರರು ಕೇಂದ್ರಗಳಲ್ಲಿದ್ದು ಶನಿಯ ಪ್ರತಿಯೋಗದಲ್ಲಿ, ಶನಿ ವೃಷಭ ಸಿಂಹ ಧನು ಮೀನದಲ್ಲಿದ್ದರೆ— ಶನಿ ಮೀನದಲ್ಲಿದ್ದು ಮಂಗಳ ಅಥವಾ ಚಂದ್ರರ ಪ್ರತಿಯೋಗದಲ್ಲಿದ್ದರೆ— ಸಂಧಿವಾತವು ತಲೆದೋರುವದು.

ಸ್ವಭಾವ ಗುಣ ಧರ್ಮಗಳು

ಮನಃಕಾರಕ ಚಂದ್ರ, ಬುದ್ಧಿಕಾರಕ ಬುಧ, ಆತ್ಮಕಾರಕ ರವಿ ಎಂದು ಜ್ಯೋತಿಶ್ಶಾಸ್ತ್ರವು ಹೇಳುವದು. ರವಿಯು ಯಾವ ರಾಶಿಯಲ್ಲಿರುವನೆಂಬು ದನ್ನು ನೋಡಿ ಮಾನವನ ಗುಣ ಧರ್ಮಗಳನ್ನು ಊಹಿಸುವರು. ಬುಧ ಚಂದ್ರರು ರವಿಯೂ ಜನ್ಮಕಾಲದಲ್ಲಿ ಹೇಗಿರುವರೆಂಬುದನ್ನು ನೋಡಿ ಮಾನವನ ಬೆಲೆಯನ್ನು ಕಟ್ಟಲು ಬರುತ್ತದೆ. ಚಂದ್ರನು ರವಿಯೊಡನೆ ಶುಭಯೋಗವಮಾಡುತ್ತಿದ್ದರೆ ಸ್ವಭಾವದಲ್ಲಿ ಸ್ವತಂತ್ರವೃತ್ತಿ, ದೊಡ್ಡಿಸ್ತಿಕೆ, ಪ್ರೌಢಿ ಮೊದಲಾದ ಸದ್ಗುಣಗಳು ಕಂಡು ಬರುವವು. ಚಂದ್ರನು ಪಾಪ ಗ್ರಹದಿಂದ ವಿದ್ಧನಾಗಿದ್ದರೆ ಡೌಲು, ದುರಭಿಮಾನ ಮೊದಲಾದ ಪ್ರಗತಿಗೆ ವಿರೋಧಕರವಾದ ಗುಣಗಳು ಕಂಡು ಬರುವವು. ಚಂದ್ರನು ಜನ್ಮಕಾಲ ದಲ್ಲಿ ಗುರುವಿನ ಶುಭ ಸಂಬಂಧದಲ್ಲಿದ್ದರೆ ಮಾಯಾಳು, ಔದಾರ್ಯ ಮೊದ ಲಾದ ಸದ್ಗುಣಗಳು ಕಂಡು ಬರುವವು. ಚಂದ್ರನು ಗುರುವಿನ ಅಶುಭ ಸಂಬಂಧದಲ್ಲಿದ್ದರೆ ಅವಡಂಬರ ಸ್ತೋಮ, ದಾನಧರ್ಮದ ಫಾಜೀಲಸ್ತೋಮ ಗಳು ಕಂಡು ಬರುವವು. ಬುಧ ಚಂದ್ರರ ಶುಭಾಶುಭಯೋಗಗಳಿಂದ ಮಾನ ವನ ಮಾನಸಿಕ ಸ್ಥಿತಿಯ ಚಿತ್ರವನ್ನು ಕಂಡು ಹಿಡಿಯುಬಹುದು.

ನೇಪಚ್ಯೂನ ಶುಭ ಸಂಬಂಧವಿದ್ದರೆ ಬುದ್ಧಿ ವೈಭವ, ಅಂತಃಪ್ರೇರಣೆ ಗಳು ಕಂಡು ಬರುವವು. ಅಶುಭ ಸಂಬಂಧವಿದ್ದರೆ ಹುಚ್ಚು, ಪಿಶಾಚಬಾಧೆ, ಮೊದಲಾದ ಅನಿಷ್ಟಗಳು ತೋರುವವು. ಹರ್ಶಲನ ಶುಭ ಸಂಬಂಧವಿದ್ದರೆ ಕಲ್ಪಕ, ಅಪೂರ್ವಕಲ್ಪನಾಶಕ್ತಿ, ಶೋಧಕ ಇತ್ಯಾದಿ ಗುಣಗಳು ಕಾಣುವವು. ಅಶುಭ ಸಂಬಂಧವಿದ್ದರೆ ಲಹರೀ, ತಿರಸಟ್ಟಿ, ಹಟ ಸ್ವಭಾವವಿರುವದು.

ಬುಧ ಚಂದ್ರರಿಗೆ ಶನಿಯು ಶುಭ ಸಂಬಂಧವಿದ್ದರೆ ಧೈರ್ಯ, ಚಿಕಾಟಿ, ಪ್ರಾಮಾಣಿಕತೆ, ವಿಶ್ವಾಸ, ನಿಷ್ಠೆಗಳು ಕಂಡು ಬರುವವು. ಅಶುಭ ಸಂಬಂಧ ವಿದ್ದರೆ ಕಾಪಟ್ಯ ಸಂಶಯಗಳು ಕಾಣಬರುವವು.

ಗುರುವಿನ ಶುಭ ಸಂಬಂಧದಿಂದ ಉಪಕಾರ, ಮಮತಾ, ದಯಾಲುತ್ವ, ಆನಂದೀ ಗುಣಗಳು ಇರುವವು. ಅಶುಭ ಸಂಬಂಧವಿದ್ದರೆ ಬಡಾಯಿ, ಫಾಜೀಲ ಆಶಾವಾದೀ, ಢೋಂಗು, ಅವಾಸ್ತವ ಖರ್ಚಿಕ ಗುಣಗಳು ತೋರಿ ಬರುವವು. ಮಂಗಳನ ಶುಭ ಸಂಬಂಧವಿದ್ದರೆ ಉತ್ಸಾಹ ಶಕ್ತಿ ಇರುವದಲ್ಲದೆ ವಿಧಾಯಕ ಕಾರ್ಯಕಾರಿ ಗುಣವಿರುವದು. ಅಶುಭ ಸಂಬಂಧವಿದ್ದರೆ ರಾಗ, ಕೋಪ, ವಿಧ್ವಂಸಕ, ವಿಚ್ಛೇದಕ ಮನೋವೃತ್ತಿಯು ಕಾಣಬರುವದು. ರವಿಯ ಶುಭ ಸಂಬಂಧವಿದ್ದರೆ ಮಾನಸನ್ಮಾನ ಸ್ವಾತಂತ್ರ್ಯ ವೃತ್ತಿಗಳು; ಅಶುಭ ಸಂಬಂಧವಿದ್ದರೆ ಗೊಳ್ಳು, ಡೌಲು, ದುರಭಿಮಾನಗಳು ಹುಟ್ಟಿಕೊಳ್ಳುವವು.

ಶುಕ್ರನ ಶುಭ ಸಂಬಂಧವಿದ್ದರೆ ಸೌಜನ್ಯಕತೆ ಇರುವದು. ಅಶುಭ ಸಂಬಂಧವಿದ್ದರೆ ಅವ್ಯವಸ್ಥೆ, ಭೋಗಾಸಕ್ತಿ, ವಿಷಯಾಸಕ್ತಿಗಳು ತಲೆದೋರುವವು.

ಬುಧನು ಚಂದ್ರನೊಡನೆ ಶುಭ ಸಂಬಂಧವಿದ್ದರೆ ಕೌಶಲ್ಯ, ಚಾತುರ್ಯ, ಶೋಧಕ ಬುದ್ಧಿ, ದಕ್ಷತೆ, ಯೋಜಕತೆಗಳಿರುವವು. ಅಶುಭ ಸಂಬಂಧವಿದ್ದರೆ ಫಾಜಿಲ ಚೌಕಸಿ, ಫಾಜೀಲ ಜಿಜ್ಞಾಸು ಮಾಡುವದು; ಲುಡುಬುಡು ಮಾಡುವ ಸ್ವಭಾವವಿರುವದು.

ಪರಮುಧ್ಯೇಯವಾದಿತ್ವ ಕಲ್ಪನಾಶಕ್ತಿಗಳು ಚಂದ್ರ ಗುರುಗಳ ಶುಭ ಸಂಬಂಧದ ಶ್ರೇಷ್ಠ ಗುಣಗಳು. ಅಸ್ಥಿರತೆ ಚಾಂಚಲ್ಯಗಳು ಅವರ ಅಶುಭ ಸಂಬಂಧದ ಅವಗುಣಗಳು.

ಮಾನವನ ಶೀಲ

Character is Destiny

ಮಾನವನ ಶೀಲವನ್ನು ವಿಚಾರಿಸುವಾಗ ರವಿ, ಚಂದ್ರ, ಲಗ್ನದಲ್ಲಿ ಉದಿತವಾದ ರಾಶಿ, ಅದರ ಅಧಿಪರ ವಿಚಾರವನ್ನು ಮಾಡಬೇಕು. ಉಳಿದ ಗ್ರಹಗಳ ಪರಿಣಾಮವೂ ಮಾನವನ ಮೇಲೆ ಅಲ್ಪಪ್ರಮಾಣದಿಂದ ಉಂಟಾಗುವದು. ಲಗ್ನದಲ್ಲಿ ಉದಿತವಾದ ರಾಶಿ ಅವನ ದೃಶ್ಯವನ್ನು ತೋರುವದು. ಅವನ ಶೀಲವೂ ಅದರಲ್ಲಿ ಅಡಕವಾಗಿರುವದು. ಚಂದ್ರನು ವ್ಯಕ್ತಿಮತ್ವವನ್ನು ತೋರುವನು. ರವಿಯು ಅಂತರ್ಗತ ಅವನ ಗೂಢ ಸ್ವಭಾವ ದರ್ಶಕನು. ಚಂದ್ರನಿಗಿಂತ ರವಿಯು ಬಲಿಷ್ಠನಾಗಿದ್ದರೆ ಅವನ ತೋರಿಕೆಗಿಂತ ಅಂತರ್ಗತ ಸ್ವಭಾವವು ಗಂಭೀರವಾಗಿರುವದು. ಲಗ್ನವು ಬಲಿಷ್ಠವಾಗಿದ್ದು ರವಿ ದುರ್ಬಲನಾಗಿದ್ದರೆ ತಾನು ಆರಂಭಿಸಿದ ಕಾರ್ಯಗಳನ್ನು ಮುಗಿಸುವ ಅಂತರ್ಗತ ಶಕ್ತಿ ಇರುವದಿಲ್ಲ. ರವಿ ಬಲಶಾಲಿಯಾಗಿ ಲಗ್ನ ಅಶಕ್ತವಿದ್ದರೆ ಹಂಚಿಕೆಗಳನ್ನು ಅಮಲಿನಲ್ಲಿ ತರುವ ಶರೀರ ಬಲವಿರುವದಿಲ್ಲ. ಬಹುಸಂಖ್ಯಾಕ ಗ್ರಹಗಳು ಯಾವ ಗುಣಧರ್ಮದ ರಾಶಿಯಲ್ಲಿರುವವೋ ಅವು ಶೀಲದ ಮೇಲೆ ಪರಿಣಾಮವನ್ನುಂಟುಮಾಡುವವು. ಚರರಾಶಿಗಳು ಚಾಪಲ್ಯ ಉತ್ಸಾಹ ಮಹತ್ವಾಕಾಂಕ್ಷೆ ಕೀರ್ತಿ ಪ್ರೇಮ, ಅವಿಶ್ರಾಂತಿಯನ್ನು ಕೊಡುವವು. ಸ್ಥಿರರಾಶಿಗಳು ಸ್ಥೈರ್ಯ, ಹಟ, ಆಗ್ರಹ, ಇಚ್ಛಾಶಕ್ತಿ, ಸಂಘಟನಾಶಕ್ತಿ, ತಾಳ್ಮೆ, ಪುರಾಣ ಪ್ರೀತಿ ದ್ಯೋತಕವಾಗಿವೆ. ದ್ವಿಸ್ವಭಾವಿ ರಾಶಿಗಳು ಬುದ್ಧಿಶಕ್ತಿಯನ್ನು ಕೊಡುವವು. ವೈವಿಧ್ಯ, ಅನಿಶ್ಚಯ, ಭಯ, ದಣುವಿಕೆ ದ್ವೈದೀಭಾವ, ಹೊಂದಿಕೊಂಡು ಹೋಗುವದು ಮೊದಲಾದ ಗುಣಗಳೂ ಕಾಣುವವು. ಕೆಲವು ಸಾರೆ ವಂಚನೆಗೆ ಕಾರಣವಾಗುವದು.

ಅಗ್ನಿರಾಶಿಗಳು ಉತ್ಸಾಹ, ಕಾರ್ಯಕಾರಿತ್ವ, ಬುದ್ಧಿ ಮತ್ತೆ ಅಚ್ಚುಕಟ್ಟುತನ ಪ್ರೇರಣೆಗಳನ್ನು ತೋರುವವು. ಪೃಥ್ವೀರಾಶಿಗಳು ವ್ಯಾವಹಾರಿಕ ರಸ್ಕ, ಗಟ್ಟಿಗರನ್ನು ಸಂಸಾರಾಸಕ್ತಿಯುಳ್ಳವರನ್ನು ಹುಟ್ಟಿಸುವವು. ವಾಯು

ರಾಶಿಗಳು ಮಾನಸಿಕರು ಆದರ್ಶವಾದಿಗಳನ್ನು ತೋರಿಸುವವು. ಜಲರಾಶಿಯಲ್ಲಿ ಹುಟ್ಟಿದವರು ಭಾವನಾತ್ಮಕರು ಕಲ್ಪಕರು ಪರಿವರ್ತನ ಶೀಲರು ಇರುವರು.

ಶುಕ್ರ ಬುಧರು ಪೀಡಿತರಿದ್ದರೆ ಕೆಲವು ಸಲ ವ್ಯಸನಿ ಇರುವದು ಕಂಡು ಬರುವದು. ರಾಶಿ, ದೃಷ್ಟಿಗಳಿಂದ ಸಾಮಾನ್ಯ ಮಾದರಿ ಕಂಡು ಬರುವದು. ಶುಭದೃಷ್ಟಿ ಅನುಗ್ರಾಹಕ; ಅಶುಭ ದೃಷ್ಟಿ ಶೀಲವನ್ನು ಕಿಡಿಸುವವು.

ರವಿಯು ಗೌರವಾನ್ವಿತರನ್ನು, ಅಭಿಮಾನಿಗಳನ್ನು ವಿಶ್ವಾಸಿಗಳನ್ನು ಮಯರ್ಯಾದ ಶೀಲರನ್ನು ಹುಟ್ಟಿಸುವನು; ಪೀಡಿತನಿದ್ದರೆ ಅಹಂಕಾರಿಯಾಗುವರು.

ಚಂದ್ರನು ಮಹತ್ವಾಕಾಂಕ್ಷಿ, ಪರಿವರ್ತನ ಶೀಲ. ಕಲ್ಪಕ, ಸತ್ಯಪ್ರಿಯ ಭಾವನಾತ್ಮಕ ಜನರನ್ನು ಹುಟ್ಟಿಸುವನು. ಆತನು ಮೇಷದಲ್ಲಿ ಉದಿತನಾಗಿ ಬುಧನಿಂದ ಪೀಡಿತನಾಗಿದ್ದರೆ ಸುಳ್ಳುಗಾರನಾಗುವನು.

ಬುಧನು ಚಪಲರನ್ನು. ಕಾರ್ಯಾಸಕ್ತಿಯುಳ್ಳವರನ್ನು ಜಾಣರನ್ನು ಚುರುಕು ಬುದ್ಧಿಯವರನ್ನು ಮಾತುಗಾರರನ್ನು ಮಾಡುವನು. ಗ್ರಹದೃಷ್ಟಿಯಂತೆ ಹೋಗುವನು. ಚಂದ್ರ ಬುಧ ಯೋಗವು ಭಾಷಾ ಪ್ರಾವೀಣ್ಯವನ್ನು ಕೊಡುವದು. ಮಂಗಳನಿಂದ ಪೀಡಿತನಿದ್ದರೆ ತೀವ್ರ ಬುದ್ಧಿ, ಕಲಹಪ್ರಿಯ, ಬಯ್ಗುಳ ಪ್ರಿಯರಿರುವರು. ಮೀನದಲ್ಲಿ ಬುಧನಿದ್ದು ಮಂಗಳ ರವಿಯಿಂದ ಪೀಡಿತನಿದ್ದರೆ ಹುಚ್ಚು ವಿಚಾರಗಳಿರುವವು. ಗುರುವಿನ ದೃಷ್ಟಿ ಇದ್ದರೆ ಒಳ್ಳೇ ನ್ಯಾಯ ನಿರ್ಣಯಿಕನಿರುವನು. ಗುರುವಿನ ಅಶುಭದೃಷ್ಟಿ ಇದ್ದರೆ ಕಪಟ; ವಂಚಕನಿರುವನು. ಬುಧ ಶನಿ ಯುತಿ ಗಾಂಭೀರ್ಯವನ್ನು ಕೊಡುವದು. ಚಂದ್ರನ ಪ್ರತಿಯೋಗವು ಕೇಂದ್ರದಲ್ಲಾದರೆ ಮೂರ್ಖನಿರುವನು. ವಕ್ರಿ-ಅಸ್ತಂಗತನಾಗಿ ೬, ೮, ೧೨ರಲ್ಲಿ ವೃಷಭ ಮಕರದಲ್ಲಿದ್ದರೆ, ಚಂದ್ರನು ಲಗ್ನಾಧಿಪತಿಯನ್ನು ನೋಡದಿದ್ದರೆ ಒರಟು ಬುದ್ಧಿಯಿರುವದು.

ಶುಕ್ರನು ಕಲಾಜ್ಞ, ಪ್ರೇಮ, ಸಾಮಾಜಿಕ, ಶಾಂತ ಕೋಮಲ ಶೀಲವನ್ನು ಹುಟ್ಟಿಸುವನು. ಅಚ್ಚುಕಟ್ಟಿತನ ಸೊಗಸುಗಾರಿಕೆಗಳು ಕಂಡು

ಬರುವವು. ವಿಲಾಸ ಪ್ರೇಮಿಗಳಾಗುವರು. ಸುಗಂಧ ಪ್ರದಾರ್ಥಗ
ಅಲಂಕಾರಗಳನ್ನು ಪ್ರೀತಿಸುವರು. ಶನಿ ಶುಕ್ರರ ಅಶುಭಯೋಗವು ಉ
ಶೀನರನ್ನಾಗಿ ಮಾಡುವದು. ಶುಕ್ರ ಮಂಗಳರ ಅಶುಭಯೋಗವು ವಿಷ
ಸಕ್ತರನ್ನಾಗ ಮಾಡುವದು.

ಮಂಗಳನು ಧೈರ್ಯ ಶಾಲಿಗಳನ್ನು ಹುಟ್ಟಿಸುವನು. ವಿ
ಖಂಡಿತವಾದಿ, ಕಾರ್ಯಕಾರಿ, ಉತ್ಸಾಹಿ ಜನರು ಶುಭ ಸಂಬಂಧಿತ ಮಂ
ಅಮಲಿನಲ್ಲಿ ಹುಟ್ಟುವರು. ಆಕ್ರಮಣಕಾರ, ವಿಧ್ವಂಸಕ, ಅಭಿವ
ವಿಕಾರಾಧೀನ, ಅತಿ ಖರ್ಚಿಕ ಶೀಲಗಳೂ ಮಂಗಳನ ಸ್ವಭಾವವು. ಕ
ಮಂಗಳ ಶನಿಗಳಿಂದ ಪೀಡಿತನಿದ್ದರೆ ಅನಿಯಂತ್ರಿತ ಸ್ವಭಾವವಿರು
ಕನ್ಯಾದಲ್ಲಿ ಉದಿತನಿದ್ದರೆ ಅಸಹ್ಯ ವಂಚನೆಗಳಿರುವವು.

ಗುರು ಗೌರವಾನ್ವಿತರನ್ನು, ಉಲ್ಲಾಸಿಗಳನ್ನು, ಪರೋಪ
ಸಹಾನುಭೂತಿಯುಳ್ಳವರನ್ನಾಗಿ ಮಾಡುವನು. ಉಳ್ಳವರು ಉದಾ
ಇರುವರು. ಪೀಡಿತನಿದ್ದರೆ (ಗುರು) ಪೀಡಿಸುವ ಗ್ರಹದ ಗುಣಧರ್ಮ
ಗುಣಗಳಿರುವವು. ಮಂಗಳನಿಂದ ಪೀಡಿತನಿದ್ದರೆ ಅಹಂಕಾರಿ, ಧಾ
ಡೌಲು, ಆಡಂಬರ, ಧರ್ಮದ ಉತ್ಸಾಹ ಇತ್ಯಾದಿ ಗುಣಗಳಿರುವವು.
ಯಿಂದ ಪೀಡಿತನಿದ್ದರೆ ಸಹಾನುಭೂತಿ ಶೂನ್ಯನಿರುವನು. ಧನು,
ದಲ್ಲಿ ಪೀಡಿತನಿದ್ದರೆ ಧಾರ್ಮಿಕ ವೇಷಧಾರಿ ಇರುವರು.

ಶನಿಯು ಗುಣಧರ್ಮಗಳು ಮಿತವ್ಯಯಿ, ವಿವೇಕಿ, ವ
ನೈಪುಣ್ಯ, ಸಂಶಯಿ, ಕಾಯ್ದಿಟ್ಟುಕೊಳ್ಳುವ ಸ್ವಭಾವಗಳಾಗಿರುವವು.
ವೃತ್ತಿ ಕಠೋರ ಪಣ, ಉದ್ಯೋಗಿ ವಿಚಾರಿ, ಉದಾಶೀನ ಭಾವಗಳು
ಯಿಂದ ತೋರಿಬರುವವು. ೩ರಲ್ಲಿ ಶನಿಯು ಪೀಡಿತನಿದ್ದರೆ
ಉನ್ಮಾದೀ ಇರುವನು. ಚಂದ್ರ ಶನಿಯುತಿ ಪೃಥ್ವಿರಾಶಿಯಲ್ಲಾದರೆ
ಆಗುವನು. ಶನಿಯು ಗುರುವಿನಿಂದ ಪೀಡಿತನಿದ್ದರೆ ಕಾಪಟ್ಯ
ವದು. ಮಂಗಳನಿಂದ ಪೀಡಿತನಿದ್ದರೆ ಅತ್ಯಾಚಾರ ಅನಾಚಾರಗಳು
ಸುವವು. ಬುಧನಿಂದ ಪೀಡಿತನಾದರೆ ಅಪ್ರಾಮಾಣಿಕತೆ ತೋರ

ಶನಿಯು ಶುಕ್ರನಿಂದ ಪೀಡಿತನಾದರೆ ಪ್ರೇಮ ಶೂನ್ಯತೆ. ಮಂಗಳನಿಂದ ಬುಧನಿಂದ ಪೀಡಿತನಾದರೆ ಉತ್ಸಾಹಿ ಅಥವಾ ಉನ್ಮಾದಿಯಾಗುವನು. ಸೂರ್ಯ ಚಂದ್ರನಿಂದ ಪೀಡಿತನಿದ್ದರೆ ಅತೃಪ್ತಿ ತೋರುವದು.

ಹರ್ಶಲ:— ಸಂಶೋಧಕ ವೃತ್ತಿ, ವಿಚಿತ್ರ ಅದ್ಭುತ ಆಕಸ್ಮಿಕತೆಗಳು ಹರ್ಶಲನ ಗುಣಧರ್ಮಗಳು. ಹರ್ಶಲನಿಂದ ಸ್ವತಂತ್ರ ಕಲ್ಪಕ ಸ್ವಭಾವವು ತೋರುವದು. ಗೂಢ ವಿದ್ಯಾಪ್ರೇಮ, ಪುರಾಣ ವಿದ್ಯಾಪ್ರೇಮ, ವಿದ್ಯುತ್ ಯಂತ್ರಗಳಲ್ಲಿ ಅಭಿರುಚಿಗಳು ಹರ್ಶಲನಿಂದ ಬರುವವು.

ನೇಪಚ್ಯೂನ — ನೇಪಚ್ಯೂನನು ಮಾನಸಿಕ ಶಕ್ತಿಯನ್ನು ವಿಕಾಸ ಪಡಿಸುವನು. ಸಂಗೀತ ಪ್ರೇಮ, ತಂತುವಾದ್ಯ ಪ್ರೀತಿ, ಮಧ್ಯಸ್ಥಿಕೆ ವಹಿಸುವ ಸ್ವಭಾವಗಳು ಕಂಡು ಬರುವವು.

ಇವು ಗ್ರಹಗಳ ಗುಣಧರ್ಮಗಳು. ಇನ್ನು ರಾಶಿಯ ಗುಣಧರ್ಮಗಳೂ ಮಾನವನ ಶೀಲ ಸ್ವಭಾವದಲ್ಲಿ ಕಂಡು ಬರುವವು. ಅವುಗಳನ್ನು ವಿಚಾರಿಸುವಾ:—

ಮೇಷ: — ಸಾರಲ್ಯ, ಸ್ಫುಟವಾದಿತ್ವ, ಪ್ರೇರಕ, ಶೂರ, ಪರಿವೆ ಇಲ್ಲದಿರುವಿಕೆ; ಇತ್ಯಾದಿ ಗುಣಗಳಿರುವವು. ಉದಾರನಾದರೂ ಸ್ವಾರ್ಥಿ, ಅತಿವ್ಯಯಿ, ಜಗಳಗಂಟ, ವಿಧ್ವಂಸಕ ಮಹತ್ವಾಕಾಂಕ್ಷಿ, ಮಾರ್ಗಪರಿಶೋಧಕ, ಮತ್ಸರಿ, ಸ್ವತಂತ್ರ, ಅಕ್ರಮಣಕಾರ, ಜಾಣ, ಬುದ್ಧಿವಂತ, ಪರಿವರ್ತನ ಶೀಲ, ಚಂಚಲ, ಅತಿಶಯೋಕ್ತಿ ಪ್ರಿಯ, ರಾಜಕಾರಣ ಪ್ರಿಯನಾಗಿರುವನು. ಅಂಥವರು ತಮ್ಮ ತಪ್ಪುಗಳನ್ನು ಕೇಳಿಕೊಳ್ಳಲಿಕ್ಕೆ ಇಷ್ಟಪಡುವದಿಲ್ಲ. ಮೇಷವು ಉದಿತವಿದ್ದು ಲಗ್ನದಲ್ಲಿ ನೇಪಚ್ಯೂನನಿದ್ದರೆ ಕಲ್ಪಕ, ಕವಿತ್ವಪ್ರಿಯ, ಹಂಚಿಕೆ ಹಾಕುವವರಿರುವರು. ಹರ್ಶಲನಿದ್ದರೆ ಒರಟು, ಶೋಧಕ, ಉದ್ಯೋಗಿ ಇರುವನು. ಶನಿ ಇದ್ದರೆ ಉದ್ಯೋಗಿ, ವಂಚಕ. ಗುರು ಇದ್ದರೆ ಉತ್ಸಾಹಿ ಆಶಾವಾದಿ, ನ್ಯಾಯಿ. ಮಂಗಳನಿದ್ದರೆ ವಿಧಾಯಕ ಕಾರ್ಯಕಾರಿ, ಆದರ್ಶವಾದಿ, ವಾದ-ವಿವಾದ ಮಾಡುವವ, ಬೇಗ ಸಿಟ್ಟಿಗೆ ಬರುವವನಾಗಿರುವನು. ರವಿ ಇದ್ದರೆ ಆತ್ಮವಿಶ್ವಾಸಿ, ಆಜ್ಞೆ ಕೊಡುವವ,

ಅವಸರದವ, ಸ್ವತಂತ್ರ ವೃತ್ತಿಯವನಿರುವನು. ಬುಧನಿದ್ದರೆ ಚಪಲ, ಭಾವನಾತ್ಮಕ, ಕಲಹಪ್ರಿಯ, ಜಿಪುಣನಾಗಿರುವನು. ಚಂದ್ರನಿದ್ದರೆ ಉತ್ಸಾಹಿ, ಸಿಟ್ಟಿಗೆ ಬರುವವನು, ಸೂಕ್ಷ್ಮಬುದ್ಧಿಯವನಿರುವನು. ಅವನು ಆಜ್ಞಾ-ಧಾರಕನೂ ಆಗಿರುವದಿಲ್ಲ, ಸಂಪ್ರದಾಯ ಪ್ರಿಯನೂ ಇರುವದಿಲ್ಲ.

ವೃಷಭ:— ವೃಷಭ ರಾಶಿಯ ಲಗ್ನದಲ್ಲಿ ಹುಟ್ಟಿದವರು ಹಟ, ಆಗ್ರಹಿ ಪ್ರಬಲ ಇಚ್ಛಾಶಕ್ತಿಯುಳ್ಳವರಿರುವರು. ಬೇಗ ಸಿಟ್ಟಿಗೆ ಬರುವದಿಲ್ಲ. ಕ್ಷಮೆಯನ್ನು ಬೇಗ ಮಾಡರು. ಪಾಪಗ್ರಹ ಸ್ಪರ್ಶವಿದ್ದರೆ ಕೋಪಿ ಸ್ವಾರ್ಥಿ ಇರುವರು. ಪ್ರಬಲ ಮನೋವಿಕಾರಗಳಿಗೊಳಗಾಗುವರು; ಸಿಟ್ಟಿಗೆದ್ದರೆ ಅತ್ಯಾಚಾರಕ್ಕೆಳಸುವರು. ತಾಳ್ಮೆ, ಸಹಿಷ್ಣುತೆಗಳು ಹೆಚ್ಚಾಗಿ ಕಂಡು ಬರುವವು. ಕಾಳಜಿ, ಅಚ್ಚುಕಟ್ಟುತನಗಳು ಕಂಡು ಬರುವವು. ಸೌಲಭ್ಯದಿಂದ ಒಳ್ಳೇ ಜೀವನದ ಪ್ರಿಯರು. ವಿಷಯಾಭಿಲಾಷಿ, ಆಕರ್ಷಕರಾಗಿರುವರು. ಕಾದಿಟ್ಟುಕೊಳ್ಳುವ ಸ್ವಭಾವವಿರುವದು. ಭಕ್ತಿವಾನ್ ನಿಷ್ಠೆಯುಳ್ಳವನಿರುವನು. ರಸಿಕತೆ ಇರುವದು. ಉತ್ತಮ ಸ್ಮರಣಶಕ್ತಿ ಇರುವದು. ಶಾಸ್ತ್ರ, ಒಕ್ಕಲುತನ ಪ್ರಿಯತೆಗಳಿರುವವು. ಇಲ್ಲಿ ವರುಣನಿದ್ದರೆ ಕಲಾಪ್ರಿಯ ಸಂಗೀತ ಪ್ರಿಯರಿರುವರು. ಹರ್ಶಲನಿದ್ದರೆ ನಿಶ್ಚಯಿ, ಗೂಢ ವಿದ್ಯಾಪ್ರೇಮವಿರುವದು. ಶನಿ ಇದ್ದರೆ ಅರ್ಥಶಾಸ್ತ್ರ ಪ್ರಿಯರಿರುವರು, ಮಿತವ್ಯಯಿಯಾಗಿರುವರು. ಏಕಾಂತ ಪ್ರಿಯರೂ ಸಿಡುಕಿನವರೂ ಆಗಿರುವರು. ರಾಯಭಾರವು ಸೇರುವದು. ಗುರು ಇದ್ದರೆ ಶಾಂತ, ಗೌರವಾನ್ವಿತ, ದಯಾಳು ಇರುವರು. ಮಂಗಳನಿದ್ದರೆ ಧೈರ್ಯಶಾಲಿ, ಅಭಿಮಾನಿ, ಗೂಢ ಇರುವರು. ರವಿ ಇದ್ದರೆ ಅತಿಶಯಿತ ಆತ್ಮವಿಶ್ವಾಸಿ, ಸತ್ತಾಪ್ರಿಯ (ಬಲುಮೆಯ) ನಿರುವನಲ್ಲದೆ ಬೆಚ್ಚಗಿನ ಹೃದಯವಿರುವದು. ಶುಕ್ರನಿದ್ದರೆ ಬಲಶಾಲಿ, ಗಂಭೀರ ಭಾವನೆಗಳುಳ್ಳ, ದಯಾಳು ಇರುವರು. ಬುಧನಿದ್ದರೆ ವ್ಯಾವಹಾರಿಕ, ಆಗ್ರಹಿ, ರುಚಿ ಅಭಿರುಚಿಗಳ ಬಗೆಗೆ ನಿಶ್ಚಯವಾದಿ ಇರುವರು. ಚಂದ್ರನಿದ್ದರೆ ಶಾಂತ, ಆಶಾವಾದಿ, ಹಿಡಿದಿಟ್ಟುಕೊಳ್ಳುವ ಸ್ವಭಾವದವನಿರುವನು.

ಮಿಥುನ:— ಮಿಥುನ ರಾಶಿಯ ಲಗ್ನವಿರುವವರಲ್ಲಿ ಸಡಿಲು, ಶೀಘ್ರಕೋಪ, ಬೇಗನೆ ದಣಿಯುವ, ಎರಡೂ ಪಾರ್ಶ್ವಗಳನ್ನು ನೋಡುವ ಸ್ವಭಾವ

ವಿರುವದು. ಪರಿವರ್ತನ ಶೀಲರು, ಜಾಣ, ಶೋಧಕರು ಜ್ಞಾನತೃಷ್ಣೆಯುಳ್ಳವರು, ಬುದ್ಧಿವಂತರು, ತನಗಾಗಿ ಎಲ್ಲವನ್ನೂ ತಿಳಿದುಕೊಳ್ಳುವ ಸ್ವಭಾವದವರು ಮಿಥುನ ಲಗ್ನದಲ್ಲಿ ಹುಟ್ಟುವರು. ತೇಜಸ್ವಿಗಳು, ವಿನೋದ ಪ್ರಿಯರು, ಶ್ಲೇಷ ಪ್ರಿಯರು, ಸಂಶಯ ವಾದಿ, ಹಂಚಿಕೆ ಹಾಕುವವ, ಯೋಜನಾ ಪ್ರಿಯರೂ ಇರುವರು. ಗಣಿತ ಶಾಸ್ತ್ರ, ಮೊದಲಾದವುಗಳಲ್ಲಿ ಪ್ರೀತಿ ಇರುವದು. ನೇಪಚ್ಯೂನನಿದ್ದರೆ ಗೌರವಾನ್ವಿತರು, ಕವಿತ್ವ ಪ್ರಿಯರಿರುವರು. ಹರ್ಶಲನಿದ್ದರೆ ಗೂಢ ಶಾಸ್ತ್ರ ಪ್ರೇಮವಿರುವದು. ಶನಿ ಇದ್ದರೆ ಶಾಸ್ತ್ರ ಪ್ರೇಮವಿರುವದು; ನಿರೀಕ್ಷಕರಾಗುವರು. ಕೆಲವು ಸಾರೆ ಆತ್ಮವಂಚನೆಗೊಳಗಾಗುವರು. ಗುರು ಇದ್ದರೆ ವಿವರಣೆಗಳನ್ನು ತಿಳಿದುಕೊಳ್ಳಲು ಲವಲವಿಕೆಯಿರುವದು. ಸಾಹಿತ್ಯ ಪ್ರೀತಿ ಇರುವದು. ಮಂಗಳನಿದ್ದರೆ ತೀವ್ರ, ಕಪಟ, ಜಾಣ, ಕಠೋರರಿರುವರು. ರವಿ ಇದ್ದರೆ ಮಹತ್ವಾಕಾಂಕ್ಷಿ ಅಭ್ಯಾಸಿ ವ್ಯವಸ್ಥಾಪ್ರಿಯರಿರುವರು. ಶುಕ್ರನು ಒಳ್ಳೇ ಸಹಾನುಭೂತಿ ಪರರನ್ನಾಗಿ ಮಾಡುವನು. ಬುಧನು ಮುತ್ಸದ್ಧಿಗಳನ್ನು ಶಾಸ್ತ್ರಜ್ಞರನ್ನು ಜಾಣರನ್ನು ಹುಟ್ಟಿಸುವನು. ಚಂದ್ರನಿದ್ದರೆ ಗುಪ್ತ ಬುದ್ಧಿವಂತಿಕೆ ಇರುವದು.

ಕರ್ಕ:— ಶಾಂತ ಕಾದಿಟ್ಟ, ತೀವ್ರ ಸ್ವಭಾವವು ಕರ್ಕಲಗ್ನದಲ್ಲಿ ಹುಟ್ಟದವರಲ್ಲಿ ಕಾಣುವವು. ತಾಳ್ಮೆ ಕಡಿಮೆ ಇರುವದು. ಉತ್ತಮ ಕಲ್ಪನಾ ಶಕ್ತಿಯಿರುವದು. ಸುಖಾಭಿಲಾಷಿ, ತನ್ನ ಕಾರ್ಯಗಳು ಆಕರ್ಷಕವಾಗಿ ತೋರಬೇಕೆಂಬ ಅಭಿಲಾಷೆಯುಳ್ಳವರು, ಭಾವನಾಪ್ರಧಾನರು ಇರುವರು. ಮನಸ್ಸು ಕೋಮಲವಿರುವದು. ಸಿಟ್ಟಗೆದ್ದರೂ ಹೊಂದಿಕೊಂಡು ಹೋಗುವ ಸ್ವಭಾವವಿರುವದು. ಅತ್ಯಂತ ಸಹಾನುಭೂತಿ ಪರರಿರುವರು. ವಿಮರ್ಶಕ ಬುದ್ಧಿ ಇರುವದು. ಕೆಲವು ಸಾರೆ ಔದಾಶೀನ್ಯ ತೋರುವದು.

ವರುಣನಿದ್ದರೆ ಕಲ್ಪಕರಿರುವರು. ಕೆಲವು ಸಲ ಚಾಂಚಲ್ಯ ತೋರುವದು. ಬುದ್ಧಿವಂತರಿರುವರು. ಹರ್ಶಲನಿದ್ದರೆ ವೈಚಿತ್ರ್ಯವು ತೋರುವದಲ್ಲದೆ ವಿಶ್ರಾಂತಿ ಇಲ್ಲದಿರುವ ಸ್ವಭಾವವು ಕಾಣುವದು. ಶನಿ ಇದ್ದರೆ ಉರಿ ಮೋಶಿ ಅತೃಪ್ತಿಗಳು ಕಾಣುವವು. ಗುರು ಇದ್ದರೆ ಲೋಕಪ್ರಿಯರು, ಸಾಹಸಿ

ಗಳು ಇರುವರು. ಮಂಗಳನಿದ್ದರೆ ಮಹತ್ವಾಕಾಂಕ್ಷಿ, ಉದ್ಯೋಗಿ, ಅನಿಯಂತ್ರಿತರು. ಸಿಟ್ಟಿನವರು ಆಗಿರುವರು. ರವಿ ಇದ್ದರೆ ಚೈನಿ ವಿಲಾಸಿ ಸುಲಭ ದಾರಿ ಹುಡುಕುವವರು ಆಗಿರುವರು. ಶುಕ್ರನಿದ್ದರೆ ಅರ್ಥಶಾಸ್ತ್ರ ಪ್ರಿಯರಿರುವರಲ್ಲದೆ ಚಂಚಲತೆಯು ತೋರಿಬರುವದು. ಬುಧನಿದ್ದರೆ ವಿವೇಕ ಚಂಚಲತೆಗಳಿರುವವು. ಚಂದ್ರನಿದ್ದರೆ ಸೌಲಭ್ಯ ಸೊಗಸುಗಳು ಬೇಕು. ಭಾವನಾ ಪ್ರಿಯ ದಾತಾ ಇರುವರು. ಬೇಗನೆ ಪರಿಸ್ಥಿತಿಯ ಪರಿಣಾಮವನ್ನು ಮಾಡಿಕೊಳ್ಳುವರು.

ಸಿಂಹ:— ಸಿಂಹ ರಾಶಿಯು ಲಗ್ನವಿರುವವರಲ್ಲಿ ಸಾರಲ್ಯ, ತೆರೆದಿಡುವ ಸ್ವಭಾವಗಳು ದೃಗ್ಗೋಚರವಾಗುವವು. ವಿಶ್ವಾಸಿ ಇರುವರು. ಕ್ಷುಲ್ಲಕ ಮನೋವೃತ್ತಿಯು ಅವರಿಗೆ ಸೇರದು. ಕೆಲಮಟ್ಟಿಗೆ ಕಾದಿಟ್ಟುಕೊಳ್ಳುವರು; ಎಲ್ಲವನ್ನೂ ಬಿಚ್ಚಿ ಇಡುವದಿಲ್ಲ. ಯಾಜಮಾನ್ಯರಿರುವರು. ಉದಾರರು, ಬೇಗ ಸಿಟ್ಟಿಗೆ ಬರುವವರು, ಸ್ಥಿರರು ಆಗ್ರಹದ ಅಭಿಪ್ರಾಯಗಳುಳ್ಳವರು ಇರುವರು. ಕವಿತ್ವ ನಾಟಕಗಳ ಪ್ರೇಮವಿರುವದು, ಶೂರರಿರುವರು. ಆದರೂ ಅನೇಕ ಸಾರೆ ಪ್ರದರ್ಶನ ಪ್ರಿಯರಿರುವರು. ಸೂರ್ಯಪ್ರಕಾಶದ ಪ್ರೇಮ, ತೇಜಸ್ವಿ ಪದಾರ್ಥಗಳ ರುಚಿ, ಬಂಗಾರ, ಹಿತ್ತಾಳೆಗಳ ಮೋಹ. ಬಣ್ಣಗಳ ಮೋಹವಿರುವವು. ಉಪದೇಶ ಕೊಡಲು ಆತುರ ಪಡುವರು. ನೇಪಚ್ಯೂನನಿದ್ದರೆ ಕಲ್ಪಕರಿರುವರು. ಹರ್ಶಲನಿದ್ದರೆ ಸ್ವತಂತ್ರ ಪ್ರಿಯರಿರುವರು. ಶನಿ ಇದ್ದರೆ ಮಹಾತ್ವಾಕಾಂಕ್ಷಿ, ನಿಶ್ಚಯಿ, ಜಾಗರೂಕರಿರುವರು. ಪಾಶ್ಚಾತ್ಯ ಜ್ಯೋತಿರ್ವಿದರಾದ **ಲೀವೋ** ಇವರ ಲಗ್ನ ಸಿಂಹ. ಲಗ್ನದಲ್ಲಿ ಶನಿ ಇದ್ದನು. ಗುರು ಇದ್ದರೆ ಅಭಿಮಾನಿ, ಗೌರವಾನ್ವಿತರಿರುವರು. ಮಂಗಳನಿದ್ದರೆ ಆಜ್ಞಾದಾನ ಪ್ರಿಯರು; ವಾದ–ವಿವಾದ ಪ್ರಿಯರು. ಉದಾರ, ಧೈರ್ಯಶಾಲಿ ಭಾವನಾತ್ಮಕರಿರುವರು. ಸೂರ್ಯನಿದ್ದರೆ ನ್ಯಾಯಿ. ಮರ್ಯಾದೆಯುಳ್ಳವರಿರುವರು. ಶುಕ್ರನಿದ್ದರೆ ಕಲ್ಪನಾಪ್ರಿಯ, ಅತಿವ್ಯಯಿ, ಪ್ರದರ್ಶನ ಪ್ರಿಯ, ಲೋಕಪ್ರಿಯ. ಬುಧನಿದ್ದರೆ ವಿಶಾಲದೃಷ್ಟಿ, ಹಟ ಇರುವರು. ಚಂದ್ರನಿದ್ದರೆ ಗೌರವ, ಉತ್ಸಾಹಿ, ಕಲಾಬಲ್ಲವ, ಮಹತ್ವಾಕಾಂಕ್ಷಿ, ವಿಲಾಸ ಪ್ರಿಯ, ಪ್ರದರ್ಶನ ಪ್ರಿಯರಿರುವರು.

ಕನ್ಯಾ:— ಕನ್ಯಾಲಗ್ನದಲ್ಲಿ ಹುಟ್ಟಿದವರು ಶಾಂತರು, ವ್ಯಾವಹಾರಿಕರು ಇರುವರು. ಅವರಲ್ಲಿ ಪೃಥಕ್ಕರಿಸುವ ಶಕ್ತಿ ಇರುವದು. ವಿಮರ್ಶಕರಿರುವರು. ಕೆಲವು ಸಲ ವಿಧ್ವಂಸಕವಾಗಿಯೂ ವಿಮರ್ಶೆಮಾಡುವರು. ಕ್ಷುಲ್ಲಕ ಸಂಗತಿಗಳ ಬಗೆಗೆ ವಿಚಾರ ಮಾಡಿ ದಣಿಯುವರು. ಸಭ್ಯ, ನಿವೃತ್ತಿಪ್ರಿಯ, ಬುದ್ಧಿವಾನ್, ಗಟ್ಟಿಮುಟ್ಟಾದ ಅಭಿಪ್ರಾಯಗಳುಳ್ಳವರಿರುವರು. ವಿಶ್ವಾಸಿ, ಕಲಾಬಲ್ಲವ, ಸಾಹಿತ್ಯಜ್ಞ, ಸಂಗ್ರಹ ಪ್ರಿಯ, ಉತ್ತಮ ಸ್ಮರಣ ಶಕ್ತಿಯುಳ್ಳವರು, ಈ ಲಗ್ನದಲ್ಲಿ ಹುಟ್ಟುವರು. ಅವರಲ್ಲಿ ಚಿಕಿತ್ಸಕ ಬುದ್ಧಿಯಿರುವದು. ಬೇಗ ಸಿಟ್ಟಿಗೆ ಬರುವದಿಲ್ಲ. ಕ್ಷಮೆಯನ್ನು ಬೇಗ ಮಾಡಲಾರರು. ಶಾಂತವೃತ್ತಿ, ಚೆನ್ನಟ್ಟ ಕೆಲಸ ಮಾಡುವ ಗುಣಗಳಿರುವವು ವಿವರಣೆಗಳನ್ನು ಅಪೇಕ್ಷಿಸುವರು. ತೋಟದ ಕೆಲಸ, ವಾಚನ, ಅಡಿಗೆಯು ಕೆಲಸ, ಸೂಜಿಗೆಲಸಗಳು ಇವರಿಗೆ ಸೇರುವವು. ಶ್ರೀಮಂತರ ಸೇವೆ, ಪ್ರಖ್ಯಾತರ ಸೇವೆ ಮಾಡುವರು. ಜನರಿಗೆ ಅವರ ತಪ್ಪುಗಳನ್ನು ಹೇಳುವಲ್ಲಿ ಪ್ರೀತಿ ತೋರಿಸುವರು. ಕ್ಷುಲ್ಲಕ ಬಾಬುಗಳಿಂದ ನೋಯುವರು. ಆದರೆ ಶೂರರಿರುವರು. ನೇಪಚ್ಯೂನನಿದ್ದರೆ ಸಂವೇದನಾಶಕ್ತಿ ಇರುವದು. ಗೂಢ ವಿದ್ಯಾಪ್ರೇಮವಿರುವದಲ್ಲದೆ, ನಿವೃತ್ತಿಮಾರ್ಗ ಪ್ರೀತಿಯಿರುವದು. ಹರ್ಶಲನಿದ್ದರೆ ಅರ್ಥಶಾಸ್ತ್ರ ಪ್ರೀತಿಯಿರುವದು. ಪುರಾಣ ವಸ್ತು ಸಂಶೋಧಕರಾಗುವರು. ವಿಚಿತ್ರ ಸ್ವಭಾವವಿರುವದು. ಶನಿ ಇದ್ದರೆ ಜಾಗರೂಕರಾಗಿರುವರು. ಲಜ್ಜಾವಾನ್, ಅಭ್ಯಾಸಿ ಇರುವರು. ಔದಾಶೀನ್ಯವು ತೋರುವದು. ಗುರು ಇದ್ದರೆ ವಿವೇಕಿ, ಆಶಾವಾದಿ ಇರುವರು. ಏಕಾಧಿಪತ್ಯ, ವಂಚನೆಗಳು ತೋರುವವು. ಸೇವಾ ಪ್ರಿಯರಿರುವರು. ಮಂಗಳನಿದ್ದರೆ ಕಾಪಟ್ಯ, ಒರಟುತನಗಳು ಕಾಣುವವು. ಸಿಟ್ಟು ಬೇಗ ಬರುವದು. ವಂಚಕತನವೂ ತೋರಿಬರುವದು. ರವಿ ಇದ್ದರೆ ಚಿಕಿತ್ಸಕ, ಉದ್ಯೋಗಿ, ಸಭ್ಯ, ಅಲ್ಪ ಆತ್ಮವಿಶ್ವಾಸಿ ಇರವರು. ಶುಕ್ರನಿದ್ದರೆ ಸ್ವಭಾವದಲ್ಲಿ ಶುದ್ಧ ಸಾತ್ವಿಕತೆಯಿರುವದು. ಬುಧನಿದ್ದರೆ ಬುದ್ಧಿವಾನ್, ವಿಮರ್ಶಕ, ಶಾಸ್ತ್ರಜ್ಞ, ಸಂಶಯಿ, ಗೂಢ ಪ್ರೇಮಿ ಇರುವರು. ಚಂದ್ರನಿದ್ದರೆ ಶಾಂತ, ವಿಭಾಜಕ, ಮಾನಸಿಕರಿರುವರು.

ತುಲಾ: — ತುಲಾ ಲಗ್ನದಲ್ಲಿ ಜನಿಸಿದವರಲ್ಲಿ ಸಂವೇದನಾಶಕ್ತಿಯಿರು

ವದು. ಸಭ್ಯರು, ಶೋಧಕರು, ಕಲ್ಪಕರು, ಕಲಾಬಲ್ಲವರಿರುವರು. ಆದರ್ಶವಾದಿಗಳು, ಪ್ರಾಮಾಣಿಕರು, ಆಳಸೀ, ಸೌಲಭ್ಯ ಪ್ರಿಯರು, ಚಂಚಲ, ಮುಖಸ್ತುತಿ ಪ್ರಿಯರೂ ಈ ಲಗ್ನದಲ್ಲಿ ಜನಿಸುವರು. ಅವರು ಪರಿಸ್ಥಿತಿಯ ಪರಿಣಾಮ ಮಾಡಿಕೊಳ್ಳುವರು. ನ್ಯಾಯಬುದ್ಧಿಯಿರುವದು. ಒಮ್ಮೆ ಉತ್ಸಾಹೀ ಕಂಡರೆ ಒಮ್ಮೆ ಉದಾಸೀನರಾಗಿ ಕಾಣುವರು. ವಿಲಾಸ ಪ್ರಿಯರಿರುವರು, ಸಹವಾಸ ಪ್ರಿಯರಿರುವರು. ಕ್ಷುಲ್ಲಕ ಸಂಗತಿಗಳಿಂದ ದಣಿಯುವರು. ಸ್ವಾರ್ಥವಿರುವದು. ನೇಪಚ್ಯೂನನಿದ್ದರೆ ಕನಸು ಕಾಣುವ ಸ್ವಭಾವವಿರುವದು. ಹರ್ಶಲನಿದ್ದರೆ ಕಲ್ಪನಾತರಂಗಗಳು ಹುಟ್ಟುವವು; ಶನಿ ಇದ್ದರೆ ಶಾಸ್ತ್ರಜ್ಞರಾಗುವರು. ಗುರು ಇದ್ದರೆ ದಯಾಳು, ವಿಚಾರಿ, ಸಭ್ಯರಿರುವರು. ನ್ಯಾಯ ಪ್ರೀತಿಯಿರುವದು. ಮಂಗಳನಿದ್ದರೆ ಆಕ್ರಮಣ ಪ್ರಿಯರು ಆದರ್ಶವಾದಿಗಳು ಇರುವರು. ರವಿ ಇದ್ದರೆ ಪ್ರೇಮಿ, ಸಾಮಾಜಿಕ ಕಲ್ಪಕ, ಕಲಾಪ್ರೇಮಿ ಇರುವರು. ಶುಕ್ರನಿದ್ದರೆ ಪರರಿಗೆ ಸಹಾಯಮಾಡುವ ಸ್ವಭಾವವಿರುವದು. ಸರಳತನ, ಸಮತಾವಾದ, ಪ್ರೇಮ ಮೊದಲಾದ ಗುಣಗಳೂ ಕಂಡು ಬರುವವು. ಬುಧನಿದ್ದರೆ ವಿಶಾಲ ಮನಸ್ಸಿರುವದು. ಚಂದ್ರನಿದ್ದರೆ ದಯಾಳು ಲೋಕಪ್ರಿಯರು ಇರುವರು.

ವೃಶ್ಚಿಕ:— ಬಲಿಷ್ಠವಾದ ಆಚಾರಗಳು, ಪ್ರಬಲ ಇಚ್ಛಾಶಕ್ತಿ ವೃಶ್ಚಿಕ ಲಗ್ನದಲ್ಲಿ ಹುಟ್ಟಿದವರಲ್ಲಿರುವವು. ಜಗಳಗಂಟತನ, ವಿಧ್ವಂಸಕ ಗುಣಗಳಿರುವವು. ಭಯಂಕರ ಅಭಿಮಾನಿ ಇರುವರು. ಆತ್ಮಸಮಾಧಾನಿಯಿರುವರು. ಉಳಿದವರಿಗಿಂತ ಹಕ್ಕು-ಬಾಧ್ಯತೆಗಳಿಗಾಗಿ ಬಡಿದಾಡುವರು. ಹಟಸ್ವಭಾವವಿರುವದು. ಹಿಡಿದ ಕಾರ್ಯವನ್ನು ಮುಗಿಸುವ ಜಿಗಟುತನವಿರುವದು. ಕಾರ್ಯವಾದನಂತರ ಬದಲಿಸುವವನಾಗಿರುವನು. ನಾಟಕದಂತಿರುವರು. ಬೆಂಕಿಯ ಸ್ವಭಾವವಿರುವದು. ಮಹತ್ವಾಂಕ್ಷಿಯಾಗಿರುವರು. ಆಕರ್ಷಕ ವ್ಯಕ್ತಿತ್ವವಿರುವದು. ಗುಪ್ತ ಪ್ರೇಮಿ. ರಹಸ್ಯತತ್ವ ಜಿಜ್ಞಾಸು ಇರುವರು. ಕಲ್ಪನಾಶಕ್ತಿ ಚೆನ್ನಾಗಿರುವದು. ಮನಸ್ಸು ಸೂಕ್ಷ್ಮದರ್ಶಕವಾಗಿರುವದು. ಸ್ಥಿರವಾದ ಅಭಿಪ್ರಾಯಗಳಿರುವವು. ಔಷಧ ಪದಾರ್ಥಗಳ ಶೋಧನೆಯಲ್ಲಿ ಅಭಿರುಚಿಯಿರುವದು.

ನೇಪಚ್ಯೂನನಿದ್ದರೆ ಗೂಢವಾದಿ, ಹರ್ಶಲನಿದ್ದರೆ ಕಲಾಪ್ರೇಮಿ, ಶನಿ ಇದ್ದರೆ ಮತ್ಸರಿ ಇರುವರು. ಶನಿಯಿರುವವರಲ್ಲಿ ತಿರಸ್ಕಾರ ಅತ್ಯಾಚಾರಗಳೂ ಕಂಡು ಬರುವವು. ಗುರು ಇದ್ದರೆ ಹಟ ಇರುವರಲ್ಲದೆ ಜನ್ಮದ ಅಭಿಮಾನಿ ಇರುವರು. ಮಂಗಳನಿದ್ದರೆ ತೀವ್ರಹದನ, ಹಂಚಿಕೆ ಹಾಕುವ, ಕಪಟ ನಾಟಕ ಪ್ರಿಯತೆ ಮೊದಲಾದ ಗುಣಗಳಿರುವವು. ರವಿ ಇದ್ದರೆ ಸ್ಥಿರ, ಅಭಿಮಾನಿ, ಮನೋವಿಕಾರಿ ಇರುವರು. ಶುಕ್ರನಿದ್ದರೆ ಮತ್ಸರಿ ಇರುವರು. ಬುಧನಿದ್ದರೆ ಹದನಾದ ವಿಮರ್ಶಕ, ವಿಚಾರಿ, ಸಂಶಯವಾದಿ, ಗುಪ್ತಪ್ರೇಮಿ ಇರುವರು. ಚಂದ್ರನಿದ್ದರೆ ಸ್ಥಿರ ಬರಟುತನವಿರುವದು. ಸ್ವಾರ್ಥಿಯಾಗಿರುವರು. ಹಿಡಿದಿಟ್ಟುಕೊಳ್ಳುವ ಪ್ರವತ್ತಿ, ಸೇಡು ತೀರಿಸಿಕೊಳ್ಳುವ ಬುದ್ದಿಗಳಿರುವವು.

ಧನು:— ಧನೂ ಲಗ್ನದಲ್ಲಿ ಜನಿಸಿದವರು ಸರಲ, ಪ್ರಾಮಾಣಿಕ, ಸುಸ್ವಭಾವಿ, ಉಪಜ್ಞಾನಿ ಇರುವರು. ನ್ಯಾಯಬುದ್ಧಿಯಿರುವದು. ಕ್ರೀಡಾ ಪ್ರಿಯರಿರುವರು. ಸಿಟ್ಟಿಗೇಳುವ, ಉದಾರ, ಸ್ವತಂತ್ರ ಸ್ವಭಾವವಿರುವದು. ಹಟವಾದಿಗಳೂ ಆಗಿರುವರು. ಜಾಣರಿರುವರು. ವಿವಿಧ ವಿಷಯಗಳಲ್ಲಿ ಪೀತಿಯಿರುವದು. ತೀವ್ರತೆಯಿರುವದು. ಭವಿಷ್ಯ ಪ್ರಿಯರು, ಧಾರ್ಮಿಕರು, ತತ್ತ್ವಜ್ಞಾನ ಪ್ರಿಯರಾಗಿರುವರು. ಹೊರಗಿನ ಆಟಗಳಲ್ಲಿ ಅಭಿರುಚಿಯಿರುವದು. Sports ಪ್ರಿಯರಿರುವರು. ಕುದುರೆ ಸವಾರಿಯ ಅಭಿರುಚಿಯಿರುವದು. ತಾರ್ಕಿಕರು, ಉಪದೇಶ ದಾನದಲ್ಲಿ ಪ್ರೀತಿಯುಳ್ಳವರು ಇರುವರು.

ನೇಪಚ್ಯೂನನಿದ್ದರೆ ಭಾವನಾತ್ಮಕರು, ಹರ್ಶಲನಿದ್ದರೆ ಬಂಡುಗಾರರು ಆಗಿರುವರು. ಅತ್ಯಂತ ಉದಾರರೂ ಆಗಿರುವರು. ಶನಿ ಇದ್ದರೆ ಪ್ರಾಮಾಣಿಕ, ವಿಶ್ವಾಸಿ, ಇಂದ್ರಿಯ ಗ್ರಾಹಿಯಾಗಿರುವರು. ನಮ್ಮಲ್ಲಿ ಧನು ಶನಿಗೆ ಕೋದಂಡ ಶನಿ ಎನ್ನುವರು. ಅವನು ಒಳ್ಳೇ ಫಲವನ್ನು ಕೊಡುವನು. ಕಾಲಿದಾಸನು ತನ್ನ ಕಾಲಾಮೃತದಲ್ಲಿ ಹೇಳುತ್ತಾನೆ. "**ಇತ್ಥಸಿ ಘಟೀ; ಚಾಪೇಷು ಯೋಗ ಪ್ರದಃ**" (ಇತ್ಥಸಿ; ಮೀನ. ಘಟೀ; ಕುಂಭ ಚಾಪೇಷು; ಧನು.) ಲಗ್ನದಲ್ಲಿ ಧನುರಾಶಿಯ ಶನಿಯು ಯೋಗಕಾರಕನಾಗಿರುವನು.

ಗುರು ಇದ್ದರೆ ವ್ಯವಸ್ಥಿತ, ದಯಾಳು, ಸಭ್ಯ, ಮಾನವೀಯರಿರುವ
ಸಟ್ವಾ, ಜಿದ್ದುಗಳ ಪ್ರೀತಿಯಿರುವದು. ಮಂಗಳನಿದ್ದರೆ ಭಾವನಾಮ
ರಿರುವರು. ಅವಸರದ ಸ್ವಭಾವ, ಬಂಡುಖೋರತನ, ಮಾತಾಳಿ, ಉದ
ಗುಣಗಳೂ ಮಂಗಳನಿರುವಾಗಿ ತೋರಿ ಬರುವವು. ರವಿ ಇದ್ದರೆ ಉದಾ
ಅಭಿಮಾನಿ, ಕಳಕಳಿಯುವ, ವಿಶ್ರಾಂತಿಯಿಲ್ಲದಿರುವವರು ಇರುವರು. ಅವ
ಪ್ರದರ್ಶನ ಪ್ರಿಯರೂ ಇರುವರು. ಶುಕ್ರನಿದ್ದರೆ ವಿಲಾಸಪ್ರಿಯ, ಹೃದ
ಇರುವರು. ಬುಧನಿದ್ದರೆ ಪ್ರೇರಣೆಯುಳ್ಳವ, ಮನೋವಿಕಾರಿ, ಮಾತಾ
ಬಂಡುಗಾರ, ಅವಸರದವರಿರುವನು. ಚಂದ್ರನಿದ್ದರೆ ಉದ್ಸಾಹಿ, ದಯಾ
ವಿಶ್ರಾಂತಿ ಇಲ್ಲದವ ಕಳಕಳಿಯವನು, ಪರಿವರ್ತನ ಪ್ರಿಯ, ಆಟಗ
ನಿರುವನು.

ಮಕರ:— ಮಕರ ಲಗ್ನದಲ್ಲಿ ಹುಟ್ಟಿದವರು ಮಹತ್ವಾಕಾಂಕ್ಷಿ ಶಾಂ
ಗಣನಾಪ್ರಿಯ, ವ್ಯಾವಹಾರಿಕ, ಶಾಸ್ತ್ರಬಲ್ಲವರು ಇರುವರು. ಕೆಲವು ಸ
ಔದಾಶೀನ್ಯ ತೋರುವದು. ಸೇವಾಪ್ರಿಯರಿರುವರು. ಪರರಾಪ್ಪರಾ
ಭಾರಿಯಾಗಲರ್ಹರಿರುವರು. ಅಧಿಕಾರ ಪ್ರಿಯರಿರುವರು. ಮುಂಜಾಗರ
ಕತೆಯಿರುವದು. ವಿವೇಕಿಗಳಾಗಿರುವರು. ಸ್ವಾರ್ಥ, ವಾಸನೆಗ
ಒಮ್ಮೊಮ್ಮೆ ತೋರಿಬರುವವು. ನೇಪಚ್ಯೂನನಿದ್ದರೆ ಹಂಚಿಕೆ ಸ್ವಾರ್ಥ
ರುವವಲ್ಲದೆ 'ಕ್ರ್ಯಾಫ್ಟಿ' (ಧೂರ್ತ) ಯಾಗಿರುವರು. ಹರ್ಶಲನಿದ್ದರೆ ಸಂಗ್ರ
ವಿಶ್ರಾಂತಿ ಇಲ್ಲದವ, ಕಲ್ಪನಾತರಂಗಗಳಲ್ಲಿ ರಮಮಾಣರು ಇರುವರು.
ಇದ್ದರೆ ಗ್ರಹಣಶಕ್ತಿ ಚೆನ್ನಾಗಿರುವದು. ಸಂಶಯಿ, ಅತೃಪ್ತ ದ್ರೋಹಿಗ
ಆಗಿರುವರು. ಗುರು ಇದ್ದರೆ ಬಲುಮೆಯ ಆಳಿಕೆಯವನು, ಕಠೋರ ಸ
ದಾಯ ಪ್ರಿಯನು ಆಗಿರುವನು. ಮಂಗಳನಿದ್ದರೆ ಶೂರ, ಸಾಹಸಿ, ಉದ್ಯೋ
ವಿವೇಕಿಯಾಗಿರುವರು. ಶುಕ್ರನಿದ್ದರೆ ಚಂಚಲ, ಅನಿಶ್ಚಯಿ, ಮಹ
ಕಾಂಕ್ಷಿ, ಪ್ರೇಮಿ ಇರುವರು. ಬುಧನಿದ್ದರೆ ವಿವೇಕಿ, ಸಂಶಯಿ ತ
ಯುಳ್ಳವನು, ಅತೃಪ್ತ ಶಾಸ್ತ್ರಿ ಆಗಿರುವನು. ಚಂದ್ರನಿದ್ದರೆ ಪ್ರದರ್ಶ
ಪ್ರಿಯ ಕೀರ್ತಿಕಾಮುಕ, ಆರ್ಥಿಕ ಗಣನಾ ಪ್ರಿಯನಾಗಿರುವನು.

ಕುಂಭ:— ಕಲಾಭಿಜ್ಞರು, ಆದರ್ಶವಾದಿಗಳು, ಮಾನವೀಯ ಗ

ಗಳುಳ್ಳವರು, ಪ್ರಬಲ ಇಚ್ಛಾಶಕ್ತಿಯುಳ್ಳವರು ಕುಂಭ ಲಗ್ನದಲ್ಲಿ ಜನಿಸುವರು. ಅವರು ಸರಲ, ಆನಂದೀ ಭಯಶೀಲರಿರುವರು. ಶಾಸ್ತ್ರಬಲ್ಲವರಾಗುವರು. ಸ್ಥಿರರು, ಗಟ್ಟಿ ಅಭಿಪ್ರಾಯದವರಿರುವರು. ಮಾನವೀಯ ಸ್ವಭಾವದ ನಿರ್ಣಯವನ್ನು ಬಹು ಚೆನ್ನಾಗಿ ಮಾಡುವರು. ಪ್ರಾಣಿಗಳ ಮೇಲೆ ವರ್ಚಸ್ಸುಳ್ಳವರಾಗುವರು. ಒಮ್ಮೊಮ್ಮೆ ವಚನ ಭಂಗಮಾಡಬಹುದು. ಉಪದೇಶ ಕೇಳುವರು. ಅದನ್ನು ಹಿಂಬಾಲಿಸದವನಾಗಬಹುದು. ನೇಪಚ್ಯೂನನಿದ್ದರೆ ವಿಶಾಲ ಮನಸ್ಸು, ಮಾನವೀಯ ಸದ್ಗುಣಗಳುಳ್ಳವನು ಆಗಿರುವನು. ಹರ್ಶಲನಿದ್ದರೆ ವಿಚಾರ ಮಾಡುವವ, ವಿಚಾರದ ಪರಿಣಾಮ ತಿಳಿಯುವವನಾಗುವನು. ಶಾಸ್ತ್ರಬಲ್ಲವನಾಗುವನು. ಶನಿ ಇದ್ದರೆ ಆಜ್ಞಾಧಾರಕ, ವಿಧೇಯ, ವಿಚಾರಿಯಾಗುವನು. ಕೃತಿ–ಮಾತುಗಳಲ್ಲಿ ಮಾಂದ್ಯ ತೋರುವದು. ಗುರು ಇದ್ದರೆ ಆನಂದಿ, ವಿಶಾಲ ಮನಸ್ಸುಳ್ಳವ, ಸಹಿಷ್ಣು, ಮಾನವೀಯತೆಯುಳ್ಳವನಿರುವನು. ಧಾರ್ಮಿಕನಾಗಿರುವದಕ್ಕಿಂತ ತತ್ತ್ವಜ್ಞಾನಿಯಾಗಿರುವದರ ಕಡೆಗೆ ಹೆಚ್ಚಿನ ಒಲವು ತೋರುವನು. ಮಂಗಳನಿದ್ದರೆ ನರದೌರ್ಬಲ್ಯವಿರುವದು. ಜಾಣನೂ ಅತಿಥಿ ಸತ್ಕಾರ ಪ್ರಿಯನೂ ಆಗಿರುವನು. ರವಿ ಇದ್ದರೆ ವಿಧೇಯಿ, ಆನಂದಿ, ಆದರ್ಶವಾದಿ, ಪವಿತ್ರ, ಭಯಶೀಲನಿರುವನು. ಬುಧನಿದ್ದರೆ ಮಾತುಗಾರ, ನಿರೀಕ್ಷಕ, ಮಾನವೀಯ ಉಪಜ್ಞಾನವುಳ್ಳವನು ಆಗಿರುವನು. ಚಂದ್ರನಿದ್ದರೆ ನಿರಪರಾಧಿ, ಸಹಿಷ್ಣು, ಶಾಸ್ತ್ರಬಲ್ಲವ, ಕಲ್ಪನಾತರಂಗಗಳಲ್ಲಿ ತೇಲುವವನಾಗಿರುವನು.

ಮೀನ:— ಮೀನ ಲಗ್ನದಲ್ಲಿ ಹುಟ್ಟಿದವರು ದಯಾಳು ಕಲ್ಪಕರು ಇರುವರು. ಮಾನಸಿಕವಾಗಿ ಒಳ್ಳೇ ಜೀವನವನ್ನು ಬಯಸುವರು. ಉದಾರ ಭಾವನೆಯು ಪ್ರಧಾನವಾಗಿರುವದು. ಮಾತಾಳಿಯಾಗಿರುವರು. ಪ್ರಾಣಿಗಳ ಮೇಲೆ ದಯೆಯುಳ್ಳವರಿರುವರು. ವಿಷಯ ಸುಖಾಭಿಲಾಷಿಗಳಾಗಿರುವರು. ನೇಪಚ್ಯೂನನಿದ್ದರೆ ಸಹಾನುಭೂತಿ ಪರರೂ ವಿಶಿಷ್ಟ ವಿಚಾರಗಳುಳ್ಳವರೂ ಇರುವರು. ಹರ್ಶಲನಿದ್ದರೆ ಪರಾವಲಂಬಿಗಳಾಗಿರುವರಲ್ಲದೆ ವಿಚಿತ್ರ ಕಲ್ಪನೆಗಳಿರುವವು. ಶನಿ ಇದ್ದರೆ ಅನಿಶ್ಚಯ, ಆಶಾ ಧೈರ್ಯಗಳ ನ್ಯೂನತೆ ಕಂಡು ಬರುವವು. ಗುರು ಇದ್ದರೆ ಪರೋಪಕಾರಿಗಳೂ ಅತಿಥಿ ಸತ್ಕಾರ

ಪ್ರಿಯರೂ ಇರುವರು. ಮಂಗಳನಿದ್ದರೆ ಮನೋವಿಕಾರಿಗಳಾಗುವರು; ಭಯವಿರುವದು. ಧೈರ್ಯಗಳು ಪರಿವರ್ತನವಾಗುವವು. ರವಿ ಇದ್ದರೆ ಅತಿಥಿ ಸತ್ಕಾರಿ, ವಿಶ್ರಾಂತಿ ಇಲ್ಲದವ, ಪರಿವರ್ತನ ಶೀಲ, ಗರ್ವಿ ಇರುವರು. ಶುಕ್ರನಿದ್ದರೆ ಹಟ, ಸಹಾನುಭೂತಿಪರನಿರುವನು. ಬುಧನಿದ್ದರೆ ಮೂರ್ಖತನದ ವಿಚಾರಗಳಿರುವವು. ಅನುಕರಣ ಶೀಲವಿರುವದು. ಗೊಂದಲದ ವಿಚಾರಗಳಿರುವವು. ಕೊಂಚ ಗಾಂಭೀರ್ಯವಿರುವದು. ಚಂದ್ರನಿದ್ದರೆ ಕನಸು ಕಾಣುವವನು, ಅಸ್ಥಿರ, ಶಾಂತ, ಸುಲಭ ಮಾರ್ಗಗಾಮಿ, ವಿಶ್ರಾಂತಿ ಇಲ್ಲದವ, ನಿವೃತ್ತಿ ಮಾರ್ಗದವನು, ಸುಲಭವಾಗಿ ಧೈರ್ಯ ಗುಂದುವವನು ಆಗಿರುವನು.

ಲಗ್ನದಲ್ಲಿ ಉದಿತವಾದ ರಾಶಿ, ರವಿ ಚಂದ್ರರಿರುವ ರಾಶಿ, ಅಲ್ಲಿರುವ ಗ್ರಹಗಳನ್ನು ಕಂಡು ಮಾನವನ ಶೀಲವನ್ನು ಊಹಿಸಬಹುದು.

ಮಾನಸಿಕ ಬೌದ್ಧಿಕ ಶಕ್ತಿ

ಚಂದ್ರನು ಮನಃಕಾರಕನು; ಬುದ್ಧಿಕಾರಕನು ಬುಧನು. ಇವರಿಬ್ಬರು ಬಲಿಷ್ಠರಾಗಿದ್ದರೆ ಮಾನವನು ಬುದ್ಧಿವಂತನಿರುವನು. ಲಗ್ನದಲ್ಲಿದ್ದ ಗ್ರಹವು ಮಿದುಳಿನ ಮೇಲೆ ಪರಿಣಾಮ ಮಾಡುವದೆಂದು ಕಾರ್ಟರರು ಹೇಳುವರು. ಅಂತೂ ಮಾನವನ ಬುದ್ಧಿ ಶಕ್ತಿಯನ್ನು ವಿಚಾರಿಸುವಾಗ ಲಗ್ನಬಲವನ್ನೂ ನೋಡಬೇಕು. ಬುಧ, ಚಂದ್ರ ಹರ್ಶಲರನ್ನು ಆಳುವ ಗ್ರಹಗಳೂ ಮನಸ್ಸಿನ ಮೇಲೆ ಪರಿಣಾಮ ಮಾಡುವವು. ಅವರನ್ನೂ ಲಕ್ಷಿಸಬೇಕು. ಚಂದ್ರನಿಗೆ ದೀರ್ಘ ಶರವಿದ್ದರೆ ಪರಿವರ್ತನ ಪ್ರಿಯರಿರುವರು. ವಿವಿಧ ವಿಷಯಗಳಲ್ಲಿ ಮನಸ್ಸು ಹರಿಯುವದು. ಚಂದ್ರನು ಅನುದಿತ ಗೋಲಾರ್ಧಕ್ಕಿಂತ ಉದಿತ ಗೋಲಾರ್ಧದಲ್ಲಿರುವದು ನೆಟ್ಟಗೆ. ಚಂದ್ರ ಹರ್ಶಲ ಬುಧರು ದೃಷ್ಟಿಯೋಗವಿಲ್ಲದೆ, ಮೇಷ ತುಲಾ ಕರ್ಕದಲ್ಲಿದ್ದರೆ ರಾಜಕಾರಣದಲ್ಲಿ ಪ್ರೀತಿ ಇರುವದು. ತರ್ಕಶಕ್ತಿ ಪೋಷಕ, ಮಹತ್ವಾಕಾಂಕ್ಷೆ ಇರುವದು, ಶೋಧಕ ಬುದ್ಧಿಯಿರುವದು. ಬುಧನು ಕನ್ಯಾ ಕುಂಭದಲ್ಲಿದ್ದು ಶುಭಯೋಗಿಯಾಗಿದ್ದರೆ ತರ್ಕ, ಶೋಧಕ ಶಕ್ತಿಯನ್ನು ಕೊಡುವನು. ಮಿಥುನ, ಕನ್ಯಾ, ತುಲಾ, ಧನು, ಕುಂಭ ಲಗ್ನದಲ್ಲಿ ಬುಧನಿದ್ದರೆ ಸೊಗಸಾದ ಮಾತುಗಾರಿಕೆಯನ್ನು ಕೊಡುವನು. ಬುಧನು ಚಿಕಿತ್ಸಕ ಬುದ್ಧಿಯವನು. ಚಂದ್ರನು ಭಾವನಾತ್ಮಕನು. ಚಂದ್ರ ಬುಧರು ಬಲಿಷ್ಠರಿದ್ದು ಗುರು ಶುಕ್ರ ಮಂಗಳರೊಡನೆ ಶುಭಯೋಗ ಮಾಡುತ್ತಿದ್ದರೆ ಉತ್ತಮ ಬುದ್ಧಿ ಶಕ್ತಿಯನ್ನು ಕೊಡುವನು. ಶುಕ್ರನು ದ್ವಿತೀಯದಲ್ಲಿದ್ದರೆ ಜೈಮಿನಿ ಋಷಿ ಹೇಳುವಂತೆ **'ಶುಕ್ರೇಣ ಕವಿರ್ವಾಗ್ಮೀ ಕಾವ್ಯಜ್ಞಶ್ಚ'** ಗುರು ಇದ್ದರೆ ವೇದ ವೇದಾಂತ ವ್ಯಾಕರಣಜ್ಞನಾಗಬಹುದು. ದೇಶ ಕಾಲ ಮಾನ ಪರಿಸ್ಥಿತಿಗನುಸರಿಸಿ ಅರ್ಥಮಾಡಬೇಕು.

ಚಂದ್ರ ಬುಧರ ಪರಸ್ಪರ ಪರಿವರ್ತನ ಬುದ್ಧಿ ಶಕ್ತಿಗೆ ಪೋಷಕ ಯೋಗವು. ಕೇಂದ್ರದಲ್ಲಿ — ವಿಶೇಷನಾಗಿ ಲಗ್ನದಲ್ಲಿ ಆಗುವದು ಮತ್ತಿಷ್ಟು

ಪೋಷಕ. ಮಿಥುನ ಕನ್ಯಾ, ಕುಂಭಗಳಲ್ಲಿರುವ ಬಲವು ಬುಧನಿಗೆ ಧನು ಮೀನದಲ್ಲಿರುವದಿಲ್ಲ. ಬುಧ ಚಂದ್ರರು ಅನೇಕ ಗ್ರಹಗಳೊಡನೆ ಸಂಬಂ ಪಟ್ಟದ್ದರೆ ಅನಿಶ್ಚಿತ ಸ್ವಭಾವದವರಿರುವರು. ಉದ್ಯೋಗ ಪರಿವರ್ತನ ಅಂಥವರ ಶೀಲವು. ಶುಭ ಗ್ರಹಗಳ ಸಮಕ್ರಾಂತಿ ಯೋಗವೂ ಚೆನ್ನಾಗಿರುವದು. ಚಂದ್ರ ಬುಧರಲ್ಲಿ ಯೋಗವಿಲ್ಲದಿರುವದಕ್ಕಿಂತ ಕೇಂದ್ರ ಯೋ ವಿರುವದೂ ನೆಟ್ಟಗೆ. ಆದರೆ ಈ ಯೋಗವು ಕೆಲವು ಸಾರೆ ಚಾಂಚಲ್ಯ ಆಗ್ರಹಗಳನ್ನು ಹುಟ್ಟಿಸುವದು. ಇವರಲ್ಲಿ ಒಬ್ಬನೊಡನೆ ಮಂಗಳ ಶನಿಗ ಅಶುಭ ಸಂಬಂಧ ಬಂದರೆ ಚಾಂಚಲ್ಯ, ದುರಾಗ್ರಹಗಳು ಕಂಡು ಬರುವವು ಬುಧ ಚಂದ್ರರನ್ನು ಆಳುವ ಗ್ರಹಗಳು ಇವರೊಡನೆ ಸಂಬಂಧಪಟ್ಟರದಿದ್ದ ಅವರನ್ನು, ಅಲಕ್ಷಿಸಲಿಕ್ಕೆ ಅಡ್ಡಿಯಿಲ್ಲ. ಬುಧನಾಗಲಿ, ಚಂದ್ರನಾಗಲಿ ಪೂರ್ವದಲ್ಲಿರುವದು ನೆಟ್ಟಗೆ.

ಮಕರ ಕರ್ಕ ರಾಶಿಯವರ ಬುದ್ಧಿಯು ರಾಜಕಾರಣದಲ್ಲಿ ಪ್ರವೇಶಿಸಲು ಹವಣಿಸುವದು. ಸಾರ್ವಜನಿಕ ಕ್ಷೋಭ ಜನಕ ಕಾರ್ಯಗಳಲ್ಲಿ ತೊಡಗಲು ಹವಣಿಸುವದು. ಆದರಿಂದ ಅವರಿಗೆ ಖ್ಯಾತಿಬೇಕು.

ದಾಂಪತ್ಯ ಯೋಗ

ವಿವಾಹವು ಮನುಷ್ಯನ ಜೀವನದಲ್ಲಿಯ ಒಂದು ಮಹತ್ವದ ಸಂಸ್ಕಾರವು. ಸಾಮಾನ್ಯವಾಗಿ ಪ್ರತಿಯೊಬ್ಬ ಮಾನವನೂ ಪ್ರಾಪ್ತ ವಯಸ್ಕನಾದೊಡನೆಯೇ ವಿವಾಹ ಬದ್ಧನಾಗಲು ಬಯಸುತ್ತಾನೆ. ಕವಿ ಅಂಬಿಕಾತನಯದತ್ತರು ಹೇಳಿದಂತೆ 'ಮದುವೆಯ ಹಡಗವನ್ನೇರಿ ಹುಡುಗನು ಸುಖ ದುಃಖ ಸಾಗರಾಸೇರಿ ಹಿಗ್ಗಿನ ದಾರಿಯನ್ನು ಹುಡುಕಲೆಳಸುತ್ತಾನೆ.' ಅದನ್ನು ಕಂಡವರೆಷ್ಟು ಜನರೋ! ಹುಡುಗ-ಹುಡುಗೆಯರು ವಿವಾಹ ವಯಸ್ಕರಾದೊಡನೆಯೇ ತಾಯ್ತಂದೆಗಳು ತಮ್ಮ ಸಂಶೋಧನೆಯ ಕಾರ್ಯವನ್ನು ಪ್ರಾರಂಭಿಸುತ್ತಾರೆ. ಈ ಕಾರ್ಯವನ್ನು ಕೈಗೆತ್ತಿಕೊಂಡಡನೆಯೇ ಸಲಹೆಗಾಗಿ ಜ್ಯೋತಿಷಿಯ ಆಶ್ರಯವನ್ನು ಬಯಸುವರು. 'ಕೂಡಿಸಿ ನೋಡುವ' ಪದ್ಧತಿಯು ಸಾಮಾನ್ಯವಾಗಿ ಎಲ್ಲರಲ್ಲಿಯೂ ಬಳಕೆಯಲ್ಲಿದೆ.

ದಾಂಪತ್ಯ ಜೀವನದಲ್ಲಿ ಸುಖವಿದೆಯೋ ಇಲ್ಲವೋ? ಸತಿಪತಿಯರು ಕೂಡಿ ನಡೆಯುವರೊ ಇಲ್ಲವೋ ಎಂಬುದನ್ನು ಸೂಕ್ಷ್ಮವಾಗಿ ಜ್ಯೋತಿಷಿಯು ತಿಳಿಹೇಳಬಲ್ಲನು.

ದಾಂಪತ್ಯ ಜೀವನಕ್ಕಾಗಿ ಸಪ್ತಮಸ್ಥಾನವನ್ನು ವಿಚಾರಿಸುವದುಂಟು, ಸಪ್ತಮಸ್ಥಾನ, ಅಲ್ಲಿರುವ ಗ್ರಹಗಳು, ಅದರ ಅಧಿಪತಿ, ವಿವಾಹಕಾರಕ ಗ್ರಹಗಳನ್ನು ಲೆಕ್ಕಾಚಾರಕ್ಕೆ ತೆಗೆದುಕೊಂಡು ಅವುಗಳ ಬಲಾಬಲ ತಾರತಮ್ಯದಿಂದ ಫಲಿತವನ್ನು ನಿರ್ಣಯಿಸುವದುಂಟು.

ಜೀವನದಲ್ಲಿ ವಿವಾಹ ಯೋಗವು ಇದೆಯೋ ಇಲ್ಲವೋ ಎಂಬುದು ಮುಖ್ಯವಾಗಿ ಚಂದ್ರ-ಶುಕ್ರರ ಸ್ಥಿತಿ ಹಾಗು ದೃಷ್ಟಿಯೋಗಗಳನ್ನು ಅವಲಂಬಿಸಿರುತ್ತದೆ. ಸ್ತ್ರೀಯರ ಕುಂಡಲಿಯನ್ನು ವಿಚಾರಿಸುವಾಗ ಚಂದ್ರ-ಶುಕ್ರರ ಬದಲು ರವಿ ಮಂಗಳರನ್ನು ವಿಚಾರಿಸುವದುಂಟು ಪುರುಷರ ಕುಂಡಲಿಯಲ್ಲಿ ಮಂಗಳನು ಶುಕ್ರನ ಶುಭದೃಷ್ಟಿಯಲ್ಲಿರಬೇಕು. ಶುಕ್ರನು ಬಲಿಷ್ಠನಿರಬೇಕು.

ಚಂದ್ರನು ಬಲಿಷ್ಠನಿದ್ದು ಶುಭ ರಾಶಿಯಲ್ಲಿರಬೇಕು. ಗುರುವಾಗಲಿ ಶುಕ್ರನಾಗಲಿ ಸಪ್ತಮಸ್ಥಾನದಲ್ಲಿರಬೇಕು. ಕರ್ಕ ಮೀನ ವೃಶ್ಚಿಕ ರಾಶಿಗಳು ಸಪ್ತಮದಲ್ಲಿರಬೇಕು. ದಾಂಪತ್ಯ ಯೋಗಕ್ಕೆ ತ್ರಿಕೋಣ ತ್ರಿರೇಕಾದಶ ಯೋಗಗಳಲ್ಲದೆ ಸಮ ಸಪ್ತಮಯೋಗವೂ ಒಳ್ಳೆಯದು. ದಾಂಪತ್ಯ ಯೋಗದಲ್ಲಿ ಕಂಡು ಬಂದ ಕೆಲವು ಯೋಗಗಳು:— ಸ್ತ್ರೀ-ಪುರುಷರ ಲಗ್ನ ಒಂದೇ ರಾಶಿಯಲ್ಲಿ ಇರಬಹುದು. ಒಬ್ಬರ ಲಗ್ನ ಇನ್ನೊಬ್ಬರ ಸಪ್ತಮವಾಗಿರಬಹುದು. ಇಬ್ಬರ ಚಂದ್ರ ಒಂದೇ ರಾಶಿಯಲ್ಲಿ ಇರಬಹುದು. ಒಬ್ಬರ ಚಂದ್ರನು ಇನ್ನೊಬ್ಬರ ಸಪ್ತಮದಲ್ಲಿರಬಹುದು. ಒಬ್ಬರ ಲಗ್ನವಿದ್ದಲ್ಲಿ ಇನ್ನೊಬ್ಬರ ಚಂದ್ರನಿರಬಹುದು. ಒಬ್ಬರ ಶುಕ್ರನಿರುವಲ್ಲಿ ಇನ್ನೊಬ್ಬರ ಚಂದ್ರನಿರಬಹುದು. ಒಬ್ಬರ ಲಗ್ನಾಧಿಪನು ಇನ್ನೊಬ್ಬರ ಸಪ್ತಮದಲ್ಲಿ, ಒಬ್ಬರ ಸಪ್ತಮೇಶ ಇನ್ನೊಬ್ಬರ ಲಗ್ನದಲ್ಲಿ, ಇಬ್ಬರ ಶುಕ್ರನೂ ಒಂದೇ ರಾಶಿಯಲ್ಲಿ ಅಥವಾ ಪ್ರತಿಯೋಗದಲ್ಲಿ; ಒಬ್ಬರ ಲಗ್ನದಲ್ಲಿದ್ದ ಗ್ರಹವು ಇನ್ನೊಬ್ಬರ ಸಪ್ತಮದಲ್ಲಿ ಇರಬಹುದು. ಇವು ಕೆಲವು ಒಳ್ಳೆಯ ದಾಂಪತ್ಯ ಯೋಗಗಳು.

ಉಭಯತರ ಲಗ್ನದಲ್ಲಿ, ಸಪ್ತಮದಲ್ಲಿ ಒಂದೇ ಗ್ರಹವಿರುವದು ಒಳ್ಳೆಯದು. ಉಭಯತರ ಗ್ರಹವು ಶುಭದೃಷ್ಟಿಯಲ್ಲಿರಬೇಕು. ಒಬ್ಬರ ಗುರು ಇನ್ನೊಬ್ಬರ ಗುರುವಿನ ತ್ರಿಕೋಣದಲ್ಲಿ, ತ್ರಿರೇಕಾದಶದಲ್ಲಿ ಅಥವಾ ದ್ವಿತೀಯ ಸ್ಥಾನದಲ್ಲಿ, ಅಥವಾ ಒಂದೇ ರಾಶಿಯಲ್ಲಿ ಇರಬೇಕು. ಇದರಂತೆ ರವ್ಯಾದಿ ಇತರ ಗ್ರಹಗಳಲ್ಲಿಯೂ ಸಾಮ್ಯವಿರಬೇಕು. ದಾಂಪತ್ಯ ಯೋಗವು ಅಧಿಕ ವಾಗಿರುವಂತೆ ಪ್ರೇಮ ಸಂಬಂಧವೂ ಅಧಿಕವಾಗಿರುವದು. ಶುಭಗ್ರಹಗಳ ಶುಭಯೋಗವು ಶುಭ ಪರಿಣಾಮಕಾರಿಯಾಗಿರುವದು. ಅಶುಭ ಗ್ರಹಗಳ ಅಶುಭಯೋಗದಿಂದ ಅಶುಭ ಪರಿಣಾಮವು ಚಂದ್ರ, ಲಗ್ನ, ಶುಕ್ರರ ಸಮಸಪ್ತಕಯೋಗವೂ ಬಹಳ ಒಳ್ಳೆಯದು.

ಚಂದ್ರ ಶುಕ್ರರಿಬ್ಬರೂ ಶನಿಯ ಅಶುಭದೃಷ್ಟಿಯಲ್ಲಿದ್ದರೆ ಮದುವೆ ತಡೆಯುವ ಸಂಭವವಿರುವದು.

ಚಂದ್ರನಾಗಲಿ ಶುಕ್ರನಾಗಲಿ ಮಕರ, ಮಿಥುನ, ಸಿಂಹ, ಹಾಗು

ಕನ್ಯಾದಲ್ಲಿದ್ದು ಶನಿಯಿಂದ ಪೀಡಿತರಿದ್ದರೆ ಮದುವೆ ಆಗುವದೇ ಅಸಂಭವವೆನಿಸುವದು. ಚಂದ್ರನು ವೃಶ್ಚಿಕದಲ್ಲಿ ಶನಿಯ ಅಶುಭಯೋಗದಲ್ಲಿದ್ದರೆ ಮದುವೆ ಕಷ್ಟ ಸಾಧ್ಯವು.

ಸ್ತ್ರೀಯರ ಕುಂಡಲಿಯಲ್ಲಿ ಶುಕ್ರ ಚಂದ್ರರ ಬದಲಾಗಿ ರವಿ ಮಂಗಳರನ್ನು ಗಣನೆಗೆ ತೆಗೆದುಕೊಳ್ಳುವರು. ರವಿ ಮಂಗಳರು ದುರ್ಬಲರಿದ್ದು ಅಶುಭ ಗ್ರಹಗಳ ಅಶುಭ ಸಂಬಂಧದಲ್ಲಿ ಬಂದರೆ ವಿವಾಹ ಸುಖವು ತೀರ ಕಡಿಮೆ ಇರುವದು.

ರವಿಯು ಹರ್ಶಲನಿಂದ ಪೀಡಿತನಾಗಿದ್ದರೆ ವಿವಾಹ ವಿಲಂಬಕ್ಕೆ ಕಾರಣವಾಗುವದು. ರವಿ ಹರ್ಶಲರ ಅಂಶಾತ್ಮಕ ಪ್ರತಿಯೋಗವಿದ್ದರೆ ವಿವಾಹವು ವಿಚ್ಛೇದನಗೊಳ್ಳುವದು.

ಪಂಚಮದಲ್ಲಿ ಮಂಗಳನಿದ್ದರೆ ಮದುವೆ ತಡವಾಗಿ ಆಗುವದು. ಅದೇ ಸಮಯಕ್ಕೆ ರವಿ ಶನಿ ಅಶುಭಯೋಗವಿದ್ದು, ಗುರು ಯಾರ ಜೊತೆಗೂ ಶುಭಯೋಗಿಯಾಗಿರದಿದ್ದರೆ ಮದುವೆಯಾಗುವದೇ ಕಠಿಣವಾಗುವದು.

ರವಿ ಮಂಗಳ ಯುತಿ–ಸಮಕ್ರಾಂತಿ ಯೋಗವಿದ್ದರೆ ವೈವಾಹಿಕ ಜೀವನವು ಸುಖಕರವಾಗಿರುವದಿಲ್ಲ. ರವಿಯು ವಂಧ್ಯಾ ರಾಶಿಗಳಾದ ಮೇಷ, ಮಿಥುನ, ಸಿಂಹ, ಕನ್ಯಾ ಹಾಗು ಮಕರ ರಾಶಿಗಳಲ್ಲಿದ್ದು, ಶನಿಯಿಂದ ಪೀಡಿತನಿದ್ದರೆ ಕನ್ಯೆಯ ಮದುವೆಯಾಗುವದು ದುಸ್ತರವು. ಶನಿಯು ಸಪ್ತಮದಲ್ಲಿದ್ದು ಆತನ ಕೂಡ ರವಿಯ ತ್ರಿಕೋಣ ಇಲ್ಲವೆ ತ್ರಿರೇಕಾದಶ ಯೋಗವಿದ್ದರೆ ಆ ಕನ್ಯೆಯು ವಿದುರನನ್ನು ಮದುವೆಯಾಗುವಳು. ಅದೇ ಸಮಯದಲ್ಲಿ ಶನಿ ಮಂಗಳ ಸಂಬಂಧ ಬಂದರೆ ಸಾಕಷ್ಟು ಸಂಸಾರವಿದ್ದವನನ್ನು ಮದುವೆಯಾಗುವಳು.

ಶನಿ ಶುಕ್ರರು ಮಕರದಲ್ಲಿ, ಚಂದ್ರನು ತುಲಿಯಲ್ಲಿದ್ದು ಅವರೊಡನೆ ಅಶುಭಯೋಗ ಮಾಡುತ್ತಿದ್ದರೆ ವಂಧ್ಯಾಯೋಗವೆಂದು ಹೇಳಬಹುದು.

ಸಪ್ತಮದಲ್ಲಿ ಸ್ತ್ರೀಯರ ಕುಂಡಲಿಯಲ್ಲಿ ಬುಧ ಶನಿ ಯುತಿ ಇದ್ದು;

ಉಳಿದ ಶುಭ ಗ್ರಹಗಳ ಕೂಡ ಶುಭ ಸಂಬಂಧವಿಲ್ಲದಿದ್ದರೆ— ಪತಿ ಪುರುಷತ್ವ ಇಲ್ಲದೆ ಇರುವ ಸಂಭವವಿರುವದು.

ಸಪ್ತಮದಲ್ಲಿ ಬುಧನಿದ್ದು ಆತನು ಶನಿಯಿಂದಾಗಲಿ, ಹರ್ಶಲನಿಂದಾಗಲಿ ಪೀಡಿತನಾಗಿದ್ದರೆ— ಪತಿ ಅಥವಾ ಪತ್ನಿ ವಿಚಿತ್ರ ಸ್ವಭಾವದವರಿರುವರು. ಯಾವುದಾದರೊಂದು ನರರೋಗದಿಂದ ಬಳಲುತ್ತಿರಬಹುದು.

ಸಪ್ತಮ, ಸಪ್ತಮಸ್ಥಾನದಲ್ಲಿಯ ಗ್ರಹಗಳು ಸಪ್ತಮಾಧಿಪತಿ; ಇವು ಮುಖ್ಯ. ಜೊತೆಗೆ ಶುಕ್ರ ಚಂದ್ರರು ಪುರುಷರ ಕುಂಡಲಿಯಲ್ಲಿ; ರವಿ ಮಂಗಳರನ್ನು ಸ್ತ್ರೀಯರ ಕುಂಡಲಿಯಲ್ಲಿ—ಗಣನೆಗೆ ತೆಗೆದುಕೊಳ್ಳಬೇಕು.

ಪ್ರವಾಸ

ಕುಂಡಲಿಯಲ್ಲಿ ೩ ನೆಯ ಭಾವವನ್ನು ಪ್ರವಾಸಕ್ಕಾಗಿ ವಿಚಾರಿಸಬೇಕು. ೧-೨ ದಿನಗಳಲ್ಲಿ ಮುಗಿಸುವ ಪ್ರವಾಸಗಳನ್ನು ೩ ನೆಯ ಭಾವದಿಂದ ವಿಚಾರಿಸುವರು. ೯ ನೆಯ ಭಾವವನ್ನು ದೂರ ಪ್ರವಾಸಗಳಿಗಾಗಿ ವಿಚಾರಿಸಬೇಕು. ಇಲ್ಲಿರುವ ಗ್ರಹಗಳು, ಈ ಭಾವದ ಅಧಿಪತಿಗಳು ಪ್ರವಾಸ ಸೂಚಕರು. ನವಮಭಾವವು ದೂರದ ಸಮುದ್ರಯಾನ, ಆಕಾಶಯಾನವನ್ನು ಸೂಚಿಸುವದು. ಪ್ರವಾಸವನ್ನು ವಿಚಾರಿಸುವಾಗ ರವಿ, ಚಂದ್ರ, ಬುಧ ಮಂಗಳರ ಸ್ಥಿತಿಗತಿಗಳನ್ನು ವಿಚಾರಿಸಬೇಕು. ಪ್ರವಾಸ ಸೂಚಕ ಗ್ರಹಗಳು ಬಹು ಸಂಖ್ಯಾಕವಾಗಿ ಚರರಾಶಿಯಲ್ಲಿ, ದ್ವಿಸ್ವಭಾವ ರಾಶಿಯಲ್ಲಿದ್ದರೆ ಪ್ರವಾಸಗಳುಂಟಾಗುವವು. ಸ್ಥಿರ ರಾಶಿಯಲ್ಲಿ ಪಣಫರಸ್ಥಾನದಲ್ಲಿ ಗ್ರಹಗಳಿದ್ದರೆ ಜಾತನು ಒಂದೇ ಸ್ಥಾನದಲ್ಲಿ ಇರುವದನ್ನು ಪ್ರೀತಿಸುವನು. ಶನಿ ಬಲಿಷ್ಠನಿದ್ದರೆ ಇದಕ್ಕೆ ಅನುಕೂಲನು. ಜಲರಾಶಿಯು, ನೇಪಚ್ಯೂನ ಗುರು ಬಲಿಷ್ಠರಾಗಿ ನವಮದಲ್ಲಿದ್ದರೆ ಜಲಪ್ರಯಾಣವನ್ನು ಸೂಚಿಸುವರು. ಶುಕ್ರನೂ ಜಲಗ್ರಹ, ಜಲಪ್ರವಾಸ ಸೂಚಕನು. ಭಾವದಲ್ಲಿದ್ದ ರಾಶಿಸ್ಥಿತಿ, ಗ್ರಹಗಳ ಶುಭಾಶುಭ ದೃಷ್ಟಿ ಪ್ರವಾಸದಿಂದ ಒದಗುವ ಲಾಭ ಹಾನಿಗಳನ್ನು ಸೂಚಿಸುವವು. ಪೀಡಿತವಿದ್ದರೆ ಪ್ರವಾಸದಲ್ಲಿ ಸಂಕಟ ತೊಂದರೆಗಳನ್ನು ಸೂಚಿಸುವವು. ಅಗ್ನಿ ರಾಶಿಯಲ್ಲಿದ್ದ ಗ್ರಹಗಳಿಂದ ಪೀಡಿತವಿದ್ದರೆ ಅಗ್ನಿಭಯ, ಜ್ವರ ಬಾಧೆ; ಪೃಥ್ವಿ ರಾಶಿ ಪೀಡಿತವಿದ್ದರೆ ಬರ, ಪತನ, ಬಿರುಗಾಳಿಗಳ ಭಯ ಜಲರಾಶಿ ಪೀಡಿತವಿದ್ದರೆ ಮಹಾಪೂರ, ಜಲಯಾನ ಮುಳುಗುವದು ಇತ್ಯಾದಿ ಭಯಗಳು. ಅನೂಪಪ್ರದೇಶದಲ್ಲಿ ಅನಾಥನಾಗುವ ಸಂಭವಿರುವದು.

ಚರರಾಶಿ ಏಕಾಂತ ವಾಸ, ಅಜಾರಿಗಳನ್ನು ಸೂಚಿಸುವದು. ಸ್ಥಿರ ರಾಶಿ ಬಿರುಗಾಳಿ ಸೂಚಕವು. ದ್ವಿಸ್ವಭಾವೀ ರಾಶಿಗಳು ಪಕ್ಷಗಳಿಂದ ಹಲ್ಲೆಯಾಗುವದನ್ನು ಸೂಚಿಸುವವು. ಧನೂ ರಾಶಿಯು ವನ್ಯ ಪಶುಗಳ ಪೀಡೆಯನ್ನು ತೋರಿಸುವದು.

೩-೪ ನೆಯ ಭಾವಗಳು, ೯-೧೦ ನೆಯ ಭಾವಗಳಿಗಿಂತ ಬಲಿಷ್ಠವಾಗಿದ್ದರೆ ಜಾತನು ಜನ್ಮಭೂಮಿಯಲ್ಲಿಯೇ ಇರುವದು ಒಳಿತು. ೪ ನೆಯ ಭಾವವು ಅನುಗ್ರಾಹಕವಿಲ್ಲದಿದ್ದರೆ ಸ್ಥಾನಾಂತರ ಮಾಡುವಲ್ಲಿ ಔಚಿತ್ಯವಿರುವದು. ಶುಭ ಗ್ರಹಗಳಿರುವ ರಾಶಿಯನ್ನು ಆಳುವ ದೇಶಗಳಿಗೆ ತೆರಳುವದು ಹಿತಕರ. ಅದು ಸಾಧ್ಯವಿಲ್ಲದಿದ್ದರೆ ರವಿ ಚಂದ್ರರೊಡನೆ ಶುಭಯೋಗ ಮಾಡುವ ಗ್ರಹವು ಯಾವ ರಾಶಿಯಲ್ಲಿರುವದೋ ಆ ರಾಶಿಯ ಅಧಿಕಾರವಿರುವ ದೇಶಕ್ಕೆ ತೆರಳಬೇಕು. ದೇಶಗಳನ್ನು ಆಳುವ ರಾಶಿಗಳನ್ನೂ, ಕುಂಡಲಿಯ ದಿಕ್ ವಿಭಾಗಗಳನ್ನೂ ಕೆಳಗೆ ಕೊಟ್ಟಿರುವೆವು. ಸಣ್ಣ ಪ್ರವಾಸಗಳಲ್ಲಿ ಭಾವವನ್ನು ನೋಡುವದು ಉಚಿತ.

ಭಾವಸೂಚಿತ ದಿಗ್ವಿಭಾಗ:— ೧ ನೆಯ ಭಾವ ಪೂರ್ವ.
೨ ನೆಯ ಭಾವ ಉತ್ತರಕ್ಕೆ ಕೊಂಚ ಒಲಿದ ಪೂರ್ವ.

೩ ನೆಯ ಭಾವ ಹೆಚ್ಚಿಗೆ ಉತ್ತರಕ್ಕೆ ಒಲಿದ ಪೂರ್ವ. ೪ ಉತ್ತರ. ೫. ಹೆಚ್ಚು ಉತ್ತರಕ್ಕೆ ಒಲಿದ ಪಶ್ಚಿಮ. ೬. ಕಡಿಮೆ ಉತ್ತರಕ್ಕೆ ಒಲಿದ ಪಶ್ಚಿಮಕ್ಕೇ ಸರಿದ ಉತ್ತರ. ೭. ಪಶ್ಚಿಮ. ೮. ಸ್ವಲ್ಪ ದಕ್ಷಿಣಕ್ಕೆ ಒಲಿದ ಪಶ್ಚಿಮ. ೯. ಹೆಚ್ಚು ದಕ್ಷಿಣಕ್ಕೆ ಒಲಿದ ಪಶ್ಚಿಮ. ೧೦. ದಕ್ಷಿಣ. ೧೧ ಹೆಚ್ಚು ದಕ್ಷಿಣಕ್ಕೆ ಒಲಿದ ಪಶ್ಚಿಮ. ೧೨. ಕಡಿಮೆ ದಕ್ಷಿಣಕ್ಕೆ ಒಲಿದ ಪೂರ್ವ.

ಪ್ರವಾಸದಲ್ಲಿ ಗ್ರಹಗಳ ವರ್ಚಸ್ಸು ಚಂದ್ರನ ನವಮದಲ್ಲಿದ್ದರೆ ಪ್ರವಾಸ ಪ್ರೀತಿ ಇರುವದು. ಹರ್ಶಲನ ದೃಷ್ಟಿಯು ಕೇಂದ್ರ, ೩, ೯ ರಲ್ಲಿದ್ದರೆ ಒಮ್ಮೆಲೆ ಸ್ಥಾನಾಂತರದ ಸಂದರ್ಭಗಳು ಬರುವವು. ಮಿಥುನ ಧನುಗಳು ಲಗ್ನದಲ್ಲಿ, ದಶಮದಲ್ಲಿದ್ದರೆ ಪ್ರವಾಸ, ದೂರ ಪ್ರವಾಸದ ಯೋಗವಿರುವದು. ಮಿಥುನ, ಧನೂ ಮೀನಗಳು ಮೇಲಿಂದ ಮೇಲೆ ಬದಲಿ, ಪರಿವರ್ತನ ಸೂಚಕವಾಗಿವೆ. ಪಂಚಮವು ಗುರು ಮಂಗಳರೊಡನೆ ಶುಭಯೋಗಿಯಾಗಿ ೫-೯ರ ಅಧಿಪತಿಗಳಾಗಿದ್ದರೆ ವಿಲಾಸದ ಪ್ರವಾಸಗಳಾಗುವವು.

ಬುಧನು ಚಿಕ್ಕ ಪ್ರವಾಸಗಳ, ಉದ್ಯಮದ ನಿಮಿತ್ತ ಪ್ರವಾಸಗಳ ಸೂಚಕನಾಗಿರುವನು. ಚಂದ್ರ ಬುಧಯುತಿ ಸ್ವಾಗತ ಸೂಚಕವು. ಇಬ್ಬರೂ

೧, ೩, ೯ ರಲ್ಲಿದ್ದರೆ ಹಲವು ದೂರ ಪ್ರವಾಸಗಳಾಗುವವು. ಪೀಡಿತರಿದ್ದರೆ ಸಂಕಟಗಳುದ್ಭವಿಸುವವು. ಶುಕ್ರನು ೯ ರಲ್ಲಿದ್ದರೆ ಸುಖ ಪ್ರವಾಸ, ವಿಲಾಸಕ್ಕಾಗಿ ಪ್ರವಾಸ ಜರಗುವದು. ನೌಕಾಯಾನದ ಪ್ರೀತಿ ಇರುವದು. ಪೀಡಿತನಿದ್ದರೆ ಅಶುಭ ಪ್ರವಾಸಗಳು. ಮಂಗಳನು ಉತ್ತೇಜಕ ಸಾಹಸದ ಸಂಕಟದ ಪ್ರವಾಸಗಳ ಸೂಚಕನಾಗಿರುವನು. ಆತನು ರವಿ ಚಂದ್ರರ ದೃಷ್ಟಿಯಲ್ಲಿದ್ದರೆ ಪರಿವರ್ತನ ಸೂಚಕನು. ಮಂಗಳನು ನವಮದಲ್ಲಿ ರವಿ ಚಂದ್ರರ ಅಶುಭಯೋಗದಲ್ಲಿದ್ದರೆ ದೂರ ಪ್ರವಾಸದಲ್ಲಿ ತ್ರಾಸಗಳುಂಟಾಗುವವು. ಗುರು ಪರಪ್ರದೇಶದಲ್ಲಿ ಧನಕನಕ ಕೀರ್ತಿಗಳನ್ನು ಕೊಡುವನು. ಮಂಗಳನಿಂದ ಪೀಡಿತನಿದ್ದರೆ ಅಪಘಾತ, ಜಲಾಪಘಾತಕಗಳ ಸೂಚಕನಾಗುವನು.

ಶನಿಯು ಅಸುಖ ಪ್ರವಾಸಗಳಿಗೆ ಕಾರಣನಾಗುವನು. ಮೇಲಿಂದ ಮೇಲೆ ಜನ್ಮಭೂಮಿಯ ನೆನಪು ಕೊಡುವನು. ಹರ್ಶಲನು ಅನಿರೀಕ್ಷಿತ ಅದ್ಭುತ ಪ್ರವಾಸಗಳಿಗೆ ಕಾರಣನಾಗುವನು. ನೇಪಚ್ಯೂನನಿಂದ ದೂರದ ಜಲಪ್ರವಾಸವಾಗುವದು.

ಮಂಗಳ ಬುಧ ಚಂದ್ರರು ಜಲರಾಶಿಯಲ್ಲಿ ಅಸ್ತಂಗತವಾಗುತ್ತಿದ್ದರೆ ಜಲಸಮೀಪದ ಪ್ರದೇಶದಲ್ಲಿ ಬಹಳ ಕಾಲ ವಾಸಿಸುವದನ್ನು ಸೂಚಿಸುವದು. ರವಿ ಚಂದ್ರರು ಸಪ್ತಮದಲ್ಲಿದ್ದರೆ ಉದ್ಯೋಗಕ್ಕಾಗಿ ಶತ್ರು ವಿಜಯಕ್ಕಾಗಿ ಪ್ರವಾಸವನ್ನು ಕೈಕೊಳ್ಳಬೇಕಾಗುವದು.

ಚಂದ್ರನು ೭, ೯ ರಲ್ಲಿದ್ದರೆ ಪ್ರವಾಸ ಪರಿವರ್ತನಗಳನ್ನು ಸೂಚಿಸುವನು. ವಿಶೇಷವಾಗಿ ಮೇಷ ಧನುಗಳು ಅಲ್ಲಿರಬೇಕು. ಕರ್ಕ, ಕನ್ಯಾ, ತುಲಾ, ಮಕರ, ಮೀನಗಳಲ್ಲಿಯ ಚಂದ್ರನು ಲಘು ಪ್ರವಾಸ ಸೂಚಕನು. ಚಂದ್ರನು ಧನು ಮೀನ ಮಿಥುನದಲ್ಲಿ ಯಾವ ಭಾಗದಲ್ಲಿದ್ದರೂ ವಾಸಸ್ಥಳವನ್ನು ಬದಲಿಸುವ ಪ್ರಸಂಗಗಳು ಬರುವವು. ಅನಿರೀಕ್ಷಿತವಾಗಿ ವಿಚಿತ್ರ ರೀತಿಯಿಂದ ಅಸಾಧಾರಣವಾಗಿ ಬದಲಿಸುವ ಸಂದರ್ಭಗಳು ಬರುವವು. ಬುಧನು ಕೇಂದ್ರದಲ್ಲಿ ಚರರಾಶಿಯಲ್ಲಿ ಇಲ್ಲವೆ ದ್ವಿಸ್ವಭಾವಿ ರಾಶಿಯಲ್ಲಿದ್ದರೆ ಮನಸ್ಸಿನ ಚಾಂಚಲ್ಯ, ಪ್ರವಾಸ ಪ್ರೇಮಗಳು ಕಂಡು ಬರುವವು.

ಮಂಗಳ ಬುಧ ಚಂದ್ರರು ಅಸ್ತಂಗತರಾಗುತ್ತಿದ್ದು, ಯುತಿಯಲ್ಲಿ ಅಥವಾ ಪರಿವರ್ತನ ಯೋಗದಲ್ಲಿರುತ್ತಿದ್ದರೆ, ಕರ್ಕ, ಮೀನ, ವೃಶ್ಚಿಕ ರಾಶಿಯಲ್ಲಿದ್ದರೆ ಜಲಪ್ರವಾಸ, ಇಲ್ಲವೆ ಜಲಸಮೀಪದಲ್ಲಿ ಬಹಳ ಕಾಲ ವಾಸಿಸುವದು ಉಂಟಾಗುವದು. ಬುಧ ಚಂದ್ರ ಯುತಿ ಪರಸ್ಪರ ಪರಿವರ್ತನದಲ್ಲಿ ೩, ೯ ರಲ್ಲಿದ್ದರೆ, ದೂರ ಪ್ರವಾಸಗಳುಂಟಾಗುವವು. ಸೂರ್ಯ ಚಂದ್ರರ ರಾಶಿಯ ಆಧಿಪತ್ಯವು ಗುರು ಶುಕ್ರರ ಕಡೆಗಿದ್ದು ಅವರೊಡನೆ ಶುಭಯೋಗ ಮಾಡುತ್ತಿದ್ದರೆ— ವಿಶೇಷತಃ ಚಂದ್ರನು ಶುಭಯೋಗ ಮಾಡುತ್ತಿದ್ದರೆ— ಪ್ರವಾಸವು ಸೊಗಸಾಗುವದು. ಅಲ್ಲಿ ಲಾಭ ಉದ್ಯಮಗಳು ಸಿಗುವವು. ಸಂಕಟಗಳು ಬರುವದಿಲ್ಲ. ಸುರಕ್ಷಿತವಾಗಿ ಮನೆಗೆ ಮರಳುವರು. ಗುರು ಶುಕ್ರರೊಡನೆ ಬುಧನೂ ಕೂಡಿಕೊಂಡಿದ್ದರೆ ಪ್ರವಾಸದಿಂದ ಗೌರವವು ಸಿಗುವದು. ಶನಿಯ ಶುಭಯೋಗದಿಂದ ವಾರಸಾನಾತೆಯಿಂದ ಧನ ಪ್ರಾಪ್ತಿ, ಮಂಗಳನ ಶುಭಯೋಗದಿಂದ ಮರ್ಯಾದೆ ಅಧಿಕಾರಗಳು; ಹರ್ಶಲನ ಶುಭಯೋಗನಿಂದ ಸಾರ್ವಜನಿಕ ಮನ್ನಣೆ ಸಿಗುವವು.

ಪ್ರವಾಸ ಸೂಚಕ ಗ್ರಹಗಳು ಹರ್ಶಲ ಶನಿ ಮಂಗಳ ರವಿಗಳೊಡನೆ ಅಶುಭಯೋಗ ಮಾಡುತ್ತಿದ್ದರೆ; ಇವುಗಳ ನಡುವೆ ಬಹಳ ಅಂತರವಿದ್ದು ಸೂಚಕ ಗ್ರಹಗಳ ನಂತರ ಅವು ಉದಯ ಹೊಂದುತ್ತಿದ್ದರೆ, ಪ್ರವಾಸಗಳಲ್ಲಿ ತೊಂದರೆಗಳುಂಟಾಗುವವು. ಪ್ರವಾಸ ಭಾಗ್ಯವು ಸೂಚಕವಾಗಲಾರದು. ಶುಕ್ರನು ಪೀಡಿತನಿದ್ದರೆ ಸೊಗಸಾದ ಪ್ರವಾಸವಾಗಲಾರದು. ಪೀಡಿಸುವ ಗ್ರಹವು ೧೨ ರಲ್ಲಿದ್ದರೆ ಕಾರಾವಾಸದ ಭಯವು. ೨, ೩ ರಲ್ಲಿದ್ದರೆ ಬಂಧು ಬಾಂಧವರ ಭೀತಿ. ಭಾವಗಳಿಂದ ಭಯದ ಗಂಟಿಯ ದಿಗ್ದರ್ಶನ ಮಾಡ ಬಹುದು. ಪೀಡಿಸುವ ಗ್ರಹವು ಕರ್ಕ ವೃಶ್ಚಿಕ ಮೀನದಲ್ಲಿದ್ದರೆ ಹಡಗು ಮುಳಗುವದು, ಬಿರುಗಾಳಿ ಬೀಸುವದು, ಮುಳಗುವದು, ನಿರ್ಜನ ಪ್ರದೇಶದಲ್ಲಿ ಸಿಕ್ಕಿ ಬೀಳುವದು ಮೊದಲಾದ ಸಂಕಟಗಳುಂಟಾಗಬಹುದು. ಮೇಷ ಮಕರ, ತುಲಾಗಳು ಆಹಾರಾಭಾವವನ್ನು ಸೂಚಿಸುವವು; ಉಳಿದ ಕೊರತೆಗಳನ್ನೂ ಸೂಚಿಸುವವು.

ಮಿಥುನ ಕನ್ಯಾಗಳಿದ್ದರೆ ದರೋಡೆ ಖೋರರಿಂದ ಆವೃತವಾಗುವದು

ವಿಶೇಷವಾಗಿ ಮಂಗಳ ಬುಧರ ಅಶುಭಯೋಗವಿದ್ದರೆ ಚೋರ ಭಯ. ಧನು ಆರಣ್ಯಕ ಪಶುಭಯ ಸೂಚಕವು. ವಿಶಿಷ್ಟ ಕಾಲವನ್ನು ಪ್ರಾಥಮಿಕ ಯೋಗ ಪದ್ಧತಿಯಿಂದ ನಿರ್ಣಯಿಸಬೇಕು.

ಚಂದ್ರ ರವಿಗಳು ಸಪ್ತಮದಲ್ಲಿದ್ದದ್ದರೆ, ಅಸ್ತಂಗತರಾಗುತ್ತಿದ್ದರೆ ಪರಿಸ್ಥಿತಿ ಸುಧಾರಣೆಗಾಗಿ, ಉದ್ಯೋಗಕ್ಕಾಗಿ, ಸಾರ್ವಜನಿಕ ಶತ್ರುತ್ವದ ಪೀಡಾ ಪರಿಹಾರಕ್ಕಾಗಿ ಪ್ರವಾಸ ಮಾಡುವನು. ಪ್ರವಾಸ ಸೂಚಕಗಳಾದ ಮಂಗಳ ಧನಸಹಮ ಬಿಂದುಗಳು ಯಾವ ಭಾವದಲ್ಲಿ ಇರುವವೆಂಬುದನ್ನು ನೋಡಿರಿ. ೨ ರಲ್ಲಿದ್ದರೆ ಧನ ಸಂಪಾದನೆಗೆ ಪ್ರವಾಸ; ದಶಮದಲ್ಲಿದ್ದರೆ ಗೌರವಕ್ಕಾಗಿ; ವ್ಯಾಪಾರಕ್ಕಾಗಿ; ಲಗ್ನದಲ್ಲಿದ್ದರೆ ನೂತನ ಪ್ರದೇಶದ ಅವಲೋಕನ ಕುತೂಹಲವಿರುವದು. ಪ್ರವಾಸ ಸೂಚಕ, ಗ್ರಹಗಳ ಸೂಚಕಕಾರಕ ಪದಾರ್ಥಗಳಿಗಾಗಿ ಅವನು ಪ್ರವಾಸ ಮಾಡುವನು.

ಸೂರ್ಯ ಚಂದ್ರರ ಸ್ಥಿತಿಯನ್ನು ನೋಡಿ ಅವರ ಪ್ರಕೃತಿಯನ್ನು ಊಹಿಸಬಹುದು. ಸೂರ್ಯ ಚಂದ್ರರು ಪೂರ್ವಭಾಗದಲ್ಲಿದ್ದರೆ ಜಗತ್ತಿನ ಪೂರ್ವಭಾಗದಲ್ಲಿ ಅವನು ಸಂಚರಿಸುವನು. ದಶಮದಲ್ಲಿದ್ದರೆ ದಕ್ಷಿಣ, ೭ ರಲ್ಲಿದ್ದರೆ ಪಶ್ಚಿಮ, ೪ ರಲ್ಲಿದ್ದರೆ ಉತ್ತರದಿಕ್ಕು. ಮೀನ ಧನು ಮಿಥುನಗಳು ಪುನರಾವರ್ತನ ಪ್ರವಾಸ ಸೂಚಿಸುವವು. ಉಳಿದ ರಾಶಿಗಳು ವಿಲಂಬಿತ ಪ್ರವಾಸ ಸೂಚಿಸುವವು. ೧, ೨, ೯, ೧೦, ೧೧ ರಲ್ಲಿದ್ದ ರಾಶಿ ಸೂಚಕ ದೇಶಗಳಿಗೆ ಹೋಗಬೇಕು. ಗುರು ಶುಕ್ರ ಧನಸಹಮ ಬಿಂದು ರಾಹು ಇದ್ದ ದೇಶಗಳಿಗೆ, ರಾಶಿಗಳ ದೇಶಗಳಿಗೆ ಪ್ರವಾಸ ಮಾಡಬಹುದು. ಕೇತು ಹರ್ಶಲ ಮಂಗಳ ಇದ್ದ ರಾಶಿಗಳ ದೇಶಗಳಿಗೆ ಹೋಗಬಾರದು. ಇವು ೪, ೬, ೭, ೮, ೧೨ ರಲ್ಲಿದ್ದರೆ ಆ ದೇಶಗಳನ್ನು ವರ್ಜಮಾಡಬೇಕು.

ಪ್ರವಾಸದಲ್ಲಿ ಗ್ರಹಗಳ ಪರಿಣಾಮ:— ರವಿ ೯ ರಲ್ಲಿ ಪರಪ್ರದೇಶದಲ್ಲಿ ಗೌರವ ಕೊಡುವನು. ಚಂದ್ರನು ೯ ರಲ್ಲಿದ್ದರೆ ಪ್ರವಾಸ ಪ್ರೀತಿ ಇರುವದು. ಚಂದ್ರನು ಕೇಂದ್ರದಲ್ಲಿ, ೩ ರಲ್ಲಿ ೯ ರಲ್ಲಿದ್ದು ಹರ್ಶಲನ ದೃಷ್ಟಿಯಲ್ಲಿದ್ದರೆ ಅಕಸ್ಮಿಕವಾಗಿ ಒಮ್ಮೆಲೆ ಬದಲಿ— ಸ್ಥಾನಾಂತರವಾಗುವದು. ಚಂದ್ರನು

ಲಗ್ನದಲ್ಲಿ, ದಶಮದಲ್ಲಿ ಮಿಥುನ ಧನೂದಲ್ಲಿದ್ದರೆ, ಪ್ರವಾಸ ಪ್ರೀತಿಯಿರುವದು, ದೂರ ಪ್ರವಾಸ ಜರುಗಬಹುದು ಅಥವಾ ಸಮುದ್ರಯಾನ ಕೈಕೊಳ್ಳಬಹುದು. ಆತನು ಮೀನದಲ್ಲಿದ್ದರೆ ಲಾಭದಾಯಕನಾಗುವನು. ಪಂಚಮದಲ್ಲಿದ್ದು ಗುರು ಮಂಗಳ ಶುಭದೃಷ್ಟಿಯಲ್ಲಿದ್ದರೆ ಅಥವಾ ನವಮಾಧಿಪನು ಚಂದ್ರನಾಗಿದ್ದರೆ ವಿಲಾಸಕ್ಕಾಗಿ ಪ್ರವಾಸ ಜರಗುವದು. ಬುಧನಿಂದ ಲಘು ಪ್ರವಾಸಗಳು ಉದ್ಯೋಗಕ್ಕಾಗಿ, ಮಾನಸಿಕ ಕಲ್ಯಾಣಕ್ಕಾಗಿ ಜರಗುವವು. ಬುಧನು ಚಂದ್ರನ ಯುತಿಯಲ್ಲಿ ೧, ೩, ೯ ರಲ್ಲಿದ್ದರೆ ಪ್ರವಾಸದಲ್ಲಿ ಸ್ವಾಗತವು ದೊರಕುವದು. ಇಂದಿನ ಮಂತ್ರಿಗಳಂತೆ ಸತ್ಕಾರ ಸಮಾರಂಭಗಳು ಜರಗುವವು; ದೂರ ಪ್ರವಾಸವನ್ನು ಕೈಕೊಳ್ಳಬಹುದು. ಪೀಡಿತರಿದ್ದರೆ ತೊಂದರೆಗಳುದ್ಭವಿಸುವವು. ಶುಕ್ರನು ನವಮದಲ್ಲಿದ್ದರೆ ಚೈನಿಗಾಗಿ, ಸೊಗಸಿಗಾಗಿ ಪ್ರವಾಸ ಕೈಕೊಳ್ಳುವರು.

ಮಂಗಳನು ರವಿ ಚಂದ್ರರ ಪೀಡಿಯಲ್ಲಿದ್ದರೆ ಪ್ರವಾಸಗಳು ಸಂಕಟಮಯವಾಗುವವು. ಗುರುವಿನಿಂದ ಅರ್ಥಲಾಭವಾಗುವದಲ್ಲದೆ ಗೌರವವು ದೊರಕುವದು. ಮಂಗಳನ ಪೀಡೆಯಲ್ಲಿದ್ದರೆ ಅಪಘಾತ ಭಯವಿರುವದು. ಶನಿಯು ಪ್ರವಾಸಕ್ಕೆ ಅನುಗ್ರಾಹಕನಲ್ಲ. ಅವನದು ಗೃಹ ಪ್ರೇಮವು. ನೇಪಚ್ಯೂನನು ಜಲಪ್ರವಾಸ ಸೂಚಕನು. ಹರ್ಶಲನು ಆಕಸ್ಮಿಕ ಪ್ರವಾಸ ಯೋಗಗಳನ್ನು ತರುವನು.

ಸಾಯನ ಕುಂಡಲಿಯಲ್ಲಿ ನೋಡಬೇಕಾದ

ಕೆಲವು ವಿಶಿಷ್ಟ ಯೋಗಗಳು

ನಮ್ಮವರು ಅನೇಕ ಯೋಗಗಳನ್ನು ಹೇಳುವರು. ಸಾಮ್ರಾಜ್ಯ ಯೋಗ, ರಾಜಯೋಗ, ಇಂದ್ರಯೋಗ, ಚಂದ್ರಯೋಗ ಇತ್ಯಾದಿ. ಅವುಗಳನ್ನು ನಾವು ಮಹಾಪುರುಷರ ಕುಂಡಲಿಯಲ್ಲಿ ಕಾಣುವಂತೆ ಸಾಮಾನ್ಯರ ಕುಂಡಲಿಯಲ್ಲಿಯೂ ಕಾಣುತ್ತೇವೆ. ಇದರಿಂದ ವಾಚಕರು ದಿಗ್ಭ್ರಾಂತರಾಗುವರು. ಷಡ್ಬಲ ವಿಚಾರವನ್ನು ಒಮ್ಮೆಲೆ ಮಾಡುವದು ದುಃಸಾಧ್ಯ. ಆದರೆ ವಾಚಕರು ದಿಗ್ಭ್ರಾಂತರಾಗದೆ ಸಾಯನದಲ್ಲಿ ವಾಚಕರು ಸತ್ಯದ ಪ್ರಮಾಣವನ್ನು ಹೆಚ್ಚಾಗಿ ಕಾಣುವಂತೆ ಕೆಲವು ಸಾಯನ ವಾದಿಗಳ ಯೋಗಗಳನ್ನು ಇಲ್ಲಿ ಕೊಟ್ಟಿರುವೆವು. ವಾಚಕರು ಅವನ್ನು ಪರೀಕ್ಷಿಸಿ ನೋಡಬಹುದು.

ಮಹತ್ವಾಕಾಂಕ್ಷಾಯೋಗ:—ಶನಿಯು ಬಲಿಷ್ಠನಿರಬೇಕು. ಮಕರ ರಾಶಿ ಲಗ್ನದಲ್ಲಿರಲಿ, ದಶಮದಲ್ಲಿರಲಿ ದಶಮ ಭಾವ ಬಲಿಷ್ಠವಿರಬೇಕು. ಅಂದರೆ ಮಾನವನು ಮಹತ್ವಾಕಾಂಕ್ಷಿಯಾಗುವನು. ಚರರಾಶಿಗಳು ಸುಮ್ಮನೆ ಕೂಡ್ರಲಾರವು. ಅವುಗಳಿಗೆ ನಿರ್ದಿಷ್ಟ ಉದ್ದೇಶವಿರುವದು. ಇದು ಮಹತ್ವಾಕಾಂಕ್ಷೆಯೆಂದು ತಿಳಿಯಬಾರದು. ಮಕರವು ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಿ ಮುಂದೆ ಬರಲು ಹವಣಿಸುವದು. ಮೇಷವು ಪ್ರತಿಕೂಲತೆಯನ್ನು ನಾಶಪಡಿಸುವದು. ಕರ್ಕವು ಹಿಂದೆ ಸರಿಯಲು ಯತ್ನಿಸುವದು. ತುಲಾ ಹೊಂದಿಕೊಂಡು ಹೋಗಲು ಯತ್ನಿಸುವದು. ಸ್ಥಿರ ರಾಶಿಗಳು ಕಾಯ್ದುಕೊಂಡಿರಲು ಯತ್ನಿಸುವವು. ದ್ವಿಸ್ವಭಾವಿ ರಾಶಿಗಳು ದೂರನಿಂತು ನಿರೀಕ್ಷಣೆ ಮಾಡುವವು. ಅವು ವಿಮರ್ಶಕ ಜೀವನ ಕಲಹದಲ್ಲಿ ಪಾಲುಗಾರರಾಗರು.

ಪ್ರಾಗಲ್ಭ್ಯಯೋಗ: — ಇದು ಮಂಗಳನ ಗುಣಧರ್ಮ. ಮೇಷಕ್ಕಿಂತ ವೃಶ್ಚಿಕದಲ್ಲಿ ಹೆಚ್ಚಾಗಿ ತೋರುವದು. ಖ್ಯಾತಿಗಾಗಿ ವೃಶ್ಚಿಕವು ಆತುರ

ವಾಗಿದ್ದರೂ ಸ್ಥಬ್ಧತೆ ಮೌನ ಕಂಡು ಬರುವದು. ರವಿ ಮಂಗಳರ ಅಶುಭ ಯೋಗ, ಮಂಗಳ ಗುರುಗಳ ಅಶುಭಯೋಗ, ಮಂಗಳ ನೇಪಚ್ಯೂನರ ಅಶುಭಯೋಗಗಳಿದ್ದಲ್ಲಿ ಒಣಡೌಲು ತೋರಿಬರುವದು.

ವೃಶ್ಚಿಕವು ಆರಂಭದ ಅವಸ್ಥೆಯಲ್ಲಿ, ಯಾರೂ ಅದನ್ನು ಗಣನೆಗೆ ತಾರ ದಿದ್ದರೆ ಡೌಲು ತಕರಾರುಗಳ ಜನಕವಾಗುವದು. ಸೋಲ್ಜರರು ಮೇಷ ಕ್ಕಿಂತ ವೃಶ್ಚಿಕ ರಾಶಿಯ ಅಧಿಕಾರದಲ್ಲಿ ಬರುವರು. ಆಂಗ್ಲ ಕವಿ ಮಿಲ್ಟನನು ಜ್ಯೋತಿಷ್ಯದ ತತ್ವಗಳ ಪರಿಚಯವುಳ್ಳವನಾಗಿದ್ದನು. ಅವನ ಸೈತಾನನ ಚಿತ್ರವು ವೃಶ್ಚಿಕ ರಾಶಿಯ ಡೌಲಿನದು. ಈ ಗುಣವು ಹರ್ಶಲನಲ್ಲಿಯೂ ಕಂಡು ಬರುವದು.

ಶಾಂತಿ ಯೋಗ:— ಆತ್ಮ ವಿಕಾಸವನ್ನು ಪಡೆದ ಯಾವ ರಾಶಿಯ ಮನುಷ್ಯನಲ್ಲಿಯೂ ಇದು ಕಂಡು ಬರುವದು. ಇದು ಮುಖ್ಯವಾಗಿ ಶುಕ್ರನ ಗುಣಧರ್ಮ. ಬುಧ ಶುಕ್ರಯುತಿ ದಶಮದಲ್ಲಿರುವದು ಶಾಂತತಾಯೋಗವು. ವೃಷಭ, ಶನಿಗಳು ತಾಮಸೀ ಗುಣಕ್ಕೆ ಮುಂದಾಳುಗಳು. ಅನೇಕ ಗ್ರಹಗಳು ವಾಯು ರಾಶಿಯಲ್ಲಿದ್ದರೆ ಶಾಂತತೆಯನ್ನು ವ್ಯಕ್ತಪಡಿಸುವವು. ಆದರೆ ಈ ಯೋಗವು ಪ್ರೇಮ ಸಂಚಿತವಲ್ಲ. ಭಾವನಾಪ್ರಾಧಾನ್ಯ, ಪ್ರೇಮ ಶುಕ್ರನ ಗುಣಧರ್ಮಗಳು. ಅವು ವಾಯು ರಾಶಿಯಲ್ಲಿ ಕಂಡು ಬರಲಾರವು.

ಸಾವಧಾನ (ಮುಂಜಾಗೃತೆ) **ಯೋಗ:**— ಇದು ಚಂದ್ರ ಶನಿಗಳ ಪರಿಣಾಮವು. ಚಂದ್ರನ ಮುಂಜಾಗೃತಿ ಆತ್ಮರಕ್ಷಣಕ್ಕಾಗಿ, ತನ್ನನ್ನು ತಾನು ಕಾಯ್ದುಕೊಳ್ಳುವದಕ್ಕಾಗಿ. ಇದು ಚಂದ್ರನಲ್ಲಿ ಕರ್ಕದಲ್ಲಿ ಕಂಡು ಬರುವದು. ಶನಿಯ ಮುಂಜಾಗೃತಿ ಭೌತಿಕ ಪದಾರ್ಥಗಳ ಆಸಕ್ತಿಯಿಂದ ಹುಟ್ಟುವದು. ಅವನು ಪ್ರಯೋಜನ ಪಡೆಯುವದಕ್ಕಾಗಿ ಸಾವಧಾನತೆಯಿಂದ ಎಲ್ಲವನ್ನೂ ನೋಡುವನು. ಮೇಷ, ಸಿಂಹ, ಧನುಗಳಂತೆ ಅವನು ಮೋಹಕ್ಕೆ ಒಳಗಾಗಲಾರನು.

ಔದಾರ್ಯಯೋಗ: — ಪರೋಪಕಾರ, ಭಿಕ್ಷೆ ನೀಡುವದು, ದಾನ ಕೊಡುವುದು, ತಪ್ಪುಗಳನ್ನು ಕ್ಷಮಿಸಿಯೂ ಈ ಗುಣಗಳಿರುವದು ಗುರುವಿ

ನಲ್ಲಿ. ವಿಶೇಷವಾಗಿ ಇದು ಮೀನ ರಾಶಿಗೆ ಸಂಬಂಧಪಟ್ಟಿರುವದು. ವಿಶ್ವ-ವ್ಯಾಪಿ ಈ ಸದ್ಗುಣವು ನೇಪಚ್ಯೂನನಲ್ಲಿ ಅತ್ಯುನ್ನತವಾಗಿ ಕಾಣಬರುವದು. ಹಲವರ ಕುಂಡಲಿಯಲ್ಲಿ ವರುಣ, ಮೀನ ರಾಶಿಯ ಪ್ರಾಬಲ್ಯವಿದ್ದರೂ, ಕನ್ಯಾ ವೃಶ್ಚಿಕ ಲಗ್ನದವರ ವಿಮರ್ಶಕ ಶಕ್ತಿ ಹೆಚ್ಚಿಗಿರುವದರಿಂದ ಔದಾ-ರ್ಯದ ಕೊರತೆ ಕಂಡು ಬರುವದು. ಧನುವಿನಲ್ಲಿಯೂ ಔದಾರ್ಯದ ಗುಣವು ಕಂಡು ಬರುವದು. ಇದು ಯದ್ಯಪಿ ತಪ್ಪು ಹುಡುಕಿ ವ್ಯಾಜ್ಯೋಕ್ತಿ ಪ್ರಿಯವಾದರೂ (ಕನ್ಯಾ ಪ್ರಾಬಲ್ಯವಿದ್ದಲ್ಲಿ) ದಾನಗುಣವು ಕಂಡು ಬರುದದು.

ಶುಕ್ರನ ರಾಶಿಗಳು ಛಿದ್ರಾನ್ವೇಷಿಗಳಲ್ಲ. ಅವುಗಳ ದೃಷ್ಟಿ ದಯಾರ್ದ್ರ. ಸಿಂಹವು ಕಟು ಟೀಕಾಕಾರನಲ್ಲ. ಕುಂಭದಲ್ಲಿ ಔದಾರ್ಯ ತಿಳುವಳಿಕೆ ಎರಡೂ ಗುಣಗಳು ಕಂಡು ಬರುವವು.

ವಂಚನಾಯೋಗ:— ಬೌದ್ಧಿಕ ವಂಚನೆ ಕನ್ಯಾದಲ್ಲಿ ಕಂಡು ಬರುವದು. ಶಾರೀರಿಕ ಸಾಮರ್ಥ್ಯದ ವಂಚನೆಯಿಂದ ಇದು ಹಿಂದೆ ಸರಿಯುವದು. ಅವರ ವಂಚನೆ ಲುಕ್ಸಾನ ಭರಪಾಯಿಗಾಗಿ ಇರುವದು. ಲಜ್ಜಾ ಭಾವ ಇವರಲ್ಲಿ ವಿಶೇಷವಾಗಿ ಕಂಡು ಬರುವದು. ಪರರ ಭಯಕ್ಕಾಗಿ ತಾನು ಇತರರಿಂದ ಯೋಗ್ಯತೆಯುಳ್ಳವನೆಂದು ಮನಗಂಡು ಲುಕ್ಸಾನ ಭರಪಾಯಿಗಾಗಿ ವಂಚನಾ ಪ್ರವೃತ್ತರಾಗುವರು. ಇವರ ಬುದ್ಧಿ ಪಟುತ್ವಕ್ಕೆ ಬೌತಿಕ ಮನ್ನಣೆ ಸಿಗದ್ದರಿಂದ ಕೇವಲ ಮೇಲೆ ತೋರುವ ಅಪಜಯಕ್ಕಾಗಿ ವಂಚನಾ ಶಾಸ್ತ್ರವನ್ನು ಅವಲಂಬಿಸುವರು. ಸ್ವಾಭಾವಿಕ ದುಷ್ಟರಲ್ಲ. ಗುರು ಸೂರ್ಯರು ದ್ವಿಸ್ವಭಾವ ರಾಶಿಯಲ್ಲಿದ್ದರೆ ವಂಚನೆಯ (ಬೌದ್ಧಿಕ ವಂಚನೆ) ಗುಣವು ಕಂಡು ಬರುವದು. ಗುರು ರವಿಗಳ ಯೋಗವು ಸ್ಥಿರ ರಾಶಿಯಲ್ಲಾದರೆ ಆತ್ಮಸ್ತುತಿ ಮಾಡಿಕೊಳ್ಳುವರು. ಸಿಂಹಲಗ್ನ ಉದಿತವಿದ್ದವರಲ್ಲಿ ಇದು ಸ್ಪಷ್ಟವಾಗಿ ಕಂಡು ಬರುವದು. ಚರರಾಶಿಯಲ್ಲಿ ಯೋಗವುಂಟಾದರೆ ತನ್ನ ಸಾಮರ್ಥ್ಯ ಎಲ್ಲವನ್ನೂ ಮಾಡುವದೆಂದು ಆತ್ಮವಂಚನೆ ಮಾಡಿಕೊಳ್ಳುವರು. ಮೇಷ ಲಗ್ನ ಉದಿತವಿದ್ದರೆ ಇದು ಸ್ಪಷ್ಟವಾಗಿ ಕಂಡು ಬರುವದು. ರವಿ ದುರ್ಬಲನಾಗಿ ಮೀನದಲ್ಲಿದ್ದರೆ ವೃಥಾಹಂಕಾರ, ಅತಿರಿಕ್ತ ಆತ್ಮತೃಪ್ತಿಗಳು

ಕಂಡು ಬರುವವು. ಸಿಂಹದಲ್ಲಿ ಚಂದ್ರನು ದುರ್ಬಲನಾಗಿದ್ದರೆ ಅತಿರಿಕ್ತ ಆತ್ಮತೃಪ್ತಿ, ವೃಥಾಹಂಕಾರಗಳು ಕಂಡು ಬರುವವು. ಕೆಲವು ಸಾರೆ ಗುರುವಿನ ಕಾರ್ಯವನ್ನು ನೇಪಚ್ಯೂನನು ಮಾಡುವನು, ಕಲ್ಪಿತ ಆತ್ಮಸ್ತುತಿ, ಆತ್ಮಗೌರವ, ತನ್ನನ್ನು ಹೊಗಳಿಕೊಳ್ಳುವದು, ಹಗಲು ಗನಸುಗಳನ್ನು ಕಾಣುವರು.

ಧೈರ್ಯಯೋಗ:— ಶಾರೀರಿಕ ದೃಷ್ಟಿಯಿಂದ ವಿಚಾರಿಸಿದರೆ ಧೈರ್ಯವು ಮಂಗಳನ ಗುಣಧರ್ಮವು. ಮಂಗಳನ ರಾಶಿಯಲ್ಲಿ ಹುಟ್ಟಿದವರು ಮಂಗಳನು ಬಲಿಷ್ಠನಿದ್ದರೆ ಧೈರ್ಯಶಾಲಿಗಳಿರುವರು. ಮೇಷ ಲಗ್ನದಲ್ಲಿ ಹುಟ್ಟಿದವರು ಬೇಗ ಕೈಕೊಂಡು ಬೇಗ ಮುಗಿಸುವ ಕಾರ್ಯಗಳಲ್ಲಿ ಧೈರ್ಯ ತೋರುವರು. ವೃಶ್ಚಿಕ ರಾಶಿ–ಜಲರಾಶಿ ಕಲ್ಪಕ ಶಕ್ತಿ ಹೆಚ್ಚಿಗಿರುವದು. ಪರಿಣಾಮದಲ್ಲಿ ಸಂಕಟವಿರುವದೆಂದು ಕಂಡು ಹಿಡಿಯುವರು. ಆದರೆ ಇವರ ಇಚ್ಛಾಶಕ್ತಿ (Will power) ಪ್ರಬಲವಿರುವದರಿಂದ ಕರ್ತವ್ಯ ಭಾವನೆಯಿಂದ, ಭಕ್ತಿಯಿಂದ ಸಂಕಟಕ್ಕಾಗಿ ಎದೆಗೊಡುವ ಧೈರ್ಯ ತಾಳುವರು. ದೀರ್ಘಕಾಲದ ಕೃತಿಗಳಲ್ಲಿ, ಕಟುತ್ವಗಳಲ್ಲಿ, ಇವರ ಧೈರ್ಯ ಮಿಗಿಲಾದದ್ದು. ವೃಷಭ ಕುಂಭಗಳೂ ಧೈರ್ಯದ ರಾಶಿಗಳಾದರೂ ತಾಳ್ಮೆಯ ದೃಷ್ಟಿಯಿಂದ ಕಿಂಚಿನ್ನ್ಯೂನ. ನೈತಿಕ ಧೈರ್ಯವೂ ಮಂಗಳನ ಸದ್ಗುಣವು. ಆದರೆ ಕುಂಡಲಿಯು ಆದರ್ಶವಾಗಿರಬೇಕು. ಮಂಗಳನು ಅನೇಕ ಗ್ರಹಗಳೊಡನೆ ಶುಭಯೋಗ ಮಾಡುವಾಗ ಮೇಷವು ಉದಿತವಿದ್ದರೆ ಧೈರ್ಯವಿರುವದು. ಸೂರ್ಯನು ಕುಂಭದಲ್ಲಿದ್ದು ಶುಕ್ರ ಗುರುಯುತಿ ಮೀನದಲ್ಲಿ ವರುಣನ ಶುಭಯೋಗದಲ್ಲಿದ್ದರೆ ಕರ್ತವ್ಯ ಭಾವನೆ ಪ್ರಬಲವಾಗಿರುವದು.

ವಿಮರ್ಶಕ ಯೋಗ:— ಇದು ಕನ್ಯಾ ಲಗ್ನದ ಗುಣಧರ್ಮವು. ಇದು ವಿಭಜನೆಯಿಂದ ಗುಣಾವಗುಣಗಳನ್ನು ಆರಿಸಿ ಗ್ರಹಿಸುವದು. ಇದು ಲೋಕ ಪ್ರೀತಿಗಾಗಿ ಅಥವಾ ತನ್ನ ಸುಖಕ್ಕಾಗಿ ಅನೇಕ ಸಾರೆ ಅತಿರಿಕ್ತ ವಿಮರ್ಶಕನಾಗುವದು. ಪಾಪಗ್ರಹಗಳ ಪ್ರಾಬಲ್ಯವಿದ್ದರೆ ಮಾತ್ರ ತಪ್ಪುಗಳನ್ನು ಕಂಡರೂ ಹಿಂದೆ ಸರಿಸುವ ಸಾಮರ್ಥ್ಯವಿಲ್ಲದಿದ್ದರೆ ಬೆಕ್ಕಿನಂತೆ ಜಾರಿನುಸುಳಿ ಹಿಂದೆ ಹೋಗುವರು.

ವ್ಯಾಜೋಕ್ತಿಯೋಗ:— ಇದು ಧನುವಿನ ಗುಣಧರ್ಮವು. ಮಾತನಾಡುತ್ತ ಆಡುತ್ತ ಮೋಜು ಮಾಡುವದು, ಕರೆಯುವ ಹೆಸರು ಬಿಟ್ಟು ಇನ್ನೊಂದು ಉಪನಾಮದಿಂದ ಕರೆಯುವದು ಈ ರಾಶಿಯು ಲಗ್ನದಲ್ಲಿ ಹುಟ್ಟಿದವರ ಗುಣಧರ್ಮವಾಗಿರುವದು. ಕನ್ಯಾ ರಾಶಿಯ ಪ್ರಾಧಾನ್ಯವಿದ್ದರೆ ಮತ್ತಿಷ್ಟು ಮುಂದೆ ಹೋಗುವರು. ಎರಡನೆಯವರಿಗೆ ಮೋಜು ಮಾಡುವದೇ ಇವರ ಉದ್ದೇಶವು. ತಮ್ಮ ಯಶದ ಕೊರತೆಯನ್ನು ಪೂರೈಸುವದಕ್ಕಾಗಿ ಎರಡನೆಯವರ ಬಗ್ಗೆ ವ್ಯಾಜೋಕ್ತಿ, ವಕ್ರೋಕ್ತಿಗಳಿಂದ ಮಾತನಾಡುವದು ಕನ್ಯಾಲಗ್ನದವರ ಗುಣಧರ್ಮವು. ಬುದ್ಧಿ ಶಕ್ತಿಯುಳ್ಳ ಕವಿಗಳು ಎರಡನೆಯವರ ಟೀಕೆಗೆ ಗುರಿಯಾದಾಗ ವ್ಯಂಗೋಕ್ತಿ, ವ್ಯಾಜೋಕ್ತಿ; ವಕ್ರೋಕ್ತಿಗಳಿಂದ ಕಾವ್ಯ ಬರೆವರು. ಬಾಯರನ್ನನು ಕಾವ್ಯವನ್ನು ವ್ಯಂಗ್ಯೋಕ್ತಿಯಲ್ಲಿಯೇ ಬರೆದಿರುವನು. ಮಂಗಳ ಹರ್ಶಲರು ಕರ್ಕದಲ್ಲಿದ್ದು ಬುಧನ ಪ್ರತಿಯೋಗದಲ್ಲಿರುವವರು ವ್ಯಂಗ್ಯೋಕ್ತಿಗಳನ್ನಾಡುವರು. ಕೆಲವರು ಅವನದು ವೃಶ್ಚಿಕ ಲಗ್ನವೆಂದು ಹೇಳುವರು. ಅವನ ಬರಹಗಳು ನಿಜವಾಗಿ ಕೋಪೋದ್ರಿಕ್ತವಾಗಿರುವವು. ಆದರೆ ವ್ಯಂಗವು ಧನುವಿನ ಗುಣಧರ್ಮವು. ಪೋಪನ ಕವಿತೆಗಳಲ್ಲಿ ಮಿಥುನದ ಲಕ್ಷಣಗಳಿವೆಯೆಂದು ಬಲ್ಲವರು ಹೇಳುವರು. ಬುಧನ ರಾಶಿಗಳು ಲಘು ವಿನೋದ ಪ್ರಿಯವಾದವುಗಳು.

ಆತ್ಮಸಂಯಮುನ ಯೋಗ:— ಇದು ಬಲಿಷ್ಠ ಶನಿಯ ಗುಣಧರ್ಮವು. ವಿಶೇಷವಾಗಿ ಸ್ಥಿರ ರಾಶಿಯಲ್ಲಿದ್ದಾಗ ಈ ಗುಣವು ಎದ್ದು ಕಾಣುವದು. ದ್ವಿಸ್ವಭಾವಿ ರಾಶಿಗಳಲ್ಲಿ ಈ ಗುಣವು ಬಹುಮಟ್ಟಿಗೆ ಇರುವದಿಲ್ಲ. ಮಾನಸಿಕ ಸ್ಥಿತಿಯ ಬಗೆಗೆ ವಿಚಾರಿಸುವಾಗ ಅವುಗಳ ಬಲವು ಹೆಚ್ಚು. ಹರ್ಶಲ ಶನಿ ಶುಭಯೋಗವು ಆತ್ಮಸಂಯಮನಕ್ಕೆ ಅನುಕೂಲ ಯೋಗವು. ವೃಶ್ಚಿಕವು ಆತ್ಮಸಂಯಮನಕ್ಕೆ ಅದ್ಭುತ ಸಾಮರ್ಥ್ಯವನ್ನು ಕೊಡುವದು. ಶನಿ ವೃಶ್ಚಿಕದಲ್ಲಿ ಇಂತಹ ಬಲವನ್ನು ಕೊಡುವನು. ಮಂಗಳನು ಪೀಡಿತನಿದ್ದರೆ ಯಾವ ದಿಕ್ಕಿನಿಂದ ಅವನ ಸಂಯಮು ಭಂಗವಾಗುವದೆಂಬದನ್ನು ತೋರುವದು.

ಕರುಣಾಳು ಯೋಗ:— **(ಕಳಕಳಿ)**:— ಸಿಂಹರಾಶಿ ಕಳಕಳಿಯ

ರಾಶಿಯು. ಗುರು ಪೀಡಿತನಿದ್ದಾಗ ಧನುರಾಶಿ ವಂಚಿಸುವದು. ಶನಿಯ ಪೀಡೆ ಸಾರಲ್ಯವನ್ನು ಹಿಂದೆ ಸರಿಸುವದು. ವರುಣನು ಪೀಡಿತನಿದ್ದಾಗ ಟೊಪ್ಪಿಗೆ ಹಾಕುವ ಮಬ್ಬಿಗೆ ಬೀಳುವನು. ಅವನಿಗೆ ದುರುದ್ದೇಶವಿಲ್ಲದಿದ್ದರೂ ತಪ್ಪು ಪರಿಣಾಮಕ್ಕೆ ಕಾರಣನಾಗುವನು. ಮಂಗಳ ಹರ್ಶಲರಲ್ಲಿಯೂ ಕಳಕಳಿಯಿರುವದು. ಬಲಿಷ್ಠ ಶನಿಯು ಕೂಡ ಈ ಸದ್ಗುಣವನ್ನು ಕೊಡುವನು.

ನಿಂದೆ, ಚಾಡಿ ಯೋಗ:— ದಶಮದಲ್ಲಿ ಪಾಪಗ್ರಹವಿದ್ದರೆ ಈ ವೃತ್ತಿ ತೋರುವದು. ವಿಶೇಷವಾಗಿ ಬುಧನು ಅಲ್ಲಿ ಪೀಡಿತನಿದ್ದರೆ. ಮಂಗಳ ನೇಪಚ್ಯೂನರು ಅಲ್ಲಿ ಪೀಡಿತರಿದ್ದರೆ ಈ ಅವಗುಣವು ತೋರಿಬರುವದು. ಚಂದ್ರ ಬುಧರ ಅಶುಭ ಯೋಗವು ನಿಂದಾ ಪ್ರವೃತ್ತಿಗೆ ಕಾರಣವಾಗುವದು. ಮಂಗಳನು ಕೂಡಿಕೊಂಡಿದ್ದರೆ ತೀವ್ರತೆ ತೋರುವದು.

ಗ್ರಾಮ್ಯ ಭಾಷಾಯೋಗ — ಇದು ಧನುವಿನ ಗುಣಧರ್ಮವು. ಮೇಷ, ಸಿಂಹಗಳಲ್ಲಿಯೂ ಕಡಿಮೆ ಪ್ರಮಾಣದಿಂದ ಕಂಡು ಬರುವದು.

ಪ್ರವಾಸ ಪ್ರೀತಿಯೋಗ:— ಇದು ಗುರುವಿನ ಗುಣಧರ್ಮವು. ಗುರು ಲಗ್ನದಲ್ಲಿದ್ದವರು, ಧನುವಿನ ಪ್ರಾಬಲ್ಯವಿರುವಲ್ಲಿ ಪ್ರವಾಸ, ಸಂಚಾರ ಪ್ರೇಮಿಗಳಿರುವರು. ವೃಶ್ಚಿಕದಲ್ಲಿಯೂ ಸಂಚಾರ ಪ್ರೇಮವಿರುವದು. ಈರಫಿಸ್ ಎಂಬ ಗ್ರಹವೂ ಪ್ರವಾಸಕ್ಕೆ ಸಂಬಂಧಪಟ್ಟಿರುವದೆಂದು ಹೇಳುವರು.

ಸತ್ಯ ಸಂಧಯೋಗ:— ಆದರ್ಶ ಕುಂಭ ಲಗ್ನದವರ ಗುಣಧರ್ಮವಿದು. ಕೆಲಮಟ್ಟಿಗೆ ವೃಶ್ಚಿಕ ಮತ್ತು ಹರ್ಶಲರಲ್ಲಿ ಇದು ತೋರಿಬರುವದು. ವೃಶ್ಚಿಕ ಹರ್ಶಲರು ಆಳವನ್ನು ಶೋಧಿಸಲು ಯತ್ನಿಸುವರು. ಕ್ಷುಲ್ಲಕ ಸಂಗತಿಗಳನ್ನು ಅವರು ಸೇರಲಾರರು. ತುಲಾ ಧನೂಗಳು ಸಾಮಾನ್ಯವಾಗಿ ಸತ್ಯ ಪ್ರೇಮಿಗಳು. ಶನಿ ಬಲಿಷ್ಠನಿದ್ದರೆ ಸತ್ಯ ಪ್ರೇಮಿ. ಅವನು ಕಟು ಸತ್ಯಕ್ಕೆ ಅಂಟಿಕೊಳ್ಳುವನು. "ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್ ನಬ್ರೂಯಾತ್ ಸತ್ಯಮಪ್ರಿಯಮ್." ಇದು ಅವನ (ಶನಿಯ) ಗುಣವಲ್ಲ.

ಚಾಪಲ್ಯ ಯೋಗ:— ಇದು ಬುಧನ ಅಥವಾ ಮಿಥುನದ ಗುಣ ಧರ್ಮವು. ಮಂಗಳನು ಮಿಥುನದಲ್ಲಿದ್ದರೆ ಇದಕ್ಕೆ ಮತ್ತಷ್ಟು ಪೋಷಕವು. ಧನು ಮಕರಗಳೂ ಚಾಪಲ್ಯಕ್ಕೆ ಕಾರಣವಾಗಿರುವವು. ಆಕರ್ಷಕತೆ ತೋರುವಲ್ಲಿ ತುಲೆಯೂ, ಶುಕ್ರನೂ ಇದಕ್ಕೆ ಕಾರಣರಾಗುವರು.

ತಾರುಣ್ಯ ಯೋಗ:— ಮಿಥುನ ಧನು ರಾಶಿಗಳು ತರುಣ ರಾಶಿಗಳು. ವಯಸ್ಸಾದರೂ ಈ ರಾಶಿಯ ಲಗ್ನದವರಲ್ಲಿ ತಾರುಣ್ಯದ ಛಟಿ ಕಾಣುವದು. ಮಿಥುನವು ಕದಾಚಿತ್ ಮಾನಸಿಕ ತಾರುಣ್ಯದ ದ್ಯೋತಕವಾದರೆ, ಧನು ಶಾರೀರಿಕ ದೃಷ್ಟಿಯಿಂದ ತರುಣವಾಗಿ ತೋರುವದು. ತಾರುಣ್ಯದ ಉತ್ಸಾಹ ಅವರಲ್ಲಿ ಹೆಚ್ಚಾಗಿ ತೋರುವದು.

ಶುಕ್ರನು ತಾರುಣ್ಯವನ್ನು ಕಾಯ್ದುಕೊಳ್ಳುವನು. ಶನಿಯು ಮಾತ್ರ ಎಂದೂ ತರುಣನಲ್ಲ.

ಸಂಸಾರಾಸಕ್ತಿ ಯೋಗ:— ಪೃಥ್ವೀ, ಅಗ್ನಿರಾಶಿಗಳು ಹೆಚ್ಚಿಗೆ ಸಂಸಾರಾಸಕ್ತಿಯನ್ನು ವ್ಯಕ್ತಪಡಿಸುವವು. ಆಧ್ಯಾತ್ಮದ ಕಡೆಗೆ ಒಲಿದರೂ ಅವು ಕೇವಲ ಜೀವನ ಪ್ರೇರಣೆಯಿಂದ. ಸೂರ್ಯನು ಮೇಷದಲ್ಲಿ, ಮಂಗಳನು ಮಕರದಲ್ಲಿದ್ದವರಿಗೆ ವಿಶೇಷ ಭೌತಿಕವಾದಾಸಕ್ತಿ ಇರುವದು. ಶನಿ ದುರ್ಬಲನಿದ್ದು ಶುಕ್ರ ಮಂಗಳರು ಸಂಸಾರಾಸಕ್ತಿಯನ್ನು ಹೆಚ್ಚಿಸುವರು. ಮಹತ್ವಾಂಕ್ಷೆ, ಸ್ವಾರ್ಥಪ್ರೇರಣೆ ಇದ್ದವರ ಕುಂಡಲಿಗಳಲ್ಲಿ ೨-೧೦ ಭಾವಗಳು ಬಲಿಷ್ಠವಾಗಿರುವವು. ವಿಲಾಸಿಗಳ ಕುಂಡಲಿಯಲ್ಲಿ ಪಂಚಮಭಾವವು ಬಲಿಷ್ಠವಾಗಿರುವದು.

ದುರಾಗ್ರಹ ಯೋಗ:— ಸ್ಥಿರ ರಾಶಿಗಳಲ್ಲಿ ಈ ಗುಣವು ಕಂಡು ಬರುವದು. ಕಡಿಮೆ ಪ್ರಮಾಣದಲ್ಲಿ ಧನು, ಮಿಥುನಗಳಲ್ಲಿಯೂ ತೋರಿಬರುವದು. ಧನುವಿನಲ್ಲಿ ನೋಟದ ನಾವೀನ್ಯವು ಕಂಡು ಬರುವದು. ಶನಿಯ ಸಂಬಂಧವು ಸಂಕುಚಿತ ದೃಷ್ಟಿಗೆ ಕಾರಣವಾಗುವದು. ಶನಿ ಗುರುಗಳ ಶುಭ ಸಂಬಂಧವು ನ್ಯಾಯ ವಾದಿಗಳನ್ನು ನಿರ್ಮಿಸುವದು.

ಲೋಕ ಪ್ರೀತಿ ಯೋಗ:— ಇದು ಚಂದ್ರ ಶುಕ್ರರಿಗೆ ಸಂಬಂಧ

ಪಟ್ಟಿರುವದು. ಚಂದ್ರನು ಸಾಮಾನ್ಯ ಜನರ ಪ್ರೀತಿ ಪಾತ್ರನು. ಶುಕ್ರನು ಸಾಮಾಜಿಕ ಪ್ರೇಮಿ. ಸೂರ್ಯನು ಕರ್ಕದಲ್ಲಿ ಶ್ರೇಷ್ಠ ಶ್ರೇಣಿಯ ಲೋಕ ಪ್ರೀತಿಯನ್ನು ಗಳಿಸಿ ಕೊಡುವನು. ವ್ಯಕ್ತಿಮತ್ವದ ಆಕರ್ಷಣೆಯಿಂದ ಲೋಕ ಪ್ರೀತಿಯನ್ನು ಸಂಪಾದಿಸಿದವರ ಕುಂಡಲಿಯಲ್ಲಿ ರವಿ ಹರ್ಷಲರ ಶುಭಯೋಗವಿರುವದು. ಬಲಿಷ್ಠ ಗ್ರಹವು ಒಂದು ರೀತಿಯಿಂದ ಲೋಕ ಪ್ರೀತಿಯನ್ನು ಒದಗಿಸುವದು ನಿಜ.

ಸೇನಾನಿಗಳ ಕುಂಡಲಿಯಲ್ಲಿ ಮಂಗಳನು ಬಲಿಷ್ಠನಿರಬೇಕು. ಅವನು ಯಾವ ದೇಶದವನೇ ಇರಲಿ ಲಷ್ಕರದಲ್ಲಿ ಬಹುಕಾಲ ಉಳಿಯುವನು. ಧನು ಕ್ರೀಡಾಂಗಣದಲ್ಲಿ ಲೋಕ ಪ್ರಿಯವಾಗುವದು.

ವ್ಯವಹಾರ ಜ್ಞಾನ ಯೋಗ: ಪೃಥ್ವಿರಾಶಿಗಳೂ, ಮಂಗಳ ಶನಿಗಳೂ ವ್ಯವಹಾರ ಜ್ಞಾನಕ್ಕೆ ಸಂಬಂಧಪಟ್ಟಿರುವರು. ತುಲಾ ಕುಂಭ ಮೀನ ಲಗ್ನವಿದ್ದವರು ಹಗಲು ಗನಸುಗಳನ್ನು ಕಾಣುವರು. ವ್ಯಾವಹಾರಿಕ ಜ್ಞಾನವು ಅದರಲ್ಲಿ ಕಡಿಮೆ ಇರುವದು. ಅಗ್ನಿ ರಾಶಿಯು ವ್ಯಾವಹಾರಿಕ, ಇದರಂತೆ ಚಂದ್ರನು ಕರ್ಕದಲ್ಲಿದ್ದರೆ ವ್ಯಾವಹಾರಿಕರಿರುವರು.

ಧಾರ್ಮಿಕ ಯೋಗ:— ಗುರು ನವಮಭಾವಗಳ ಪರಿಣಾಮವಿದು. ಶನಿ ಬಲಿಷ್ಠನಿದ್ದಲ್ಲಿ ಸನ್ಯಾಸ ಧರ್ಮವನ್ನು ಬೋಧಿಸುವನು. ವೃಶ್ಚಿಕವೂ ಅನೇಕ ಸಾರೆ ಧಾರ್ಮಿಕ ಒಲವನ್ನು ತೋರಿಸುವದು. ವೃಶ್ಚಿಕ ಲಗ್ನದವರಲ್ಲಿ ಅಜ್ಞಾತ ಗೂಢ ತತ್ತ್ವಗಳ ಬಗೆಗೆ ಆದರವಿರುವದು. ಮಹಾತ್ಮಾಗಾಂಧಿಯವರು ವೃಶ್ಚಿಕ ಲಗ್ನದಲ್ಲಿ ಹುಟ್ಟಿದ್ದರು. ಬುಧನು ವಿಮರ್ಶಕ, ಸಂಶಯವಾದಿ. ಅಂಗೀಕೃತ ಧಾರ್ಮಿಕ ಭಾವನೆಯಲ್ಲಿ ಶುಕ್ರನು ಧಾರ್ಮಿಕನಲ್ಲ. ಧರ್ಮದ ಆಡಂಬರದಲ್ಲಿ ಅವನಿಗೆ ವಿಶ್ವಾಸವಿಲ್ಲ. ಉನ್ನತ ಕ್ಷೇತ್ರದಲ್ಲಿ ಬಲಿಷ್ಠ ಶುಕ್ರನು ಭಾವನಾ ಪೋಷಕನಾಗಿರುವನು. ಚೈತನ್ಯನಂಥ ಭಗವದ್ಭಕರು ಅವನ ಆಳಿಕೆಯಲ್ಲಿ ಹುಟ್ಟುವರು.

ಸ್ವದೇಶಾಭಿಮಾನ ಯೋಗ:— ದೇಶಪ್ರೇಮವು ಕರ್ಕದಲ್ಲಿ ಕಂಡು ಬರುವದು. ಈ ರಾಶಿ ಅವರಲ್ಲಿ ಮುಖ್ಯವಾಗಿರುವದು. ದೇಶದ ಸ್ವಾತಂತ್ರ್ಯ

ವನ್ನು ಗಳಿಸಲಿಕ್ಕೆ ಶನಿ ಮಂಗಳರ ಬಲವು ಬೇಕು. ಸ್ವಾತಂತ್ರ್ಯ ಪ್ರೇಮವು ಗುರು ಹರ್ಶಲರ ಸದ್ಗುಣವು. ದೇಶವನ್ನು ಆಳುವ ರಾಶಿಯಲ್ಲಿ ಯಾವ ಗ್ರಹಗಳು ಹೆಚ್ಚಾಗಿ ಇರುವವೊ ಅವನು ಆ ದೇಶವನ್ನು ಚೆನ್ನಾಗಿ ಪ್ರೀತಿಸುವನು.

ಸಂಧಿವಾತ OR ಅಂಗಬಾಧಿರ್ಯಯೋಗ:— ಹರ್ಶಲ ನೇಪಚ್ಯೂನರು ಬುಧನನ್ನು ಪೀಡಿಸುತ್ತಿದ್ದರೆ, ಚಂದ್ರನನ್ನು ಪೀಡಿಸುತ್ತಿದ್ದರೆ ಈ ರೋಗವಾಗುವ ಸಂಭವ. ವೃಷಭ ವೃಶ್ಚಿಕ ಕರ್ಕ ಮಕರ ರಾಶಿಗಳೂ ಪೀಡಿತವಾಗಿರುವ ಸಂಭವವುಂಟು. ಕರ್ಕ, ಮಕರಗಳ ೮ ನೆಯ ಅಂಶವು ಪೀಡಿತವಾಗಿರುವದು. ಗುರು ಶನಿಗಳ ಅಶುಭಯೋಗವು ಮೇಲಿಂದ ಮೇಲೆ ಕಂಡು ಬರುವದು.

ಆಶಾವಾದ ಯೋಗ:— ಗುರು ಬಲಿಷ್ಠರಾಗಿದ್ದವರು ನಿರಾಶಾವಾದದಲ್ಲಿ ತೊಳಲುವದಿಲ್ಲ. ವಿಶೇಷವಾಗಿ ಧನೂ ರಾಶಿಯಲ್ಲಿ ಅವನಿದ್ದಾಗ ಆಕಾಂಕ್ಷಾಪೂರ್ತಿಗೆ ಒಳ್ಳೇ ಸಹಾಯಕನಾಗುವನು. ಯಾವ ಗ್ರಹವು ಬಲಿಷ್ಠವಿದ್ದರೂ ಸಂತೋಷದಿಂದರಲು ಸಹಕಾರಿಯಾಗುವದು. ವಿಶೇಷವಾಗಿ ಅದು ಸೂರ್ಯ ಚಂದ್ರರಿಗೆ ಸಂಬಂಧಪಟ್ಟಿರಬೇಕು. ಮುಖ್ಯ ಗ್ರಹವು ಪೀಡಿತವಿದ್ದರೆ ಸುಳ್ಳು ಆಶೆಯನ್ನು ಮಾಡುತ್ತ ಕೂಡುವನು. ಸೂರ್ಯ, ಮಂಗಳ ಗ್ರಹಗಳು; ಸಿಂಹ ಮೇಷ ರಾಶಿಗಳು ಆಶಾವಾದಿ ಗ್ರಹ ರಾಶಿಗಳಾಗಿವೆ. ಮೇಷವು ಅನೇಕ ಸಾರೆ ಉತಾವಳಿತನದಿಂದ ಅತಿಶಯ ಧೈರ್ಯ ತೋರಿಸಿ ದುಃಖಕ್ಕೆ ಕಾರಣವಾಗುವದು. ಶುಕ್ರನಿಗೆ ಆಶಾವಾದಕ್ಕಿಂತ ತೃಪ್ತಿ ಹೆಚ್ಚು. ಅದು ಭವಿಷ್ಯವನ್ನು ಆಶೆಗಾಗಿ, ಗುಣ ಗ್ರಹಣಕ್ಕಾಗಿ ಎಂದೂ ನೋಡಲಾರದು. ಶನಿ ಬಲಿಷ್ಠನಿದ್ದರೂ ಸುಳ್ಳು ಆಶಾವಾದಕ್ಕೆ ಮೋಹಗೊಳ್ಳಲಾರನು. ಅವನು ದುರ್ಬಲನಿದ್ದರೆ ಆತ್ಯಂತಿಕ ದೈವವಾದಕ್ಕೆ, ನಿರಾಶಾವಾದಕ್ಕೆ ಗುರಿಯಾಗುವನು.

ಆಜ್ಞಾಧಾರಕ ಯೋಗ:— ಇದು ವೃಷಭದ ಮುಖ್ಯ ಸದ್ಗುಣವು. ಅನೇಕ ಸಾರೆ ಕನ್ಯಾದಲ್ಲಿಯೂ ಕಂಡು ಬರುವದು. ಯಾಕಂದರೆ ಇದು ಸೇವಕ ರಾಶಿಯು. ಕನ್ಯಾ ರಾಶಿಯಲ್ಲಿ ತನ್ನ ಬಲಾಬಲಗಳನ್ನು ತಿಳಿದು

ವರ್ತಿಸುವ ಗುಣವಿರುವದು. ವಿವರಗಳನ್ನು ಅರಿತುಕೊಳ್ಳುವ ಸಹಿಷ್ಣುತೆ ಕಡಿಮೆ. ಇವರು ತನ್ನನ್ನು ತನ್ನ ಕರ್ತವ್ಯಕ್ಕಾಗಿ ಬಿಟ್ಟು ಕೊಟ್ಟರೆ ತಮ್ಮ ಮೇಲೆ ಇತರ ಕಾರ್ಯಗಳಿಗಾಗಿ, ಇತರರ ನಿರ್ಬಂಧಗಳನ್ನು ಸಾಮಾನ್ಯವಾಗಿ ಒಪ್ಪಿಕೊಳ್ಳುವರು. ಸೈನ್ಯ ಸಂಬಂಧದ ಆಜ್ಞಾಧಾರಕತ್ವಕ್ಕೆ ಶನಿ ಮಂಗಳರ ಶುಭ ಸಂಬಂಧಬೇಕು. ಐಕ್ಯಕ್ಕೆ, ಹೊಂದಿಕೆಗೆ ಗುರು ಶುಕ್ರರ ಸಂಬಂಧವಿರುವದು. ಅದು ಸಾಮಾಜಿಕವಿರಲಿ, ಇತರವಿರಲಿ ಅವರ ಸಂಬಂಧಬೇಕು. ಇಲ್ಲವಾದರೆ ಆಜ್ಞಾಭಂಗವಾಗುವದು. ಕವಿಯ ಭಾಷೆಯಿಂದ ಹೇಳಬೇಕಾದರೆ ಲಗ್ನದಲ್ಲಿ ಶುಕ್ರ, ತೃತೀಯದಲ್ಲಿ ಗುರು ಇರಬೇಕು.

ಪ್ರಕೃತಿ ಪ್ರೇಮ ಯೋಗ:— ಬುಧನ ರಾಶಿಗಳು ವನ್ಯ ಪ್ರದೇಶ ಪ್ರೇಮಿ ರಾಶಿಗಳು. ಕನ್ಯಾ ತುಲಾ ರಾಶಿಗಳ ಲಗ್ನವಿದ್ದವರು ತೋಟಗಳನ್ನು, ಉದ್ಯಾನಗಳನ್ನು ಪ್ರೀತಿಸುವರು. ಜಲರಾಶಿಗಳು ಸಮುದ್ರ ಪ್ರದೇಶವನ್ನು ಪ್ರೀತಿಸುವವು. ವೃಷಭ ಮಕರಗಳು ಹಳ್ಳಿಯ ದೃಶ್ಯ ಮೋದವನ್ನುಂಟುಮಾಡುವವು. ಮಕರವು ಪರ್ವತ ಪ್ರದೇಶ ಪ್ರಿಯವೂ ಆಗಿರುವದು. ಮೇಷವು ಅರಣ್ಯಪ್ರಿಯ. ಕುಂಭವು ಪ್ರಾಕೃತಿಕ ದೃಶ್ಯದಿಂದ ದೂರವಿರಲು ಬಯಸುವದು. ಮಾನಸಿಕ, ಭಾವನಾ ಪ್ರೇರಕ ದೃಶ್ಯಗಳು ಇದಕ್ಕೆ ಬೇಕು. ಅಗ್ನಿರಾಶಿಗಳಿಗೆ ಬೈಲು ಸೀಮೆಯ ದೃಶ್ಯಬೇಕೆನಿಸುವದು. ಪ್ರಕೃತಿ ಸೌಂದರ್ಯ ಅವುಗಳಿಗೆ ಅಷ್ಟು ರುಚಿಸದು.

ಪ್ರತಿಭಾ ಯೋಗ:— "ನವ ನವೋನ್ಮೇಷಶಾಲಿನೀ ಪ್ರಜ್ಞಾ ಪ್ರತಿಭಾ" ಎಂದು ಕಾವ್ಯ ಪ್ರಕಾಶಕಾರನು ಪ್ರತಿಭೆಯ ವ್ಯಾಖ್ಯೆ ಮಾಡಿರುವನು. ಇಂತಹ ಪ್ರತಿಭೆಯು ಕವಿಗಳಲ್ಲಿಯೂ ಕಲಾ ಬಲ್ಲವರಲ್ಲಿಯೂ ಇರುವದೆಂದು ನಾವು ಕೇಳುತ್ತೇವೆ. ಈ ಪ್ರತಿಭೆ ಅಗ್ನಿರಾಶಿಗಳಲ್ಲಿ ಜಲರಾಶಿಗಳಲ್ಲಿ ಕಂಡು ಬರುವದೆಂದು ಹೇಳುವರು. ಪ್ರತಿಭಾ ಶಾಲಿಗಳಾದ ಕನ್ನಡ ಕವಿಗಳು ಸಿಂಹ ಲಗ್ನದಲ್ಲಿ ಹುಟ್ಟಿದ್ದು ಬುದ್ಧಿದಾಯಕನಾದ ಬುಧನ ವರುಣನ ತ್ರಿಕೋಣದಲ್ಲಿ, ಬುಧನ ರಾಶಿಯಲ್ಲಿ ೧೧ ನೆಯ ಭಾವದಲ್ಲಿರುವನು. ಕುಂಭ ತುಲೆಗಳವರು ಹಗಲು ಗನಸುಗಳನ್ನು ಕಾಣುವರು. ಮೀನ ರಾಶಿಯಲ್ಲಿ ನೇಪಚ್ಯೂನನು ಹೆಚ್ಚಾಗಿ ಕಲ್ಪಕ ಶಕ್ತಿಯನ್ನು ಕೊಡುವನು. ಕಾದಂ-

ಬರೀಕಾರರು ಹುಟ್ಟುವರು. ನೇಪಚ್ಯೂನನು ಬುಧನ ಅಶುಭಯೋಗದಲ್ಲಿದ್ದರೆ ಬರಬರುತ್ತ ಅದು ಉಪಜ್ಞಾನಕ್ಕೆ ಕಾರಣವಾಗುವದೆಂದು ಬಲ್ಲವರು ಹೇಳುವರು. ಕವಿಗಳಲ್ಲಿ ಕಲಾ ಮರ್ಮಜ್ಞರಲ್ಲಿ ಚಂದ್ರ ಬುಧ ಶುಕ್ರರ ಮಿಶ್ರಗುಣವಿರುವದು. ಪಂಚಮ ಭಾವವು ಬಲಿಷ್ಠವಿರುವದು. ಟೆನಿಸನ್ನನಲ್ಲಿ ೩ನೆಯ ಭಾವದಲ್ಲಿ ಕರ್ಕದಲ್ಲಿ ಬುಧನಿದ್ದು ಪಂಚಮಾಧಿಪನೂ ಚಂದ್ರನೂ ಮಿಥುನದಲ್ಲಿ ಶುಕ್ರನೊಡನಿದ್ದರು. ಥಾಮಸ್‌ಹಾರ್ಡಿ ಎಂಬವನ ಕುಂಡಲಿಯಲ್ಲಿ ಪಂಚಮಾಧಿಪನು ೩ರಲ್ಲಿದ್ದು ತೃತೀಯಾಧಿಪನು ಕರ್ಕದಲ್ಲಿದ್ದ ಚಂದ್ರನೊಡನೆ ತ್ರಿಕೋಣಯೋಗ ಮಾಡುತ್ತಿದ್ದನು. ಬುಧ ಶುಕ್ರರ ಯುತಿ ಇತ್ತು. ಕಿಪ್‌ಲಿಂಗನಿಗೆ ಬುಧ ಶುಕ್ರರು ಕೂಡಿ ಇದ್ದ ಪಂಚಮಾಧಿಪ ಮಂಗಳನೊಡಗೂಡಿದ್ದರು. ಚಂದ್ರನು ಮಿಥುನದಲ್ಲಿದ್ದನು. ನೇಪಚ್ಯೂನನು ಸಹಾಯಕ. ಶ್ರೀ ಬೇಂದ್ರೆಯವರ ಕುಂಡಲಿಯಲ್ಲಿ ನೇಪಚ್ಯೂನನು ಆತ್ಮಕಾರಕ ರವಿಯ ತ್ರಿಕೋಣದಲ್ಲಿರುವನು.

ಭವಿಷ್ಯ ದೃಷ್ಟಿಯೋಗ:— ಇದು ಧನುವಿನಲ್ಲಿ ಕಂಡು ಬರುವದು. ಸಂಗತಿಗಳು ಯಾವ ದಿಕ್ಕಿಗೆ ತಿರುಗಬಹುದೆಂಬುದನ್ನು ಧನು ಲಗ್ನದವರು ಮುಂದಾಗಿ ಸ್ವಾಭಾವಿಕವಾಗಿ ಕಂಡು ಹಿಡಿಯುವರು. ಬುಧ ಗುರುಗಳು ಪೀಡಿತರಿದ್ದರೆ ಇಂತಹ ಸಾಹಸವನ್ನು ಮಾಡಕೂಡದು. ತನ್ನ ಕುಂಡಲಿಯಲ್ಲಿ ಗ್ರಹಗಳು ಪೀಡಿತವಿದ್ದಾಗ ಭವಿಷ್ಯ ವಾದಿ ಭವಿಷ್ಯವನ್ನು ಹೇಳುವ ಸಾಹಸ ಮಾಡಬಾರದು.

ಗುಪ್ತಚಾರ ಯೋಗ:— ಕರ್ಕ ವೃಶ್ಚಿಕಗಳಲ್ಲಿ ಈ ಗುಣವು ಕಂಡು ಬರುವದು. ವೃಷಭದಲ್ಲಿ ಕಡಿಮೆ ಪ್ರಮಾಣದಲ್ಲಿ ಕಂಡು ಬರುವದು. ಇದು ವಿಶೇಷವಾಗಿ ಕಟ್ಟಡಕ್ಕೆ ಸಂಬಂಧಪಟ್ಟ ರಾಶಿ. ಕರ್ಕ ಏಡಿಯ ರಾಶಿ. ವೃಶ್ಚಿಕವು ಗೂಢ ದೃಷ್ಟಿಗೆ, ಗುಪ್ತ ವಿದ್ಯೆಗೆ ಸಂಬಂಧಪಟ್ಟದ್ದು. ಗುರುವೂ ಮುಖ್ಯತೆಯನ್ನು ಪಡೆದಿರಬೇಕು. ಇದರ ಕಾರ್ಯ ವಿಶ್ವಬಾಂಧವ್ಯ, ಪರೋಪಕಾರಗಳಿಗೆ ಸಂಬಂಧಪಟ್ಟಿರುವದು.

ಮಿತ್ರತ್ವ ಯೋಗ:— ತುಲಾ ಕುಂಭ ರಾಶಿಗಳಿಗೆ, ೭, ೧೧ ಭಾವಗಳಿಗೆ ಸಂಬಂಧಪಟ್ಟಿದೆ. ಹರ್ಶಲನ ಮಿತ್ರತ್ವ ತಿಳಿಯಲಾರದಷ್ಟು ವಿಚಿತ್ರ.

ಸಿಂಹದ ಮಿತ್ರತ್ವ ಕುಂಭದಷ್ಟು ಗಟ್ಟಿಯಾದುದಲ್ಲ. ಮೇಷ ಸ್ವತಂತ್ರ; ವೃಶ್ಚಿಕ ಸ್ವಾವಲಂಬಿ. ಆದರೂ ಇಂತಹರ ಮಿತ್ರತೆ ಭಂಗವಾಗಲಾರದು. ಬುಧನ ರಾಶಿಗಳು ಮತ್ತು ವೃಷಭದವರ ಮೈತ್ರಿ ಆತ್ಮ ನಿಮಗ್ನ ಪ್ರವೃತ್ತಿಯಿಂದ ಶಾಶ್ವತವಾದುದಲ್ಲ.

ಸಭ್ಯಯೋಗ:— ಇದು ಶುಕ್ರನ ಗುಣಧರ್ಮವು. ಮಂಗಳ ಹರ್ಶಲರ ಅಶುಭಯೋಗವಿದ್ದರೆ ಇದಕ್ಕೆ ಪ್ರತಿರೋಧವಾಗುವದು. ತುಲಾ ಉಲ್ಹಾಸಿ ರಾಶಿಯು. ಸಿಂಹವು ಬೆಚ್ಚಗಿನ ಹೃದಯವನ್ನು ತೋರುವದು. ಕನ್ಯಾ ಶಾಂತ, ಮಿಥುನ ವಿನೋದಿ. ವೃಶ್ಚಿಕ ಶೂರ, ವೃಷಭ ಗೃಹಪ್ರೇಮಗಳನ್ನು ತೋರುವವು. ಕುಂಭ ಸರಳ, ಕಳಕಳಿಯುಳ್ಳದ್ದು.

ಅಂಜುಗುಳಿ ಯೋಗ:— ಮಂಗಳನು ದುರ್ಬಲನಾಗಿದ್ದರೆ ಅಂಜುಗುಳಿ ಯೋಗವೆಂದು ಹೇಳಬಹುದು. ಚಂದ್ರ, ಶನಿಗಳೂ ದುರ್ಬಲರಾಗಿದ್ದಾಗ ಭಯ ಶೀಲರು ಹುಟ್ಟುವರು. ಸೂರ್ಯ ಶನಿಗಳ ಅಶುಭಯೋಗವೂ ಇದಕ್ಕೆ ಕಾರಣವಾಗುವದು. ಈ ಗ್ರಹಗಳು ಬಲಿಷ್ಠವಾಗಿದ್ದರೆ ನೈತಿಕ ಧೈರ್ಯವಿರುವದು. ಬುಧನ ರಾಶಿಗಳ ಪ್ರಾಬಲ್ಯವಿದ್ದಲ್ಲಿ ಅಂಜಿಕೆಯಿದ್ದರೂ ಖ್ಯಾತಿಯನ್ನು ಗಳಿಸುವರು.

ಉತ್ಪಾದಕ ಯೋಗ:— ಪಂಚಮಭಾವ, ರವಿ ಬಲಿಷ್ಠರಿರಬೇಕು. ಎಲ್ಲ ಗ್ರಹಗಳಿಗೂ ಈ ಶಕ್ತಿಯು ಅಂಶತಃ ಸಂಬಂಧಪಟ್ಟಿರುವದು. ಯಾವ ಕ್ಷೇತ್ರದಲ್ಲಿ ಕೆಲಸ ಮಾಡುವರೋ, ಅಲ್ಲಿ ಆ ಗ್ರಹವು ಬಲಿಷ್ಠವಿರಬೇಕು. ಸಾಹಿತ್ಯ ಕ್ಷೇತ್ರದಲ್ಲಿ ಬುಧನ ಬಲ, ಕಲಾ ಕ್ಷೇತ್ರದಲ್ಲಿ ಶುಕ್ರನದು ಅವಶ್ಯ. ಪಂಚಮ ಭಾವವು ಉತ್ಪಾದನಾಸೂಚಕವು; ಕೇವಲ ಸಂತಾನವಲ್ಲ. ಪಂಚಮ ಭಾವದಲ್ಲಿ ಉದಿತವಾದ ರಾಶಿಯ ಕಡೆಗೆ ಹೆಚ್ಚು ಲಕ್ಷಕೊಡಿರಿ. ಅದರ ಅಧಿಪತಿ ಎಲ್ಲಿರುವನು. ಶಾರೀರಿಕ, ಮಾನಸಿಕ, ಭಾವನಾತ್ಮಕ ಉತ್ಪಾದನಾ ಸಾಮರ್ಥ್ಯದ ದಿಗ್ದರ್ಶಕನಾಗುವನು.

ಅಹಂಕಾರ ಯೋಗ:— ರವಿ ಗುರುವಿನಿಂದ, ನೇಪಚ್ಯೂನನಿಂದ ಪೀಡಿತನಾಗಿದ್ದರೆ ಅಹಂಕಾರವಿರುವದು. ಗುರುವಿನ ರಾಶಿಯಲ್ಲಿ ಶನಿ ಬುಧರು

ಪೀಡಿತರಾಗಿದ್ದರೆ ಅಹಂಕಾರ ಜನಕವಾಗುವದು. ಇದು ಎರಡನೆಯವರ ಹಕ್ಕು-ಬಾಧ್ಯತೆಗಳ ಬಗೆಗೆ, ಭಾವನೆಗಳ ಬಗೆಗೆ ಉದಾಶೀನವಾಗಿರುವದು. ಮಂಗಳನ ಪೀಡಕಾರ್ಯವನ್ನು ಹುಟ್ಟಿಸುವದು.

ಜ್ಯೋತಿಶ್ಯಾಸ್ತ್ರಜ್ಞ ಯೋಗ:— ಹರ್ಶಲನು ಈ ವಿದ್ಯೆಯ ಕಾರಕನು. ಅವನು ೩ ರಲ್ಲಿದ್ದು ಬುಧ ಅಥವಾ ಶುಕ್ರನೊಡನೆ ಶುಭಯೋಗಿಯಾಗಿರಬೇಕು. ಅಂದರೆ ಆಳವಾದ ಅಭ್ಯಾಸವನ್ನು ಮಾಡುವರು. ಹರ್ಶಲನು ತುಲಾ ಕುಂಭ ರಾಶಿಯಲ್ಲಿದ್ದರೆ ಮತ್ತಷ್ಟು ಗುಣ. ಕೆಲವರು ಪ್ರಾಚೀನ ವಿದ್ಯಾಕಾರಕನಾದ ಶನಿಯೂ ಈ ವಿದ್ಯೆಗೆ ಸಂಬಂಧಪಟ್ಟಿರುವನೆಂದು ಹೇಳುವರು. ಮಾನಸಿಕ ಗ್ರಹಗಳಾದ ಬುಧ ಗುರುಗಳಂತೂ ಮುಖ್ಯ. ಅನೇಕ ಪ್ರಖ್ಯಾತ ಜ್ಯೋತಿರ್ವಿದರು ಧನು, ಮಿಥುನಗಳಲ್ಲಿ ಹುಟ್ಟಿರುವರು. ಸಿಂಹ, ಕನ್ಯಾ, ತುಲಾ, ವೃಶ್ಚಿಕಗಳು ಇವರ ಲಗ್ನದಲ್ಲಿ ಉದಿತವಾಗಿರುವದುಂಟು. ಸಿಂಹ ಕುಂಭಗಳ ೨೭ ನೇ ಅಂಶ, ಕನ್ಯಾ ಮೀನಗಳ ೧೧ ನೇ ಅಂಶ ಈ ಶಾಸ್ತ್ರಕ್ಕೆ ಸಂಬಂಧಪಟ್ಟ ಅಂಶಗಳು.

ಉಪಜ್ಞಾನ ಯೋಗ:— (ಅಂತಜ್ಞಾನ). ಇದು ಮುಖ್ಯವಾಗಿ ನೇಪಚ್ಯೂನನಿಂದ ಒದಗುವದು. ಉಳಿದ ಗ್ರಹಗಳ, ಲಗ್ನದ ಪರಿಣಾಮ ಇದರಲ್ಲಿ ಕೂಡಬಹುದು. ರವಿ ನೇಪಚ್ಯೂನ ಯುತಿ, ಬುಧ ನೇಪಚ್ಯೂನ ಯುತಿ ಈ ಯೋಗಕ್ಕೆ ಮುಖ್ಯ ಸಾಧಕವಾಗಿರುವವು. ಸಂಪಾದಿತ ಉಪಜ್ಞಾನಕ್ಕೆ ಹರ್ಶಲನು ಕಾರಣನಾಗುವನು. ಜಲರಾಶಿಗಳಲ್ಲಿ ಈ ಗುಣವು ಅಡಕವಾಗಿರುವದು. ವಿಶೇಷವಾಗಿ ಕರ್ಕದಲ್ಲಿ. ಅದರಲ್ಲಿ ಆಕಾಶ, ಈ ಥರದ ತತ್ತ್ವಗಳು ಕೂಡಿಕೊಂಡಿವೆ. ಇದು ಕೇವಲ ಭಾವನೆಯುಳ್ಳದ್ದು. ಬುಧ ನೇಪಚ್ಯೂನ ಯುತಿ ಕರ್ಕದಲ್ಲಿ, ಅದರೊಡನೆ ಚಂದ್ರ ಶುಕ್ರ ಯುತಿಯು ಶುಭಯೋಗವಿರುವದು; ರವಿ ೧೨ ರಲ್ಲಿ ಹರ್ಶಲನ ಪ್ರತಿಯೋಗದಲ್ಲಿ, ಗುರುವಿನ ತ್ರಿಕೋಣದಲ್ಲಿ, ಗುರು ೯ ರಲ್ಲಿ ಮಂಗಳ ವೃಷಭ ೨೭ ಅಂಶದಲ್ಲಿ, ಶನಿಯ ತ್ರಿಕೋಣದಲ್ಲಿ, ಶನಿ ಮಕರದಲ್ಲಿ ಇದು ಇಂತಹ ಉಪಜ್ಞಾನವುಳ್ಳವರ ಕುಂಡಲಿಯು. ತತ್ತ್ವ ಅಭ್ಯಾಸಿಗಳ ಕುಂಡಲಿಯಲ್ಲಿ ರವಿ ಹರ್ಶಲ

ಪ್ರತಿಯುತಿ ಕಂಡು ಬರುವದು. ಡಾ. ಆನಿಬೆಸಂಟರ ಕುಂಡಲಿಯಲ್ಲಿ ರ ಹರ್ಶಲರ ಪ್ರತಿಯೋಗವಿತ್ತು.

ಅತಿವ್ಯಯ ಯೋಗ:— ಮಂಗಳ ಗುರುಗಳ ಅಶುಭಯೋಗವು ಅಥವಾ ಅವರ ರಾಶಿಗಳಲ್ಲಿ ಆಗುವ ಅಶುಭಯೋಗಗಳು ಅತಿವ್ಯಯಕ ಕಾರಣವಾಗುವವು. ಸಿಂಹವು ಅತಿ ಖರ್ಚಿಕ; ತುಲಾ ಪ್ರಾಸಂಗಿಕವಾಗಿ ಇಂಥವರ ಕುಂಡಲಿಯಲ್ಲಿ ೫ನೆಯ ಭಾವವು ಪ್ರಬಲವಾಗಿರುವದು. ಚಂದ್ರನ ವೃಶ್ಚಿಕದಲ್ಲಿ ಖರ್ಚಿಕನು. ರವಿ ಶನಿಗಳ ಅಶುಭಯೋಗವು ಖರ್ಚಿಗೆ ಕಾರಣ ವಾಗುವದು.

ಧರ್ಮಶ್ರದ್ಧಾ ಯೋಗ:—ಇದು ಮುಖ್ಯವಾಗಿ ಗುರುವಿಗೆ ಸಂಬಂಧ ಪಟ್ಟದು. ನವಮಭಾವವನ್ನು ನೋಡಬೇಕು; ಮತ್ತು ಧನು ರಾಶಿಯನ್ನು ಇಲ್ಲಿ ಪಾಪಗ್ರಹಗಳಿದ್ದರೆ ಸಂಶಯವಾದಿಗಳಾಗುವರು. ಅಥವಾ ಮೂಢ ನಂಬಿಗೆ ಯುಳ್ಳವರಾಗುವರು. ಅಗ್ನಿರಾಶಿಗಳು ಶ್ರದ್ಧೆಯನ್ನು ಹುಟ್ಟಿಸು ವವು. ವಾಯು ರಾಶಿಗಳು ಸಂಶಯದವು. ಜಲರಾಶಿಯಲ್ಲಿ ಮೂಢ ಶ್ರದ್ಧೆ ಇರುವದು. ಪೃಥ್ವಿರಾಶಿಗಳು ವ್ಯಾವಹಾರಿಕ. ವ್ಯಾವಹಾರಿಕ ದೃಷ್ಟಿ ಯಿಂದ ನೋಡಿ ಮುಂದೆ ಸಂಶಯ ವಾದಿಗಳಾಗುವವು. ಕುಂಭ ಸಿಂಹಗಳ ೨೦ ನೆಯ ಅಂಶ ವಿಶೇಷವಾಗಿ ಧರ್ಮಶ್ರದ್ಧೆಗೆ ಸಂಬಂಧಪಟ್ಟಿರುವದು. ಗೂಢ ತತ್ತ್ವಜ್ಞಾನಿಗಳ ಕುಂಡಲಿಯಲ್ಲಿಯೂ ಈ ಅಂಶದ ಸಂಬಂಧ ಬರುವದು. ಮಹಾತ್ಮಾಗಾಂಧಿಯವರ ಕುಂಡಲಿಯಲ್ಲಿ ಚಂದ್ರನು ಸಿಂಹ ೨೦ ರಲ್ಲಿದ್ದನು.

ಶೋಧಕ ಯೋಗ:— ಇದು ಮುಖ್ಯವಾಗಿ ಬುಧನ ಗುಣಧರ್ಮವು. ಅಥವಾ ಅವನ ರಾಶಿಗಳ, ಮನೆಗಳ ೩,೬ ಭಾವಗಳ ಪರಿಣಾಮವು. ಇದಕ್ಕೆ ಹರ್ಶಲನ ಸಹಾಯವಿದ್ದರೆ ಉತ್ತಮ ಸಂಶೋಧಕರಾಗುವರು. ಈರಫಿಸ್ ಎಂಬ ಹೊಸ ಗ್ರಹವೂ ಶೋಧಕ ಬುದ್ಧಿಗೆ ಸಹಕಾರಿ ಎಂದು ಹೇಳುವರು. ಭೌತಿಕ ಶಾಸ್ತ್ರ ಸಂಶೋಧನೆಗೆ ಪೃಥ್ವಿರಾಶಿಗಳ ಬಲಬೇಕು.

ಕೋಪೋದ್ರೇಕ ಯೋಗ:— ಮಂಗಳ ಹರ್ಶಲರ ಅಶುಭಯೋಗವು ಇದಕ್ಕೆ ಕಾರಣವಾಗಿದೆ. ವಿಶೇಷವಾಗಿ ಚಂದ್ರನಾಗಲಿ, ಲಗ್ನವಾಗಲಿ,

ಬುಧನಾಗಲಿ ಅಲ್ಲಿ ಕೂಡಿರಬೇಕು. ಇದು ಮುಖ್ಯವಾಗಿ ಅಗ್ನಿ, ಜಲರಾಶಿಗಳಲ್ಲಿ ಕಂಡು ಬರುವದು. ಚರರಾಶಿಗಳು ಕೋಪಸ್ಫೋಟಕವಾಗಿವೆ. ಸ್ಥಿರ ರಾಶಿಗಳು ಸಹಿಷ್ಣು. ಆದರೆ ಸಿಟ್ಟಿಗೆದ್ದರೆ ಭೂಕಂಪದಷ್ಟು ಉಗ್ರವಾಗಿವೆ. ದ್ವಿಸ್ವಭಾವಿ ರಾಶಿಗಳು ಸಿಟ್ಟಿಗೆದ್ದರೂ ಬೇಗ ಶಾಂತವಾಗುವವು.

ತ್ಯಾಗಯೋಗ:— ಅನೇಕ ಉದ್ದೇಶಗಳಿಂದ ಇದು ಸಂಭವಿಸುವದು. ಭಾವನಾತ್ಮಕ ನಿರಾಶೆಯಿಂದ ವೃಶ್ಚಿಕವು ಜಗತ್ತಿನ ತ್ಯಾಗಮಾಡುವದು. ಮೂಢ ತಿಳುವಳಿಕೆಗೆ ಬೇಸತ್ತು, ವಸ್ತುಗಳ ಆಳವನ್ನು ತಿಳಿದುಕೊಳ್ಳುವದಕ್ಕಾಗಿಯೂ ಇದು ಸಂಸಾರವನ್ನು ತ್ಯಜಿಸುವದು. ನಿರಾಶೆ ಹೊಂದಿದ ಮಹತ್ವಾಕಾಂಕ್ಷೆಯಿಂದ ಅಥವಾ ತತ್ತ್ವಜ್ಞಾನವನ್ನು ಮನಗಂಡದ್ದರಿಂದ ತ್ಯಾಗ ಮಾಡುವನು. ಶುಕ್ರನು ಸಂಸಾರದೊಡನೆ ಹೋರಾಡುವ ಶಕ್ತಿಯು ಸಾಲದೆ ನಿವೃತ್ತನಾಗುವನು. ಜಗತ್ತಿನ ದ್ವಂದ್ವದೊಡನೆ ಯಶಸ್ವಿಯಾಗಿ ಹೋರಾಡುವ ಅವನ ಶಕ್ತಿ ಸಾಲದು. ನೇಪಚ್ಯೂನ, ಮೀನರಾಶಿಗಳು ಏಕಾಂತವನ್ನು ಬಯಸುವವು. ಆಧ್ಯಾತ್ಮಿಕ ಶಾಂತಿ; ಆತ್ಮವಿಕಾಸಕ್ಕಾಗಿ ಸಂಸಾರ ತ್ಯಾಗವನ್ನು ಬಯಸುವವು. ಮಠ ಧಾರ್ಮಿಕ ಸಂಸ್ಥೆಗಳು ಇವರಿಗೆ ಪ್ರಿಯವಾಗುವವು. ಕುಂಡಲಿಯ ಅಭ್ಯಾಸವನ್ನು ಮಾಡಿದರೆ ಉದ್ದೇಶ ತಿಳಿಯಬಹುದು. ಧನಸಹಮ ಬಿಂದುವಿನಿಂದ ದಶಮಸ್ಥ ಶನಿಯಿಂದ ಕೀಲಿ ಕೈ ಸಿಗುವನು. ಇವು ಜಗತ್ತಿನ ದರ್ಜೆ ಮಾನಗಳ ಮೇಲೆ ಪರಿಣಾಮ ಮಾಡುವವು. ಸಂಸಾರ ತ್ಯಾಗ ಮಾಡುವದರ ಕುಂಡಲಿಯಲ್ಲಿ ಪ್ರಾಯಶಃ ಶುಕ್ರನು ಪೀಡಿತನಿರುವನು. ಮಂಗಳ ಹರ್ಶಲರು ಯಾವ ದಿಕ್ಕಿಗೆ ಭಾವನಾತ್ಮಕವಾಗಿ ಒಮ್ಮೆಲೆ ಹೆಜ್ಜೆಯಿಡುವರೆಂಬುದನ್ನು ತೋರಿಸುವರು. ಧಾರ್ಮಿಕ ಭಾವನೆ ನ್ಯೂನತೆಯಿದ್ದವರ ಕುಂಡಲಿಯಲ್ಲಿ ೭, ೧೦ ಭಾವಗಳ ಪರಿವರ್ತನದ ಪರಿಣಾಮ ಕಂಡು ಬರುವದು.

ಸಿಂಹಾವಲೋಕನ ಯೋಗ:— ಇದು ಕರ್ಕದ ಗುಣಧರ್ಮವು. ಇದು ಭೂತಕಾಲದಲ್ಲಿ ವಾಸಿಸುವದು. ಇವರು ಬಾಲ್ಯ ಕಾಲದ ನೆನಪುಗಳನ್ನು ಸರಿಯಾಗಿ ಹೇಳುವರು.

ಇದು ಮಾತೃ ಪದದ ರಾಶಿ. ಚಂದ್ರನ ಪರಿಣಾಮ ಹೆಚ್ಚಾಗಿರುವದು. ಚಂದ್ರನ ಕಾಲವೆಂದರೆ ಬಾಲ್ಯ. ಆಗ ತಾಯಿಯ ವರ್ಚಸ್ಸು ಹೆಚ್ಚಾಗಿರುವದು.

ಸ್ಮರಣಶಕ್ತಿ ಯೋಗ:— ಇದು ಬುಧನ ಗುಣಧರ್ಮವು. ಇದು ಬಲಿಷ್ಠವಿದ್ದು ಸ್ಥಿರ ರಾಶಿಯಲ್ಲಿದ್ದರೆ ಸ್ಮರಣ ಶಕ್ತಿ ಚೆನ್ನಾಗಿರುವದು. ಚಂದ್ರನನ್ನೂ, ಕರ್ಕವನ್ನೂ ವಿಚಾರಿಸಬೇಕು. ಅವು ಬಲಿಷ್ಠವಿದ್ದರೆ ತಾಳುವ ಸ್ಮರಣ ಶಕ್ತಿಯನ್ನು ಕೊಡುವವು. ೩ ನೆಯ ಭಾವವನ್ನು ಲಕ್ಷಿಸಿರಿ.

ಸುಧಾರಕ ಯೋಗ:— ಇದು ಹರ್ಶಲನ ಗುಣಧರ್ಮವು. ಇದ್ದ ಕಟ್ಟಡವನ್ನು ಕೆಡವಿ ಹೊಸದನ್ನು ಕಟ್ಟಿಸುವದು ಇವನ ಗುಣಧರ್ಮವು. ಇದು ಗುರುವಿನ ಸಂಬಂಧದಿಂದ ಬಲಿಷ್ಠವಾಗಿದ್ದರೆ ಸುಧಾರಣೆಗಳು ಒಳ್ಳೆಯ ದಾರಿಯಿಂದ ನಡೆಯುವವು. ಹರ್ಶಲನು ಕಾರಕನಾಗಿರುವ ಸಂಗತಿಗಳಲ್ಲಿ ಸುಧಾರಣೆಗಳು ಭರದಿಂದ ಸಾಗುವವು.

ಭಾಷಾಪ್ರೇಮ ಯೋಗ:— ಬುಧನು ಕುಂಭನಲ್ಲಿದ್ದವರು ಭಾಷಾಪ್ರೇಮಿಗಳಿರುತ್ತಾರೆಂದು ಲಿಲಿ ಹೇಳುವನು. ಏಕಾದಶ ಭಾವದ ಪರಿಣಾಮವು ಭಾಷೆಯ ಮೇಲೆ ವಿಶೇಷವಾಗಿ ಇರುವದೆಂದು ಕಾರ್ಟರರು ಹೇಳುವರು. ಶನಿಯ ಪರಿಣಾಮವು ಮೃತಭಾಷೆಗಳ ಮೇಲಿರುವದು. ಸಾಹಿತ್ಯದ ದೃಷ್ಟಿಯಿಂದ ಕನ್ಯಾರಾಶಿಯ ಪರಿಣಾಮವು ಹೆಚ್ಚಿಗಿರುವದು. ಧನು ಪರಕೀಯರೊಡನೆ ಕೂಡಿ ಪರಭಾಷೆಯನ್ನು ಕಲಿಯುವದು. ಚಂದ್ರ, ಕರ್ಕ ರಾಶಿಗಳು ಮಿಮಿಕ್ರಿಯಲ್ಲಿ ಜಾಣತನವನ್ನು ತೋರುವವು. ಇವರು ಇದರಿಂದ ಬೇಗ ಪರಭಾಷೆಯನ್ನು ಕಲಿಯುವರು.

ಆನಂದ (ಸುಖ) ಯೋಗ:— ಬ್ರಹ್ಮಾನಂದ ಯೋಗವನ್ನು ಕಂಡು ಹಿಡಿಯುವದು ದುಃಸಾಧ್ಯ. ಶುಕ್ರ ಚಂದ್ರರು ೩, ೯ ರಲ್ಲಿ ಶುಭ ದೃಷ್ಟಿಯಲ್ಲಿದ್ದರೆ ಅನುಗ್ರಾಹಕ ಯೋಗಗಳು. ಶನಿಯ ಅಶುಭ ದೃಷ್ಟಿಯಲ್ಲಿದ್ದರೆ ಸುಖವನ್ನು ಹಾಳು ಮಾಡುವವು. ನೇಪಚ್ಯೂನನ ಶುಭಯೋಗವು ಅಂತಃ ಸುಖವನ್ನು ಹೆಚ್ಚಿಸುವದು. ಇದು ಪರಮಾನಂದಕ್ಕೆ ಒಯ್ಯುವ

ದಾರಿ. ಅಶುಭಯೋಗವು ಕೂಡ ಕಠಿನ ದಾರಿಯಿಂದ ಆನಂದ ಸ್ಥಾನಕ್ಕೆ ಒಯ್ಯಬಹುದು.

ದ್ವೇಷಯೋಗ:— ಇದು ಮಂಗಳನ ಗುಣಧರ್ಮವು. ಮೇಷಕ್ಕಿಂತ ವೃಶ್ಚಿಕದಲ್ಲಿ ಹೆಚ್ಚಾಗಿರುವದು. ಶನಿ ಹರ್ಶಲರ ಸಂಯೋಗವು ಈ ದುರ್ಗುಣವನ್ನು ಹೆಚ್ಚಿಸುವದು. ದೀರ್ಘಕಾಲ ಗತಿಸಿದರೂ ವೃಶ್ಚಿಕವು ತನಗಾದ ಲಘು ಅವಮಾನವನ್ನು ನೆನೆಸುವದು. ಶುಭಗ್ರಹಗಳು ದುರ್ಬಲವಾಗಿದ್ದರೆ ಈ ಗುಣವು ಹೆಚ್ಚಾಗಿ ಕಂಡು ಬರುವದು.

ದಿನವರ್ಷ ಪದ್ಧತಿ

ಕುಂಡಲಿಯ ಫಲ ನಿರ್ಣಯವು ಕಠಿನವೂ, ಗಹನವೂ ಆಗಿರುವಂತೆ ಫಲಕಾಲ ನಿರ್ಣಯವು ಅದಕ್ಕಿಂತ ಗಹನವೂ, ಗಂಭೀರವೂ ಆಗಿರುವದು. ಫಲಕಾಲ ನಿರ್ಣಯವು ಕೂಡ ಮೂಲ ಕುಂಡಲಿಯನ್ನೇ ಅವಲಂಬಿಸಿರುವದು. ಮೂಲ ಕುಂಡಲಿಯೇ ವಂಧ್ಯೆಯಾಗಿದ್ದರೆ ನವಮಾಸಗಳು ತುಂಬಿದರೂ ಅದು ಪ್ರಸೂತವಾಗಲಾರದು. ಇದನ್ನು ಅಭ್ಯಾಸಿಗಳು ಅವಶ್ಯವಾಗಿ ಲಕ್ಷಿಸಬೇಕು. ಕಾಲ ನಿರ್ಣಯದ ಬಗೆಗೆ ನಮ್ಮಲ್ಲಿ ದಶಾಪದ್ಧತಿ ರೂಢವಾಗಿರುವಂತೆ ಪಾಶ್ಚಾತ್ಯರಲ್ಲಿ ದಿನವರ್ಷ ಪದ್ಧತಿ, ಪ್ರಾಥಮಿಕ ಯೋಗ ಪದ್ಧತಿಗಳು ರೂಢವಾಗಿರುವವು. ಇನ್ನೂ ಕೆಲವು ಲಾಕ್ಷಣಿಕ ಪದ್ಧತಿಗಳನ್ನೂ ಪಶ್ಚಿಮದವರು ಪ್ರಚುರ ಪಡಿಸುತ್ತಿರುವರು. ನಮ್ಮಲ್ಲಿ ವಿಂಶೋತ್ತರಿ ಪದ್ಧತಿ ಸುಲಭವಾಗಿರುವದೆಂದು ಹಲವರು ತಿಳಿಯುತ್ತಾರೆ. ಗಣಿತದ ದೃಷ್ಟಿಯಿಂದ ಅದು ಸುಲಭವಾಗಿದ್ದರೂ, ಸರ್ವಾರ್ಥ ಚಿಂತಾಮಣಿ, ಜಾತಕ ಪಾರಿಜಾತ, ಮಹಾದೇವನ ಸೂತ್ರಗಳಲ್ಲಿ ಹೇಳಿದ ನಿಯಮಾವಳಿಗಳನ್ನು ನೋಡಿದರೆ ದಶಾಪದ್ಧತಿ ಅಭ್ಯಾಸಿಗಳ ದುರ್ದಶೆಯನ್ನುಂಟುಮಾಡುವದೇನೋ ಎಂದೆನಿಸುವದು. ಅದಕ್ಕೆಂದೆ ಲಘು ಪರಾಶರಿ, ಕಾಲಿದಾಸನ ಕಾಲಾಮೃತದಲ್ಲಿ ಹೇಳಿದ ನಿಯಮಗಳ ತತ್ವಗಳನ್ನು ಅರಿತುಕೊಂಡು ವಾಚಕರು ಈ ಪದ್ಧತಿಯ ಅಭ್ಯಾಸ ಮಾಡಬೇಕೆಂದು ನಾವು ಸೂಚಿಸುವೆವು. ಕೆಲವರು ವಿಂಶೋತ್ತರೀ ದಶೆಯನ್ನು ಅವಲಂಬಿಸಿದರೆ, ಕೆಲವರು ಅಷ್ಟೋತ್ತರೀ ದಶೆಯನ್ನು ಅವಲಂಬಿಸುವರು. ಇನ್ನು ಜೈಮಿನಿ ಋಷಿ ಹೇಳುವ ಚರ-ಪರ್ಯಾಯ ದಶೆ, ಸ್ಥಿರ ದಶೆ, ನಿರ್ಯಾಣ ದಶೆಗಳೂ ಉಪಯುಕ್ತವಾಗಿವೆ. ಅವಿನ್ನೂ ಸಾಕಷ್ಟು ರೂಢಿಯಲ್ಲಿ ಬಂದಿಲ್ಲ. ಜಾತಕ ಪಾರಿಜಾತದಲ್ಲಿ ಹೇಳಿದ ಕಾಲಚಕ್ರದಶೆಯೂ ಗಂಭೀರವಾಗಿರುವದು. ಇವನ್ನೆಲ್ಲ ಸಂಶೋಧಕರು ಅಭ್ಯಾಸ ಮಾಡಿ ವ್ಯಾವಹಾರಿಕ ದೃಷ್ಟಿಯಿಂದ ಸೋದಾಹರಣ ಗ್ರಂಥಗಳನ್ನು

ಜನರ ಮುಂದಿಡಬೇಕು. ಅಂದರೇ ಇಂದಿನ ಪ್ರಜಾಯುಗದಲ್ಲಿ ಬಹುಮತದ ಬೆಂಬಲದಿಂದ ಶಾಸ್ತ್ರವು ಬದುಕಬಹುದು. ಕಾಲಿದಾಸನ ಕಾಲವೀಗಿಲ್ಲ. **"ಆಪರಿತೋಷಾದ್ವಿದುಷಾಂ ನ ಸಾಧುಮನ್ಯೆ, ಪ್ರಯೋಗ ವಿಜ್ಞಾನಂ"** ಎಂದು ಆತನು ಹೇಳಿದನು. ಇಂದು **"ಆ ಬಹುಜನ ಪರಿತೋಷಾತ್ ನ ಸಾಧು ಮನ್ಯೋ ಪ್ರಯೋಗ ವಿಜ್ಞಾನಂ"** ಎಂದು ಹೇಳುವ ಹೊತ್ತು ಬಂದಿರುವದು. ಗ್ರಂಥಕಾರರಲ್ಲಿಯೂ ಭವಭೂತಿಯ ಆತ್ಮವಿಶ್ವಾಸವೂ ಉಳಿದಿಲ್ಲ. ಆದ್ದರಿಂದ ಅವರೂ ಕೇವಲ ಪ್ರಕಟನಾ ಪತ್ರಿಕೆಗಳಿಂದ ಖ್ಯಾತ ನಾಮರಾಗುವ ತವಕದಲ್ಲಿರುವರು. ಇಂತಹ ಗ್ರಂಥಗಳಿಗೆ ಬಾಲಾರಿಷ್ಟ ಯೋಗ, ಪ್ರೌಢಾರಿಷ್ಟಗಳು ತಪ್ಪಿದ್ದಲ್ಲ. ಇರಲಿ.

ಪಾಶ್ಚಾತ್ಯರ ಪದ್ಧತಿಗಳಲ್ಲಿ ದಿನವರ್ಷ ಪದ್ಧತಿ ಸುಲಭವೂ ಸರ್ವ ಸಾಧಾರಣವಾಗಿ ಹೆಚ್ಚು ಸತ್ಯಾಂಶವುಳ್ಳದ್ದೂ ಆಗಿರುವದು. ಪ್ರಾಥಮಿಕ ಯೋಗ ಪದ್ಧತಿಯಂತೆ ಚಾಫೀಯ ತ್ರಿಕೋಣ ಮಿತಿಯ ಗಣಿತ ಜ್ಞಾನದ ಅವಶ್ಯಕತೆಯಿಲ್ಲ. ಆದ್ದರಿಂದ ಅದನ್ನೇ ಈಗ ವಿವೇಚಿಸುವಾ:—

ಜನ್ಮಕಾಲದ ನಂತರ ಭಾವಗಳೂ, ಗ್ರಹಗಳೂ ಚಲಿತವಾಗುವವು. ಭಿನ್ನ ಸ್ಥಿತಿಯನ್ನೂ, ಭಿನ್ನ ದೃಷ್ಟಿಯನ್ನೂ ಪಡೆಯುತ್ತವೆ. ಚಲಿತ ಗ್ರಹಗಳು ತಮ್ಮ ತಮ್ಮೊಳಗೆ ದೃಷ್ಟಿಯೋಗವನ್ನು ಮಾಡುವವು. ಮತ್ತು ಮೂಲ ಕುಂಡಲಿಯ ಗ್ರಹಗಳೊಡನೆಯೂ ಮಾಡುವವು. ಆದ್ದರಿಂದ ಪರಿವರ್ತಿತ ಗ್ರಹ ಪರಿಣಾಮವು ಜೀವನದಲ್ಲುಂಟಾಗುವದು. ದಿನವರ್ಷ ಪದ್ಧತಿ ಹೆಚ್ಚಾಗಿ ಪಾಶ್ಚಾತ್ಯರಲ್ಲಿ ರೂಢವಾಗಿರುವದು. ಇದಕ್ಕೆ ದಿನವರ್ಷ ಪದ್ಧತಿ ಎಂದು ಹೆಸರು ಬರಲು ಕಾರಣವೇನಂದರೆ, ಒಂದು ದಿನಕ್ಕೆ ೧ ವರ್ಷ ಕಾಲ ಗಣನೆ ಈ ಪದ್ಧತಿಯಲ್ಲಿರುವದು. ಗ್ರಹಗಳು ೧ ದಿನ ಅಂದರೆ ೨೪ ತಾಸು ಸರಿದರೆ ೧ ವರ್ಷವಾಯಿತು. ಎರಡು ದಿನ ಸರಿದರೆ ಎರಡು ವರ್ಷವಾಯಿತು. ಜನ್ಮಕಾಲದಿಂದ ಅಷ್ಟು ದಿವಸ ಸರಿದ ಗ್ರಹಗಳು ಜಾತನ ಅಷ್ಟನೇ ವರ್ಷದ ಮೇಲೆ ಪರಿಣಾಮ ಮಾಡುವವು. ೪೦ ದಿವಸ ಸರಿದ ಗ್ರಹಗಳು ಅವನ ೪೦ ನೆಯ ವರ್ಷದ ಮೇಲೆ ಪರಿಣಾಮ ಮಾಡುವವು. (ಅವನು ಆಗ ಜೀವಂತನಿದ್ದರೆ) ಜಾತನಿಗೆ ಎಷ್ಟು ವರ್ಷವಾಗಿರುವವೋ ಅಷ್ಟು ದಿನ

ಗಳ ನಂತರ ಅದೇ ಜನ್ಮಕಾಲದ ಕುಂಡಲಿಯನ್ನು ಹಾಕಿ ನೋಡಿದರೆ ಅವನ ಆ ವರ್ಷ ಭವಿಷ್ಯವು ತಿಳಿಯುವದು. ಮೂಲ ಕುಂಡಲಿಯನ್ನು ಲಕ್ಷಿಸಿಯೇ ಅರ್ಥಮಾಡಬೇಕು. ಅದನ್ನು ಬದಿಗೆ ಸರಿಸತಕ್ಕದ್ದಲ್ಲ. ಇದು ಸುಲಭ ಪದ್ಧತಿ. ಒಬ್ಬನು ಡಿಶಂಬರ ೮ ನೆಯ ದಿನಾಂಕ ಮುಂಜಾನೆ ೯ ಗಂಟೆಗೆ ಹುಟ್ಟಿದರೆ ೨೬ ಡಿಶಂಬರ ಮುಂಜಾನೆ ೯ ಗಂಟೆಯ ಕುಂಡಲಿಯು ಅವನ ೧೮ ನೆಯ ವರ್ಷದ ವಾರ್ಷಿಕ ಕುಂಡಲಿಯಾಗುವದು. ಆ ದಿವಸ ಚಲಿತ ಗ್ರಹಗಳಲ್ಲಿ ಯೋಗಗಳಾಗಬಹುದು; ಮೂಲ ಗ್ರಹಗಳೊಡನೆ ಚಲಿತಯೋಗಗಳಾಗಬಹುದು. ಆದರೆ ಚಂದ್ರ ಯೋಗಗಳು ಹೆಚ್ಚಾಗಿ ಆಗುವ ಸಂಭವವುಂಟು. ಚಂದ್ರನು ದಿನಕ್ಕೆ ೧೨-೧೩ ಅಂಶ ಸರಿಯುವದರಿಂದ ಅವನು ಮೂಲ, ಚಲಿತ ಗ್ರಹಗಳೊಡನೆ ಯಾವ ಯೋಗಗಳನ್ನಾದರೂ ಮಾಡುವ ಸಂಭವ ಹೆಚ್ಚಾಗಿರುವದು. ಆ ದಿನದ ಚಂದ್ರನ ಗತಿಯಲ್ಲಿ ೧೨ ಭಾಗಗಳನ್ನು ಮಾಡಿ, ೧ ಭಾಗವನ್ನು ಪ್ರತಿ ತಿಂಗಳ ಸರಿಸುತ್ತ ಹೋಗಬೇಕು. ಅಂದರೆ ಯಾವ ತಿಂಗಳಲ್ಲಿ ಚಂದ್ರನು ಯಾವ ಯೋಗವನ್ನು ಮಾಡುವನೆಂಬುದು ತಿಳಿಯುವದು. ಇಡೀ ದಿವಸ ೧ ವರ್ಷಕ್ಕೆ ಸರಿ ಇರುವದರಿಂದ ಚಂದ್ರನ ಗತಿಯನ್ನು ೧೨ ರಿಂದ ಭಾಗಿಸುವದರಿಂದ ೧ ತಿಂಗಳ ಗತಿ ತಿಳಿಯುವದು ಸ್ವಾಭಾವಿಕವಿರುವದು.

ಪ್ರಾಗತಿಕ ದಿನಾಂಕವನ್ನು ತಿಳಿದುಕೊಳ್ಳುವದಕ್ಕಾಗಿ ಗತಿಸಿದ ವರ್ಷಗಳಷ್ಟು ದಿನಾಂಕಗಳನ್ನು ಜನ್ಮದಿನಾಂಕಗಳಲ್ಲಿ ಕೂಡಿಸಬೇಕು. ಚಲಿತ ದಿನಾಂಕದ ನಕ್ಷತ್ರ ಕಾಲವನ್ನೇ ಹಿಡಿದು ತದ್ದಿನಾಂಕದ ತತ್ಕಾಲದ ಕುಂಡಲಿಯನ್ನು ಹಾಕಬೇಕು. ಕುಂಡಲಿ ಹಾಕುವಾಗ ಜನ್ಮಕಾಲದ ಲೋಕಲ್ (ಸ್ಥಾನಿಕ ವೇಳೆ) ಟಾಯಮನ್ನೇ ಹಿಡಿಯಬೇಕು. ರಾಫೇಲ ಪಂಚಾಂಗವನ್ನು ತಕ್ಕೊಂಡು ಆ ದಿನದ ಗ್ರಹಗಳನ್ನು ಆ ಕಾಲಕ್ಕೆ ತಂದು ತುಂಬಿಕೊಳ್ಳಬೇಕು. ಚಂದ್ರನ ೨೪ ತಾಸಿನ ಗತಿಯನ್ನು ತಿಳಿದುಕೊಂಡು ೧೨ ಭಾಗ ಮಾಡಿ ಇಡಬೇಕು. ಇದರ ವಿಸ್ತೃತ ವಿವರಣೆ H. G. Green ರು ಬರೆದ "Progressed Horscope" ಎಂಬ ಪುಸ್ತಕದಲ್ಲಿರುವದು. ನೋಡಿಕೊಳ್ಳಬಹುದು.

೨೪ ತಾಸು = ೧೨ ತಿಂಗಳುಗಳಿಗೆ ಸಮ.
೨ ತಾಸು = ೧ ತಿಂಗಳಿಗೆ ಸಮ.
೧ ತಾಸು = ೧೫ ದಿವಸಗಳು.
೪ ಮಿನಿಟ= ೧ ದಿವಸ

ಇದು ಈ ಪದ್ಧತಿಯ ಕೋಷ್ಟಕವು.

ಉದಾಹರಣೆಗಳಿಂದ ವಿವರಿಸಬೇಕು. ದಿನವರ್ಷ ಪದ್ಧತಿ, ಪ್ರಾಥಮಿಕ ಯೋಗ ಪದ್ಧತಿಗಳನ್ನು ಸಾಯನ ಕುಂಡಲಿಗಳಿಂದಲೂ, ದಶಾಪದ್ಧತಿಯನ್ನು ನಿರಯನ ಕುಂಡಲಿಗಳಿಂದಲೂ ವಿವೇಚಿಸಬಹುದು.

ಪ್ರಾಥಮಿಕ ಯೋಗಪದ್ಧತಿ

ಜ್ಯೋತಿಷ್ಯ ಶಾಸ್ತ್ರವು ಗಂಭೀರವೂ ಗಹನವೂ ಆಗಿರುವದು. ಫಲ ನಿರ್ಣಯವು ಕಠಿಣವಾಗಿರುವಂತೆ ಫಲ ಕಾಲ ನಿರ್ಣಯವೂ ಕಠಿಣವಾಗಿರುವದು. ಭಾರತದ ಜ್ಯೋತಿರ್ವಿದರು ಫಲಕಾಲ ನಿರ್ಣಯವನ್ನು ಪ್ರಾಯಶಃ ದಶಾ ಪದ್ಧತಿಯಿಂದ ಮಾಡುವರು. ದಶಾಪದ್ಧತಿಯಲ್ಲಿ ಅನೇಕ ಭೇದಗಳಿದ್ದರೂ ವಿಂಶೋತ್ತರೀದಶೆ, ಅಷ್ಟೋತ್ತರೀ ದಶೆಗಳು ವಿಶೇಷವಾಗಿ ಬಳಕೆಯಲ್ಲಿರುವವು. ಪಾಶ್ಚಾತ್ಯರು ಕಾಲ ನಿರ್ಣಯವನ್ನು ದಿನವರ್ಷ ಪದ್ಧತಿಯಿಂದಲೂ, ಪ್ರಾಥಮಿಕ ಯೋಗ ಪದ್ಧತಿಯಿಂದಲೂ ಮಾಡುವರು. ದಶಾ ಪದ್ಧತಿ, ದಿನವರ್ಷ ಪದ್ಧತಿಗಳು ಗಣಿತದ ದೃಷ್ಟಿಯಿಂದ ಕಠಿಣವಾಗಿರುವದಿಲ್ಲ. ಆದರೆ ಪ್ರಾಥಮಿಕ ಯೋಗ ಪದ್ಧತಿ ಗಣಿತ ದೃಷ್ಟಿಯಿಂದಲೂ ಅತ್ಯಂತ ತೊಡಕಿನದಾಗಿರುವದು. ಸಾಮಾನ್ಯ ಜೋತಿಷಿಗಳಿಗೆ ಅದು ಕೈಗೆ ನಿಲುಕುವ ಸಂಭವವೇ ಇಲ್ಲ. ೧ನೆಯ, ೨ನೆಯ **ಝೂಡಕೀಲರು, ಶಫಾರಿಯಲ್ಲ**ರಂಥ ಉಚ್ಚ ವಿಧ್ವಂಸರು ಫಲಕಾಲ ನಿರ್ಣಯಕ್ಕಾಗಿ ಇದರ ಮೇಲೆಯೇ ಅತ್ಯಂತ ಶ್ರದ್ಧೆಯನ್ನು ಇಟ್ಟಿರುವರು.

ಪೃಥ್ವಿಯು ತನ್ನ ಅಕ್ಷಭ್ರಮಣವನ್ನು ೨೩ ತಾ. ೫೬ ಮಿ. ೪ ಸೇಕಂಡುಗಳಲ್ಲಿ ಮಾಡುವದು. ಅರ್ಥಾತ್ ೪ ಮಿನಿಟುಗಳಲ್ಲಿ ೧ ಅಂಶ ತಿರುಗುವದು. ಮಾನವನು ಹುಟ್ಟಿದ ೪ ಮಿನಿಟುಗಳಲ್ಲಿ ಅದು ಅವನ ವರ್ಷ ಭವಿಷ್ಯವನ್ನು ಬರೆಯುವದು. ಅರ್ಥಾತ್ ೪ ಮಿನಿಟಿಗೆ ಒಂದು ವರ್ಷ. ಈ ಪದ್ಧತಿಯಲ್ಲಿ ಕಾಲಗಣನೆಯಿರುವದು. ಇದನ್ನು ಅಂಶ ವರ್ಷ ಪದ್ಧತಿಯೆಂತಲೂ ಕರೆಯಬಹುದು. ಈ ಪದ್ಧತಿಯಲ್ಲಿ ದಶಮಾಂಶ, ಲಗ್ನಾಂಶ, ರವಿ, ಚಂದ್ರ ಈ ನಾಲ್ಕು ಬಿಂದುಗಳನ್ನು ಹಿಂದೆ ಮುಂದೆ ತಿರುಗಿಸುವರು. ಹೀಗೆ ತಿರುಗಿಸುವದರಿಂದ ಕುಂಡಲಿಯಲ್ಲಿ ಇರುವ ಯಾವ ಗ್ರಹಗಳೊಡನೆ ಯಾವ ಯೋಗವನ್ನು ಮಾಡುವವು ಎಂಬುದನ್ನು ತಿಳಿದು ಅವುಗಳ ಫಲಕಾಲ ನಿರ್ಣಯ

ಮಾಡುವರು. ಪೃಥ್ವಿ ೧ ತಾಸು ತಿರುಗಿದರೆ ೧೫ ವರ್ಷಗಳು, ೨ ತಾಸು ತಿರುಗಿದರೆ ೩೦ ವರ್ಷಗಳು; ೬ ತಾಸು ತಿರುಗಿದರೆ ೯೦ ವರ್ಷಗಳಾಗುವವು. ಹೀಗೆ ಪೃಥ್ವಿ ತನ್ನ ಅಕ್ಷಭ್ರಮಣದಿಂದ ಮಾನವನ ಫಾಲಲೇಖವನ್ನು ಬರೆಯುವದು.

ಪ್ರಾಥಮಿಕ ಪದ್ಧತಿಯ ಯೋಗಗಳಲ್ಲಿ ಎರಡು ವಿಧಗಳಿರುವವು. ಒಂದು ಭೌಮಯೋಗ, ಇನ್ನೊಂದು ರಾಶಿ ಚಕ್ರಯೋಗ. ಗ್ರಹಗಳು ಕುಂಡಲಿಯಲ್ಲಿ ಯಾವ ಭಾವದಲ್ಲಿರುವವೋ ಅದನ್ನು ನೋಡಿಕೊಂಡು, ಇನ್ನೊಂದು ಯಾವ ರಾಶಿಯಲ್ಲಿ ಯಾವ ಅಂಶದಲ್ಲಿರುವದೋ ಅದನ್ನು ನೋಡಿಕೊಂಡು ಮಾಡುವರು. ಇಲ್ಲಿ ಭಾವದ ಸಂಬಂಧವು ಬರುವದಿಲ್ಲ. ಇದರಲ್ಲಿ ಮತ್ತೆ ಎರಡು ವಿಧ. ಪುರಶ್ಚಾಲಿತ, ಪಶ್ಚಾತ್ ಚಾಲಿತ. ಗಡಿಯಾಳದ ಮುಳ್ಳುಗಳಂತೆ ಹಿಂದೆ ಮುಂದೆ ಸರಿಸುವರು. ಪ್ರಾಥಮಿಕ ಯೋಗ ಪದ್ಧತಿಯಲ್ಲಿ ಪ್ರತಿಯೊಂದು ಗ್ರಹದ ಕಂಸದ ಅಳತೆಯನ್ನು ತಿಳಿದುಕೊಳ್ಳಬೇಕಾಗುವದು. ಯಾಕಂದರೆ ಅಲ್ಲಿ ೪ ಮಿನಿಟಿಗೆ ೧ ವರ್ಷದ ಗಣನೆಯನ್ನು ಮಾಡಬೇಕಾಗುವದು. ಈ ಪದ್ಧತಿಯ ಗಣನೆಯಲ್ಲಿ ಜನ್ಮಕಾಲವನ್ನು ಬಹು ಸೂಕ್ಷ್ಮವಾಗಿ ತಿಳಿದುಕೊಳ್ಳಬೇಕಾಗುವದು. ೪ ಮಿನಿಟು ತಪ್ಪಿದರೆ ಫಲಕಾಲವು ೧ ವರ್ಷ ಹಿಂದೆ ಅಥವಾ ಮುಂದೆ ಸರಿಯುವದು. ಯಾವದಾದರೊಂದು ಪದ್ಧತಿಯಿಂದ ಜನ್ಮಲಗ್ನವನ್ನು ಮೊದಲು ಶುದ್ಧೀಕರಿಸಿಕೊಳ್ಳಬೇಕಾಗುವದು.

ಚಂದ್ರ, ಲಗ್ನ, ರವಿ, ದಶಮ ಬಿಂದುಗಳನ್ನು ಸೂಚಕವೆಂದು ಕರೆಯುವರು. ಉಳಿದ ಗ್ರಹಗಳನ್ನು ವಚನ ದಾತಾ ಎಂದು ಕರೆವರು. ಸೂಚಕ, ವಚನ ದಾತೃಗಳ ಸಂಬಂಧವು ಯಾವದಾದರೊಂದು ಸಂಗತಿ ಸಂಭವಿಸುವಂತೆ ಮಾಡುವದು. ಪೃಥ್ವಿಯ ಪರಿಭ್ರಮಣದಿಂದ ಈ ಸಂಬಂಧವು ಬರುವದು. ದಿನವರ್ಷ ಪದ್ಧತಿಯಲ್ಲಿಯಂತೆ ಉಳಿದ ಗ್ರಹಗಳ ಭ್ರಮಣದಿಂದ ಉಂಟಾಗುವ ಯೋಗಗಳನ್ನು ಈ ಪದ್ಧತಿಯಲ್ಲಿ ಮಾಡುವದಿಲ್ಲ. ಮೊದಲು ಕುಂಡಲಿ ಹಾಕಿದ ಬಳಿಕ ಈ ಪದ್ಧತಿಯಲ್ಲಿ ಒಂದು ಕೋಷ್ಟಕವನ್ನು ನಿರ್ಮಿಸಿ ಇಟ್ಟುಕೊಳ್ಳಬೇಕಾಗುವದು. ಪ್ರತಿಯೊಂದು ಗ್ರಹದ

ವಿಷುವಾಂಶ ದಶಮ ಬಿಂದುವಿನ ಪ್ರತಿಯೊಂದು ಗ್ರಹದ ಅಂತರ ಅಥವಾ ಚತುರ್ಥ ಬಿಂದುವಿನಿಂದ ಒಂದು ಗ್ರಹವು ಉದಿತವಾಗಿ ಅಸ್ತವಾಗುವ ವರೆಗೆ ಒಂದು ಕಂಸದಲ್ಲಿ ತಿರುಗುವದು. ಈ ಕಂಸಾರ್ಧವನ್ನು ತೆಗೆದು ಇಟ್ಟುಕೊಳ್ಳಬೇಕು. (ಸೆಮಿಆರ್ಕ) ಪ್ರತಿಯೊಂದು ಗ್ರಹವು ಭಾವ ಬಿಂದುವಿನಿಂದ ಎಷ್ಟು ದೂರದಲ್ಲಿರುವದೆಂಬುದನ್ನು ತೆಗೆದು ಇಟ್ಟುಕೊಳ್ಳಬೇಕು, ಪ್ರತಿಯೊಂದು ಗ್ರಹದ ಕ್ರಾಂತಿ, ಶರಗಳನ್ನು ತೆಗೆದು ಇಟ್ಟುಕೊಳ್ಳಬೇಕು. ಇವುಗಳನ್ನು **ರಾಫೇಲ**" ಪಂಚಾಂಗದಿಂದ ಪಡೆಯಬಹುದು. ಅಂತೂ ಕೋಷ್ಟಕದಲ್ಲಿ ಸೇರಿಸಬೇಕಾದ ವಿಷಯಗಳು ಮೇಷಾರಂಭದಿಂದ ಗ್ರಹಗಳ ಅಂತರ (ವಿಷುವಾಂಶ) ಮಧ್ಯಾಂತರ ಮಧ್ಯ ಲಗ್ನದಿಂದ ಗ್ರಹಗಳ ವಿಷುವಾಂಶದಿಂದ ಅಂತರ ಮಧ್ಯಲಗ್ನದಿಂದ ಪಾತಾಳ ಲಗ್ನದಿಂದ ಇವುಗಳಿಗೆ ಕ್ರಮವಾಗಿ ಮೇಲ್ಮಧ್ಯಾಂತರ, ಕೆಳಮಧ್ಯಾಂತರ ಎಂದು ಕರೆಯಬಹುದು. ಗ್ರಹವು ಕ್ಷಿತಿಜದ ಮೇಲೆ ಇರುವ ಕಾಲದ ಅರ್ಧ ಕ್ಷಿತಿಜದ (ಸೆಮಿ ಆರ್ಕ) ಕೆಳಗೆ ಇರುವ ಕಾಲಾರ್ಧ ಇವುಗಳಿಗೆ ಕ್ರಮವಾಗಿ ದೈನಿಕ ನೈಶ ಎಂದು ಕರೆಯುವರು. ಸೆಮಿ ಆರ್ಕದ $\frac{1}{3}$ ಭಾಗ ಭಾವಭವನ. ಕ್ಷಿತಿಜದಿಂದ ಗ್ರಹಗಳ ಅಂತರ ಪೂರ್ವ, ಪಶ್ಚಿಮ ಕ್ಷಿತಿಜಗಳಿಂದ ಇರುವ ಗ್ರಹಗಳ ಅಂತರ ತಿಳಿಯಬೇಕು. ಇಷ್ಟೆಲ್ಲ ಆದ ಬಳಿಕ ಲಾಗ್ರತಮ್ ಕೋಷ್ಟಕದ ಪುಸ್ತಕವನ್ನು ನಿಮ್ಮ ಹತ್ತರ ಇಟ್ಟುಕೊಳ್ಳಬೇಕು. ಅಂದರೆ ಪ್ರಾಥಮಿಕ ಯೋಗ ಪದ್ಧತಿಯಿಂದ ನೀವು ಕಾಲ ಗಣನೆಯನ್ನು ಮಾಡಲು ಸಮರ್ಥರಾಗುವಿರಿ.

ಗೋಲೀಯ ತ್ರಿಕೋಣ ಮಿತಿಯ ಗಣಿತದ ಜ್ಞಾನವಿಲ್ಲದೆ ಪ್ರಾಥಮಿಕ ಯೋಗ ಪದ್ಧತಿಯನ್ನು ಪೂರ್ಣವಾಗಿ ತಿಳಿದುಕೊಳ್ಳುವದು ಸಾಧ್ಯವಿಲ್ಲ. ಆದರೂ ಈ ಪದ್ಧತಿಯನ್ನು ಸುಲಭವಾಗಿ ಮಾಡಲು ಶಫಾರಿಯಲ್ಲರು ಪ್ರಯತ್ನಿಸಿರುವರು. ಲೀವೋ ಇವರು ದಶಮಾಂಶ ಮತ್ತು ಲಗ್ನಾಂಶಗಳನ್ನು ಭಾವ ಸಾಧನೆಯ ಕೋಷ್ಟಕಗಳಿಂದ ಸರಿಸಿ ಯೋಗಗಳನ್ನು ತಿಳಿದುಕೊಳ್ಳಬಹುದೆಂದು ಹೇಳುವರು.

ಆ ವಿಚಾರವನ್ನೇ ಇಲ್ಲಿ ಮಾಡುವೆವು:—

ಇದೊಂದು ಕುಂಡಲಿ

ಜನ್ಮದಿನಾಂಕ:— ೨೭–೧೧–೧೯೨೭. 4.38 P. M.
ಅಕ್ಷಾಂಶ ೧೬.೨. ರೇಖಾಂಶ ೭೫.೪೫

ಸತ್ಯನಾರಾಯಣರಾಯರ "Nadi Rectification with Tables" ಎಂಬ ಪುಸ್ತಕದಿಂದ ಕಾಲವು ಶುದ್ಧೀಕರಿಸಲ್ಪಟ್ಟಿರುವದು.

ಜನ್ಮ ಕುಂಡಲಿ (ಸಾಯನ)

ಲಗ್ನಾಂಶ ೨೦.೮

ಹ. ೨೯-೩೩ ಗುರು ೨೩.೪೩		ಲಗ್ನ	ರಾಹು ೧೯.೨೯	
ಚಂದ್ರ ೮.೩೦			ನೇ. ೨೯.೧೧	ದಶಮಾಂಶ ೧೦
ರವಿ ೪.೧೩ ಕೇತು ೧೯.೨೯ ಶನಿ ೯.೨೮	ಬುಧ ೧೪.೨೨ ಮಂ. ೨೩.೧೯	ಶುಕ್ರ ೧೭.೪೭		

ಶುಭಯೋಗಗಳು

ರವಿ △ ಹರ್ಶಲ.
ಮಂ. △ ಗುರು.
ಮಂ. △ ಹರ್ಶಲ.
ರಾಹು △ ಶುಕ್ರ.
ಬುಧ ★ ಚಂದ್ರ.
ರವಿ ∠ ೧೦೮. ಗುರು.

ಅಶುಭಯೋಗಗಳು

ಮಂ. □ ನೇಪ.

ದಶಮಾಂಶವನ್ನು ಸರಿಸುವದು ಬಹು ಸುಲಭವದೆ· ದಶಮವು ೧೦ನೇ ಅಂಶಕ್ಕೆ ಉದಿತವಿರುವದು. ಗುರುವಿಗೂ ದಶಮಕ್ಕೂ ೪೩ ಅಂಶ ಅಂತರ

ವಿರುವದು. ಮೇಲಿನ ಕಲೆಗಳನ್ನು (೪೩) ಹಿಡಿದರೆ ೪೪ ನೆಯ ವ
ದಶಮ ಬಿಂದು ಗುರುವನ್ನು ಮುಟ್ಟುವದು. ದಶಮವನ್ನು ಗುರು ಮು
ದಾಗ ಆಗುವ ಫಲವನ್ನು **ಸ್ಪೈನೋನೇಟರು** ಬರೆಯುತ್ತಾರೆ. ಗು
ದಶಮ ಯುತಿ— ಉದ್ಯೋಗದಲ್ಲಿ ಸರ್ವಿಸದಲ್ಲಿ ಉನ್ನತಿ, ಶಿಫಾರ
ಉಚ್ಚ ಶ್ರೇಣಿಯಲ್ಲಿರುವ ಮನುಷ್ಯರಿಂದ ಕಲ್ಯಾಣಗಳು. ಜಾತನ ಪರಿ
ಯಂತೆ ಇದು ಧನವನ್ನೂ, ಮರ್ಯಾದೆಯನ್ನೂ ಕೊಡುವದು. ಮ
ದಶಮ ಬಲವನ್ನು ನೋಡಿ ನಿರ್ಣಯಿಸಬೇಕು. ಸ್ತ್ರೀಯರ ಕುಂಡಲಿಯ
ಇದು ಪತಿಗೆ ಉನ್ನತಿ ಸೂಚಕವು. ಬಾಲಕರ ಕುಂಡಲಿಯಲ್ಲಿ ತಂದೆ ತಾ
ಗಳಿಗೆ ಅಭ್ಯುದಯ ಸೂಚಕ. ಸ್ಥಾನ ಬಲದಿಂದಲೂ ಫಲ ನಿರ್ಣಯ ಮಾ
ವರು. ಇಲ್ಲಿ ಗುರು ೧೧ ರಲ್ಲಿರುವನು. ಆಶಾ ಆಕಾಂಕ್ಷೆ ಪೂರ್ತಿ, ಮಿತ
ಸಹಕಾರ.

ಇಲ್ಲಿ ಭಾವ ಸಾಧನೆಯ ಕೋಷ್ಟಕದ ಸಹಾಯದಿಂದಲೂ ಕಾಲವನ
ತಿಳಿಯಬಹುದು.

ಕುಂಭ ೧೦ ನೆಯ ಅಂಶ ದಶಮ ಬಿಂದುವಿರುವಾಗ —ನಾಕ್ಷತ್ರ ಕಾಲ } ತಾ. ಮಿ. ಸೆ
೨೦–೪೯–೪

ಗುರು ಇರುವ ಮೀನ ೨೪ ನೆಯ ಅಂಶವು ದಶಮದಲ್ಲಿ ಬಂದಾಗಿನ ನಾಕ್ಷತ್ರ ಕಾಲ } ೨೩–೩೭–೫
ಅಂತರ.... ೨–೫೮–೧

೪೫ ನೆಯ ವರ್ಷ ಯೋಗವಾಗುವದು.

ರಾಫೇಲರ ಭಾವ ಸಾಧನ ಪುಸ್ತಕ ಅಥವಾ ನವಾಥೆಯವರ ಜಾತ
ಭಾಗ ೨ ಇದನ್ನು ಉಪಯೋಗಿಸಬಹುದು.

ಎರಡೂ ನಾಕ್ಷತ್ರ ಕಾಲಗಳಲ್ಲಿಯು ಅಂತರ ೨ ತಾ ೫೮ ಮಿ. ೧೦ ಸೆ
ಇರುವದು. ಅಂದರೆ ೪ ಮಿನೀಟಿಗೆ ಒಂದು ವರ್ಷದಂತೆ ೪೫ ನೆಯ ವ
ಈ ಯೋಗವುಂಟಾಗುವದು.

೪೪–೪೫ ನೆಯ ವರ್ಷಗಳು ಅಭ್ಯುದಯ ಕಾರಕವೆಂದು ತಿಳಿಯಲ
ಅಡ್ಡಿಯಿಲ್ಲ. ಭಾವ ಸಾಧನೆಯಿಂದ ಮಾಡುವಲ್ಲಿ ಅಷ್ಟೊಂದು ಸೂಕ್ಷ್ಮ

ಸಾಧಿಸಲಿಕ್ಕಿಲ್ಲ. ತ್ರಿಕೋಣ ಮಿತಿ ಗಣಿತದಿಂದ ಮಾಡಿದಲ್ಲಿ ಕೆಲವು ವಾರಗಳ ಮಿತಿಯಲ್ಲಿ ಫಲವನ್ನು ತರಬಹುದೆಂದು. ಕಮಾಂಡರ ಮಾರಿಸನ್, ಜೆ. ಎ. ಪೀಯರ್ಸ ಮೊದಲಾದ ತಜ್ಞರ ಮತವಿರುವದು.

ಇನ್ನು ಮೇಲಿನ ಕುಂಡಲಿಯಲ್ಲಿ ನೇಪಚ್ಯೂನನು ಸಿಂಹ ೨೯–೧೧ ರಲ್ಲಿರುವನು. ಇವನ ತ್ರಿಕೋಣ ದೃಷ್ಟಿ ಧನು ೨೯–೧೧ ಕ್ಕೆ ಬೀಳುವದು.

ಉದಿತವಾದಾಗ ಧನು ೨೯-೧೧.

ನಾಕ್ಷತ್ರ ಕಾಲ— ೧೭–೫೫–೩೮

ಜನ್ಮನಾಕ್ಷತ್ರಕಾಲ— ೨೦-೪೮–೪೮

ಅಂತರ ೨ ತಾ. ೫೪ ಮಿ. ೧೦ ಸೆ.

೧ ತಾಸಿಗೆ— ೧೫ ವರ್ಷ. ೨ ತಾಸಿಗೆ— ೩೦ ವರ್ಷ.

೫೪ ಮಿನಿಟಗೆ ೧೪/೪೪ ವರ್ಷ.

೪೪ ನೆಯ ವರ್ಷ ಈ ಯೋಗವಾಗುವದು. ಲೋಕ ಪ್ರೀತಿ, ಉದ್ಯೋಗದಲ್ಲಿ ಉತ್ಕರ್ಷವನ್ನು ಕೊಡುವದು. ಇದೇ ಮೇರೆಗೆ ನಾಕ್ಷತ್ರ ಕಾಲದಿಂದ ಲಗ್ನಾಂಶವನ್ನು ಸರಿಸಬಹುದು.

ವೃಷಭ

ಜನ್ಮಕಾಲದ ಲಗ್ನಾಂಶ ೨೦–೮ ಇರುವದು.

ಶುಕ್ರನು ತುಲಾ ೧೭–೪೨ ರಲ್ಲಿರುವನು.

ಲಗ್ನಾಂಶ ಮಿಥುನ ೧೭.೪೨ ಕ್ಕೆ ಬಂದಾಗ ಶುಕ್ರನ ತ್ರಿಕೋಣವಾಗುವದು.

ಜನ್ಮಕಾಲದ ನಾಕ್ಷತ್ರ ಕಾಲ— ೨೦–೪೯–೪೮

ಮಿಥುನ ೧೮ನೆಯ ಅಂಶಕ್ಕೆ ಲಗ್ನವು ಬಂದಾಗಿನ ನಾಕ್ಷತ್ರಕಾಲ–೨೨–೪೦– ೦

ಅಂತರ ೧–೫೨–೧೨

ಇದು ೨೯ನೆಯ ವರ್ಷ ಬೀಳುವದು. ಶುಕ್ರನು ವಿವಾಹ ಯೋಗವನ್ನು ತರುವನು. ಇದೇ ವರ್ಷ ಜಾತನ ಮದುವೆಯಾಗಿರುವದು.

ಪ್ರತಿಯೊಂದು ಗ್ರಹದ ಕಾರಕತ್ವವನ್ನು ತಿಳಿದು ಯೋಗಾರ್ಥವನ್ನು ಮಾಡಬೇಕು. ಗುರು ಸಂತಾನ ಸಂಪತ್ಕಾರಕ, ಶುಕ್ರ ಸಂಸಾರ ಸೌಖ್ಯ ಕಾರಕ, ಮಂಗಳ ಸತ್ವಕಾರಕ ಇತ್ಯಾದಿ. ಗ್ರಹಗಳು ಶುಭಯೋಗ ಮಾಡುವಾಗ ಸತ್ ಫಲಗಳನ್ನು ಕೊಡುವವು.

ಈ ಪದ್ಧತಿಯಿಂದ ಯೋಗ ಫಲಗಳನ್ನು ವಿಮರ್ಶಿಸುವಾಗ ಲಗ್ನ ಶುದ್ಧಿ ಅತ್ಯಂತ ಅವಶ್ಯಕವೆಂದು ಹಿಂದಿನ ಲೇಖನದಲ್ಲಿ ಹೇಳಿದ್ದಾಗಿದೆ.

ಜನ್ಮ ದಿನಾಂಕ: ೧೧–೧೦–೧೯೧೯, ಶನಿವಾರ.

ಕೊಟ್ಟ ವೇಳೆ, ೪. P. M.

Nadi Rectification with tables ಈ ಪುಸ್ತಕದಿಂದ ಲಗ್ನ ಶುದ್ಧಿಯನ್ನು ಮಾಡಿಕೊಳ್ಳುವದಾದರೆ ಅದಕ್ಕೆ ಮುಖ್ಯವಾಗಿ ನಾಲ್ಕು ಸಂಗತಿಗಳು ಬೇಕಾಗುತ್ತವೆ. ನಿರಯನ ಲಗ್ನ, ವಾರ, ಲಿಂಗ, ಅಜಮಾಸು ವೇಳೆ ಮತ್ತು ನಕ್ಷತ್ರ. ನಿರಯನ ಲಗ್ನ ಕುಂಭವದೆ. ವಾರ ಶನಿವಾರ. ನಕ್ಷತ್ರ ಭರಣಿ, ಪುರುಷ. ಈ ನಾಲ್ಕು ಸಂಗತಿಗಳು ೩.೪೮ P. M. ಕ್ಕೆ ಕೂಡುವವು. ಈ ಟೇಬಲ್ಸ ೬ ಕ್ಕೆ ಸೂರ್ಯೋದಯವೆಂದು ಕಲ್ಪಿಸಿ ಮಾಡಿರುವರು. ಆದ್ದರಿಂದ ಆಹೊತ್ತು ಸೂರ್ಯೋದಯವನ್ನು ನೋಡಬೇಕು. ಆಹೊತ್ತು ೫.೫೫ A. M. ಕ್ಕೆ ಸೂರ್ಯೋದಯವಿರುವದು. ಆದ್ದರಿಂದ ೩.೪೮ + ೫ ಮಿ. = ೩.೫೩ ಕ್ಕೆ (P. M.) ಜನ್ಮವಿದ್ದಂತಾಯಿತು. ಆಹೊತ್ತು ನಾಕ್ಷತ್ರ ಕಾಲ (ಮಧ್ಯಾಹ್ನದ),

೧೩—೧೫—೧೬

\+ ೩—೫೩—೪೦

೧೭— ೮—೫೬

೧೭–೮–೫೬ ಜನ್ಮಕಾಲೀನ ನಾಕ್ಷತ್ರ ಕಾಲ.

೧೭–೮–೫೬ ನಾಕ್ಷತ್ರ ಕಾಲಕ್ಕೆ ಸರಿಯಾಗಿ ೧೬–೧೭ ಅಂಕಾಶದ ನಡುವೆ ರಾಫೇಲರ ಟೇಬಲ್ಸ ಆಫ್ ಹೌಸಿಸ್ ಕ್ಕೆ ಲಗ್ನ ಸಾಧನೆ ಮಾಡಲಾಗಿ

ಲಗ್ನಾಂಶ, ಸಾಯನ ೧೩-೪೫ ಮೀನ ಲಗ್ನ ಬರುವದು. ದಶಮು ಧನು ೧೮ ಅಂಶ ಬರುವದು. ಇನ್ನೊಂದು ರೀತಿಯಿಂದ ಲಗ್ನ ಶುದ್ಧಿ ಮಾಡುವಾ. ಮದ್ರಾಸದ ರಾಜಗೋಪಾಲ ಅಯ್ಯರರ ಪುಸ್ತಕದಿಂದ ಸೂರ್ಯೋದಯ ದಿಂದ ಜನ್ಮಕಾಲ ಗಳಿಗೆ ಪಳಗಳು,

೩-೫೩ = ೨೨-೩೦

೨-೧೨

೨೪-೪೨ ಇದಕ್ಕೆ ೨ ರಿಂದ ಗುಣಿಸಬೇಕು.

= ೪೮. ೧ + ೨೪ = ೪೯.೨೪ ನಿರಯನ ಲಗ್ನ ಸ್ಥಿರರಾಶಿ ಇರುವದು. ಆದ್ದರಿಂದ ೯ ಕೂಡಿಸಬೇಕು. ಚರ ಇದ್ದರೆ ೫, ಸ್ಥಿರವಿದ್ದರೆ ೯. ದ್ವಿಸ್ವಭಾವಿ ಇದ್ದರೆ ೭ ಕೂಡಿಸಬೇಕು. ೫೮-೨೪ × ೪ (ನಾಲ್ಕರಿಂದ ಗುಣಿಸಬೇಕು.) ೨೩೨+೧.೩೬ = ೨೩೩.೩೬ ಇದಕ್ಕೆ ೨೭ ರಿಂದ ಭಾಗಿಸಬೇಕು.

೨೭)೨೩೩.೩೬(೮

೨೧೬

೧೭.೧

ಅಶ್ವಿನಿಯಿಂದ ಅಥವಾ ಚಿತ್ರಾದಿಂದ ಎಣಿಸಬೇಕು. ಚಿತ್ರಾದಿಂದ ೧೭ನೆಯು ನಕ್ಷತ್ರ ಕೃತ್ತಿಕಾ ಬರುವದು. ಆದರೆ ನಿಜವಾಗಿ ಭರಣಿ ಇರುವದು. ಇದು ೧೭ನೆಯ ನಕ್ಷತ್ರವು. ಜನ್ಮಕಾಲವನ್ನು ೫ ಮಿ. ಹಿಂದೆ ಸರಿಸಿದರೆ ಇದು ಮೇಳ ಗೂಡುವದು. ನಮ್ಮವರು ಸೂರ್ಯ ಉದಯವೆಂದರೆ ಅರ್ಧಬಿಂಬ ಮೇಲೆ ಕಾಣುವದು ಎನ್ನುವರು. ಕಿರಣ ವಕ್ರೀಭವನ, ಪರಾವರ್ತನ ಸಂಸ್ಕಾರಗಳಿಂದ ಸೂರ್ಯ ಉದಯದಲ್ಲಿ ಸ್ವಲ್ಪ ಅಂತರ ಬರುವದು.

ಸಾಯನ ಕುಂಡಲಿ

ಲಗ್ನ		ಕೇತು .೧೯.೨೯ ಚಂದ್ರ ೧೩.೧೪	
ಹ. (ವಕ್ರಿ) ೨೫.೫			
			ನೇ. ೧೧.೧೩ ಗುರು ೧೩.೪೧
	ರಾಹು ೨೬.೪೨	ರವಿ ೧೭.೪ ಬುಧ ೨೭.೮	ಶುಕ್ರ ೧೨.೪ ಶನಿ ೭.೧೮ ಮಂ. ೦.೪೯

ಶುಭಯೋಗಗಳು	ಅಶುಭಯೋಗಗಳು
ರವಿ ★ ಗುರು.	ಮಂ. ಶನಿ ಯುತಿ.
ರವಿ ★ ನೇಪ.	ಚಂದ್ರ □ ನೇಪ.
ಚಂದ್ರ △ ಶುಕ್ರ.	ಚಂದ್ರ □ ಗುರು
ಚಂದ್ರ △ ಶನಿ.	ಮಂ. ಹರ್ಶಲ-ಪ್ರತಿಯೋ
ಗುರು △ ದಶಮು.	
ಬುಧ △ ಹರ್ಶಲ.	
ಚಂದ್ರ ∠ ೧೦೮ ಮಂ.	
ಮಂ. ★ ಬುಧ.	
ಚಂದ್ರ ★ ಲಗ್ನ.	

ಲಗ್ನಾಂಶವು ವೃಷಭ ೭ಕ್ಕೆ ಬಂದಾಗ ಶನಿಯೊಡನೆ ತ್ರಿಕೋ ಮಾಡುವದು.

ವೃಷಭ ೭ ಅಂಶದ ನಾಕ್ಷತ್ರ ಕಾಲ ೨೦.೪

ಲಗ್ನಾಂಶದ ನಾಕ್ಷತ್ರ ಕಾಲ ೧೭.೭

೪೪–೪೫ ನೆಯ ವರ್ಷಕ್ಕೆ ಲಗ್ನಾಂಶವು ಶನಿಯೊಡನೆ ತ್ರಿಕೋಣ ಮಾಡುವದು. ಶನಿ ಪೃಥ್ವಿರಾಶಿಯಲ್ಲಿರುವನು.

ಶನಿಯೊಡನೆ ಲಗ್ನಾಂಶ ಶುಭಯೋಗ ಮಾಡುವಾಗ ಸಂಭವಿಸಬಹುದಾದ ಫಲಗಳ ಬಗೆಗೆ ಸ್ಪೈವೋಸ್ಪೈಟರು ಬರೆಯುವದೇನಂದರೆ ಜಾತನಿಗೆ ಹಿರಿಯರ ಅನುಗ್ರಹ, ಹೊಲ–ಮನೆಗಳಿಂದ ಉಂಟಾಗುವ ಲಾಭ; ಅಥವಾ ವಾರಸಾನಾತೆಯಿಂದ ಆಸ್ತಿ ಪ್ರಾಪ್ತಿ ಇತ್ಯಾದಿ.

ದಿನವರ್ಷ ಪದ್ಧತಿಯಿಂದ ನೋಡಿದರೆ ೪೪–೪೫–೪೬ ನೆಯ ವರ್ಷಗಳಲ್ಲಿ ಬುಧ ಗುರು ತ್ರಿಕೋಣವಾಗುವದು. ಇದು ಲಗ್ನ ಚತುರ್ಥಾಧಿಪ ಯೋಗ. ಗೌರವ ಧನ ಮಾನ ಅಧಿಕಾರಗಳನ್ನು ಕೊಡುವದು. ೪೩ ನೆಯ ವರ್ಷ ಚಲಿತ ಶುಕ್ರ ಮೂಲ ಗುರುವಿನೊಡನೆ ತ್ರಿರೇಕಾದಶ ಯೋಗ ಮಾಡುವನು. ಇದು ಧನ ಗೌರವಗಳನ್ನು ಕೊಡುವದು. ೪೭ ನೆಯ ವರ್ಷ ಚಲಿತ ರವಿ ಹರ್ಶಲ್ ಕೇಂದ್ರವಾಗಿತ್ತು. ಇದು ಕೆಲವು ಅನಿರೀಕ್ಷಿತ ತೊಂದರೆಗಳನ್ನು ಕೊಟ್ಟಿತು. ಚಲಿತ ರವಿ ೪೩ ನೆಯ ವರ್ಷ ೨೯.೮ ಅಂಶಕ್ಕೆ ಬಂದಿರುವನು. ಹರ್ಶಲನ ಕೇಂದ್ರ ಯೋಗವನ್ನು ದಾಟಿರುವದು.

ಇನ್ನು ಕುಂಡಲಿಯಲ್ಲಿ ಭೌಮ ಯೋಗಗಳನ್ನು ನೋಡಲಿಕ್ಕೆ ಸ್ಪೆಕ್ಯುಲಂ (ಕೋಷ್ಟಕ) ತಯಾರ ಮಾಡುವಾ.

ಗ್ರಹ	ಶರ.	ಕ್ರಾಂತಿ.	ವಿಷುವಾಂಶ.	ನವಾಂಶ.	ದಿನಾರ್ಧ.
ರವಿ.	೦	೬.೪೩ ದ.	೧೯೫.೪೦	೬೧.೧೭	೮೮.೧೦
ಚಂದ್ರ.	೧-೫	೧೭. ದ.	೪೦.೧೩	೭೬.೫೭	೯೫.೨
ಮಂ.	೧.೨೧ ಉ.	೧೨.೨೮ ಉ.	೧೫೩	೭೬.೩	೮೬.೩೦
ಬುಧ.	೦.೫	೧೦.೩೩ ದ.	೨೦೫	೫೧.೫೫	೯೨.೫೪
ಗುರು.	೦.೩೦	೧೭.೧೨ ಉ.	೧೩೫.೪೦	೫೮.೪೩	೮೫.೦
ಶುಕ್ರ	೧೪.೧೯ ದ.	೩.೮ ಉ.	೧೬೩.೨೫	೮೬.೩೮	೯೦.೫೮
ಶನಿ.	೧.೨೯ ಉ.	೧೦.೧೩ ಉ.	೧೫೮.೪೪	೮೧.೮೭	೮೯.೪೦
ಹ.	೦.೪೭ ದ.	೧೨.೫೨ ದ.	೩೫೮.೧೦	೧೦೧.೨೩	೯೩.೩೦
ನೇಪ.	೦.೩ ದ.	೧೭.೩೨ ಉ.	೧೩೩.೨೮	೫೬.೫೧	೯೦.೧೭

ದಶಮದ ವಿಷುವಾಂಶ— ೨೫೬.೫೭.

ಚತುರ್ಥದ ವಿಷುವಾಂಶ— ೭೬.೫೭.

ಪೃಥ್ವಿಯು ತನ್ನ ಪೈ ಸುತ್ತು ಪೂರ್ವಕ್ಕೆ ತಿರುಗುವದರಿಂದ ೧೨ರಲ್ಲಿಯ ಗ್ರಹಗಳು ೧೧ ಕ್ಕೆ ಬರುವವು. ೧೧ ರಿಂದ ೧೦ ನೆಯ ಮನೆಗೆ ಬರುವವು. ಇವಕ್ಕೆ ಡೈರೆಕ್ಟ ಡಿರೆಕ್ಶನ್ ಎನ್ನುವರು. ೧೨ ರಿಂದ ೧, ೨, ೩ ನೆಯ ಮನೆಗೆ ಬಂದರೆ ಅವಕ್ಕೆ ವ್ಯುತ್ಕ್ರಮ ಯೋಗಗಳೆನ್ನುವರು.

ಲಗ್ನದೊಡನೆ ಆಗುವ ಯೋಗಗಳನ್ನು ಸುಲಭವಾಗಿ ಸಾಧಿಸಬಹುದು. ಕೋಷ್ಟಕದಿಂದಲೇ ಸಾಧಿಸುವದಾದರೆ ರವಿ ಚಂದ್ರರಿರುವ ಭಾವದ ಧ್ರುವೋನ್ನತಿಯನ್ನು ನೋಡಬೇಕು. ಲಗ್ನಾಂಶ ಮೇಷ ೧೩.೪೧ ಕ್ಕೆ ಬಂದಾಗ ಗುರುವಿನೊಡನೆ ತ್ರಿಕೋಣ ಮಾಡುವದು.

ಮೇಷ ೧೩.೪೧ ರ ನಾಕ್ಷತ್ರ ಕಾಲ—	೧೮—೪೩—೩೧
ಲಗ್ನಾಂಶದ ನಾಕ್ಷತ್ರ ಕಾಲ –	೧೭— ೭—೪೫
ಅಂತರ	೧—೩೫—೪೬

ಇದು ೨೪–೨೫ ನೆಯ ವರ್ಷಕ್ಕೆ ಬರುವದು.

ರವಿ ೮ ನೆಯ ಭಾವದಲ್ಲಿರುವನು. ಆ ಭಾವದ ಧ್ರುವೋನ್ನತಿ ೧೧. ೧೧ ನೆಯ ಅಕ್ಷಾಂಶದಲ್ಲಿ ರಾಫೇಲರ ಭಾವಸಾಧನೆಯನ್ನು ನೋಡಲಾಗಿ,

ರವಿಯು ತುಲಾ ೧೭ ನಾಕ್ಷತ್ರ ಕಾಲ— ೭— ೯—೫೬
ವೃಶ್ಚಿಕ ೧೨ಕ್ಕೆ ಬಂದಾಗ ಶುಕ್ರನ ನಾಕ್ಷತ್ರ ಕಾಲ—೮— ೫೩—೫೧
ಅಂತರ ೧—೪೪—೨೬

ತ್ರಿರೇಕಾದಶ ಯೋಗವಾಗುವದು. ವೃಷಭ ೧೨ ರ ನಾಕ್ಷತ್ರ ಕಾಲ.

೨೬ ನೆಯ ವರ್ಷ ದಿನವರ್ಷ ಪದ್ಧತಿಯಿಂದ ಜಾತನು ಪದವೀಧರನಾಗಿ ಸರ್ವಿಸಿನಲ್ಲಿ ಸೇರಿದನು. ಪದ್ಧತಿಯಿಂದ ೨೫ ನೆಯ ವರ್ಷ ಚಲಿತ ರವಿ ಮೂಲ ಶುಕ್ರ ಶುಭಯೋಗವಾಗಿರುವದು. ಆಗ ಮದುವೆಯಾಯಿತು.

ಪ್ರಾಥಮಿಕ ಯೋಗ ಪದ್ಧತಿಯ ಅಭಿಮಾನಿಗಳು ಅವುಗಳ ಶಕ್ತಿ ಹೆಚ್ಚೆಂದು ಹೇಳುವರು. ಆದರೆ ದಿನವರ್ಷ ಪದ್ಧತಿಯಲ್ಲಿಯೂ ಸತ್ಯಾಂಶವಿದೆಯೆಂದು ನಮ್ಮ ಅನುಭವಕ್ಕೆ ಬಂದಿರುವದು. ರಾಜಾಶ್ರಯವಿಲ್ಲದ ಈ ಕಾಲದಲ್ಲಿ ಈ ಪದ್ಧತಿಯಿಂದ ಕುಂಡಲಿಯನ್ನು ವಿಮರ್ಶಿಸುವದು ದುಸ್ತರ.

ರಾಶಿ ಚಕ್ರದಲ್ಲಿ ಉಂಟಾಗುವ ಯೋಗಗಳು

ಧನು ೧೮ ದಶಮ ಭಾವ ಇದರ ನಾಕ್ಷತ್ರ ಕಾಲ:— ೧೭–೭–೪೯
ಬುಧನು ತುಲಾದಲ್ಲಿ ೨೭–೧೮ ಇರುವನು.
ಇದರ ನಾಕ್ಷತ್ರ ಕಾಲ— ೧೩–೪೦–೧೨
ಅಂತರ ೩–೨೭–೩೭

೪೫ ವರ್ಷ + ೭ ವರ್ಷ = ೫೨ ನೆಯ ವರ್ಷಕ್ಕೆ ಬುಧ ದಶಮ ಯುತಿ ಆಗುವದು. ಸೈವೋಸ್ಟೈಟರು ಹೇಳುವ ಫಲ:— ವಿದ್ಯೆಯಿಂದ ಯಶಸ್ಸು. ಸಾಹಿತ್ಯ ನಿರ್ಮಾಣ, ಭಾಷೆಯ ಅಭ್ಯಾಸ, ಶಾಸ್ತ್ರಾಭ್ಯಾಸ, ಸಾರ್ವಜನಿಕ ಭಾಷಣ, ಪ್ರವಾಸ, ಲೇಖನಗಳಿಂದ ಲಾಭ. ಬುಧನು ಕುಂಡಲಿಯಲ್ಲಿ ಬಲಿಷ್ಠನಿರುವನು. ಉಚಿತ ಫಲಗಳನ್ನು ಜಾತನ ಪರಿಸ್ಥಿತಿಗನುಸಾರವಾಗಿ ಕೊಡುವದು.

ಮಂಗಳ ಕನ್ಯಾ ೦.೪೯ ರಲ್ಲಿರುವನು. ಇವನು ತುಲಾ ೧
ಬಂದಾಗ ದಶಮದೊಡನೆ ತ್ರಿಕೋಣವಾಗುವದು.

ತುಲಾ ೧೮ ಅಂಶದ ನಾಕ್ಷತ್ರ ಕಾಲ— ೧೩—೬—೨೬
ಕನ್ಯಾ ೦ ಅಂಶದ ನಾಕ್ಷತ್ರ ಕಾಲ— ೧೦—೮—೨೩
ಅಂತರ ೨–೫೮— ೦

೪೫ ನೆಯ ವರ್ಷ ಈ ಯೋಗವಾಗುವದು. ಇದು ಅಭ್ಯು
ಸೂಚಕ. ಸ್ಫೂರ್ತಿದಾಯಕ. ಅರಸರಿಗೆ ಯುದ್ಧ ಸ್ಫೂರ್ತಿಯನ್ನು ಕೊ
ವದು. ಸೇನಾಬಲವನ್ನು ಹೆಚ್ಚಿಸುವರು. ಸಾಮಾನ್ಯರಿಗೆ ಪರಿಸ್ಥಿ
ತಕ್ಕಂತೆ ಅರ್ಥ ಮಾಡಬೇಕು.

ಚಂದ್ರನು ವೃಷಭ ೧೩.೧೪ ರಲ್ಲಿರುವನು. ಇದು ಮೇಷ ೧೮
ಬಂದರೆ ದಶಮದೊಡನೆ ತ್ರಿಕೋಣವಾಗುವದು.

ವೃಷಭ ೧೩.೧೪ ವಿಷುವಾಂಶ ೪೦.೩೦
ಮೇಷ ೧೮ ರ ವಿಷುವಾಂಶ ೧೬.೩೫
೨೪

೨೪ ನೆಯ ವರ್ಷ ಶಿಕ್ಷಣದಲ್ಲಿ ಪ್ರಗತಿ. ಆದರೆ ಇದೇ ಚಂದ್ರನ
ಮುಂದಕ್ಕೆ ಸರಿಸಿದಾಗ ಮಿಥುನ ೭ಕ್ಕೆ ಬಂದಾಗ, ೬೫. ೯
೪೦.೩೦
೨೪.೩೯

೨೪ ನೆಯ ವರ್ಷ ಮೂಲ ಶನಿಯೊಡನೆ ಕೇಂದ್ರ ಮಾಡುವ
ಮಾನಸಿಕ ತ್ರಾಸ, ಆರ್ಥಿಕ ತೊಂದರೆ ಶಿಕ್ಷಣ ಕುಂಠಿತವಾಗಿದ್ದಿತು. ಗ್ರ
ಗಳಿಂದ ಮಧ್ಯೋನ್ನತಿ (ನತಾಂಶ) ತೆಗೆಯುವ ರೀತಿ ಖಸ್ವಸ್ತಿಕ ಅಥ
ಪಾತಾಳದ ಅಂತರ.

ದಶಮ ಬಿಂದುವಿನ ವಿಷುವಾಂಶ ಅಥವಾ ಚತುರ್ಥ ಬಿಂದುವಿ
ವಿಷುವಾಂಶದಲ್ಲಿ ಗ್ರಹಗಳ ವಿಷುವಾಂಶವನ್ನು ಕಳೆಯಬೇಕು. ಎರಡ

ವಿಷುವಾಂಶಗಳ ಅಂತರ ಉದಯಾಂತರ ಗ್ರಹದ ಕ್ರಾಂತಿ ಸ್ಥಳೀಯ ಅಕ್ಷಾಂಶಗಳ ಗುಣಾಕಾರ (ಲಾಗ್ರತಮದಿಂದ) ವು ಉದಯಾಂತರ (ಚರ ಖಂಡವು) ವನ್ನು ತಿಳಿಸುವದು. ಇದು ಗ್ರಹಗಳ ದಿನಾರ್ಧ, ರಾತ್ರ್ಯರ್ಧ ಕಾಲಗಳನ್ನು ತೆಗೆಯಲಿಕ್ಕೆ ಬೇಕಾಗುವದು.

ಸೆಮಿಆರ್ಕ ದಿನಾರ್ಧ ರಾತ್ರ್ಯಾರ್ಧಗಳು ದೈನಿಕ ಉತ್ತರ ಕ್ರಾಂತಿ ಇದ್ದರೆ ೯೦ + ಉದಯಾಂತರ ಅಸೆನ್‌ಶನ್ಸ ಡಿಫರನ್ಸ.

ದಕ್ಷಿಣ ಕ್ರಾಂತಿ ಇದ್ದರೆ ೯೦ – ಉದಯಾಂತರ.

ನಿಶಾ – ಉತ್ತರ ಕ್ರಾಂತಿ ಇದ್ದರೆ ೯೦ – ಉದಯಾಂತರ.

ದಕ್ಷಿಣ ಕ್ರಾಂತಿ ಇದ್ದರೆ ೯೦ + ಉದಯಾಂತರ.

ಕ್ಷಿತಿಜಾಂತರ ದಿನಾರ್ಧ ಅಥವಾ ರಾತ್ರ್ಯರ್ಧದಲ್ಲಿ ಮಧ್ಯೋನ್ನತಿಯನ್ನು ಕಳೆದರೆ ಕ್ಷಿತಿಜಾಂತರ ಬರುವದು. ಇದಕ್ಕೆ ನಮ್ಮವರು ಉನ್ನತಾಂಶವೆನ್ನುವರು.

ಕ್ರಾಂತಿ ವೃತ್ತದ ಅಂಶವನ್ನು ವಿಷುವಾಂಶಕ್ಕೆ ತಿರುಗಿಸುವದು. ಕ್ರಾಂತಿ ವೃತ್ತ, ವಿಷು ವೃತ್ತಗಳ ಕೋನ ೨೩°-೨೭' ಇರುವದು. ಮೇಷದಿಂದ ಅಥವಾ ತುಲೆಯಿಂದ, ಕರ್ಕದಿಂದ ಅಥವಾ ಮಕರದಿಂದ ಸ್ಪರ್ಶಜ್ಯಾ ಗುಣಾಕಾರ ಮಾಡಿದಲ್ಲಿ ವಿಷುವಾಂಶ ಬರುವದು. ಮೇಷದಿಂದ ಅಥವಾ ತುಲೆಯಿಂದ ವಿಷುವಾಂಶ ಸ್ಪರ್ಶಜ್ಯಾ ಬರುವದು. ಮೇಷ, ವೃಷಭ, ಮಿಥುನಗಳಿಗೆ ಅದೇ ಉತ್ತರ. ಕರ್ಕ, ಸಿಂಹ, ಕನ್ಯೆಗಳಿಗೆ ೯೦ ಕೂಡಿಸಬೇಕು. ತುಲಾ, ವೃಶ್ಚಿಕ, ಧನುಗಳಿಗೆ ೧೮೦ ಕೂಡಿಸಬೇಕು. ಮಕರ, ಕುಂಭ, ಮೀನಗಳಿಗೆ ೨೭೦ ಕೂಡಿಸಬೇಕು.

ಭಾವಾಂತರ ದಶಮದ ವಿಷುವಾಂಶವನ್ನು ದಿನಾರ್ಧದಲ್ಲಿ ಕಳೆಯಬೇಕು. ೭ನೆಯ ಭಾವದ ಮೇಲಿನ ಅಂತರ ಬರುವದು. ರಾತ್ರ್ಯರ್ಧದಲ್ಲಿ ಚತುರ್ಥ ಭಾವದ ವಿಷುವಾಂಶವನ್ನು ಕಳೆದರೆ ಸಪ್ತಮ ಭಾವದ ಕೆಳಗಿನ ಅಂತರ ಬರುವದು.

ಪ್ರತಿಯೊಂದು ಕುಂಡಲಿಯನ್ನು ಈ ಪದ್ಧತಿಯಿಂದ ಗಣನೆ ಮಾಡಿ

ನೋಡಲಿಕ್ಕೆ ಒಂದು ಕೋಷ್ಟಕವನ್ನು (ಸ್ಪೆಕ್ಯುಲಂ) ತಯಾರಿಸಿ ಇಟ್ಟುಕೊಳ್ಳಬೇಕಾಗುವದು.

೧	೨	೩	೪	೫	೬	೭	೮	೯
ಶರಾ	ಕ್ರಾಂತಿ	ವಿಷುವಾಂಶ	ನತಾಂಶ	ಉನ್ನತಾಂಶ	ದಿನಾರ್ಧ ನಿಶ್ಯರ್ಧ	ಎರಡೂ ಅರ್ಧಗಳ $\frac{1}{3}$	ಭಾವಾಂತರ	ಸ್ಥಿರ ಘಾತಾಂಕ

ವಿವರಣೆ:— ಸೂರ್ಯನನ್ನುಳಿದು ಉಳಿದ ಗಹಗಳಿಗೆ ಶರವಿರುವದು. ಸೂರ್ಯನು ಕ್ರಾಂತಿ ವೃತ್ತದಲ್ಲಿಯೇ ಭ್ರಮಿಸುವದರಿಂದ ಅವನಿಗೆ ಶರವಿರುವದಿಲ್ಲ. ಉಂಟಾದರೆ ಅದು ಅತ್ಯಲ್ಪ. ಅದನ್ನು ಪ್ರಾಥಮಿಕ ಯೋಗ ಪದ್ಧತಿಯಲ್ಲಿ ಗಣನೆಗೆ ತಕ್ಕೊಳ್ಳುವದಿಲ್ಲ. ಶರ, ಕ್ರಾಂತಿಗಳು ರಾಫೇಲ ಪಂಚಾಂಗದಲ್ಲಿ ನಿಮಗೆ ಸಿಗುವವು. ಶರವೆಂದರೆ ಕ್ರಾಂತಿ ವೃತ್ತದಿಂದ ಗ್ರಹದ ವರೆಗಿರುವ ಲಂಬಾಂತರ. ಕ್ರಾಂತಿ ಎಂದರೆ ವಿಷುವ ವೃತ್ತದಿಂದ ಗ್ರಹದ ವರೆಗಿರುವ ಲಂಬಾಂತರ. ವಿಷುವವೃತ್ತ ಕ್ರಾಂತಿ ವೃತ್ತಗಳು ಒಂದನ್ನೊಂದು ೨೩–೨೭ ಅಂಶದ ಕೋನದಿಂದ ಛೇದಿಸುವವು. ಭೂಗೋಲದಲ್ಲಿರುವ ಕ್ರಾಂತಿವೃತ್ತ ವಿಷುವ ವೃತ್ತಗಳಾಗುವವು ಭೂಗೋಲಜ್ಞರಿಗೆ ಇದು ವಿದಿತ ವಿಷಯ.

ವಿಷುವಾಂಶ:— ಕ್ರಾಂತಿವೃತ್ತ ವಿಷುವ ವೃತ್ತಗಳ ಛೇದನ ಬಿಂದು ಸಂಪಾತ ಬಿಂದು. ಒಂದು ಮೇಷ ಸಂಪಾತ, ಇನ್ನೊಂದು ತುಲಾ ಸಂಪಾತ. ಇವೆರಡರಲ್ಲಿ ೬ ರಾಶಿ (೧೮೦ ಅಂಶ) ಅಂತರವಿರುವದು. ಸಂಪಾತ ಬಿಂದು ಪ್ರತಿವರ್ಷ $50\frac{1}{3}$ ವಿಕಲೆ ಹಿಂದೆ ಸರಿಯುತ್ತಿರುವದು.

ರವ್ಯಾದಿ ಗ್ರಹಗಳ ವಿಷುವಾಂಶವನ್ನು ತೆಗೆದಿಟ್ಟುಕೊಳ್ಳಬೇಕು. ವಿಷುವಾಂಶವನ್ನು ತೆಗೆಯುವ ರೀತಿ:— ರವಿ ಯಾವ ರಾಶಿ ಅಂಶದಲ್ಲಿರುವನೋ ನೋಡಿಕೊಳ್ಳಿ, ಕ್ರಾಂತಿವಲನವು ೨೩–೨೭ ಇರುವದು. (ಕೋಸಾಯಿನ್) ಅದರ ಘಾತಾಂಕವನ್ನು ಮೇಷದಿಂದ ಅಥವಾ ತುಲೆಯಿಂದ ಉಂಟಾಗುವ

ಟ್ಯಾಂಜೆಂಟದ (ಸ್ಪರ್ಶಜ್ಯಾ) ಘಾತಾಂಕವನ್ನು ಕೂಡಿಸಲಾಗಿ ಅಥವಾ ಕರ್ಕ, ಮಕರದಿಂದ ಉಂಟಾಗುವ ಕೋ ಟ್ಯಾಂಜೆಂಟದ ಘಾತಾಂಕವನ್ನು ಕೂಡಿಸಲಾಗಿ ಅಥವಾ ಕರ್ಕ ಮಕರದಿಂದ ಉಂಟಾಗುವ ಕೋಟ್ಯಾಂಜೆಂಟದ ಘಾತಾಂಕ ಕೂಡಿಸಲಾಗಿ ವಿಷುವಾಂಶದ ಘಾತಾಂಕ ಬರುವದು. ಘಾತಾಂಕಗಳ ಬೇರೀಜು ಗುಣಾಕಾರವಾಗುವದು; ವಜಾಬಾಕಿ ಭಾಗಾಕಾರವಾಗುವದು. ಇದರ ಶೋಧಕ ನೇಪಿಯರ. ಕರ್ಕ ಸಿಂಹ ಕನ್ಯಾದಲ್ಲಿ ರವಿ ಇದ್ದರೆ ೯೦ ಅಂಶ ಕೂಡಿಸಬೇಕು. ತುಲಾ, ವೃಶ್ಚಿಕ ಧನೂದಲ್ಲಿದ್ದರೆ ೧೮೦ ಅಂಶ ಕೂಡಿಸಬೇಕು. ಮಕರ ಕುಂಭ ಮೀನದಲ್ಲಿದ್ದರೆ ೨೭೦ ಅಂಶ ಕೂಡಿಸಬೇಕು. ಪ್ರತಿಯೊಂದು ಕ್ರಾಂತಿ ವೃತ್ತದ ಅಂಶಕ್ಕೆ ವಿಷುವಾಂಶದ ಅಳತೆ ಎಷ್ಟು ಬರುವದು ಎಂಬುದರ ಕೋಷ್ಟಕವು **ಸೈಮೋ ನೈಟರ** ಪುಸ್ತಕದಲ್ಲಿ ಸಿಗುವದು. ಗಣಿತಕ್ಕೆ ಬೇಸರಿಯುವವರು ಅದರಿಂದ ಪ್ರಯೋಜನ ಪಡೆಯಬಹುದು. ಚಂದ್ರನ ಹಾಗೂ ಗ್ರಹಗಳ ವಿಷುವಾಂಶವನ್ನು ತೆಗೆಯುವದು. ಯಾಕಂದರೆ ಅವುಗಳಿಗೆ ಶರವಿರುವದು. ಕ್ರಾಂತಿ (ಕೋಸಾಯಿನ್) ಯ ಘಾತಾಂಕದಲ್ಲಿ ಗ್ರಹದ ಶರದ (ಕೋಸಾಯಿನ್) ಘಾತಾಂಕ ಕೂಡಿಸಿ ಮೇಷದಿಂದ ಅಥವಾ ತುಲೆಯಿಂದ ಬರುವ ಭುಜಾಂತರ (ಸಾಯಿನ್) ಮೇಷದಿಂದ ಅಥವಾ ಕರ್ಕ ಮಕರದಿಂದ ವಿಷುವಾಂಶ ಬರುವದು.

ರವಿಯ ಕ್ರಾಂತಿ ಇಲ್ಲವೆ ರಾಶ್ಯಾಂಶಗಳನ್ನು ತೆಗೆಯುವದು. ಕ್ರಾಂತಿ ವಲನ (೨೩–೨೭) ಘಾತಾಂಕದಲ್ಲಿ ಮೇಷ ಅಥವಾ ತುಲೆಯಿಂದ ಬರುವ ಭುಜಾಂತರದ ಘಾತಾಂಕ ಕೂಡಿಸಲಾಗಿ ರಾಶ್ಯಂಶಗಳು ಬರುವವು. ನತಾಂಶ (ಮಧ್ಯೋನ್ನತಿ) ಗ್ರಹವು ಖಸ್ವಸ್ತಿಕದಿಂದ, ಅಧಃ ಸ್ವಸ್ತಿಕದಿಂದ ಎಷ್ಟು ದೂರವಿರುವದು. ಎಂಬುದು ಗ್ರಹದ ವಿಷುವಾಂಶವನ್ನು ದಶಮ ಬಿಂದುವಿನ ವಿಷುವಾಂಶದಿಂದ ಕಳೆಯಲಾಗಿ ಮಧ್ಯೋನ್ನತಿ ಬರುವದು. ಗ್ರಹವು ಅಧಃ ಸ್ವಸ್ತಿಕದ ಅಥವಾ ಖಸ್ವಸ್ತಿಕದ ಸಮೀಪದಲ್ಲಿರುವದನ್ನು ನೋಡಿ ತೆಗೆಯಬೇಕು. ಕಾಲ ಕೆಳಗೆ ನೇರವಾಗಿರುವ ಆಗಸದ ಬಿಂದು ಅಧಃ ಸ್ವಸ್ತಿಕ (ಪಾತಾಳ ಬಿಂದು) ಕ್ರಾಂತಿಯ (ಸ್ಪರ್ಶಜ್ಯಾ) ಘಾತಾಂಕದಲ್ಲಿ ಜನ್ಮಸ್ಥಳದ ಅಕ್ಷಾಂಶದ ಘಾತಾಂಕ ಕೂಡಿಸಲಾಗಿ ಗುಣಾಕಾರ (ಕ್ರಾಂತಿ × ಅಂಕಾಕ್ಷ) ಉದಯಾಂತರ ಬರುವದು.

ಗ್ರಹಗಳ ದಿನಾರ್ಧ ನಿಶಾರ್ಧಗಳನ್ನು ತೆಗೆಯುವದು. ದಿನಾರ್ಧ ಉತ್ತರ ಕ್ರಾಂತಿ ಇದ್ದರೆ ೯೦ + ಉದಯಾಂತರ. ದಕ್ಷಿಣ ಕ್ರಾಂತಿ ಇದ್ದ ೯೦ – ಉದಯಾಂತರ.

ನಿಶಾರ್ಧ— ಉತ್ತರ ಕ್ರಾಂತಿ ಇದ್ದರೆ ೯೦— ಉದಯಾಂತರ.

ದಕ್ಷಿಣ ಕ್ರಾಂತಿ ಇದ್ದರೆ ೯೦ + ಉದಯಾಂತರ ದಿನಾ

ದಿನಮಾನದ ಅರ್ಧ, ನಿಶಾರ್ಧ ರಾತ್ರಿ ಮಾನದ ಅರ್ಧ. ಗ್ರಹವು ಎ ಹೊತ್ತು ಇರುವದು ಎಂಬುದರ ಅಳತೆ. ದಕ್ಷಿಣ ಗೋಲಾರ್ಧದಲ್ಲಿ ಅ ವ್ಯುತ್ಕ್ರಮ ಕ್ಷಿತಿಜಾಂತರ ಅಥವಾ ಉನ್ನತಾಂಶ– ದಿನಾರ್ಧದಲ್ಲಿ ಅಥ ರಾತ್ರ್ಯರ್ಧದಲ್ಲಿ ಮಧ್ಯೋನ್ನತಿ (ನತಾಂಶ) ಕಳೆಯಬೇಕು.

ಭಾವಾಂತರ ಭಾವಾರಂಭದಿಂದ ಗ್ರಹದ ಅಂತರ— (Cusp Distance) ಪ್ರತಿಯೊಂದು ಗ್ರಹವು ಭಾವಮಧ್ಯ (ಶ್ರೀಪತಿ ಪದ್ಧ ಯಂತೆ) ದಿಂದ ಗ್ರಹವಿರುವ ಅಂತರವನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕ

ಪ್ರಥಮ ಸಪ್ತಮ ಭಾವಗಳಲ್ಲಿ

ದಿನಾರ್ಧ— ಮಧ್ಯೋನ್ನತಿ

೧ನೆಯ ಭಾವದ ಕೆಳಗೆ ಸಪ್ತಮ ಭಾವದ ಮೇಲೆ.

೧ನೆಯ, ೭ನೆಯ ಭಾವ— ಮಧ್ಯೋನ್ನತಿ— $\frac{1}{3}$ ದಿನಾರ್ಧ.

೨ನೆಯ ಭಾವದ ಮೇಲೆ ೮ನೆಯ ಭಾವದ ಕೆಳಗೆ.

೨–೮ ಭಾವಗಳಿಗೆ— $\frac{1}{3}$ ಸೆಮಿಆರ್ಕ– M. D. ೨ನೆಯ ಭಾವ ಕೆಳಗೆ ೮ ನೆಯ ಭಾವದ ಮೇಲೆ.

M. D. $\frac{1}{3}$ ಸೆಮಿಆರ್ಕ ೩ನೆಯ ಭಾವದ ಮೇಲೆ,

೯ನೆಯ ಭಾವದ ಕೆಳಗೆ.

$\frac{1}{3}$ ಸೆಮಿಆರ್ಕ— M. D. = ೩ನೆಯ ಭಾವದ ಕೆಳಗೆ,

೯ನೆಯ ಭಾವದ ಮೇಲೆ.

M. D. ೪ನೆಯ ಭಾವದ ಪೂರ್ವ ೧೦ ನೆಯ ಭಾವದ ಪಶ್ಚಿಮ.

M. D. ೪ನೆಯ ಭಾವದ ಪಶ್ಚಿಮ ೧೦ ನೆಯ ಭಾವದ ಪಶ್ಚಿಮ.

M. D. ೪ನೆಯ ಭಾವದ ಪಶ್ಚಿಮ ೧೦ ನೆಯ ಭಾವದ ಪೂರ್ವ.

$\frac{1}{3}$ S. A. – M D. ೯ನೆಯ ಭಾವದ ಕೆಳಗೆ,
೧೧ ನೆಯ ಭಾವದ ಮೇಲೆ.

M. D. – $\frac{1}{3}$ S. A. ೯ನೆಯ ಭಾವದ ಮೇಲೆ,
೧೧ ನೆಯ ಭಾವದ ಕೆಳಗೆ.

$\frac{2}{3}$ S. A. – M. D. ೮ನೆಯ ಭಾವದ ಕೆಳಗೆ,
೧೨ ನೆಯ ಭಾವದ ಮೇಲೆ.

S. A. – M. D. ೭ನೆಯ ಭಾವದ ಕೆಳಗೆ,
೧ನೆಯ ಭಾವದ ಮೇಲೆ.

S. A. ನಿಶಾರ್ಧ ನ ದಿನಾರ್ಧ M. D. ಮಧ್ಯೋನ್ನತಿ ನತಾಂಶ.

ಅ ಕೋನದ ಸಾಯಿನ್ — $\frac{\text{ಬಕ}}{\text{ಅಬ}}$

ಅ. ಅ ∠ ದ ಕೋಸಾಯಿನ್ = $\frac{\text{ಅಕ}}{\text{ಅಬ}}$

ಬ

ಕ. ಅ ∠ ದ ಟ್ಯಾಂಜೆಂಟ = $\frac{\text{ಬಕ}}{\text{ಅಕ}}$

ಕ. ಜ್ಯಾ = $\frac{\text{ಅಕ}}{\text{ಬಕ}}$ ಸ್ಪರ್ಶಜ್ಯಾ = $\frac{\text{ಅಕ}}{\text{ಅಬ}}$

ಅ. ಕೋಟಜ್ಯಾ = $\frac{\text{ಅಬ}}{\text{ಅಕ}}$

ಬ

ವಾಚಕರಿಗೆ ಶಾಸ್ತ್ರದ ಕಾಠಿಣ್ಯದ ಕಲ್ಪನೆ ಬರಲೆಂದು ಬರೆದಿರುವೆವು. ನಿಶ್ಯರ ಜ್ಯೋತಿಯ ವಿಷುವಾಂಶದ ಕೋಷ್ಟಕವನ್ನು ಶ್ರೀ ಪ್ರಧಾನರು ತಮ್ಮ ಜಾತಕ ಮಾರ್ಗೋಪದೇಶಿಕೆಯಲ್ಲಿ ಕೊಟ್ಟಿರುವರು. ಸಶರ ಜ್ಯೋತಿಯ

ವಿಷುವಾಂಶ ಸೈವೋನೈಟರ ಪುಸ್ತಕದಲ್ಲಿರುವದು. ಲಾಗ್ರತವು ಗಣಿತ ವಿಲ್ಲದೆ ಆನಾಯಾಸವಾಗಿ ಇದು ಸಿಕ್ಕುವದು. ಗ್ರಹಗಳ ಕ್ರಾಂತಿ ಶರಗಳಂತೂ ರಾಫೇಲರ ಪಂಚಾಂಗದಲ್ಲಿ ಸಿಕ್ಕುವವು.

ಪ್ರಾಥಮಿಕ ಯೋಗಪದ್ಧತಿಯ ಬಗೆಗೆ ಪಶ್ಚಿಮದ ಜ್ಯೋತಿರ್ವಿದರು ಬಹಳ ಕಷ್ಟಪಟ್ಟಿರುವರು. **ಸೆಫಾರಿಯಲ್ಲರು** ಅದನ್ನು ಸುಲಭ ಮಾಡಲು ಯತ್ನಿಸಿರುವರು. **ಓವೆನ್** ಎಂಬವರು ಕೈಸರನ ಕುಂಡಲಿಯಿಂದ ಅದನ್ನು ಇನ್ನೊಂದು ರೀತಿಯಿಂದ ಸುಲಭ ಮಾಡಲು ಯತ್ನಿಸಿರುವರು.

೧ನೆಯ, ೨ನೆಯ **ಝಾಡಕೀಲರು** ಮಾನ್ಯ ಗ್ರಂಥಗಳನ್ನು ಬರೆದಿರುವರು. **ಸೈವೋನೈಟ**ರಂತೂ ಅದ್ಭುತ ಪರಿಶ್ರಮದಿಂದ ಗ್ರಂಥ ಬರೆದಿರುವರು.

ಕನ್ನಡ ಕವಿಯ ಉದ್ಗಾರವನ್ನು ಸ್ಮರಿಸಿ ಮುಗಿಸುವೆವು.

“ ಅರಿಯದವರು ನಾಲ್ವರಲ್ಲಿ ।
ಶಾಸ್ತ್ರ ಬೆಳಕು ಹೊಳೆಯಲೆಂದು ।
ದಣಿದು ಹೋದೆನು ।
ಬಡವನಳಿಲು ಸೇವೆಯೆಂದು ಧನ್ಯನಾದೆನು ॥ ”

ಶುದ್ಧಿಪತ್ರ

ಪುಟ	ಸಾಲು	ತಪ್ಪು	ಒಪ್ಪು
೩	೯	ವಿಧಿಯು	ವ್ಯಾಧಿಯು
೩	೧೭	ಉತಾತ್ತ	ಉದಾತ್ತ
೪	೭	ಕವಿತಾ	ಸವಿತಾ
೮	೨೧	ಸೂಯೋದಯ	ಸೂರ್ಯೋದಯ
೧೨	೧೫	ಏಕಾದಶದಲ್ಲಿ	ದ್ವಾದಶದಲ್ಲಿ

ಸೂಚನೆ:— ಇದೇ ೧೨ನೇ ಪುಟದಲ್ಲಿ ದಶಮದಲ್ಲಿ ರವಿಯಾದನಂತರ ಏಕಾದಶದಲ್ಲಿ ರವಿಯ ವಿಷಯವು ಹಾರಿಹೋಗಿದೆ. ಅದನ್ನು ಹೀಗೆ ಓದಿ ಕೊಳ್ಳಬೇಕು.

ಏಕಾದಶದಲ್ಲಿ ರವಿ:—ಏಕಾದಶದಲ್ಲಿ ರವಿಯಿದ್ದರೆ ಒಳ್ಳೆಯ ಮಿತ್ರರು, ಕುಲೀನ ಮಿತ್ರರು ಸಿಗುವರು. ಆಕಾಂಕ್ಷೆಗಳು ಸಫಲವಾಗುವವು. ಉದ್ಯೋಗ ಧಂದೆಯಲ್ಲಿ ಚೆನ್ನಾಗಿ ಪ್ರಾಪ್ತಿಯಾಗುವದು. ಮಿತ್ರರು ವಿಶ್ವಾಸಿಗಳೂ ಸಹಾಯಕರೂ ಇರುವರು. ಅವರಿಂದ ಭಾಗ್ಯೋದಯವಾಗುವದು. ಅಶುಭ ಸಂಬಂಧಿತ ರವಿ ಅನೇಕ ಅಡ್ಡಿಗಳನ್ನು ತರುವನು.

ಪುಟ	ಸಾಲು	ತಪ್ಪು	ಒಪ್ಪು
೨೩	೧೧	ಬಲವಿದ್ದಂದೆ	ಬಲವಿದ್ದಂತೆ
೪೩	೮	ಸೂಚಸಲಾರನು	ಸೂಚಿಸಲಾರನು
೪೪	೩	ವಿನಶ್ಯತೆ	ವಿನಶ್ಯತಿ
೪೬	೨೦	ಆಶಕ್ತಿ	ಆಸಕ್ತಿ
೪೭	೨೧	ಕುರಲರೂ	ಕುಶಲರೂ
೬೩	೮	ಪೀಡಿತನಿಜ್ದರೆ	ಪೀಡಿತನಿದ್ದರೆ

ಪುಟ	ಸಾಲು	ತಪ್ಪು	ಒಪ್ಪು
೬೩	೧೬	ರಸ್ರಾಯರ	ರಸಾಯನ
೭೪	೩	ಸಿನೇಬರ	ಸಿನೇಟರ
೭೬	೧೯	ಗರು	ಗುರು
೭೮	೮	ಸೂಚಿಕ	ಸೂಚಕ
೮೩	೫	ಬೇಳುವದು	ಹೇಳುವದು
೮೫	೧೫	ಸನ್ನಿಲಂ	ಸನ್ನಿಭಂ
೮೫	೧೬	ಬ್ರಹಸ್ಪತಿ	ಬ್ರಹಸ್ಪತಿಂ
೧೦೦	೧೯	ಹನಿ	ಶನಿ
೧೦೦	೨೨	ಹನಿ	ಶನಿ
೧೦೨	೪	ಆಗುವದು	ಆದರೆ
೧೦೪	೧೮	ಪ್ರಚಾಪತಿ	ಪ್ರಜಾಪತಿ
೧೦೫	೧೩	ಪ್ರಚಾಪತಿ	ಪ್ರಜಾಪತಿ
೧೦೭	೨೨	ಶತಿಗಳ	ಶನಿಗಳ
೧೦೮	೧೬	ಕಾರ್ರ್ಯಗಳ	ಕಾರ್ಯಗಳ
೧೦೮	೧೭	ಪ್ರಚಾಪತಿ	ಪ್ರಜಾಪತಿ
೧೦೯	೨೦	ಅನುದೂನ	ಅನುಮಾನ
೧೬೨	೧	ಶುಭ ದೃಹ್ಟಿಯಲ್ಲಿ	ಶುಭದೃಷ್ಟಿಯಲ್ಲಿ
೧೬೩	೧೯	ಅಪ್ರುತ್ಯವಾಗಿ	ಅಪ್ರತ್ಯಕ್ಷವಾಗ
೧೬೮	೧೮	ಪೃಶ್ಚಿಕದಲ್ಲಿ	ವೃಶ್ಚಿಕದಲ್ಲಿ
೧೭೬	೨೦	ರಸ್ತುತಲ್ಯ	ಸ್ತತ್ತುಲ್ಯ
೧೯೯	೪	ನಿರುವಾಗಿ	ನಿರುವಾಗ
೧೯೯	೮	ಉಡ್ಸಾಹಿ	ಉತ್ಸಾಹಿ
೨೩೩	೨೫	Horscope	Horoscope